ತುಷಾರ

ಪ್ಟೆಂಬರ್, 1992
ರೂ. 5/-



ಪತ್ತೇದಾರಿ ಕಾದಂಬರಿ

ವಿಷಮಂಥನ

● ಸುದರ್ಶನ ದೇಸಾಯಿ



ನನ್ನೂರು ನನ್ನ ಜನ


ತುಮಕೂರು ಜಿಲ್ಲೆ

ಪತ್ತೇದಾರಿ ವಿಶೇಷಾಂಕ

ಮೈಕೈನೋವಿನಿಂದ ನೀವು ಬಳಲಿ ಬೆಂಡಾಗಿರುವಾಗ ಮನೆಮಂದಿಯ ಆರೈಕೆ, ಅಡಿಗೆ...ಒಂದಿಷ್ಟು ಹರಟೆಯೂ ಬೇಸರವೆನಿಸುತ್ತದೆ

ಮೈಕೈ ನೋವು ನಿವಾರಿಸಿರಿ ಝಂಡು ಬಾಮ್ ಹಚ್ಚಿರಿ.

ಬೇಗನೇ ಎದ್ದು ಓಡಾಡಿರಿ.



ಮೈಕೈನೋವು ತಾನೊಂದೇ ಅಲ್ಲ... ಸಂಗಡ, ಓಡಾಡಲು ತೊಂದರೆ, ಎದ್ದು ಕೂರಲು ಅಡಚಣೆ ಇತ್ಯಾದಿ ಇನ್ನೂ ಕೆಲವು ಪೀಡೆಗಳನ್ನೂ ತರುತ್ತದೆ. ಆದರೆ ನೀವೇನು ಚಿಂತಿಸಬೇಕಾಗಿಲ್ಲ.

ಪೀಡಾಹಾರಿ ಝಂಡು ಬಾಮ್‌ನಲ್ಲಿರುವ ವಿಶೇಷ ಔಷಧಿಯ ಗುಣಗಳು ಆಳಕ್ಕಿಳಿದು ಪರಿಣಾಮ ಬೀರುತ್ತವೆ. ಮೈಕೈನೋವು ಮತ್ತು ಇತರ ಪೀಡೆಗಳನ್ನೂ ಕಿತ್ತೆಸೆಯುತ್ತವೆ.

ಪೀಡಾಹಾರಿ ಝಂಡು ಬಾಮ್ ಸದಾ ಸಂಗಡವಿರಿಸಿರಿ. ಶೀತ ಮತ್ತು ತಲೆನೋವಿನ ಪೀಡೆಗಳಿಂದಲೂ ತ್ವರಿತ ಆರಾಮ ಪಡೆಯಬಲ್ಲಿರಿ.

ಝಂಡು ಬಾಮ್ ಝಂಡು ಬಾಮ್ ಪೀಡಾಹಾರಿ ಬಾಮ್
ಶೀತ, ತಲೆನೋವು, ಪೀಡೆಯಿಂದ ಕ್ಷಣದಲ್ಲಿ ಉಪಶಮನ

30. 10. ಮತ್ತು 5 ಗ್ರಾಮ್ ಪ್ಯಾಕ್‌ನಲ್ಲಿ



ಬಾಮ್ ಒಂದು ಕೆಲಸ ಮೂರು

1 ಶೀತ
2 ತಲೆ ನೋವು
3 ಮೈಕೈ ನೋವು

ಸಾಹಿತ್ಯ ಸಂಚಾರ...

'ಅಂದು ಬೆಳಗ್ಗೆ ಬೆಂಗಳೂರಲ್ಲಿ ಜಡಿಮಳೆ; ಮಳೆ ಮನಸ್ಸಾಗಿ ಮೋಡ ಮುಸುಕಿದ್ದಾಗ ದಿನಪತ್ರಿಕೆಗೆ ತಡಕಾಡಿದೆ; ಅದು ಬಂದಿರಲಿಲ್ಲ. ಎಂಟು ಗಂಟೆಯಾದರೂ ಬರಲಿಲ್ಲ. ಕಡೆಗೆ ಅಂಗಡಿಯ ಕಡೆಗೆ ನಾನೇ ಹೊರಟೆ. ನಮ್ಮ ಬೀದಿಯಲ್ಲಿ (ರಿಸರ್‌ವಾಯರ್ ರಸ್ತೆ) ಫ್ಲೋರ್ ಮಿಲ್ ಇಟ್ಟಿರುವ ಮಾಲೀಕರು 'ಕಂಗ್ರಾಜ್ಯುಲೇಷನ್ಸ್ ಸರ್' ಎಂದಾಗ ನನಗೆ ಆಶ್ಚರ್ಯ. ಕಡೆಗೆ ಅವರೇ – ದಿನಪತ್ರಿಕೆಯ ಮುಖಪುಟದಲ್ಲಿ ನಾನು ಸಾಹಿತ್ಯ ಅಕಾಡೆಮಿ ಅಧ್ಯಕ್ಷನಾಗಿರುವ ಸುದ್ದಿ ಬಂದಿರುವುದಾಗಿ ಹೇಳಿದರು. ಇದು ನನಗೆ ತಲುಪಿದ ಮೊದಲ ಸುದ್ದಿ; ಮೊದಲ ಶುಭಾಶಯ. ಮತ್ತೆ ಮರಳಿ ಮನೆಗೆ ಬಂದಾಗ ಪತ್ರಿಕೆಯೂ ಬಂದಿತ್ತು; ಪತ್ನಿ ರಾಜಲಕ್ಷ್ಮಿ, ಮಕ್ಕಳಾದ ಮೈತ್ರಿ, ಸ್ಫೂರ್ತಿ – ಇವರೆಲ್ಲ ನಾಮುಂದು ತಾಮುಂದು ಎಂದು ಅದಕ್ಕೆ ಮುಗಿಬಿದ್ದು ಓದುತ್ತಿದ್ದರು. ಅಲ್ಲೀವರೆಗೆ ಏನೂ ಆಗದಂತೆ ಇದ್ದ ನನ್ನ ಮೋಡ ಮನಸ್ಸಿನ ಅಂಚಿನಲ್ಲಿ ಬೆಳಕಿನ ಸಣ್ಣ ಗೆರೆಯೊಂದು ಮೂಡಿದಂತಾಯ್ತು.

ಅಂದು ವಿಶ್ವವಿದ್ಯಾಲಯಕ್ಕೆ ಬಂದಾಗ ಕಂಡ ದೃಶ್ಯವನ್ನು ಈಗಲೂ ಮರೆಯಲಾಗಿಲ್ಲ. ನನ್ನ ವಿದ್ಯಾರ್ಥಿ – ವಿದ್ಯಾರ್ಥಿನಿಯರ ಗುಂಪೊಂದು ಬಾಗಿಲಲ್ಲಿ ಕೆಂಪು ಹೂ ಹಿಡಿದು ನಿಂತು ನನಗೆ ಶುಭಾಶಯ ಹೇಳಿತು. ಅಧ್ಯಾಪಕ ವೃತ್ತಿಗೆ ಎಂದೂ ಮೋಸ ಮಾಡದ ನನ್ನ ಮನಸ್ಸಿನ ಮೋಡದಲ್ಲಿ ಮಿಂಚು ಸಂಚರಿಸಿತು. ಮನೋವಲಯದಲ್ಲಿ ಬಿದ್ದ ಬೆಳಕಲ್ಲಿ ಬಾಲ್ಯ ಮಿಡಿಯಿತು:

ನಾನೊಬ್ಬ ಹಳ್ಳಿಗಾಡಿನ ಹುಡುಗ. ಶಾಲೆಯ ರಜಾದಿನಗಳಲ್ಲಿ ದನ ಕಾಯುವ ಕಾಯಕ; ಕಸ ಹೊರುವ ಕೆಲಸ; ಬಾಲ್ಯ ಬೆಳೆದು ಬಿರಿಯುವಾಗ ತಬ್ಬಿಬ್ಬಾಗುವ ಗುಡುಗು, ಮಿಂಚುಗಳ ಘಟ್ಟದಲ್ಲಿ ಸಮಚಿತ್ತ ಕಾಯ್ದುಕೊಳ್ಳಲು ಒಳಗೇ ಹೋರಾಡುತ್ತ ಅದನ್ನು ಸಮಾಜಮುಖಿಯಾಗಿಸುವ ತುಡಿತದಲ್ಲಿ ಯೌವನದ ತುರಿಕೆಗಳನ್ನು ಮೆಟ್ಟಿ ನಿಲ್ಲುವ ಪ್ರಯತ್ನ; ಹಳ್ಳಿಯಲ್ಲಿ ಹೊಲದ ಬದುವಿನ ಮೇಲೆ ಕೂತು ಬೆಳೆಗೆ ಕಾವಲಿರುತ್ತ, ಪುಸ್ತಕಗಳನ್ನು ಗಟ್ಟಿಯಾಗಿ ಓದುತ್ತ, ಗೆಳೆಯರನ್ನು ಸಂಘಟಿಸಿ ಹಳ್ಳಿಗರಿಗಾಗಿ ವಾಚನಾಲಯವೊಂದನ್ನು ತೆಗೆದು ಓದಿಸುತ್ತ, ಬಂದ ನನಗೆ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿ ಈಗ ಅನ್ನಿಸುತ್ತಿದೆ: ಹೊಲದ ಬದುವಿನ ಮೇಲೆ ಓದುತ್ತ ಹದಗೊಂಡ ನಾನು, ಸಾಂಸ್ಕೃತಿಕ ಬದುವಿನ ಮೇಲೆ ಕೂತು ಬೆಳೆಯ ಬೆಳ್ಳಿ ಬೆಳಕಿಗಾಗಿ ಕ್ರಿಯಾಶೀಲನಾಗುವುದು, ಕಾವಲಾಗುವುದು, ಒಂದಾಗುವುದು, ಅತ್ಯಗತ್ಯ.

● ಬರಗೂರು ರಾಮಚಂದ್ರಪ್ಪ

ಸಂಪಾದಕ: ಟಿ. ಸತೀಶ್ ಯು. ಪೈ	ಸಹಾಯಕ ಸಂಪಾದಕ: 'ಚಿರಂಜೀವಿ'
ಮುದ್ರಣ: ಟಿ. ಸತೀಶ್ ಯು. ಪೈ ಉದಯವಾಣಿ ಪ್ರೆಸ್ ನಿರ್ವಹಣೆ: ಪಿ. ಭಾಸ್ಕರ ರಾವ್	ಬೆಂಗಳೂರು ಕಛೇರಿ ವಿಳಾಸ: ತುಷಾರ ಎಸ್. 201 ನಾರ್ಥ್ ಬ್ಲಾಕ್, ಫ್ರಂಟ್ ವಿಂಗ್ ಮಣಿಪಾಲ ಸೆಂಟರ್, 47, ಡಿಕನ್‌ಸನ್ ರಸ್ತೆ, ಬೆಂಗಳೂರು–560 042 ಫೋನ್: 586658 ಮತ್ತು 588467
ಪ್ರಕಾಶನ: ಮಣಿಪಾಲ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್ ಲಿ., ಉದಯವಾಣಿ ಬಿಲ್ಡಿಂಗ್, ಮಣಿಪಾಲ–576 119	ತುಷಾರ ಪ್ರೆಸ್ ಕಾರ್ನರ್, ಮಣಿಪಾಲ–576 119

ತುಷಾರ ಸಿಂಚನ

ಸೆಪ್ಟೆಂಬರ್ 1992

ಸಂಪುಟ: 20

ಸಂಚಿಕೆ: 6

ಪತ್ತೇದಾರಿ ಕಥೆ – ಹಾಸ್ಯ







ನನ್ನೂರು ನನ್ನ ಜನ — ತುಮಕೂರು ಜಿಲ್ಲೆ

ಸ್ಥಿರಶೀರ್ಷಿಕೆಗಳು

ಮುಖಪುಟ
ಕಲಾವಿದ ಜಗ್ಗೇಶ್
ಫೋಟೋ: ಕೆ. ಎನ್. ನಾಗೇಶ್‌ಕುಮಾರ್
ತುಮಕೂರಿನ 'ವೀರಗಾಸೆ' ನೀಲಕಂಠಯ್ಯ
ಫೋಟೋ: ಕೆ. ಜಿ. ಶಿವಯೋಗಿ

ಕಲೆ: ಸ್ಟುಡಿಯೋ ಸ್ನೇಹಾ, ಟಿ. ಕೆ. ರಾವ್, ಮೋನಪ್ಪ, ಶ್ಯಾಮ್, ಸಾವಿತ್ರಿ
ವಿನ್ಯಾಸ: ನಾಗರಾಜ್

ತುಷಾರ – ಮಾಸಪತ್ರಿಕೆ
ವಾರ್ಷಿಕ ಚಂದಾ: ರೂ. 62

ಸಂಪರ್ಕಿಸಿ: ಪ್ರಸರಣಾಧಿಕಾರಿ
ತುಷಾರ, ಪ್ರೆಸ್‌ಕಾರ್ನರ್
ಮಣಿಪಾಲ – 576 119 (ದ.ಕ.)

ನಿಮ್ಮ ಅನಿಸಿಕೆಗಳು

ಯುವ ಮಿಡಿತ ವಿಶೇಷಗಳು –

- ಯುವಕ – ಯುವತಿಯರ ಭಾವನೆಗಳು ಏನಿವೆ, ಹೇಗಿವೆ? ಎಂದು ತಿಳಿಯಲು 'ತುಷಾರ'ದ ಯುವ ಮಿಡಿತ ಮಾಡಿಕೊಟ್ಟ ಅವಕಾಶದಿಂದ ಸಾಧ್ಯ ವಾಯಿತು. ತುಂಬಾ ಯಶಸ್ವಿ ಪ್ರಯೋಗ.

– ನಾಗೇಶ್ ಸೂರಗೊಂಡ, ಬೆಂಗಳೂರು

- ನಮ್ಮ ಯುವ ಜನರ ಹೃದಯಗಳು ಪ್ರೀತಿ – ಪ್ರೇಮದ ಬಗೆಗೆ ಹೆಚ್ಚಿಗೆ ಮಿಡಿಯುತ್ತವೆ ಎಂಬುದು ಸತ್ಯವಾಯಿತು.

– ಜೆ. ಪ್ರೇಮಾನಂದ್, ಅಂಕೋಲಾ

- ಮನದಾಳದ ಅದಮ್ಯ ಬಯಕೆಗಳನ್ನು ಬರಹ ರೂಪಕ್ಕಿಳಿಸಿ ತಮ್ಮ ಆಸೆ – ನಿರಾಸೆ, ನಿರ್ಧಾರ ಗಳನ್ನು ಹೊರಚೆಲ್ಲಿ ಸ್ಪಂದಿಸಿದ ಸುಂದರ ಮಿಡಿತ ಗಳು.

– ಬಿ. ನಜೀರ್ ಅಬ್ಬಾಸ್,
ಬಂಡಿತ್ತಡ್ಕ (ದ.ಕ.)

- ಹರೆಯದ ಹಾದಿಯ ಹದಿಬದೆಯಲ್ಲಿ ಅರಳಿ ನಿಂತ ಆಸೆ – ಆಕಾಂಕ್ಷೆಗಳು ಹೂವು ನೂರಾರು – ಸಾವಿರಾರು. ಇಂಥ ಕೆಲವು ಸುಂದರವಾಗಿ ಮೂಡಿ ಬಂದಿವೆ.

– ಲಕ್ಷ್ಮಣ್ ಆ. ಬಾರಿಕೇರ್,
ವಟಗಲ್, ರಾಯಚೂರು ಜಿಲ್ಲೆ

- ಒಬ್ಬೊಬ್ಬರದ್ದು ಒಂದೊಂದು ರೀತಿಯ ಮಿಡಿತ. ಅವನ್ನೆಲ್ಲ ಓದಿದಾಗ ನಾನು ಕೂಡಾ ಅವರಿಗೆ ಸೇರಿದ್ದೇನೆ ಎನ್ನುವ ಕಲ್ಪನೆ.

– ಶೇಖರ್ ಪೂಜಾರಿ, ಶಿರೂರು (ದ.ಕ.)

- ವಿಶೇಷಾಂಕ ಯುವ ಜನತೆಗೆ ಮುದ ನೀಡುವುದರ ಜೊತೆಗೆ ಮಾರ್ಗದರ್ಶನ ನೀಡುವಂತಿತ್ತು.

– ವೀರಣ್ಣ ಕೊಳಕಿ, ಮುನವಳ್ಳಿ

- ಇಡೀ ಸಂಚಿಕೆಯೇ ಯುವ ಮಿಡಿತದವರ ಹೃದಯ ಗೆದ್ದಿದೆ.

– ಎಸ್. ಕೆ. ಹೂಗಾರ್, ದೊಡ್ಡಜೋಗಿಹಳ್ಳಿ

- ಸುಂದರ ಮುಖಪುಟ, ರುಚಿಕರ – ಸೊಗಸಾದ ಓದು.

– ಶಿವಣ್ಣ ಬಿ. ಹೂಗಾರ, ಆಲಗೂರು

- ಯುವ ಮಿಡಿತ ಸಿಹಿಸಿಹಿಯಾಗಿತ್ತು. 'ಭಾವನೆಗಳು' ಕಥೆ ಮನಸ್ಸನ್ನು ಮಿಡಿದಿತ್ತು.

– ಪಿ. ಕೆ. ರಾಘವೇಂದ್ರ ತಂತ್ರಿ, ವರ್ಕಾಡಿ

- ಸೃಜನದಾಗರ – ಈ ಸಂಚಿಕೆ. ಯುವ ಮಿಡಿತ ಬೋನಸ್ ಕೊಡುಗೆ.

– ಎಂ. ಎಂ. ಹೆಬ್ಬಾಳ, ಮುಶಿಗೇರಿ

- ನನ್ನ ಭಾವನೆಗಳದ್ದೆ ಬೇರೆ ಬೇರೆ ಮುಖಗಳು. ಸಮಾಜ ಎದುರಿಸುವ ಆತ್ಮವಿಶ್ವಾಸ ಹೆಚ್ಚಾಗಿದೆ.

– ಕೆ. ಶಿವರಾಮು ಹೆಮ್ಮಣ್ಣ, ಹೊಸಂಗಡಿ (ದ.ಕ.)

- ನೆನಪಿನಾಳದಲ್ಲಿ ಮುಳುಗಿಹೋದ ಭಾವನೆಗಳನ್ನು ಹೊರಚೆಲ್ಲುವ ತುಡಿತ ಉಂಟುಮಾಡಿದೆ.

– ಕಗ್ಗೆರೆ ಪ್ರಕಾಶ್, ಬೆಂಗಳೂರು

- ಡಾ। ಕೆ. ಎಸ್. ನರಸಿಂಹಸ್ವಾಮಿ ಅವರ ಕವನ 'ಒಳಗೆ ಬಾರೆನ್ನೊಲವೆ' ಯುವ ಮಿಡಿತ ವಿಶೇಷಾಂಕಕ್ಕೆ ಒಂದು ವಿಶೇಷ ಮೆರುಗನ್ನು ಕೊಟ್ಟಿದೆ.

– ರಾಜೇಂದ್ರ ಬುರಡೀಕಟ್ಟಿ, ಕಡೇನಂದಿಹಳ್ಳಿ
– ಮಲ್ಲಿಕಾರ್ಜುನ ಪ. ಶೆಲ್ಲಿಕೇರಿ, ಕೊಲ್ಹಾಪೂರ
– ದಿನೇಶ್ ಜಿ. ನಾಯ್ಕ, ಬೊಗ್ರಿಬೈಲ್, ಕುಮಟಾ

ಪ್ರಿಯ 'ತುಷಾರ' ಓದುಗರಿಗೆ –

ನನ್ನ ಕಾದಂಬರಿ 'ಬೆಂಕಿಕೋಳಿ'ಗೆ ಕರ್ನಾಟಕ ದಿಂದ ಬಂದಿರುವ ಪ್ರತಿಕ್ರಿಯೆಗಳು ನನಗೆ ತುಂಬ ಸಂತೋಷವನ್ನುಂಟುಮಾಡಿದೆ. ಬರೀ ಬೆಂಗಳೂರು ನಗರದಿಂದಲೇ ನನಗೆ ಐನೂರಕ್ಕೂ ಹೆಚ್ಚು ಪತ್ರಗಳು ಬಂದಿವೆ. ಇಂಥ ಪ್ರೋತ್ಸಾಹದಿಂದ ಇಂಥದೇ ವ್ಯಾಪಾರೀ ಅಲ್ಲದ ಕೃತಿಗಳನ್ನು ಬರೆಯಬೇಕೆಂದು ಲೇಖಕನಿಗೆ ಸ್ಫೂರ್ತಿ ಬರು ತ್ತದೆ.

ಕರ್ನಾಟಕದ ಓದುಗರ ಈ ಉತ್ತಮ ಅಭಿರುಚಿಗೆ ಅಭಿನಂದಿಸುತ್ತೇನೆ. ಅವರ ಪತ್ರಗಳಿ ಗಾಗಿ ವಂದನೆಗಳು. ವೈಯಕ್ತಿಕವಾಗಿ ಉತ್ತರಿಸ ಲಾಗದ್ದಕ್ಕೆ ಕ್ಷಮೆ ಕೋರುತ್ತೇನೆ.

– ಯಂಡಮೂರಿ ವೀರೇಂದ್ರನಾಥ್,
ಹೈದರಾಬಾದ್.

(ಈಗಲೂ 'ಬೆಂಕಿಕೋಳಿ' ಓದಿ ಪತ್ರಗಳು, ಸೊಗಸಾದ ವಿಮರ್ಶೆಗಳು ಬರುತ್ತಿವೆ. ಸ್ಥಳಾವ ಕಾಶವಿಲ್ಲದೆ ಇವುಗಳಲ್ಲಿ ಕೆಲವನ್ನಾದರೂ ಪ್ರಕಟಿಸಲು ಸಾಧ್ಯವಾಗುತ್ತಿಲ್ಲ. ಆತ್ಮೀಯ – ಅಭಿಮಾನಿ ಓದುಗರಿಗೆಲ್ಲ ಧನ್ಯವಾದಗಳು – **ಸಂಪಾದಕ**).

ಡಾ| ಶಿವರಾಮ ಕಾರಂತ ಪ್ರತಿಷ್ಠಾನ (ರಿಜಿಸ್ಟರ್ಡ್), ಬಾಲಾಜಿ ಟ್ರೇಡರ್ಸ್, ಜ್ಯೋತಿ ನಗರ, ಮೂಡುಬಿದಿರೆ – 574 227 (ದ.ಕ.): ವಿಮರ್ಶೆ, ಸಂಶೋಧನ ಕೃತಿಗಳಿಗೆ ಬಹುಮಾನ ಮತ್ತು ಪ್ರತಿಭಾವಂತ ಲೇಖಕರಿಗೆ ಮನ್ನಣೆ ಯೋಜನೆ ಮಾಡಿದೆ. ಆಸಕ್ತರು – ಜಯಪ್ರಕಾಶ್ ಮಾವಿನಕುಳಿ, ಪ್ರಧಾನ ಕಾರ್ಯದರ್ಶಿ, ಶ್ರೀ ಮಹಾವೀರ ಕಾಲೇಜು, ಮೂಡಬಿದ್ರೆ –574 197 ಅವರಿಗೆ ಬರೆಯಬಹುದು. ●

● ಸೃಷ್ಟಿ ವಸಂತ ಕಾಲದಲ್ಲಿ ಹೊಸ ಜನ್ಮ ಪಡೆಯುವಂತೆ ನಾನು ನನ್ನ ಶಸ್ತ್ರಚಿಕಿತ್ಸೆಯ ನಂತರ ಹೊಸ ಬದುಕನ್ನು ಪಡೆದೆ. ಆ ಹೊಸ ಬದುಕಿನ ಪ್ರಥಮ ಮಾಸದಲ್ಲಿ ನನ್ನ ಮಿಡಿತ ಹೊತ್ತು ತಂದ ಸಂಚಿಕೆ ನೋಡಿ ಹಿಡಿಸಲಾರದಷ್ಟು ಸಂತಸವಾಯಿತು.

– ಎಸ್. ಎಸ್. ಬಳಿಗೇರ, ನರಗುಂದ

(ಯುವ ಮಿಡಿತ ಪ್ರಯತ್ನವನ್ನು, ಕಥೆ – ಕವನಗಳನ್ನು ಮೆಚ್ಚಿ ತುಂಬಾ ಪತ್ರಗಳು ಬಂದಿವೆ).

ನನ್ನೂರು – ನನ್ನ ಜನ:

ರಾಯಚೂರು ಜಿಲ್ಲೆ

● ರಾಯಚೂರು ಜಿಲ್ಲೆ ಎಲ್ಲ ರೀತಿಯಲ್ಲೂ ಹಿಂದೆ ಎಂಬ ಭಾವನೆಯಿದ್ದ ಜನರಿಗೆ ನಮ್ಮ ಜಿಲ್ಲೆಯ ಪ್ರಗತಿ ಕಾಣಿಸಿದ್ದಕ್ಕೆ ಧನ್ಯವಾದಗಳು.

– ಕಲ್ಲೂರು ಅಮರೇಶ ಗೌಡ ಆರ್. ಪಾಟೀಲ್ ಮತ್ತಿತರರು, ಮಾನ್ವಿ, ರಾಯಚೂರು

● ರಾಯಚೂರು ಜಿಲ್ಲೆಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವಗಳ ಬಗ್ಗೆ ಉತ್ತಮ ಮಾಹಿತಿ.

– ಡಾ| ಎಚ್. ಎಸ್. ಉಷಾರಾಣಿ, ಮೈಸೂರು

● ಮಲಮಗನಂತೆ ಕಡೆಗಣಿಸಲ್ಪಟ್ಟ ನಮ್ಮ ಜಿಲ್ಲೆ ಕುರಿತು ಲೇಖನಗಳು – ಕನಿಷ್ಠ ಇಷ್ಟನ್ನಾದರೂ ಮಾಡುವ ಕೃಪೆಗೆ ಅಭಿಮಾನದಿಂದ ನನ್ನ ಕಣ್ಣಾಲಿಗಳು ತುಂಬಿ ಬಂದವು.

– ಡಾ| ಪ್ರಭಾಕರ್, ಮಾನ್ವಿ, ರಾಯಚೂರು

● ನಾನು ಇಲ್ಲೇ ಇದ್ದರೂ ಇಷ್ಟೊಂದು ಮಾಹಿತಿ ಗೊತ್ತಿದ್ದಿಲ್ಲ.

– ಅಂದಪ್ಪ ಜಿ. ಕುರಿ, ಬಳೂಟಗಿ (ರಾಯಚೂರು ಜಿಲ್ಲೆ)

● ಹಲವು ವಿಶೇಷಗಳ – ವೈವಿಧ್ಯಗಳ ನಮ್ಮ ಜಿಲ್ಲೆಯ ಬಗ್ಗೆ ಮತ್ತೆ ಮತ್ತೆ ಓದುತ್ತ ಮೈನವಿರೆದ್ದಿತು.

– ಎಚ್. ಆರ್. ವಸ್ತ್ರದ, ಕುಕನೂರು

ಜೀವನ ಚೈತ್ರ – ಅಂತಿಮ ಭಾಗ

● ಕನ್ನಡದಲ್ಲಿ ಉತ್ತಮ ಕಾದಂಬರಿಗಳಿಲ್ಲ ಎನ್ನುವ ನಮ್ಮ ಚಲನಚಿತ್ರ ನಿರ್ಮಾಪಕರಿಗೆ ಒಂದು ಪಾಠದಂತಿದೆ ಈ ಕಾದಂಬರಿ.

– ಆರ್. ಡಿ. ರವೀಂದ್ರ, ಕೊಪ್ಪ

● ತುಂಬಾ ಮುದ ನೀಡಿದ ಕಾದಂಬರಿ.

– ಡಿ. ಈಶ್ವರಪ್ಪ, ಚನ್ನಗಿರಿ

● ಬದುಕು ಒಂದು ದೀರ್ಘವಾದ ಯಾತ್ರೆ. ಆ ಯಾತ್ರೆಯಲ್ಲಿ ಕೊಳ್ಳಬೇಕಾದ್ದನ್ನೆಲ್ಲಾ ಕೊಂಡು ಅನುಭವಿಸುವುದನ್ನು ಅನುಭವಿಸಲೇ ಬೇಕಾಗುತ್ತದೆ.


– ಎಸ್ಕೆ ಕೊನೆಸಾಗರ, ಹುನಗುಂದ

● ಮಳೆಯಲಾಗದಂತಹ, ಸಂಗ್ರಹಯೋಗ್ಯ, ಪತ್ರಿಕೆಗೆ ಘನತೆ ತರುವಂಥ ಕಥೆ..

– ಇಂದುಪ್ರಿಯ ಬದರೀನಾಥ್, ಮದ್ರಾಸ್

● ಚಿತ್ರ ಬಿಡುಗಡೆಗೆ ಮೊದಲೇ ಮೂರು ಭಾಗಗಳನ್ನು ನೀಡಿ ಎಲ್ಲರ ಹೃದಯದಲ್ಲೂ 'ತುಷಾರ'ದ ಬಗ್ಗೆ ಗೌರವವುಂಟುಮಾಡಿದ್ದೀರಿ.

– ಕೆ. ಸಿ. ಶ್ರೀಧರ ಕೆಲ್ಲಂಗೆರೆ, ಹೊಳೆನರಸೀಪುರ



ಕಾದಂಬರಿ – ಅಂಬಿಕಾ ಪರಿಣಯ

• ನಿಜವಾದ ದಾಂಪತ್ಯ ಜೀವನಕ್ಕೆ ಸಂಗಾತಿ ಏನನ್ನು ಬಯಸಬಹುದು ಎನ್ನುವುದನ್ನು ಯಶಸ್ವಿಯಾಗಿ ನಿರೂಪಿಸಿದೆ.

– ರವಿಶಂಕರ್, ತಿರುವನಂತಪುರಂ

• ಹೂವಿಂದ ಹೂವಿಗೆ ಹಾರುವ ದುಂಬಿಗೆ ಗಂಡಸನ್ನು ಹೋಲಿಸುವಂತೆ, ದುಂಬಿಯಿಂದ ದುಂಬಿಗೆ ಜಾರುವ ಹೂವನ್ನು ಹೆಣ್ಣಿಗೆ ಹೋಲಿಸುವಂತಿದೆ ಈ ಕಥೆ.

– ಬಿ. ಆರ್. ತುಬಾಕಿ, ರಾಯಚೂರು ಜಿಲ್ಲೆ

• ಪ್ರೀತಿಸಿದವನನ್ನು ಬಿಟ್ಟು ಇನ್ನೊಬ್ಬನ ಬಣ್ಣದ ಮಾತಿನ ಮೋಡಿಗೆ ಮರುಳಾದ ಅಂಬಿಕಾ ಸೋತು ಮುರಳಿ ಜಯಶಾಲಿಯಾದದ್ದು ಮನಸ್ಸಿಗೆ ಮುದ ನೀಡಿತು.

– ಚಂದ್ರಶೇಖರ ಜಿ. ಎಸ್., ಮೇಲ್ ಗಂಗೊಳ್ಳಿ

• ಅಂಬಿಕಾ ಪರೀಕ್ಷೆಯಲ್ಲಿ ಸೋತದ್ದು ಬೇಸರ ತಂದಿತು. ಆ ಗಂಡಸರಾದರೂ ಅವಳನ್ನು ಅಷ್ಟು ಕಠಿಣ ಪರೀಕ್ಷೆಗೆ ಒಡ್ಡಬಾರದಾಗಿತ್ತು.

– ಬಿ. ಶುಭಾಕರ್,
ಬಾಳೆಗುಳಿ – ಇರ್ದೆ (ದ.ಕ.)

• ತನ್ನ ಬಗೆಗಿನ ಮುರಳಿಯ ಪ್ರೀತಿಯನ್ನೂ, ಅವನ ನಡತೆಯನ್ನೂ ಪರೀಕ್ಷಿಸಿದ ಅಂಬಿಕಾ ಆ ಪ್ರೇಮ ಪರೀಕ್ಷೆಯಲ್ಲೂ ಸೋಲಬಾರದಿತ್ತು.

– ಸರೋಜಿನಿ ಕಳವಾರು, ಬಜ್ಪೆ (ದ.ಕ.)

ಎಂ. ಆರ್. ಶ್ರೀ ನೆನಪು –

• 'ರಂಗಣ್ಣನ ಕನಸಿನ ದಿನಗಳು' ನೆನಪಿಗೆ ತಂದು ಆ ಹಿರಿಯರಿಗೆ ಗೌರವ ಕಾಣಿಸಿದ್ದೀರಿ.

– ಕೇಶವ ಪೆರಾಜೆ, ಮಡಿಕೇರಿ

ಕೃತಿ ಚೌರ್ಯ, ಕೃತಿ ಚೌರ್ಯ

ಕೃತಿಕಳ್ಳರು ಯಾವಾಗಲೂ ಇದ್ದೇ ಇರುತ್ತಾರೆ – ಹೃದಯಕಳ್ಳರ ಹಾಗೆ; ಪಾಪ, ಆಸೆಯಿಂದ ಈ ಕೆಲಸ ಮಾಡುತ್ತಾರೆ. ಪತ್ರಿಕೆಗಳಲ್ಲಿ ಆಗಾಗ ಬರುವ ಕಥೆ – ಕವನ, ವ್ಯಂಗ್ಯಚಿತ್ರಗಳು ಕೆಲವೊಮ್ಮೆ ಪ್ರೀತಿಯಿಂದ ಕಾಪಿಹೊಡೆದವೇ ಆಗಿರುತ್ತದೆ. ಹಿಂದಿನ 'ತುಷಾರ' ಸಂಚಿಕೆಯಲ್ಲಿನ 'ರಾಜು' ಅವರ ವ್ಯಂಗ್ಯಚಿತ್ರ (ಪುಟ-83) ಇಂಥದೊಂದು ಅಪ್ಪಟ ನಕಲು. ಮತ್ತೆ, ತನ್ನ ಹನಿಗವನಚೋರರು ಹೆಚ್ಚಿದ್ದಾರೆ ಎಂದು ಹನಿಗವನ ಸಾಮ್ರಾಟ್ ದುಂಡಿರಾಜ್ ಬರೆದಿದ್ದಾರೆ – ರೋಷದಿಂದ ಅವರು ಇದನ್ನೆ ವಸ್ತುವಾಗಿಸಿ ಹನಿಗವನವಾಗಿಸಿದ್ದಾರೆ:

'ಕದಿಯುತ್ತಿದ್ದಾರೆ ಪ್ರಿಯೆ
ಬಹಳಷ್ಟು ಜನ
ಪ್ರೀತಿ ಪ್ರೇಮದ ಬಗ್ಗೆ
ನಾ ಬರೆದ ಹನಿಗವನ'


'ಚಿಂತಿಸದಿರು ಪ್ರಿಯಾ!
ಕದಿಯಲಾರರು
ಕೃತಿಚೋರರು
ನೀ ಕದ್ದ ನನ್ನ
ಹೃದಯವನ್ನ!'

– ಅವರ ಪ್ರಿಯೆಯ ಹೃದಯದ ಮೇಲೆ ಮಾತ್ರವಲ್ಲ, ಇತರರ 'ಒರಿಜಿನಲ್' ಬರೆಹ – ಚಿತ್ರಗಳ ಮೇಲೂ ಕಣ್ಣು ಹಾಕಬಾರದೆಂದು ಸೃಷ್ಟಿಕರ್ತ ಬಾಂಧವರಲ್ಲಿ 'ಸ್ಟ್ರಿಕ್ಟ್' ಆಗಿ ಕೇಳಿಕೊಳ್ಳುತ್ತೇವೆ. – ಸಂಪಾದಕ

ತುಷಾರ 20ರ ಸಂಭ್ರಮ 1973–1993

ತಿಂಗಳ ಬಹುಮಾನಿತ ವ್ಯಂಗ್ಯಚಿತ್ರ





ಬೆರಕೆ

● ಸಾಸ್ಕಾಮೂರ್ತಿ

'ಟ್ರಿಣ್... ಟ್ರಿಣ್'

ಅದೇ ತಾನೇ ಸ್ನಾನವನ್ನು ಮುಗಿಸಿ ಪತ್ರಿಕೆಯನ್ನು ಹಿಡಿದಿದ್ದ ಯೋಗೇಶ, ಪತ್ರಿಕೆಯನ್ನು ಪಕ್ಕಕ್ಕಿಟ್ಟು ಎದ್ದುಹೋಗಿ ಫೋನನ್ನು ಎತ್ತಿಕೊಂಡ.

"ಹಲೋ, ಯೋಗೇಶ್ ಮಾತಾಡ್ತಿದ್ದೇನೆ."

"ಹಲೋ ಯೋಗ." ಆಕಡೆಯಿಂದ ಲಾಯರ್ ಗೋಪೀನಾಥನ ದನಿ ಕೇಳಿಸಿತು.

"ಏನು ಗೋಪಿ ? ಏನು ವಿಷಯ ?"

"ಯೋಗ. ನಿನ್ನ ಹತ್ರ ಸ್ವಲ್ಪ ಮಾತನಾಡೋದಿದೆ. ಬರ್ತೀಯ ?"

"ಇಷ್ಟು ಬೆಳಿಗ್ಗೆ. ಏನಪ್ಪಾ ಅಂಥದ್ದು ?"

"ಇದೆ. ಬೇಗ ಬಾ."

"ಕೋರ್ಟಿಗೆ ಹೋಗಲಿಲ್ವೆ ?"

"ಇಲ್ಲ. ಮೈಯಲ್ಲಿ ಹುಷಾರಿರಲಿಲ್ಲ."

"ಆಯ್ತು. ಅರ್ಧ ಗಂಟೇಲಿ ಬರ್ತೀನಿ."

"ಓ.ಕೆ."

ಯೋಗೇಶ ಥಟ್ಟನೆ ಹುಬ್ಬುಗಂಟಿಕ್ಕಿ ಫೋನನ್ನು ತೂಗಿಸಿದ.

ಎರಡು ಗಳಿಗೆ ಮೌನವಾಗಿ ಎದುರಿನ ಗೋಡೆಯನ್ನು ದಿಟ್ಟಿಸಿದ. ನಂತರ ತಲೆಯನ್ನು ಕುಣಿಸಿ ಮೇಲೆದ್ದು, ಶಿಸ್ತಾಗಿ ಉಡುಪು ಧರಿಸಿದ.

ರಾಮಯ್ಯನಿಗೆ ಬಾಗಿಲು ಹಾಕಿಕೊಳ್ಳುವಂತೆ ಹೇಳಿ ಮೋಟಾರ್ ಸೈಕಲ್ಲನ್ನು ಹತ್ತಿ ಗೋಪೀನಾಥನ ಬಂಗಲೆಯತ್ತ ಧಾವಿಸಿದ.

ಬಂಗಲೆ ಬೆಳಗ್ಗಿನ ಮೃದು ಮೌನದಲ್ಲಿ ಮುಳುಗಿತ್ತು.

ತೆರೆದಿದ್ದ ಗೇಟಿನ ಒಳಕ್ಕೆ ಬೈಕನ್ನು ಹೊಗಿಸಿ ಬಾಗಿಲ ಮುಂದೆ ನಿಲ್ಲಿಸಿದ.


ಕರೆಗಂಟೆಯನ್ನು ಒತ್ತಿದ.

ಕೆಲವು ಕ್ಷಣಗಳ ನಂತರ ಬಾಗಿಲು ತೆರೆಯಿತು.

"ಒಳಗೆ ಬಾ, ಯೋಗ." ಬಾಗಿಲು ತೆರೆದ ಗೋಪೀನಾಥ ಒಳಕ್ಕೆ ನಡೆದ.



ಪತ್ತೇದಾರಿ ಕಥೆ



ಏಳೆಂಟು ವರ್ಷಗಳಿಗೂ ಹಿಂದೆ ತನ್ನ ಹೆಂಡತಿ ಮತ್ತು ಮಾವನ ಕೊಲೆಯ ಆರೋಪದ ಮೇಲೆ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಶ್ರೀನಿವಾಸ, ಜೈಲಿನಿಂದ ತಪ್ಪಿಸಿಕೊಂಡ.

ವಿಶಾಲವಾದ ನಡುಮನೆಯ ಮಧ್ಯೆ ಹಾಕಿದ್ದ ಸೋಫಾದ ಮೇಲೆ ಕುಳಿತು ಎದುರಿನ ಸೋಫಾದತ್ತ ಕೈತೋರಿದ.



ಯೋಗೇಶ ಅತ್ತಿತ್ತ ಗಮನಿಸಿ, ನಂತರ ಮುಗುಳ್ನಗುತ್ತ ಮುಂದೆ ನಡೆದು ಗೋಪೀನಾಥನ ಎದುರಿಗೆ ಕುಳಿತ.

"ಇದೇನಯ್ಯ? ಏನೋ ಸಸ್ಪೆನ್ಸ್ ಸೃಷ್ಟಿ ಮಾಡ್ತಿದ್ದೀಯ. ಏನು ವಿಷಯ?" ಎಂದು ಕೇಳಿದ.

ಗೋಪೀನಾಥ ತುಟಿ ಅರಳಿಸಿದ.

"ಎಂಥಾ ಸಸ್ಪೆನ್ಸೂ ಇಲ್ಲ. ನೀನು ಹೇಗಿದ್ರೂ ರಿಟೈರಾಗಿದ್ದೀಯ. ನಂಗೂ ಹುಷಾರಿರ್ಲಿಲ್ಲ. ಕೂತ್ಕೊಂಡು ಹಳೇ ವಿಷಯಗಳನ್ನು ಮೆಲುಕು ಹಾಕೋಣ ಅಂತ ಫೋನ್ ಮಾಡಿದೆ."

"ಒಬ್ಬನೇ ಇರೋ ಹಾಗಿದೆ? ಕೆಂಪಣ್ಣ ಎಲ್ಲಿ?"

"ಅವರಣ್ಣನ ಮಗನ ಮದುವೆಗೆ ಊರಿಗೆ ಹೋಗಿದ್ದಾನೆ."

ಯೋಗೇಶ ಅವನತ್ತ ಮಂದನೋಟ ಬೀರಿದ,

"ಆಯ್ತು. ಅದೇನು ಹಳೇ ವಿಷಯ, ಹೇಳು."

ಗೋಪೀನಾಥ ಒಂದು ಕ್ಷಣ ಸುಮ್ಮನಿದ್ದು ನಂತರ ಹೇಳಿದ,

"ಏಳೆಂಟು ವರ್ಷದ ಹಿಂದೆ ಶ್ರೀನಿವಾಸ್ ಅನ್ನುವ ವ್ಯಕ್ತಿ ತನ್ನ ಹೆಂಡತಿ ಮತ್ತು ಮಾವನ ಕೊಲೆಯ ಆರೋಪದ ಮೇಲೆ ಜೀವಾವಧಿ ಶಿಕ್ಷೆಗೊಳಗಾಗಿದ್ದ ಜ್ಞಾಪಕ ಇದೆಯಾ?"

"ಹೌದು. ಫ್ರೀಲಾನ್ಸರ್ ತಾನೇ?"

"ಕರೆಕ್ಟ್."

"ಅವನು ಜೈಲಿನಲ್ಲಿದ್ದಾನೆ. ಏನು ಅವನ ವಿಷಯ?"

"ಮಾತಾಡಕ್ಕೆ ಏನಾದರೂ ವಿಷಯ ಬೇಕಲ್ಲ? ನನ್ನ ಮತ್ತು ನಿನ್ನ ಕೊಲೆ ಮಾಡ್ತೀನಿ ಅಂತ ಪ್ರತಿಜ್ಞೆ ಮಾಡಿದ್ದ ಅಲ್ವ? ಅದಕ್ಕೆ ಜ್ಞಾಪಕ ಬಂತು."

ಯೋಗೇಶ ತುಟಿ ಅರಳಿಸಿದ.

"ಪ್ರತಿಜ್ಞೆ ಮಾಡೋದಿರ್ಲಿ, ಅದೇ ಸನ್ನಿ ಹಿಡಿದಿದೆಯಂತೆ ಅವನಿಗೆ! ಅರೆಹುಚ್ಚನಾಗಿ ಬಿಟ್ಟಿದ್ದಾನಂತೆ. ಈಗ್ಲೂ ಹಾಗೇ ಕೂಗಾಡ್ತಾನಂತೆ. ಅವನ ಕೇಸಿಗೆ ಸರ್ಕಾರೀ ವಕೀಲ ನೀನೇ ತಾನೇ? ನೀನೇ ಹೇಳು."

"ನಂಗೆ ಆಯಾಸವಾಗುತ್ತೆ. ನೀನೇ ಹೇಳು."

ಯೋಗೇಶ ಅವನ ಮುಖವನ್ನು ದಿಟ್ಟಿಸಿ, ಚುರೂಟನ್ನು ಹೊತ್ತಿಸಿ ಹೊಗೆಯನ್ನು ಬಿಡುತ್ತ ನಿರಾಳವಾಗಿ ಕುಳಿತ.

"ಅವನು ತುಂಬಾ ಚಾಣಾಕ್ಷ. ನಾನು ಇಲ್ಲಿಗೆ ವರ್ಗವಾಗಿ ಬರೋಕೆ ಮೊದಲು ಅವನು ಮಾಡಿದ್ದ ಎರಡು ಕೊಲೆಗಳು ತನಿಖೆಗೆ ಸಿಗದೆ ಮುಚ್ಚಿಹೋಗಿದ್ದುವು. ಇವೆರಡೂ ಪ್ರಕರಣಗಳಲ್ಲಿ ಕೊಲೆಗೀಡಾದವರು ಹದಿವಯಸ್ಸಿನ ಅವಿವಾಹಿತ ತರುಣಿಯರು. ಅವರಿಬ್ಬರೂ ಗರ್ಭವತಿಯರಾಗಿದ್ರು. ಶ್ರೀನಿವಾಸ ಆ ಕೊಲೆಗಳನ್ನು ಚಾಣಾಕ್ಷತನದಿಂದ ವಿನ್ಯಾಸಗೊಳಿಸಿದ್ದ ರೀತಿಯಿಂದಾಗಿ ಅವು ಆತ್ಮಹತ್ಯೆಯ ಪ್ರಕರಣಗಳಂತೆ ತೋರಿಬಂದಿದ್ದುವು. ಇಬ್ಬರು ತರುಣಿಯರೂ ತಮ್ಮ ಹಸ್ತಾಕ್ಷರದಲ್ಲಿ, ತಾವು ಜೀವನದ ಮೇಲಿನ ಜುಗುಪ್ಸೆಯಿಂದ ಆತ್ಮಹತ್ಯೆಯನ್ನು ಮಾಡಿಕೊಂಡಿರುವುದಾಗಿ ಬರೆದಿಟ್ಟಿದ್ದರು. ಇದೆಲ್ಲಾ ನಿಂಗೂ ಗೊತ್ತಲ್ಲ?"

ಗೋಪೀನಾಥ ತಲೆಯಾಡಿಸಿದ.

"ಗೊತ್ತಿದೆ. ಮುಂದೆ ಹೇಳು."

"ಬಿಯರ್ ಇಲ್ವ?" ಕೇಳಿದ ಯೋಗೇಶ್.

ಗೋಪೀನಾಥ ಹುಬ್ಬೆತ್ತಿ ನಕ್ಕ.

"ಕಪಾಟಿನಲ್ಲಿದೆ."

ಯೋಗೇಶ ಎದ್ದು ಹೋಗಿ ಕಪಾಟಿನಿಂದ ಎರಡು ಗ್ಲಾಸುಗಳನ್ನೂ ಬಿಯರ್ ಶೀಷೆಯನ್ನೂ ತೆಗೆದುಕೊಂಡು ಬಂದ. ಎದುರಿನ ಟೀಪಾಯಿಯ ಮೇಲಿರಿಸಿ ಓಪನರ್ ತರಲು ಮತ್ತೆ ಹೋಗಲಿದ್ದಾಗ ಫೋನಿನ ಗಂಟೆ ಬಾರಿಸಿತು.

ಗೋಪೀನಾಥ ಮೇಲೇಳಲು ಯತ್ನಿಸಿದ.

ಯೋಗೇಶ ಅವನನ್ನು ತಡೆದ.

"ನಿನಗೆ ಆಯಾಸವಾಗುತ್ತೆ. ಸುಮ್ಮನೆ ಕೂತ್ಕೋ. ನಾನು ನೋಡ್ತೀನಿ" ಎಂದ.

"ಯಾರಾದ್ರೂ ಕೇಳಿದರೆ, ಅರ್ಜಂಟ್ ಕೆಲಸದ ಮೇಲೆ ಹೊರಗೆ ಹೋಗಿದೀನಿ ಅಂತ ಹೇಳು."

"ಆಯ್ತು." ಯೋಗೇಶ ಫೋನ್ ಎತ್ತಿಕೊಂಡ.

ಗೋಪೀನಾಥ ಅವನನ್ನೇ ದಿಟ್ಟಿಸಿದ.

"ಹಲೋ..."

"...."

"ಹೌದು."

"...."

"ಹೌದು."

"....."

"ಹೌದು."

"....."

"ಅವರು ಮನೆಯಲ್ಲಿಲ್ಲ. ಹೊರಗೆ ಹೋಗಿದ್ದಾರೆ."

ಯೋಗೇಶ ಫೋನನ್ನಿಟ್ಟು, ಕಪಾಟಿನಿಂದ ಓಪನರ್ ತೆಗೆದುಕೊಂಡು ಬಂದು ತನ್ನ ಸ್ಥಳದಲ್ಲಿ ಕುಳಿತ.

"ಯಾರಯ್ಯಾ ಅದು ?" ಕೇಳಿದ ಗೋಪಿನಾಥ.

"ಯಾರೋ ಮುರಳೀಧರ ಅಂತೆ. ನಿನ್ನ ಕಕ್ಷಿದಾರ ಇರಬೇಕು" ಎಂದು ಯೋಗೇಶ ಬಾಟಲಿಯ ಮುಚ್ಚಳವನ್ನು ಟಪ್ಪನೆ ತೆರೆದು ಗ್ಲಾಸಿಗೆ ಬಿಯರ್ ಸುರಿದ.

"ನನಗೆ ಹಾಕಬೇಡ" ಎಂದ ಗೋಪೀನಾಥ.

ಯೋಗೇಶ ಅವನ ಗ್ಲಾಸನ್ನು ಕೆಳಗಿನ ಖಾನೆಯಲ್ಲಿಟ್ಟು, ಬಿಯರನ್ನು ಮೃದುವಾಗಿ ಹೀರುತ್ತ ಹೇಳಿದ.

"ಶ್ರೀನಿವಾಸ್, ಈ ಹುಡುಗಿಯರನ್ನು ಹೆದರಿಸಿ, ಬಲಾತ್ಕಾರದಿಂದ ಕಾಗದಗಳನ್ನು ಬರೆಸಿ ನಂತರ ಕೊಲೆ ಮಾಡಿದ್ದ. ಆಗ ಅವನು ಒಂದು ಹೊಟೇಲಿನಲ್ಲಿ ರಿಸೆಪ್ಶನಿಸ್ಟ್ ಆಗಿದ್ದ. ಒಂದು ವಿಷಯ ಅಂತೂ ನಿಜ. ಶ್ರೀನಿವಾಸ ಸುಂದರ ಯುವಕ. ಮನ್ಮಥ ಅಂತಾರಲ್ಲ, ಹಾಗೆ. ಚಿಟಿಕೆ ಹೊಡೆಯೋದರಲ್ಲಿ ಹುಡುಗೀರು ಅವನ ಬಲೆಗೆ ಬೀಳ್ತಿದ್ರು. ತನ್ನ ಈ ವ್ಯಕ್ತಿತ್ವವನ್ನು ಅವನು ಮೊದಲು ತನ್ನ ಇಚ್ಛಾಪೂರೈಕೆಗೆ ಉಪಯೋಗಿಸಿಕೊಂಡ. ಕೊಲೆಗಳನ್ನು ಮಾಡಿದ. ತನ್ನ ಮತ್ತು ಈ ತರುಣಿಯರ ನಡುವಿನ ಸಂಬಂಧ ಯಾರಿಗೂ ತಿಳಿಯದಂತೆ, ಬಹಳ ರಹಸ್ಯವಾಗಿ ಚಟುವಟಿಕೆ ನಡೆಸಿದ್ದ. ಹಾಗಾಗಿ ಅವನ ಮೇಲೆ ಸಂದೇಹ ಯಾರಿಗೂ ಬರಲಿಲ್ಲ.

ಕೊಲೆ ಮಾಡಿಯೂ ತಪ್ಪಿಸಿಕೊಳ್ಳಬಹುದೆಂಬುದು ಅರಿವಾದಾಗ ಅವನ ಬುದ್ಧಿ ಬೇರೊಂದು ದಿಕ್ಕಿಗೆ ಹೊರಳಿತು. ಅವನೊಬ್ಬ ಉತ್ತಮ ಛಾಯಾಗ್ರಾಹಕ. ಒಳ್ಳೆಯ ಬರವಣಿಗೆ ಇತ್ತು. ಫ್ರೀಲಾನ್ಸ್ ಪ್ರಾರಂಭಿಸಿದ. ಅವನ ಛಾಯಾಚಿತ್ರಗಳು, ಲೇಖನಗಳು ಜನಪ್ರಿಯವಾದುವು. ಹಲವಾರು ಪ್ರಶಸ್ತಿಗಳೂ ದಕ್ಕಿದುವು. ಅವನೀಗ ಶ್ರೀಮಂತ ತರುಣಿಯರತ್ತ ಕಣ್ಣುಹಾಯಿಸಿದ. ಅವರ ಜತೆ ಸ್ನೇಹಬೆಳೆಸಿ, ಅಟೋಮ್ಯಾಟಿಕ್



ಕ್ಯಾಮೆರಾದಲ್ಲಿ ತನ್ನ ಮತ್ತು ಅವರ ಸಂಬಂಧಗಳನ್ನು ಸೆರೆಹಿಡಿದು ಬ್ಲಾಕ್‌ಮೈಲ್ ಮಾಡಿ ಹಣ ಸಂಪಾದಿಸತೊಡಗಿದ. ಅವನಿಂದ ವಂಚಿತರಾದ ತರುಣಿಯರು ಮಾನಕ್ಕೆ ಹೆದರಿ ಯಾರಲ್ಲಿಯೂ ವಿಷಯವನ್ನು ಬಾಯಿಬಿಡ್ತಿರಲಿಲ್ಲ. ಅಗಲೇ ಮೇಜರ್ ಚೆಟ್ಟಿಯ್ಯನವರ ಮಗಳು ವತ್ಸಲಾ ಇವನ ಬಲೆಗೆ ಬಿದ್ದಳು. ಶ್ರೀನಿವಾಸ ಇಲ್ಲಿ ಎಂದಿನಂತೆ ಬ್ಲಾಕ್‌ಮೈಲ್ ದಂಧೆಗೆ ಇಳೀಲಿಲ್ಲ. ಮೇಜರನ ಅಪಾರ ಆಸ್ತಿ ಅವನ ಗುರಿಯಾಗಿತ್ತು. ವತ್ಸಲಾ ಒಬ್ಬಳೇ ಸಂತಾನ. ಆಸ್ತಿ ಅವಳಿಗೆ ದಕ್ಕುವುದಿತ್ತು. ಆಕೆಗೆ ತಾಯಿಯೂ ಇರಲಿಲ್ಲ. ಇದನ್ನು ತಿಳಿದ ಶ್ರೀನಿವಾಸ ಅವಳನ್ನು ಮದುವೆಯಾಗುವ ಹಂಚಿಕೆ ಹಾಕಿದ. ಮೇಜರ್, ಮಗಳನ್ನು ತುಂಬಾ ಪ್ರೀತಿಸಿದ್ದ. ಅವಳ ಬಯಕೆಯಂತೆ ಇಬ್ಬರಿಗೂ ಮದುವೆ ನಡೀತು. ಆದರೆ ಬರುಬರುತ್ತ ಶ್ರೀನಿವಾಸನ ನಿಜರೂಪ ಬಯಲಾಗಹತ್ತಿದಾಗ ಮೇಜರ್, ಮಗಳಿಗೆ ಡೈವೋರ್ಸ್ ಕೊಡಿಸುವ ಯೋಚನೆ ಮಾಡಿದ. ಅದರ ಸುಳಿವನ್ನು ಹಿಡಿದ ಶ್ರೀನಿವಾಸ ಇಬ್ಬರನ್ನೂ ಕೊಲೆ ಮಾಡಿದ."

"ಹೌದು ಯೋಗ. ನೆನಪಿದೆ. ಆಗತಾನೇ ನೀನು ಇಲ್ಲಿಗೆ ವರ್ಗವಾಗಿ ಬಂದಿದ್ದೆ. ಈ

ಪ್ರಕರಣದ ತನಿಖೆ ನಡೆಸಿದೋನು ನೀನೇ. ಮೇಜರ್ ಮತ್ತು ವತ್ಸಲಾ ಇಬ್ಬರನ್ನೂ ಮೇಜರನ ಪಿಸ್ತೂಲಿನಿಂದ್ಲೇ ಗುಂಡುಹಾರಿಸಿ ಕೊಲ್ಲಲಾಗಿತ್ತು. ಕೊಲೆ ನಡೆದ ಸ್ಥಳದಲ್ಲಿ ಫರ್ನಿಚರ್‌ಗಳು, ಇಟ್ಟಾಡಿದ್ದವು. ಬೀರುಗಳಿಂದ ಬಟ್ಟೆಗಳನ್ನೂ ಇತರ ವಸ್ತುಗಳನ್ನೂ ಎಳೆದು ಹಾಕಲಾಗಿತ್ತು. ತಿಜೋರಿಯಿಂದ ಲಕ್ಷಾಂತರ ರೂಪಾಯಿ ನಗದು ಮತ್ತು ಆಭರಣಗಳು ಕಾಣೆಯಾಗಿದ್ದವು. ಮೇಲ್ನೋಟಕ್ಕೆ ಇದು ದರೋಡೆಕೋರರ ಕೆಲಸ ಅನ್ನುವ ರೀತಿ ತೋರಿ ಬರ್ತಿತ್ತು. ಈ ಬಗ್ಗೆ ನಿಂಗೆ ಅನುಮಾನ ಬಂದಿದ್ದು ಹೇಗೆ?" ಗೋಪೀನಾಥ ಕೇಳಿದ.

ಯೋಗೇಶ ತಲೆಯಾಡಿಸಿ ಹೇಳಿದ,

"ದರೋಡೆಕೋರರು ಮೇಜರನಿಂದ ಪಿಸ್ತೂಲು ಕಸಿದುಕೊಂಡು, ಇಬ್ಬರನ್ನು ಷೂಟ್‌ಮಾಡಿ ತಿಜೋರಿಯಿಂದ ಹಣವನ್ನು ಕೊಂಡೊಯ್ದಂತೆ ವಸ್ತುಸ್ಥಿತಿಯನ್ನು ವಿನ್ಯಾಸಗೊಳಿಸಲಾಗಿತ್ತು. ಇಲ್ಲಿ ಅನುಮಾನಕ್ಕೆ ಎಡೆಕೊಡೋ ಅಂಶಗಳು ಸಾಕಷ್ಟಿದ್ದವು. ರೂಮಿನಲ್ಲಿ ಚೆಲ್ಲಾಪಿಲ್ಲಿಯಾಗಿದ್ದ ಬಟ್ಟೆಗಳು, ಫರ್ನಿಚರ್‌ಗಳು ಒಂದುರೀತಿ ನಾಟಕೀಯ ದೃಶ್ಯದಂತೆ ತೋರಿದುವು. ಫರ್ನಿಚರ್‌ಗಳ ಅಸ್ತವ್ಯಸ್ತತೆ ಅಲ್ಲಿ ಹೊಡೆದಾಟ ನಡೆದಿರಬಹುದೆಂದು ಸೂಚಿಸುತ್ತಿತ್ತು. ಹೋರಾಟ ನಡೆಸಿದರು ಯಾರು? ಯಾರ ಮೇಲೆ? ಮೇಜರನ ದೇಹ ಪರೀಕ್ಷೆಯಿಂದ ಹೋರಾಟದ ಚಿಹ್ನೆಗಳಾವುವೂ ಕಂಡುಬರಲಿಲ್ಲ! ಇದು ಒಂದಂಶ."

"ಹಣದ ತಿಜೋರಿ ಒಂಟಿಯಾಗಿ ಎದುರಿಗೇ ಇತ್ತು. ಅದಕ್ಕಾಗಿ ಬೀರುಬೀರುಗಳನ್ನೂ ತಡ ಕಾಡುವ ಪ್ರಮೇಯವೇ ಇಲ್ಲ. ಮತ್ತೆ ಬಟ್ಟೆ ಗಳನ್ನು ಎಳೆದುಹಾಕಿದ್ದುದು ಯಾತಕ್ಕೆ? ಇದು ಎರಡನೇ ಅಂಶ."

"ಮೂರನೆಯದು—ಪಿಸ್ತೂಲಿನ ಮೇಲೆ ಮೇಜರನ ಬೆರಳ ಗುರುತುಗಳಿದ್ದುವು. ಪಿಸ್ತೂ ಲನ್ನು ಬಿಗಿಹಿಡಿದಂತಿದ್ದ ಗುರುತುಗಳಲ್ಲ. ಮೃದು ಒತ್ತುಗಳು! ದರೋಡೆಕೋರರು ಪಿಸ್ತೂಲು ಕಸಿದುಕೊಂಡಿದ್ದಿದ್ದರೆ ಅವರ ಬೆರಳ ಗುರುತು ಗಳು ಮೂಡಬೇಕಿತ್ತಲ್ಲ!"

"ನಾಲ್ಕನೆಯದು—ಮೇಜರ್ ತುಂಬು ಸ್ಥೈರ್ಯವುಳ್ಳ ವ್ಯಕ್ತಿ. ಕರಾರುವಾಕ್ಕಾದ ಪಿಸ್ತೂಲಿನ ಗುರಿ. ಅಂಥವನಿಂದ ಪಿಸ್ತೂಲನ್ನು ಕಸಿದು ಕೊಳ್ಳುವುದು ಸಾಧ್ಯವೇ ಇಲ್ಲದ ವಿಷಯ. ಆತ ಮೊದಲು ಷೂಟ್ ಮಾಡಿ ನಂತರ ಮಾತನಾಡು ವಂಥ ವ್ಯಕ್ತಿ."

"ಐದನೆಯದು—ಮೇಜರ್ ಮತ್ತು ವತ್ಸಲಾ ಇಬ್ಬರ ಮೇಲೂ ಪಾಯಿಂಟ್‌ಬ್ಲಾಂಕ್ ರೇಂಜಿ ನಿಂದ ಗುಂಡು ಹಾರಿಸಲಾಗಿತ್ತು. ಈ ರೀತಿ ಗುಂಡು ಹಾರಬಹುದು ಎಂಬುದು ಮೇಜರನಿಗೇ ಗೊತ್ತಿಲ್ಲದಿದ್ದಿರಬಹುದು. ಇಷ್ಟು ಹತ್ತಿರದಿಂದ ಗುಂಡುಹಾರಿಸುವ ಪ್ರಮೇಯ ಏನು? ಬಹುಶಃ ಗುಂಡು ಹಾರಿಸಿದ ವ್ಯಕ್ತಿಗೆ ಪಿಸ್ತೂಲಿನ ಬಳಕೆ ಸರಿಯಾಗಿಲ್ಲದಿದ್ದಿರಬಹುದು! ಅದರಂತೆಯೇ ಶ್ರೀನಿವಾಸನಿಗೆ ಪಿಸ್ತೂಲಿನ ಬಳಕೆ ಸರಿಯಾಗಿ ತಿಳಿದಿರಲಿಲ್ಲ! ಆಗಲೇ ನನಗೆ ಈ ಕೊಲೆಗಳ ವಿಷಯದಲ್ಲಿ ಅನುಮಾನ ಮೂಡಿತು."

"ಆದರೆ ಆದಿನ ಶ್ರೀನಿವಾಸ ಊರಿನಲ್ಲಿರ್ಲಿಲ್ಲ. ಅಲ್ವ?"

"ಹೌದು. ಬೊಂಬಾಯಿಗೆ ಹೋಗಿದ್ದ."

"ಮತ್ತೆ ಅವನ ಮೇಲೆ ಅನುಮಾನಪಟ್ಟಿದ್ದು ಹೇಗೆ?"

"ಅನುಮಾನ ಬಂದ ಕೂಡಲೇ ನಾನು ತನಿಖೆ ಪ್ರಾರಂಭಿಸಿದೆ. ಬೊಂಬಾಯಿಗೆ ರವೀಂದ್ರನ್ನ ಕಳಿಸಿದೆ. ಟ್ರೈನ್ ರಿಜರ್ವೇಷನ್ ಪರಿಶೀಲಿಸಿದೆ. ಬೊಂಬಾಯಿಗೆ ಶ್ರೀನಿವಾಸ ಹೋಗಿದ್ದಂತೂ ನಿಜ. ಟ್ರೈನಿನಲ್ಲಿ ಇವನ ಜತೆ ಪ್ರಯಾಣಿಸಿದ ಪ್ರಯಾಣಿಕರ ವಿವರಗಳನ್ನು ಪಡೆದು ವಿಚಾರಿಸ ಲಾಗಿ, ಶ್ರೀನಿವಾಸ ಹುಬ್ಬಳ್ಳಿಯಲ್ಲಿ ಗಾಡಿಯನ್ನು ಹತ್ತಿದ್ದು ತಿಳಿದುಬಂತು. ಅಂದ್ರೆ, ಅವನು ಬೆಂಗಳೂರಿನಿಂದ ಟ್ರೈನು ಹೊರಟ ನಂತರದಲ್ಲಿ ಬಂಗಲೆಗೆ ಹೋಗಿ ಇಬ್ಬರನ್ನೂ ಕೊಲೆಮಾಡಿ, ಈ ಅಸ್ತವ್ಯಸ್ತ ಸ್ಥಿತಿಯನ್ನು ರೂಪಿಸಿ,—ಅಂದರೆ ಮೇಜರನ ಪಿಸ್ತೂಲನ್ನು ಮೊದಲೇ ತೆಗೆದಿಟ್ಟು ಕೊಂಡಿದ್ದ. ನಂತರ ಟ್ಯಾಕ್ಸಿಯನ್ನು ಹಿಡಿದು ಹುಬ್ಬಳ್ಳಿಗೆ ಹೋಗಿ ಟ್ರೈನು ಹತ್ತಿದ್ದ. ಟ್ಯಾಕ್ಸಿಯ ವನು ಕೂಡ ಇವನ ಭಾವಚಿತ್ರವನ್ನು ಗುರುತು ಹಿಡಿದಿದ್ದ.

"ಗೋಪಿ. ಶ್ರೀನಿವಾಸನ ಮೇಲೆ ನಂಗೆ ಅದೆಷ್ಟು ಅಸಹ್ಯ ಹುಟ್ಟಿತು ಅಂದ್ರೆ, ನನ್ನ ಸರ್ವೀಸ್‌ನಲ್ಲಿ ನಾನು ಯಾವ ಅಪರಾಧಿಗೂ ಹೊಡೆದಿರಲಿಲ್ಲ. ಆದರೆ ಶ್ರೀನಿವಾಸನಿಗೆ ಮಾತ್ರ

ಚೆನ್ನಾಗಿ ಒದ್ದುಬಿಟ್ಟೆ. ಅದೊಂದು ಕ್ಷುದ್ರ ಕೀಟ !"

ಯೋಗೇಶ ಚುರೂಟ ತೆಗೆದು ಬಾಯಿಗಿಟ್ಟ. ಒಂದು ಕೈಯಲ್ಲಿ ಬಿಯರ್ ಗ್ಲಾಸನ್ನು ಹಿಡಿದು, ಚುರೂಟಿನ ಸುತ್ತಲ ಗುಂಡುದನಿಯಲ್ಲಿ ಹೇಳಿದ.

"ಜೈಲಿನಿಂದ ತಪ್ಪಿಸಿಕೊಂಡು ನನ್ನನ್ನೂ ನಿನ್ನನ್ನೂ ಖೂನಿ ಮಾಡ್ತೀನಿ ಅಂತ ಕಿರಿಚಾಡ್ತಾನಂತೆ. ಅವನ ವಿರುದ್ಧ ಕೇಸು ವಾದಿಸಿದೋನು ನೀನು. ಅದಕ್ಕೆ ನಿನ್ನ ಮೇಲೆ ದ್ವೇಷ!"

ಎನ್ನುತ್ತ ಗೋಪೀನಾಥನ ಮುಖವನ್ನೇ ನೋಡುತ್ತ ಕಿಸೆಗೆ ಕೈ ಹಾಕಿದ. ಲೈಟರಿಗಾಗಿ ತಡಕಾಡಿದ.

ಒಂದೇ ಕ್ಷಣ.

ಕಿಸೆಯಿಂದ ಕೈಯು ಚಕ್ಕನೆ ಹೊರಬಂತು.

ಅದರ ಸಂಗಡವೇ ಯೋಗೇಶ ತಿರ್ರನೆ ಹೊರಳಿದ.

ಅವನ ಕೈಯಲ್ಲಿದ್ದ ಪಿಸ್ತೂಲಿನ ಲೋಹದ ನಳಿಕೆ ಸಳಸಳನೆ ಬೆಳಕಿನ ಸರಳುಗಳನ್ನು ಚಿಮ್ಮಿಸಿತು.

ಢಮಾರ್.

ಶಬ್ದವು ಬಂಗಲೆಯ ವಾಯುಹಿಡಿತದಲ್ಲಿ ಡವ್ವ್–ಡವ್ವ್ ಡವ್ವನೆ ಸುತ್ತಿ ಬರಹತ್ತಿತು.

ಟಾಯ್ಲೆಟ್ಟಿನಿಂದ ಸ್ವಲ್ಪ ಮುಂದೆ ವ್ಯಕ್ತಿಯೊಬ್ಬ, ತನ್ನ ಕೈಲಿದ್ದ ಪಿಸ್ತೂಲನ್ನು ದೂರಕ್ಕೆ ಸಿಡಿಸಿಕೊಂಡು, ನೋವಿನಿಂದ ಅರಚುತ್ತ ಟಾಯ್ಲೆಟ್ಟಿನ ಬಾಗಿಲಿಗೆ ಅಪ್ಪಳಿಸಿ ಒಳಕ್ಕೆ ಬೋರಲು ಬಿದ್ದ.

ಯೋಗೇಶ ಧಾವಿಸಿ ಹೋಗಿ ಆ ವ್ಯಕ್ತಿಯ ಕಾಲರನ್ನು ಹಿಡಿದು ಅನಾಮತ್ತಾಗಿ ಎತ್ತಿ ನಿಲ್ಲಿಸಿದ.

ವ್ಯಕ್ತಿಯ ಮುಖದ ತುಂಬ ಹೊದೆಗಡ್ಡ, ಮೀಸೆಗಳು ಬೆಳೆದುಕೊಂಡಿದ್ದುವು. ತಲೆಗೂದಲು ಜಡ್ಡುಗಟ್ಟಿ ಜೋತಾಡುತ್ತಿತ್ತು. ಬಲಗೈಗೆ ಏಟುಬಿದ್ದು ರಕ್ತ ಸುರಿಯುತ್ತಿತ್ತು.

ಯೋಗೇಶ ಅವನನ್ನು ದರದರನೆ ಎಳೆತಂದು ಸೋಫಾದ ಮೇಲೆ ನೂಕಿದ.

ವ್ಯಕ್ತಿ ಧೊಪ್ಪನೆ ಕುಳಿತು ಇಬ್ಬರತ್ತಲೂ ದೃಷ್ಟಿಯನ್ನು ಹೊರಳಾಡಿಸತೊಡಗಿದ. ಅವನ ಮುಖದಲ್ಲಿ ದ್ವೇಷದ ಕಿಚ್ಚು. ಇಬ್ಬರನ್ನೂ ದಹಿಸುವಂತೆ ಉರಿದಾಡುತ್ತಿತ್ತು.

"ನಮ್ಮಿಬ್ಬರ್ನೂ ಕೊಲೆ ಮಾಡಕ್ಕೆ ಜೈಲಿನಿಂದ ತಪ್ಪಿಸ್ಕೊಂಡು ಬಂದ್ಯಾ ಶ್ರೀನಿವಾಸ?" ಯೋಗೇಶ ಹುಬ್ಬೆತ್ತಿದ.

ಶ್ರೀನಿವಾಸ ಮಾತಾಡಲಿಲ್ಲ. ಭುಸುಗುಟ್ಟಿದ.

ಯೋಗೇಶ ಅವನತ್ತ ಚುರೂಟನ್ನು ತಿವಿಯುತ್ತ ಹೇಳಿದ,

"ನನ್ನನ್ನೂ ಗೋಪಿಯನ್ನೂ ಸುಲಭವಾಗಿ ಮರುಳುಮಾಡಬಹುದು ಅಂತ ತಿಳಿದೆಯ? ಒಂದೇ ಗರಡಿಯಲ್ಲಿ ಪಳಗಿದೋರು ನಾವು. ತಿಳೀತ? ಗೋಪಿ ನನಗೆ ಫೋನ್ ಮಾಡಿ ಕರೆದಾಗಲೇ ನನಗೆ ಏನೋ ವಿಶೇಷ ಇದೆ ಅನ್ನಿಸಿತ್ತು. ಗೋಪಿ ಒಂದು ದಿನಾನೂ ಅನಾರೋಗ್ಯದ ಕಾರಣದಿಂದ ಕೋರ್ಟಿಗೆ ತಪ್ಪಿಸಿದೋನಲ್ಲ. ಅವನು ಮೈಯಲ್ಲಿ ಹುಷಾರಿಲ್ಲ ಅಂದಾಗ ಅವನ ಮೊದಲ ಸಂಜ್ಞೆ ನನಗೆ ತಲುಪಿತು. ನಂತರ ಅವನು ಕೊನೆಯಲ್ಲಿ 'ಓ.ಕೆ.' ಅನ್ನೋವಾಗ ಅದು 'ಜೋಕೆ' ಎಂದು ಸೂಕ್ಷ್ಮವಾಗಿ ಧ್ವನಿಸುವಂತೆ ಮಾಡಿದ. ಅಲ್ಲಿಗೆ ನಾನು ಎಚ್ಚರಿಕೆ ತಗೊಂಡು ಪಿಸ್ತೂಲನ್ನು ತೆಗೆದುಕೊಂಡೆ. ಇಲ್ಲಿ ಗೋಪಿ, ಮಾತಾಡಕ್ಕೆ ನಿನ್ನ ವಿಷಯವನ್ನೇ ಆರಿಸಿದಾಗ ಬಹುಶಃ ನೀನು ಇಲ್ಲಿದ್ದಿರಬಹುದೆಂದು ತರ್ಕಿಸಿದೆ. ನಾನು ಒಳಕ್ಕೆ ಬರುವಾಗಲೇ ಸುತ್ತಲೂ ಗಮನಿಸಿದ್ದೆ. ಟಾಯ್ಲೆಟ್‌ನ ಬಾಗಿಲು ಸ್ವಲ್ಪ ಹಿಂದೆ ಹೋಗಿದ್ದುದು ಕಾಣಿಸಿತು. ಜತೆಗೆ ಗೋಪಿ ಆಗಾಗ ಟಾಯ್ಲೆಟ್‌ನ ಕಡೆ ದೃಷ್ಟಿ ಹಾಕುತ್ತ ಮುಖಭಾವನೆಗಳನ್ನು ಬದಲಿಸುವುದರ ಮೂಲಕ ಟಾಯ್ಲೆಟ್ಟಿನಲ್ಲಿ ಯಾರೋ ಇರುವುದನ್ನು ದೃಢಪಡಿಸಿದ್ದ.

"ನಂತರ ಫೋನ್‌ಕಾಲ್ ಬಂತಲ್ಲ? ಅದು ಬಂದಿದ್ದು ಇನ್ಸ್‌ಪೆಕ್ಟರ್ ರವೀಂದ್ರನಿಂದ. ನೀನು ಇಂದು ಬೆಳಿಗ್ಗೆ ಜೈಲಿನಿಂದ ತಪ್ಪಿಸ್ಕೊಂಡ ವಿಷಯವನ್ನು ನನಗೆ ತಿಳಿಸಲು ನನ್ನ ಮನೆಗೆ ಫೋನ್ ಮಾಡಿದ್ದ. ನಮ್ಮ ಆಳು ರಾಮಯ್ಯ ನಾನು ಇಲ್ಲಿಗೆ ಬಂದಿರುವ ವಿಚಾರ ಹೇಳಿದಾಗ ಇಲ್ಲಿಗೆ ಫೋನ್ ಮಾಡಿದ. ಅವನಿಂದಾಗಿ ನೀನು ಇಲ್ಲಿರುವ ವಿಚಾರ ಖಂಡಿತವಾಯ್ತು. ರವೀಂದ್ರ ಕೇಳಿದ್ದಕ್ಕೆಲ್ಲ 'ಹೌದು' ಎಂದು ಅಸಹಜ ರೀತಿಯಲ್ಲಿ ಉತ್ತರಿಸುತ್ತಾ ಹೋದೆ. ಅವ್ನೂ ನನ್ನ ಗರಡಿಯ ಶಿಷ್ಯನೇ, 'ಯಾಕೆ ಸಾರ್, ಒಂದು ರೀತಿ ಮಾತಾಡ್ತಿದ್ದೀರಿ? ಶ್ರೀನಿವಾಸ ಅಲ್ಲಿಗೆ ಬಂದಿರಬಹುದೇ ಹೇಗೆ?' ಎಂದು ಅವನು ಕೇಳಿದಾಗ್ಲೂ ನಾನು 'ಹೌದು' ಅಂದೆ. ಇನ್ನೇನು ಅವನೂ ಬಂದುಬಿಡ್ತಾನೆ. ತಿಳೀತ ಶ್ರೀನಿವಾಸ? ನೀನು

ಟಾಯ್ಲೆಟ್‌ನ ಬಾಗಿಲ ಹಿಂದಿನಿಂದ ನಮ್ಮನ್ನು ಗಮನಿಸುತ್ತಿದ್ದುದನ್ನು ಪ್ರತಿಕ್ಷಣ ಗೋಪಿ ತನ್ನ ಮುಖಚರ್ಯೆ ಬದಲಿಸುವುದರ ಮೂಲಕ ನನಗೆ ಸಂದೇಶ ತಲುಪಿಸ್ತಿದ್ದ. ನೀನು ಟಾಯ್ಲೆಟ್‌ನಿಂದ ಹೊರಬಂದು ಪಿಸ್ತೂಲು ಹಿಡಿದು ನಮ್ಮತ್ತ ಬರುತ್ತಿದ್ದುದೂ ಅವನ ಚರ್ಯೆಯಿಂದಲೇ ತಿಳಿಯಿತು. ನಿನಗೆ ಪಿಸ್ತೂಲು ಉಪಯೋಗಿಸೋದು ಸರಿಯಾಗಿ ಬರಲ್ಲ. ತೀರಾ ಹತ್ತಿರಕ್ಕೆ ಬಂದ ಹೊರತು ನಿನ್ನಿಂದ ಅಪಾಯವೂ ಇಲ್ಲ. ನೀನು ಎಷ್ಟು ಹತ್ತಿರ ಬಂದೆಯೆಂಬುದು ಗೋಪಿಯ ಮುಖಭಾವದಿಂದ ತಿಳಿಯುತ್ತಿತ್ತು. ಆರಾಮವಾಗಿ ನಿನ್ನ ನಿಷ್ಕ್ರಿಯಗೊಳಿಸಿದೆ. ಶ್ರೀನಿವಾಸ, ಇನ್ನೆಷ್ಟು ಜನ್ಮತಾಳಿ ಬಂದ್ರೂ ನಿನ್ನಂಥ ನಾಯಿಯಿಂದ ನಮಗೆ ಯಾವ ಅಪಾಯವೂ ಇಲ್ಲ ! ತಿಳೀತ ?"


ಎಂದು ಅಸಹ್ಯದಿಂದ ಮುಖಸಿಂಡರಿಸಿದ.

ಅದೇ ಕ್ಷಣಕ್ಕೆ ಬಾಗಿಲು ತೆಗೆದುಕೊಂಡಿತು. ರವೀಂದ್ರ ಒಳಬಂದ. ಅವನ ಜತೆ ಐದಾರು ಪೇದೆಗಳು ಒಳಬಂದರು.

ಸೋಫಾದ ಮೇಲೆ ಅರೆಹುಚ್ಚನಂತೆ ಕುಳಿತಿದ್ದ ಶ್ರೀನಿವಾಸನನ್ನು ಬಂಧಿಸುವಂತೆ ಪೇದೆಗಳಿಗೆ ತಿಳಿಸಿದ ರವೀಂದ್ರ, ಯೋಗೇಶನತ್ತ ಹೊರಳಿ ಹೇಳಿದ,

"ಥ್ಯಾಂಕ್ಯೂ ಸಾರ್. ನೀವಿರೋ ಸ್ಥಳದಲ್ಲಿ ಇವನಿದ್ದ ಅಂದ್ಮೇಲೆ ಇವನು ಸಿಕ್ಕಿಬಿದ್ದಿರೋದು ಗ್ಯಾರಂಟಿ ಅಂತ ಊಹಿಸಿದ್ದೆ. ಹಾಗೇ ಆಯ್ತು."

ಯೋಗೇಶ ಘೊಳ್ಳನೆ ನಗುತ್ತ ರವೀಂದ್ರನನ್ನು ಎಳೆದು ತನ್ನ ಎದೆಗೆ ಒತ್ತಿಕೊಂಡ. ●



ಪತ್ತೇದಾರ ದತ್ತಣ್ಣ

● ಎನ್ಕೆ

ತಪ್ಪಿತಸ್ಥರನ್ನು ಪತ್ತೆಹಚ್ಚುವಲ್ಲಿ ದತ್ತಣ್ಣ ಎತ್ತಿದ ಕೈ. ಈ ಬುದ್ಧಿ ಅವನಲ್ಲಿ ಬಾಲ್ಯದಿಂದಲೂ ಬೆಳೆದು ಬಂದಿದೆ. ಏಕೆಂದರೆ ಆತ ಬಾಲ್ಯದಿಂದಲೂ ಉಡಾಳ. ಆತನಿಗೆ ಪತ್ತೇದಾರ ದತ್ತಣ್ಣ ಅಂತ ಹೆಸರು ಅನ್ವರ್ಥಕವಾಗಿ ಬಂದದ್ದು. ಆತ ಚಿಕ್ಕಂದಿನಲ್ಲಿಯೇ ಇಸ್ಪೀಟು ಆಟದಲ್ಲಿ ಶ್ರೇಷ್ಠ ಖಿಲಾಡಿ ಎಂದು ಪ್ರಸಿದ್ಧಿ, ಪ್ರತೀತಿ. ಖಿಲಾಡಿ ಅಂದರೆ ಕಿಲಾಡಿ ಅಲ್ಲ, ಅಥವಾ ಅದೂ ಹೌದೆನ್ನಿ; ಆದರೆ ಖಿಲಾಡಿ ಅಂದರೆ ಆಟಗಾರ ಎಂದರ್ಥ. ಹಿಂದೀ ನ್ಯೂಜ್‌ನಲ್ಲಿ ನೀವು ಕೇಳಿರಬಹುದು. ದೂ.ದ.ದಲ್ಲಿ ನೋಡಿರಲೂಬಹುದು. ಪತ್ತೇ ಖಿಲಾಡಿ ಅಂದರೆ ಇಸ್ಪೀಟು ಆಟಗಾರ ಎಂದರ್ಥ. ಪತ್ತೇ ಅಂದರೆ ಇಸ್ಪೀಟು ಮರಾಠಿ, ಹಿಂದಿಗಳಲ್ಲಿ. 'ಪತ್ತಾ' ಇದು ಏಕವಚನ, 'ಪತ್ತೆ' ಬಹುವಚನ. ಇಸ್ಪೀಟು ಏಕವಚನೀಯ ಎಲ್ಲಿರುತ್ತದೆ ಹೇಳಿ? 52 ಅಲ್ಲವೆ ಜೋಕರ್ ಬಿಟ್ಟು? ಅಂತೇ ನಮ್ಮ ದತ್ತಣ್ಣ ಪತ್ತೇದಾರ, ಅಂದರೆ ಇಸ್ಪೀಟು ಆಡುವವ ಎಂದರ್ಥ.



ಒಲಿಂಪಿಕ್ಸ್‌ನಲ್ಲಿ ಇಸ್ಪೀಟು ಆಟವನ್ನೇನಾದರೂ ಸೇರಿಸಿದ್ದರೆ ಮೂರು ಎಲೆ ಆಟದಲ್ಲಿ ದತ್ತಣ್ಣ ಚಿನ್ನದ ಪದಕ ಗಿಟ್ಟಿಸುವುದು ಖಾತ್ರಿ ಇರುತ್ತಿತ್ತು. ದತ್ತಣ್ಣ ಬಾಲ್ಯದಲ್ಲಿ ಶಾಲೆ ತಪ್ಪಿಸಿ ಊರ ಹೊರಗಿನ ಕಿಲ್ಲೇದ ಹಾಳು ದಿಬ್ಬದಲ್ಲಿ ಇಸ್ಪೀಟು ಆಡುತ್ತಿದ್ದುದನ್ನು ಎಷ್ಟೋ ಸಲ ಪತ್ತೆ ಹಚ್ಚಿದ್ದೇನೆ. ಒಮ್ಮೊಮ್ಮೆ ಇಸ್ಪೀಟಿನಲ್ಲಿ ನೊಣದ ಆಟವನ್ನೂ ದತ್ತಣ್ಣ ಆಡುತ್ತಿದ್ದ. ಇದರಲ್ಲಿ ಒಂದೊಂದು ಆಟಕ್ಕೆ ಆಗಿನ ಕಾಲದ ದುಡ್ಡು (ನಯಾ ಪೈಸಾ ಅಲ್ಲ), ಆಣೆ, ಚವಲಿ, ಪಾವಲಿ ಹಚ್ಚಿ ಆಡುತ್ತಿದ್ದರು. ಯಾವ ಇಸ್ಪೀಟು ಎಲೆ ನೊಣ ಕೂಡುತ್ತದೊ ಅವರಿಗೇ ಆ ಎಲ್ಲಾ ನಾಣ್ಯಗಳು ದಕ್ಕುತ್ತಿದ್ದವು. ದತ್ತಣ್ಣ ಏನು ಗತ್ತು ಮಾಡುತ್ತಿದ್ದನೆಂದರೆ ತನ್ನ ಎಲೆಯ ತುದಿಗೆ ಯಾವ ಮಾಯೆಯಿಂದಲೊ ಬೆಲ್ಲದ ಜಿಗುಟು ಅಂಟಿಸಿರುತ್ತಿದ್ದ. ಹೀಗಾಗಿ ಪ್ರತಿ ಆಟ ಅವನಂತೆಯೆ ಗಿಟ್ಟುತ್ತಿತ್ತು. ಯಾರಾದರೂ ನೊಣದ ಆಟದಲ್ಲಿ ಜೂಜಾಟ ಅಥವಾ ಮ್ಯಾಚ್ ಇಟ್ಟರೆ ಮೊದಲು ದತ್ತಣ್ಣ ದುಡ್ಡು ಹಚ್ಚುವವರ ಎಲೆ ಜಿಡ್ಡಾಗಿವೆಯೊ ಹೇಗೆ ಪತ್ತೆ ಮಾಡುತ್ತಿದ್ದ. ಸ್ವಾನುಭವ ನೋಡಿ?

ದತ್ತಣ್ಣನಲ್ಲಿ ಪತ್ತೇದಾರೀ ಪ್ರತಿಭೆ ಆತನ ಬುದ್ಧಿವಂತಿಕೆಗಿಂತ ಸ್ವಾನುಭವದಿಂದಲೆ ಬೆಳೆದು ಬಂದುದಾಗಿತ್ತು. ಬೆಂಗಳೂರು ಚಾಮರಾಜಪೇಟೆಯಲ್ಲಿ ತನ್ನ ಗೆಳೆಯನ ಮನೆ 4ನೇ ಮೈನ್ 8ನೇ ಕ್ರಾಸೊ, 8ನೇ ಮೈನ್ 4ನೇ ಕ್ರಾಸೊ ಮರೆತು ಬಿಟ್ಟಿದ್ದ. ಅಲ್ಲಿ ಒಂದು ಲಾಂಡ್ರಿಯಲ್ಲಿ 'ನಾದಲೀಲೆ ಎಂಟರ್‌ಪ್ರೈಸ್‌ನಲ್ಲಿ ಸಂಗೀತ ಕ್ಯಾಸೆಟ್ ತಯಾರಕ ಸುಬ್ರಮಣಿ' ಬಗ್ಗೆ ವಿಚಾರಿಸಿದ. ಅವರು 'ನೋಡಿ ಸಾರ್ ಇಲ್ಲಿ ಸುಬ್ರಮ್ಮಣ್ಯ, ಸುಬ್ರಮ್ಮಣ್ಯಂ, ಸುಬ್ರಮ್ಮಣ್ಯ ಸ್ವಾಮಿ, ಸುಬ್ರಮಣಿ ಅಂತ ನಾಲ್ವರು ನಮ್ಮಲ್ಲಿ ಬೆಟ್ಟದಷ್ಟು ಬಟ್ಟೆ ಹಾಕ್ತಾರೆ. ನಿಮಗೆ ಯಾರು ಬೇಕು?' ಎಂದು ಪ್ರಶ್ನಿಸುತ್ತಿರುವಾಗಲೆ ಅದೇ ಇಸ್ತ್ರಿ ಮಾಡಿ ಕಾಜಿನ ಕಪಾಟಿನಲ್ಲಿ ಹ್ಯಾಂಗರ್‌ಗೆ ತೂಗುಹಾಕಿದ್ದ ರಕ್ತವರ್ಣದ ಬ್ಯಾಗಿ (baggy) ಟೈಪ್‌ನ ಪ್ಯಾಂಟ್ ಮೇಲಿಂದಲೆ ಮಿತ್ರ ಸುಬ್ರಮಣಿಯನ್ನು ಪತ್ತೆ ಮಾಡಿ 'ಸ್ವಾಮಿ ಈ ಪ್ಯಾಂಟಿನ ಮಾಲೀಕರು ಎಲ್ಲಿ?' ಎಂದು ಪ್ರಶ್ನಿಸಿದಾಗ 'ಹಾ! ಐದು ನಿಮಿಷ ತಡೀರಿ. ಅರ್ಜೆಂಟ್ ಐರನ್ ಮಾಡಲಿಕ್ಕೆ ಕೊಟ್ಟು ಹೋಗಿದ್ದಾರೆ. ಈಗ ಬರ್‍ತಾರೆ' ಎಂದು ಹೇಳಿದ. ಬೆಟ್ಟದಷ್ಟು ಬಟ್ಟೆಯುಳ್ಳ ಸುಬ್ರಮಣಿ ರೆಕಾರ್ಡಿಂಗ್ ಕಾಲಕ್ಕೆ–ಅದೂ ಹೆಣ್ಣು ಕೋಗಿಲೆಗಳಿದ್ದಾಗ–ಮಾತ್ರ ರೆಡ್‌ಪ್ಯಾಂಟ್ ಧರಿಸುತ್ತಿದ್ದ. ದತ್ತಣ್ಣ ಗೆಳೆಯನನ್ನು ಕರೆಕ್ಟ್ ಆಗಿ ಕಂಡುಹಿಡಿದದ್ದಕ್ಕೆ ತನ್ನ ಡುಬ್ಬ ತಾನೇ ಚಪ್ಪರಿಸಿಕೊಂಡ.

> **ದತ್ತಣ್ಣ ತಾನೇನಾಗಬೇಕೆಂದು ಯೋಚಿಸುವ ಮೊದಲೇ ಪತ್ತೇದಾರನಾಗಿಬಿಟ್ಟಿದ್ದ. ಅವನ ಉತ್ಸಾಹದ ವ್ಯಕ್ತಿತ್ವವೇ ಅವನನ್ನೊಬ್ಬ ಹುಡುಕಾಡುವ ಮನುಷ್ಯನನ್ನಾಗಿ ಮಾಡಿಬಿಟ್ಟಿತು.**

ದತ್ತಣ್ಣ ಪ್ರವಾಸ ಮಾಡುವಾಗಲೆಲ್ಲ ಟಿ.ಸಿ.ಗೆ ಬಹಳ ನೆರವಾಗುತ್ತಿದ್ದ. ಎಂದರೆ ಟಿಕೆಟ್‌ಲೆಸ್ ಟ್ರಾವಲರ್‌ರನ್ನೂ ಸಹಜವಾಗಿ ಪತ್ತೆಮಾಡಿ ಟಿ.ಸಿ.ಗೆ ಸಂಜ್ಞೆ ನೀಡಿ ಸಹಾಯ ಮಾಡುತ್ತಿದ್ದ. ಕಳ್ಳನ ಜೀವ ಹುಳ್ಳುಳ್ಳಗೆ ಎಂಬಂತೆ ತನ್ನ ಎಡ ಬಲದ ಪ್ರಯಾಣಿಕರು ಟಿ.ಸಿ. ಬರುವುದನ್ನು ಕಂಡ ಕೂಡಲೆ ಟಾಯಲೆಟ್ ಪ್ರವೇಶಿಸಿ ಬಾಗಿಲು ಹಾಕಿಕೊಂಡಾಗ ಟಿ.ಸಿ.ಗೆ ತಾನೇ ಸೂಚನೆ ನೀಡುತ್ತಿದ್ದ. ಹೀಗಾಗಿ ಎಲ್ಲ ಟಿ.ಸಿ.ಗಳಿಗೂ ದತ್ತಣ್ಣ ಕೇವಲ ಸ್ನೇಹಿತನಾಗಿಬಿಟ್ಟಿದ್ದ. ಆದರೆ ಸ್ವತಃ ದತ್ತಣ್ಣನೇ ಟಿಕೆಟ್‌ಲೆಸ್ ಆಗಿದ್ದುದು ಟಿ.ಸಿ.ಗೆ ಪತ್ತೇನೇ ಆಗಿರಲಿಲ್ಲ. 'ಇದರಾಗ ಖೂಬಿ ಇರೋದು' ಎಂದು ದತ್ತಣ್ಣ ತನ್ನ ಡುಬ್ಬ ತಾನೇ ಚಪ್ಪರಿಸಿಕೊಳ್ಳುತ್ತಿದ್ದ. ಆತನ ಪತ್ತೇದಾರಿ ಪರಿಣತಿ ಸಾಧಿಸಿದ್ದು ಸ್ವಾನುಭವಸಂಪದದಿಂದಲೆ.

ನಿರುದ್ಯೋಗಿ ದತ್ತಣ್ಣನಿಗೆ ಕಾಲೂರಿದ್ದುದೇ ಆತನ ಊರು. ಕೈಕುಲಕಿದವರೆ ಆತನ ಗೆಳೆಯರು. ಉಪ್ಪಿಟ್ಟು, ಚಹಾ ಕೊಟ್ಟವರೆ ಆಪ್ತೇಷ್ಟರು. ಪ್ರತಿಯಾಗಿ ದತ್ತಣ್ಣ ಪ್ರತ್ಯುಪಕಾರ ಸಲ್ಲಿಸದೆ ಇರುತ್ತಿರಲಿಲ್ಲ. ಹೀಗಿರುವಾಗ ದತ್ತಣ್ಣನಿಗೆ ಮುಂಬಯಿಗೆ ಟ್ರಾನ್ಸ್‌ಫರ್ ಆಯಿತು. ನಿರುದ್ಯೋಗಿಗೆ ಎಲ್ಲಿಯ ಟ್ರಾನ್ಸ್‌ಫರ್ ಅನ್ನಬೇಡಿ. ಬ್ರಹ್ಮಚಾರಿ ದತ್ತಣ್ಣನಿಗೆ ಕರೆಯೋಲೆ ಬಂದರೆ

ಅದೇ ಟ್ರಾನ್ಸ್‌ಫರ್ ಆರ್ಡರ್. ಹೀಗೆ ಮುಂಬಯಿ ಮಾಮಾನಿಂದ ಆಸ್ಪತ್ರೀಕೃತರಾಗಿದ್ದ ಅವರ ಸಾಡೂ (ಷಡ್ಕ–ಕೋಬ್ರದರ್)ನನ್ನು ನೋಡಿಕೊಳ್ಳುವುದಕ್ಕಾಗಿ ಕರೆಬಂದಿತ್ತು. ಕರ್ಮಧರ್ಮಸಂಯೋಗದಿಂದ ದತ್ತಣ್ಣನ ಮಾಮಾನ ಕೋಬ್ರದರ್ ಮಲಗಿದ್ದ ಆಸ್ಪತ್ರೆಯ ಕೋಪೇಶಂಟ್ ಒಬ್ಬರು ರೇಲ್ವೆ ಇನ್ಸ್‌ಪೆಕ್ಟರೇ ಆಗಿದ್ದರು. ಅವರೇನೋ ಜನರಲ್ ಚೆಕಪ್‌ಗಾಗಿ ಬಂದವರು ಮೂರೇದಿನ ಇದ್ದು ನಾಲ್ಕನೆಯ ದಿನ ಡಿಸ್‌ಚಾರ್ಜ್ ಆದರು. ಅಷ್ಟರಲ್ಲೇ ದತ್ತಣ್ಣ ಅವರಿಗೆ ಗಳಸ್ಯ ಕಂಠಸ್ಯ ಆಗಿಬಿಟ್ಟಿದ್ದ. ಅವರ ನಿತ್ಯದ ಡ್ಯೂಟಿ ಎಂದರೆ ಕೆಲವಷ್ಟು ಟಿಕೆಟ್‌ಲೆಸ್, ಪಾಸ್‌ಲೆಸ್ (ಎಂದರೆ ಸೀಜನ್ ಟಿಕೆಟ್‌ಲೆಸ್) ಪ್ರಯಾಣಿಕರನ್ನು ಹಿಡಿಯುವುದಾಗಿತ್ತು. 'ನೀವು ಕಾಳಜಿ ಬಿಡ್ರಿ ನಾ ನಿಮಗ ದಿನಾ ಅಪರಾಧಿಗಳನ್ನ ಹಿಡಿದುಕೊಡ್ತೀನಿ' ಎಂದು ದತ್ತಣ್ಣ ತನ್ನ ಪೌರುಷ ಹೇಳಿಕೊಂಡ. ಇದರಿಂದಾಗಿ ಆ ರೈಲ್ವೆ ಇನ್ಸ್‌ಪೆಕ್ಟರ್ ದತ್ತಣ್ಣನಿಗೊಂದು ಸೀಜನ್‌ಪಾಸ್ ಕೊಡಿಸಿ, ತಮ್ಮ ವಿಳಾಸವನ್ನೂ ಕೊಟ್ಟಿದ್ದರು. ಸೀಜನ್ ಟಿಕೆಟ್ ಡಿಫಾಲ್ಟರ್ಸ್ ಸಂಖ್ಯೆ ಹೆಚ್ಚುತ್ತಿತ್ತು. ಅದನ್ನು ಆ ಇನ್ಸ್‌ಪೆಕ್ಟರ್ ಕಡಿಮೆ ಮಾಡಬೇಕಾಗಿತ್ತು.

ದತ್ತಣ್ಣ ಅನೇಕಣ್ಣುಗಳಿಂದ ನಿರೀಕ್ಷಣೆ ಮಾಡುತ್ತಲೇ ಗೋಪ್ಯದಿಂದ ಲೋಕಲ್ ಟ್ರೇನ್ ಪ್ರವಾಸ ಮಾಡುತ್ತಿದ್ದ. ತಾನು ಕನ್ನಡಿಗ ಅಂತ ಆ ಸಮುದ್ರದಲ್ಲಿ ಯಾರಿಗೆ ಪತ್ತೆ ಆಗಬೇಕು? ಒಂದು ದಿನ ಒಂದು ರೈಲಿನ, ಒಂದು ಡಬ್ಬೆಯ, ಒಂದು ಮೂಲೆಯಲ್ಲಿ ಇಬ್ಬರು ಕನ್ನಡ ಜಾನಿ ದೋಸ್ತರ ಸಂವಾದ ನಡೆದಿತ್ತು.

'ನಾ ನೋಡಪ ಮುಂಬಯಿಗೆ ಬಂದು ಮೂರು ವರ್ಷ ಆತು. ನನಗ ನನ್ನ ಮಿಸೆಸ್‌ಗೆ ಕೂಡಿ ಒಂದೇ ಸೀಜನ್ ಟಿಕೆಟ್. ವಿ.ಟಿ.–ದಾದರ್, ದಾದರ್–ವಿ.ಟಿ.! ನಾನು ಕೆ. ಕೆ. ಕುಲಕರ್ಣಿ. ನನ್ನ ಮಿಸೆಸ್ ಹೆಸರು ಕಾವೇರಿ, ಆಕೀನೂ ಕೆ. ಕೆ. ಕುಲಕರ್ಣಿ. ಹೆಸರಿನ ಹಿಂದ ಮಿಸ್ಟರ್, ಮಿಸೆಸ್ ಇಲ್ಲದ್ದಾಂಗ ಮಾಡೀನಿ. ಮುಂಬಯಿ ಪ್ರವಾಸಿಗರ ಸಮುದ್ರದಾಗ ಇದೆಲ್ಲಾ ಯಾರು ನೋಡತಾರ! ನನ್ನದು ನೈಟ್ ಡ್ಯೂಟಿ, ನನ್ನಾಕೇದು ಡೇ ಡ್ಯೂಟಿ. ಆಕೆನೂ ಎಂಪ್ಲಾಯ್ಡ್; ಉದ್ಯೋಗಸ್ಥ ಮಹಿಳೆ. ಹೀಂಗಾಗಿ ಭಲೋ



ಆಮಂತ್ರಣ ಇಲ್ಲ. ಆಡ್ರೆಸ್ಸೂ ಇಲ್ಲ. ಆದ್ರೂ ಇಲ್ಲೇ ಎಲ್ಲೋ ಇರಬಹುದು ಅಂತ ಅನುಮಾನದ ಮೇರೆಗೆ ಇಲ್ಲಿ ಬಂದೆ.

ಉಳಿತಾಯ ಆಗತದ' ಎಂದು ಗೆಲವಿನ ಅಟ್ಟಹಾಸದಿಂದ ನಕ್ಕ. ಆಗ ಆತನ ದೋಸ್ತ–

'ನನ್ನ ಹಕೀಕತ್ತು ಕೇಳಿಲ್ಲೆ. ನನ್ನ ಕಡೆ ಕುರ್ಲಾ–ವಿ.ಟಿ. ಡೇಟ್ ಇಲ್ಲದ ಒಂದು ಟಿಕೆಟ್ ಸಿಕ್ಕದ. ನಾನು ಹೋಗುವಾಗ ಬರೂವಾಗ ಹಿಂದಿನ ಸ್ಟೇಶನ್‌ಗೇ ಇಳೀಬೇಕಾಗತದ. ಇದ್ದ ಡೇಟ್‌ಲೆಸ್ ಟಿಕೆಟ್ ಮ್ಯಾಲೆ ಪ್ರವಾಸ ಮಾಡಲಿಕ್ಕ ಹತ್ತಿ ಎರಡೂವರೆ ವರ್ಷ ಅತು. ಒಬ್ಬ ಸೂ–ಮಗನೂ ಇನ್ನೂ ತನಕಾ ನನ್ನ ರೆಡ್‌ಹ್ಯಾಂಡೆಡ್ ಹಿಡದಿಲ್ಲ. ಎಂಥಾ ಹೋಪಲೆಸ್, ಇನ್‌ಎಫಿಸಿಯಂಟ್ ಇದ್ದಾರ ನೋಡು ಮುಂಬಯಿ ರೇಲ್ವೆದವರು...' ಮತ್ತೆ ಗಡುಸುನಗೆ. ಡೇಟ್‌ಲೆಸ್ ಟಿಕೆಟ್‌ಧಾರಿ ಕುರ್ಲಾ–ವಿ.ಟಿ.ಗೇಕೊಲೈನ್‌ಕ್ಲಿಯರ್ ಮಾಡಿಕೊಂಡಿದ್ದ. ಟಿ.ಟಿ.ಯಿಂದ ಬರುವಾಗ?... ಹಾ! ಇಲ್ಲಿ ಸಿಕ್ಕು ಬೀಳಲೇಬೇಕು ಟಿಕೆಟ್‌ಲೆಸ್ ಪ್ರವಾಸ ಮಾಡಿ.

ಮರುದಿನ ಈ ಇಬ್ಬರನ್ನೂ ಹೊಸ ಪರಿಚಯದ ರೇಲ್ವೆ ಇನ್ಸ್‌ಪೆಕ್ಟರರಿಗೆ ಹಿಡಿದು ಕೊಡುವುದು ದತ್ತಣ್ಣನಿಗೆ ಕಠಿಣ ಕೆಲಸವಾಗಲಿಲ್ಲ. ಹೀಗೆ ದತ್ತಣ್ಣ ಮುಂಬಯಿ ರೇಲ್ವೆ ಇಲಾಖೆಗೆ ತನ್ನ ಕೈಲಾದಷ್ಟು ಸಹಾಯ ಮಾಡುತ್ತ ಸಾರ್ವಜನಿಕ ಸೇವಾ ಕಾರ್ಯತತ್ಪರನಾಗಿ ಹೆಸರು



ನಮ್ಮ ಕರ್ನಾಟಕಕ್ಕೆ ಏನು ಕಡಿಮೆ ಆಗಿದೆ ಹೇಳಿ... ಕಾರಂತರಿದ್ದಾರೆ... ಕುವೆಂಪುರವರಿದ್ದಾರೆ...!!

ಮಾಡಿದ.

ದತ್ತಣ್ಣನ ಬಗ್ಗೆ ಒಂದು ಸತ್ಯಕಥೆಯನ್ನು ಹೇಳದಿದ್ದರೆ ಈ ಪತ್ತೇದಾರಿ ಹರಟೆಗೆ ಹದವಾದ ಮುಕ್ತಾಯ ಬರಲಾರದು. ಖ್ಯಾತ ನಾಟಕಕಾರ ಶ್ರೀರಂಗರ ಅಪ್ರಕಟಿತ ನಾಟಕವೊಂದರ ಹಸ್ತಪ್ರತಿ ಕಳೆದುಹೋಗಿತ್ತು. ಯಾರಿಗಾದರೂ ಓದಲು ಕೊಟ್ಟು ಅದು ಹಿಂದಿರುಗಿ ಬರಲಿಲ್ಲವೊ, ಯಾವುದೆ ಕೃತಿಚೋರರ ಕೈಗೆ ಬಿತ್ತೊ ಅವರಿಗೆ ನೆನಪಿರಲಿಲ್ಲ. ತಮ್ಮ ಮಿತ್ರರಿಗೆ, ಶಿಷ್ಯರಿಗೆ ಎಲ್ಲರಿಗೂ ಈ ಬಗ್ಗೆ ಹೇಳಿ ಅದರ ಶೋಧನೆಗಾಗಿ ಮನವಿ ಮಾಡಿಕೊಳ್ಳುತ್ತಿದ್ದರು. ಈ ಮಾತು ಹೇಗೊ ದತ್ತಣ್ಣನ ಕಿವಿವರೆಗೂ ಬಂದಿತ್ತು. ದತ್ತಣ್ಣ ಅದರ ಬಗ್ಗೆ ಶೋಧ ನಡೆಸಬೇಕೆಂದು ಸಿದ್ಧಸಂಕಲ್ಪನಾದ.

ದತ್ತಣ್ಣನಿಗೆ ಯಾವಾಗಲೂ ಆತನ ಪೂರ್ವಾನುಭವ, ಸ್ವಾನುಭವಗಳೆ ಮಾರ್ಗದರ್ಶಿಗಳಾಗಿದ್ದನೆಂದು ಹೇಳಿ ಆಯಿತಲ್ಲವೆ? ಹಿಂದಕ್ಕೆ ವಿದ್ಯಾರ್ಥಿಯಾಗಿದ್ದಾಗ ದತ್ತಣ್ಣನಿಗೆ ರದ್ದಿಕಾಗದ ಕಿರಾಣಿ ಅಂಗಡಿಗೆ ಹಾಕಿ ಕರದಂಟು ತಿನ್ನುವ ಚಟ. ಒಮ್ಮೆ ಕರದಂಟಿನ ಚಟವಾಗಿತ್ತು. ಹತ್ತಿರ ರದ್ದಿ ಕಾಗದಗಳಿರಲಿಲ್ಲ. ರೊಕ್ಕವಂತೂ ಮೊದಲೇ ಇದ್ದಿಲ್ಲ. (ಬಾಡಿಗೆ) ಮನೆಯ ಮಾಲೀಕರು (ಅವರು ಮೇನ್ ಹೌಸ್‌ನಲ್ಲಿರುತ್ತಿದ್ದರು) ಹೊರಗಿನ ಸ್ಟೋರ್ ರೂಂನಲ್ಲಿ ಹಳೆಯ ಖಾತೆಕಿರ್ಡಿ ಪುಸ್ತಕಗಳನ್ನಿಟ್ಟಿದ್ದರು. ದತ್ತಣ್ಣ ಯಾರೂ ಇಲ್ಲದ ವೇಳೆ ಸಾಧಿಸಿ ಖಾತೆಕಿರ್ಡಿ ಕಾಗದಗಳನ್ನು ಕದ್ದುಹೊತ್ತೊಯ್ದು, ಕಿರಾಣಿ ಅಂಗಡಿಗೆ ಹಾಕಿ ಕರದಂಟು ತಿಂದು ತೇಗಿದ್ದನು. ಮಾಲೀಕರು ತಮ್ಮ ಮನೆಯ ಸಾಮಾನುಗಳಲ್ಲಿ ಇಂಗು ಜೀರಿಗೆ ಕಟ್ಟಿದ ಚೀಟಿ ಬಿಚ್ಚಿ ಅದನ್ನು ಮನೆಯಾಕೆ ಬಾಗಿಲ ಮೂಲೆಯಲ್ಲಿ ಒಗೆದಾಗ ಅದು ಮಾಲೀಕರ ಕಣ್ಣಿಗೆ ಬಿತ್ತು! ನೋಡುತ್ತಾರೆ ಅವರ ಮನೆಯ ಹಳೆಯ ಖಾತೆಕಿರ್ಡಿ ಕಾಗದ! ಕಿರಾಣಿ ಅಂಗಡಿಗೆ ಆ ಕಾಗದ ಕೊಂಡೊಯ್ದು ವಿಚಾರಿಸಿದಾಗ ದತ್ತಣ್ಣನ ಕಳವು ಹೊರಬಿತ್ತು. ಕರದಂಟು ತಿಂದು ತೇಗಿದ ದತ್ತಣ್ಣನಿಗೆ ಈಗ ಕರೆಂಟು ಕೊಟ್ಟಂತೆ ಶಾಕ್ ಆಗಿತ್ತು!

ಈ ಪೂರ್ವಾನುಭವದ ಬಂಡವಾಳದ ಮೇಲೆ ದತ್ತಣ್ಣ ಊರೊಳಗಿನ ಕಿರಾಣಿ ಅಂಗಡಿಗಳು, ಮೋಡಕಾ ಅಂಗಡಿ, ಸೆಕಂಡ್ ಹ್ಯಾಂಡ್ ಪುಸ್ತಕ ವ್ಯಾಪಾರಿಗಳು ಹೀಗೆಲ್ಲಾ ಶೋಧ ನಡೆಸಿದ್ದ. ಕೆಲವರ್ಷಗಳ ಹಿಂದೆ ಶ್ರೀರಂಗ ಕಾದಂಬರಿಯೊಂದು ಪ್ರಿಂಟ್ ಆಗುತ್ತಿದ್ದಾಗ ಆ ಪ್ರೆಸ್‌ನ ಮಾಲಕ ದತ್ತಣ್ಣನ ಮಿತ್ರನಿದ್ದುದರಿಂದ—ಅಲ್ಲಿ ಪ್ರೆಸ್‌ಗೆ ಹೋದಾಗಲೆಲ್ಲಾ ಶ್ರೀರಂಗರ ಹಸ್ತಾಕ್ಷರ ನೋಡಿದ್ದ. 'ಚಳುವಳಿ' ಎಂಬ ಶಬ್ದವನ್ನು ಶ್ರೀರಂಗರು 'ಚಳವಳ' ಎಂದು ಬರೆಯುತ್ತಿದ್ದುದು ದತ್ತಣ್ಣನ ಕಣ್ಣಿಗೆ ಬಿದ್ದಿತ್ತು. ಆ ಕಾದಂಬರಿಯಲ್ಲಿ 1942ರ ಚಳುವಳಿ ವರ್ಣನೆ ಬಂದಿತ್ತು. ದತ್ತಣ್ಣನಿಗೆ 1942ರ ಚಳುವಳಿಯ ನಿಕಟ ಪರಿಚಯ. ತಂತಿ ಕತ್ತರಿಸುವ, ಸ್ಟೇಶನ್ ಸುಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೂ ಜೇಲಿನ ಅಳಿಯತನ ಮಾತ್ರ ಅನುಭವಿಸಿರಲಿಲ್ಲ. ಹೀಗಾಗಿ ಶ್ರೀರಂಗರ ಕಾದಂಬರಿಯ ಈ ಚಳುವಳಿ ('ಚಳವಳ') ವರ್ಣನೆ ಆಸಕ್ತಿಯಿಂದ ಓದಿದ್ದ.

ಒಮ್ಮೆ ಒಂದು ಮೋಡಕಾ ಅಂಗಡಿಯಲ್ಲಿ ಹಾಕಿದ್ದ ಹಳೆಯ ಪುಸ್ತಕ, ಪತ್ರಿಕೆಗಳ ರಾಶಿಯನ್ನು ತೆಗೆಯುತ್ತ ಒಂದೊಂದೇ ಪುಸ್ತಕದ ಮೇಲೆ ಕಣ್ಣಾಡಿಸುತ್ತಿದ್ದಾಗ ಕಣ್ಣಿಗೆ ಒಂದು ಕರಿಯ ರಟ್ಟಿನ ಕವರ್ ಇದ್ದ ನೋಟ್‌ಬುಕ್ಕು ಸಿಕ್ಕಿತ್ತು. ಮುಖಪುಟ ಹರಿದದ್ದರಿಂದ ಯಾರ ಹೆಸರೂ ಇವನಿಗೆ ನೋಟ್‌ಬುಕ್ಕಿನಲ್ಲಿ ನೋಡಸಿಗಲಿಲ್ಲ. ಕ್ಷಣಹೊತ್ತು ಹಸ್ತಾಕ್ಷರಗಳು 'ಬರೆದರೆ ಮುತ್ತಿನ ಹಾರದಂತೆ' ಅನ್ನುವಹಾಗೆ ಇದ್ದವು. ದತ್ತಣ್ಣನಿಗೆ ಸಂಶಯ ಬಂತು. ಹಾಗೆಯೆ ಹಾಳೆಗಳನ್ನು ತೆರೆದ

'3ನೆಯ ಅಂಕ' ಎಂದಿತ್ತು. ೧ನೆಯ, ೨ನೆಯ ದೃಶ್ಯಗಳು ಎಂದು ಮಾತ್ರ ಇರಲಿಲ್ಲ. ಶ್ರೀರಂಗರ ನಾಟಕ ಶೈಲಿಯೆಂದರೆ ಒಂದಂಕವು ಒಂದೇ ದೃಶ್ಯವಾಗಿರುತ್ತಿತ್ತು. ಕೊನೆಗೆ ಒಂದು ಪುಟದಲ್ಲಿ ಒಂದು ಪಾತ್ರದ ಬಾಯಲ್ಲಿ 'ಇದಕ್ಕಾಗಿ ಚಳವಳ ಮಾಡದೆ ಗತಿ ಇಲ್ಲ' ಎಂದಿತ್ತು. 'ಚಳವಳ' ಶಬ್ದ ನೋಡಿದ ಕೂಡಲೆ ಇದು ಶ್ರೀರಂಗರದೇ ಶಬ್ದ. ಅವರದೇ ಹಸ್ತಪ್ರತಿ ಇದ್ದಿರಬೇಕೆಂದು ದತ್ತಣ್ಣ ನಿರ್ಣಯಿಸಿದ. 'ಇದು ನೋಡಪಾ ರದ್ದಿ ನೋಟ್ ಬುಕ್ಕು, ಏನು ಕೊಡಬೇಕು?' ಎಂದು ಕೇಳಿದರೆ ಆತ 'ಒಂದು ರೂಪಾಯಿ' ಎಂದ. ಹೇಳಿದಷ್ಟೇ ಕೊಟ್ಟು, ಕೊಂಡುಕೊಂಡರೆ ಆ ವ್ಯಾಪಾರಿಗೆ ಸಂಶಯ ಬಂದೀತೆಂದು 'ನಾಲ್ಕಾಣೆ ಕೊಡತೀನಿ ನೋಡು' ಎಂದ. ಕೊನೆಗೆ ಆರಾಣೆಗೆ ವ್ಯಾಪಾರ ಬಗೆಹರಿಸಿದ.

ಅದನ್ನು ತಂದು ಶ್ರೀರಂಗರ ಕೈಗೆ ಒಪ್ಪಿಸಿದಾಗ ಶ್ರೀರಂಗರು—'ಹನುಮಂತ ಸೀತಾ ಶೋಧ ಮಾಡಿದಾಗೇನು ರಾಮಗ ಇಷ್ಟು ಆನಂದ ಆಗಿರಲಿಕ್ಕಿಲ್ಲ ಬಿಡು' ಎಂದು ದತ್ತಣ್ಣನಿಗೆ ಧನ್ಯವಾದ ಹೇಳಿದರು. ಅಂದಿನಿಂದ ದತ್ತಣ್ಣ ಶ್ರೀರಂಗರ ಆಪ್ತ ಮಿತ್ರನಾದ. ಕಳೆದುಹೋದ ನಾಟಕದ ಹೆಸರು ಹೇಳಬೇಕಲ್ಲವೆ? ಅದರ ಹೆಸರು—"ಪ್ರೇಮ ಸರಣಿ"

●

ತುಷಾರ ಓದುಗರಿಗೆ—ಲೇಖಕರಿಗೆ

* ತುಷಾರಕ್ಕೆ ಬರೆಹಗಳು ಚಿಕ್ಕದಾಗಿದ್ದಷ್ಟೂ ಒಳ್ಳೆಯದು. ಕಥೆಗಳು ಆರು ಪುಟ, ಹಾಸ್ಯ ಲೇಖನ ಮೂರು ಪುಟ ಹಸ್ತಪ್ರತಿ ಖಂಡಿತ ಮೀರುವುದು ಬೇಡ. ಕಾದಂಬರಿ ಮೂವತ್ತು ಪುಟ ಹಸ್ತಪ್ರತಿ ಸಾಕು.
* ಕವನಗಳು ಚಿಕ್ಕದಾಗಿದ್ದರೆ ಪ್ರಕಟಿಸುವುದು ಸಾಧ್ಯವಾಗುತ್ತದೆ. ದೊಡ್ಡ ಕವನಗಳು ಕಳುಹಿಸಬೇಡಿ. ಒಮ್ಮೊಮ್ಮೆ ಒಂದು ಕವನ ಕಳುಹಿಸಿದರೆ ಸಾಕು. ಕಟ್ಟು ಕಟ್ಟು ಕವನಗಳನ್ನು ರವಾನಿಸುವುದು ಬೇಡ.
* ವ್ಯಂಗ್ಯಚಿತ್ರಕಾರರು ತಮ್ಮ ಉತ್ತಮ ಎನಿಸುವ ನಾಲ್ಕು ಐದು ಚಿತ್ರಗಳನ್ನು ಕಳುಹಿಸಿದರೆ ಸಾಕು. ಒಂದು ಪುಟ ಮಾಲಿಕೆ 'ತಿಂಗಳ ವ್ಯಂಗ್ಯಚಿತ್ರ' ಬಹುಮಾನಕ್ಕೆ ಆಯ್ಕೆಯಾಗಬಹುದು.
* 'ಹಿರಿಯರ ಆಯ್ಕೆ ಕವನಗಳು' ಪರಿಶೀಲನೆಗೆ ಕಳುಹಿಸುವ ಕವನಗಳು ಚಿಕ್ಕದಾಗಿರಬೇಕು. ಅಸ್ವೀಕೃತ ಕವನಗಳನ್ನು ಹಿಂತಿರುಗಿಸುವುದು ಸಾಧ್ಯವಾಗುತ್ತಿಲ್ಲ.
* ಪ್ರಕಟಣೆಗೆ ಬರೆಹಗಳನ್ನು ಮಣಿಪಾಲದ ವಿಳಾಸಕ್ಕೆ ಅಥವಾ ಬೆಂಗಳೂರು ಕಛೇರಿ ವಿಳಾಸಕ್ಕೂ ಕಳುಹಿಸಬಹುದು.
* 'ಪುಸ್ತಕಗಳು' ವಿಭಾಗಕ್ಕೆ ಪ್ರಕಾಶಕರು ತಮ್ಮ ಪ್ರಕಾಶನದ ಈಚಿನ ಮುಖ್ಯ ಎನಿಸುವ ಒಂದು-ಎರಡು ಪುಸ್ತಕಗಳ ಒಂದು ಪ್ರತಿ ಮಾತ್ರ ಕಳುಹಿಸಿದರೆ ಸಾಕು (ಪುಸ್ತಕಗಳನ್ನು ಬೆಂಗಳೂರು ಕಛೇರಿ ವಿಳಾಸಕ್ಕೆ ತಲುಪಿಸಬೇಕು).
* ದಯವಿಟ್ಟು—'ನಿಮ್ಮ ಅನಿಸಿಕೆಗಳು' ವಿಭಾಗಕ್ಕೆ ನಿಮ್ಮ ಅಭಿಪ್ರಾಯಗಳನ್ನು ಪೋಸ್ಟ್ ಕಾರ್ಡ್‌ನಲ್ಲೆ ಬರೆದರೆ ಸಾಕು. ಈ ಪೋಸ್ಟ್ ಕಾರ್ಡುಗಳನ್ನು ಮಣಿಪಾಲದ ವಿಳಾಸಕ್ಕೆ ಕಳುಹಿಸಿಕೊಡಿ.

ಸಂಪಾದಕ, ತುಷಾರ ಪ್ರೆಸ್‌ಕಾರ್ನರ್, ಮಣಿಪಾಲ—576 119 (ದ.ಕ.)	ತುಷಾರ ಎನ್ 201, ನಾರ್ಥ್‌ಬ್ಲಾಕ್, ಫ್ರಂಟ್‌ವಿಂಗ್ ಮಣಿಪಾಲ ಸೆಂಟರ್, 47, ಡಿಕನ್‌ಸನ್‌ರೋಡ್, ಬೆಂಗಳೂರು—560 042

ಹಿರಿಯರ ಆಯ್ಕೆ

ಆಯ್ಕೆ: ಡಾ। ಕೆ. ಎಸ್. ನರಸಿಂಹಸ್ವಾಮಿ

"ಮತ್ತೆ ಬರುವ ವಸಂತ"

ಮತ್ತೆ ಬರುವ ವಸಂತ ಬಂದು
ಹೋದಾಗೆಲ್ಲ ಎಷ್ಟು ವೈಚಿತ್ರ್ಯವೀ ಬದುಕಿನಲ್ಲಿ
ಇಂಪು ದನಿ ಕೋಗಿಲೆಗೆ ಜೀವ ಮಾವಿನ ತಳಿರು
ಗಿಡವು ಚಿಗುರುವುದು ಈ ಕಾಲದಲ್ಲಿ.

ಮತ್ತೆ ಬರುವ ವಸಂತ ಬಂದು
ಹೋದಾಗೆಲ್ಲ – ಹಲವಾರು ಹೊಸಬಗೆಯ ವ್ಯಕ್ತಿ ಚಿತ್ರ
ಸುಕ್ಕುಗಟ್ಟಿದ ದೇಹ ಉಸಿರು ನಿಂತೊಡನೆಯೇ
ಶ್ರದ್ಧಾಂಜಲಿ ಎಂಬುದೊಂದು ವ್ಯಂಗ್ಯಚಿತ್ರ!

ಮತ್ತೆ ಬರುವ ವಸಂತ ಬಂದು
ಹೋದಾಗೆಲ್ಲ ನೂರು ಸಾವಿರ ಮದುವೆ ವಿಶ್ವದಲ್ಲಿ
ಹೃದಯ ಬೇಗುದಿ ತಣಿಸೆ ಹಾರಾಡಿ – ತೇಲಾಡಿ
ಹೊಸ ಜೋಡಿ ನರ್ತಿಸಿವೆ ಮುಗಿಲಿನಲ್ಲಿ.

ಮತ್ತೆ ಬರುವ ವಸಂತ ಬಂದು
ಹೋದಾಗೆಲ್ಲ ಮಳೆಯೂ ಬರಬಹುದೊಂದೆರಡು ಬಾರಿ
ಬರಡು ಭೂಮಿಯ ಕಂಡು ತಲೆ ಮೇಲೆ ಕೈ ಹೊತ್ತು
ಕುಳಿತ ರೈತನು ಬಾನೆಡೆ ಮುಖವ ಮಾಡಿ.



ಮತ್ತೆ ಬರುವ ವಸಂತ ಬಂದು
ಹೋದಾಗೆಲ್ಲ ನೂರಾರು ಆಸೆಗಳು ಬಾಳಿನಲ್ಲಿ
ಆಸೆಬುರುಕ ನೀನೆಂದು ಗಹಗಹಿಸಿ ನಗುತಲಿವೆ
ನೂರು ಸಾವಿರ ಚುಕ್ಕಿ ಬಾನಿನಲ್ಲಿ!

● ಎ. ಆರ್. ಮಣಿಕಾಂತ್, ತಟ್ಟೀಕೆರೆ

ಅರ್ಥದ ಸ್ಪಷ್ಟತೆಯನ್ನೂ ಮಾತಿನ ಮೇಲಿನ ಹಿಡಿತವನ್ನೂ ಗಮನದಲ್ಲಿಟ್ಟುಕೊಂಡು ಈ ರೀತಿ ಆಯ್ಕೆ ಮಾಡಲಾಗಿದೆ. ಪ್ರತಿ ಕವನಕ್ಕೂ ತನ್ನದೇ ಆದ ಆಧಾರ ಲಯವಿಲ್ಲದಿರುವುದೇ ನಾನೋದಿದ ಎಲ್ಲ ಕವನಗಳ ಸಾಮಾನ್ಯ ದೌರ್ಬಲ್ಯವಾಗಿದೆ. ಇನ್ನಷ್ಟು ಚಿಂತನೆಗೆ ಒಡ್ಡಿದ್ದರೆ, ಕವನ ಸಫಲವಾಗುತ್ತಿತ್ತು.

● ಕೆ. ಎಸ್. ನರಸಿಂಹಸ್ವಾಮಿ

ಭವಿಷ್ಯ

ಹೋಗಿ ಬಾ ವಸಂತನೆ, ಧನ್ಯವಾದಗಳು,
ಮುಂದಿನ ಬಾರಿಗೆ ಬಂದಾಗ ಹೀಗಿರಬೇಡ.
ವಸಂತನೆ ಈ ಬಾರಿಗೆ ನೀ ಬಂದಾಗ
ನಿನ್ನ ಮುಖದಲ್ಲಿರಲಿಲ್ಲ ಚಂದ್ರಿಕೆಯ ಕಳೆ,
ನಕ್ಷತ್ರದ ಹೊಳಪು, ಮಗುವಿನ ನಗು,
ಇರಲಿಲ್ಲ ಇಂಪಾದ ಹಾಡು.

ನೀ ಬರುವ ದಾರಿಯ ತುಂಬಾ
ಮೌನ ಪ್ರೇತ ನೃತ್ಯವಾಡಿತ್ತು.
ಗುಲ್‌ಮೊಹರ್ ಅರಳುವ ಮುನ್ನ
ತೊಟ್ಟು ಕಳಚಿ ನೆಲಕ್ಕಪ್ಪಿತ್ತು.
ಕೋಗಿಲೆಯ ಕಂಠಕ್ಕೆ ಕ್ಯಾನ್ಸರ್.

ದೀರ್ಘವಾಗಿದೆ ರಸ್ತೆ ವಸಂತನೇ,
ಮುಂದಿನ ಮುಂದಿನ ಬಾರಿ ನೀ ಹೀಗೇ ಬಂದರೆ
ಕಳಚಿಕೊಂಡೀತು ಬದುಕ ಬಂಡಿಯ ಕೀಲು,
ಕರ್ಕಶವಾದೀತು ಮುದ್ದು ಮಗುವಿನ ನಗು,
ಪ್ರೇತ ನೃತ್ಯವಾಡೀತು ನಮ್ಮ ನೆರಳು.
ಆದೀತು ಗುಲಾಬಿ ಗೋರಿಯ ಮೇಲಿನ 'ಹೂ'
ಜಿಂಕೆಗಳು ಸಿಂಹಗಳಾಗಿ,
ನರಿಗಳು ಕಂಡಾವು ಮೊಲಗಳಾಗಿ,
ಉರುಳಾದೀತು ಮರಕ್ಕೆ ಬಳ್ಳಿಯ ತಬ್ಬುವಿಕೆ,
ವಿಷವಾದೀತು ತಾಯಿಯ ಮೊಲೆಹಾಲು.

● ಸಿಂಧು ಎಚ್., ತಂಬ್ರಹಳ್ಳಿ

ಮೆಚ್ಚುಗೆ ಪಡೆದ ಕವನಗಳು

1. ಏಕೆ ಹಾಡುವೆ ಕವಿಯೆ?


   ● ರಾಧಾಕೃಷ್ಣ ಕಲ್ಚಾರ್, ಉಡುಪಿ

2. ಅನಾಮಿಕನಿಗೆ

   ● ವನಿತಾ ಅಂಬುತೀರ್ಥ, ನೊಣಬೂರು

3. ಕೊಂಡಿಗಳು

   ● ರಾಧಾ ರವೀಂದ್ರ, ಬೆಂಗಳೂರು



ಆಗಮನ

ಒಂದು ಇಳಿಬೇಸಿಗೆಯ ಸಂಜೆ
ಆಕೆ ಬಂದಳು
ಬಗಲಲ್ಲಿ ಮಗು
ಏನೇನೋ ಮಾತುಕತೆ
ನಡುನಡುವೆ ಮಗುವಿನ ಜತೆ
ಉಲ್ಲಲ್ಲಾಯಿ ನಾನೂ ಕೂಡ

ರೂಮು ತುಂಬ ಹರಡಿರುವ
ಪಾತ್ರೆ ಪಗಡೆ, ಕಸ — ಗಿಸ
ಪುಸ್ತಕ — ಗಿಸ್ತಕ ಇತ್ಯಾದಿ

ಆಕೆ ಕೇಳಿದಳು:
'ಆಗಿಲ್ಲವೆ ಇನ್ನೂ?'
'ಇಲ್ಲ...'
ಚೂರು ನಕ್ಕಳು ಜತೆಗೆ
ಮಂಚದ ಅಂಚಿಗೆ ಬಂದ
ಮಗುವ ಹೆಕ್ಕಿಕೊಂಡಳು

ನಂತರ ತುಸು ಹೊತ್ತು
ಅದು ಇದು ಆಡುತ್ತ
'ಕತ್ತಲಾಯಿತು' ಎಂದಳು
ಹೊರಗೆ ನೋಡುತ್ತ

ಹೌದು, ಸಂಜೆ ಕತ್ತಲಾಗಿತ್ತು
ಹಕ್ಕಿ ಚುಕ್ಕಿಯಾಗಿ ಹಾರಿ ಹೋಗಿತ್ತು

ಬಾಗಿಲಲಿ ನಿಂತೆ
ಅಲ್ಲಿಂದಿಲ್ಲಿಗೂ ರಸ್ತೆಯ ಮೇಲೆ
ದೀಪದ ಮಾಲೆ. ಹರಿದಾಡುವ
ಮಂದಿ. ಆದರೆ ಆಕೆ ಮಾತ್ರ
ಎಲ್ಲೂ ಕಾಣಲಿಲ್ಲ. ಯಾಕೆಂದರೆ
ಆಕೆ ಬಂದಿರಲಿಲ್ಲ.

● ರಾಜು ಹೆಗಡೆ, ದಾಂಡೇಲಿ


ಪತ್ತೇದಾರಿ ಕಥೆ

ಚೀಲಿ ಹೊರಗಿರಬೇಕು

● ಉಷಾ ನವರತ್ನರಾಮ್
'ಹೊಂಬಿಸಿಲು',
(ನೆಟ್ಟಕಲ್ಲಪ್ಪ ಸರ್ಕಲ್ ಹತ್ತಿರ),
ಬಸವನಗುಡಿ,
ಬೆಂಗಳೂರು – 560 004.

ಅನಂತುವಿನ ಗಮನವೆಲ್ಲಾ ಕೈಗಡಿಯಾರದತ್ತ ಇತ್ತು. ತಾನು ಇಂದು ಎಂದಿನಂತೆ ಸಮಯಕ್ಕೆ ಸರಿಯಾಗಿ ಎಲ್ಲವೂ ಆಗಬೇಕು. ಅವನದು ಆದರ್ಶ ಬದುಕೆಂದೇ ಎಲ್ಲರೂ ತಿಳಿದಿದ್ದರು. ಯಾವಾಗಲೂ ಹಾಸಿಗೆ ಹಿಡಿದೇ ಇರುತ್ತಿದ್ದ ಲಕ್ಷ್ಮಿಯನ್ನು ಅವನು ಅತ್ಯಂತ ಆದರದಿಂದ ನೋಡಿಕೊಳ್ಳುತ್ತಿದ್ದ. ಬೆಳಿಗ್ಗೆ ಎದ್ದು ನೀರು ತುಂಬಿಕೊಳ್ಳುವುದರಿಂದ ಲಕ್ಷ್ಮಿಗೆ ಸ್ನಾನ ಮಾಡಿಸಿ, ಊಟ ಮಾಡಿಸಿ, ಹಾಸಿಗೆಯ ಮೇಲೆ ಮಲಗಿಸಿ ಕೈಗೆಟಕುವಂತೆ ಹಾಲು, ನೀರು ಇಟ್ಟು ಕೆಲಸಕ್ಕೆ ಹೊರಡುತ್ತಿದ್ದ. ಒಂದು ದಿನವೂ ಬೇಸರ ಪಡುತ್ತಿರಲಿಲ್ಲ. ಎಲ್ಲರಿಗೂ ಒಂದೇ ಅಚ್ಚರಿ. ಅನಂತನಿಗೆ ಲಕ್ಷ್ಮಿಗಿಂತ ಆರೋಗ್ಯವಂತ, ಲಕ್ಷಣವಾದ ಹುಡುಗಿ ಸಿಕ್ಕುತ್ತಿರಲಿಲ್ಲವೇ ? ಆದರೆ ಅನಂತುವಿನ ನಿಷ್ಠೆಯೇ ಬೇರೆ. ಲಕ್ಷ್ಮಿಯನ್ನು ಅವನಿಗೆ ಕೊಡಬೇಕೆಂದು ಚಿಕ್ಕಂದಿನಲ್ಲೇ ಮಾತು ಕೊಟ್ಟಾಗಿತ್ತು. ಅವಳನ್ನು ಮದುವೆಯಾಗುವ ಕೆಲವರ್ಷಗಳ ಮುನ್ನ ಅವಳಿಗೆ ವಾತರೋಗ ಆವರಿಸಿಕೊಂಡು ಕೈಕಾಲು ಆಡಿಸುವುದೇ ಕಷ್ಟ ವಾಗುತ್ತಿತ್ತು. ಎದ್ದು ಓಡಾಡಲು ಕಷ್ಟವಾಗು ತ್ತಿತ್ತು. ಅನಂತ ಮಾತು ಕೊಟ್ಟಂತೆಯೇ ಅವಳ ಕೈಹಿಡಿದ. ಮನೆಗೆ ಕರೆತಂದು ಅವಳ ಆರೈಕೆ ಮಾಡುತ್ತಾ ಸಂಸಾರ ಮಾಡುತ್ತಿದ್ದ. ಇದಕ್ಕೆ ಮತ್ತೊಂದು ಕಾರಣವಿತ್ತೆಂದು ಲಕ್ಷ್ಮಿಗೆ ಮಾತ್ರ ತಿಳಿದಿತ್ತು. ಅವಳಿಗಾಗಿ ಅವಳ ತಾಯಿ ಸಾಕಷ್ಟು





ಬೆಳ್ಳಿ ಬಂಗಾರ ನೀಡಿದ್ದಳು. ತಂದೆ ಜಮೀನು ಮಾರಿ ಮಗಳ ಕೈಗೆ ಹಣ ಇತ್ತಿದ್ದ. "ಮಗಳೇ ಇದೆಲ್ಲಾ ನಿನ್ನ ಹತ್ರಾನೇ ಇರ್ಲಿ. ಕಾಯ್ಲೆ ಮನಿಷಿ ನೀನು ಬೇಕಾಗುತ್ತೆ !" ಅದನ್ನು ಲಕ್ಷ್ಮಿ ಜೋಪಾನ ವಾಗಿ ದಿಂಬಿನೊಳಗೆ ತುರುಕಿ ಹೊಲಿದು ಅದರ ಮೇಲೆ ತಲೆಯಿಟ್ಟು ಮಲಗುತ್ತಿದ್ದಳು. ಗಂಡನ ಕೈಯಲ್ಲಿ ಮುಟ್ಟಿಸುತ್ತಿರಲಿಲ್ಲ.

"ಇದೆಲ್ಲಾ ನಮ್ಮಪ್ಪಯ್ಯ, ಅವ್ವ ಕೊಟ್ಟದ್ದು—ನಂದು. ಯಾವೊತ್ತಾದ್ರೂ ಬೇಕಾಗುತ್ತೆ. ನೀನು ಸಂಪಾದಿಸೋದು ನಂಗೇ ನಿಂಗೇ ಸಾಕಾಗೋಲ್ವಾ? ಮಕ್ಳಿಲ್ಲ ಮರಿ ಇಲ್ಲ" ಎನ್ನುತ್ತಿದ್ದಳು.

ಅನಂತು ಪಂಡಿತರಿಂದ ತೈಲ ತಂದು ಅವಳ ಕೈ ಕಾಲುಗಳಿಗೆ ತಿಕ್ಕುತ್ತಿದ್ದ. ಹಸಿರು ಮದ್ದು ಕುಡಿಸುತ್ತಿದ್ದ. ಗಂಡನ ಆರೈಕೆಯಲ್ಲಿ ಸುಖ ವಾಗಿದ್ದ ಲಕ್ಷ್ಮಿಗೆ ಈಗೆಷ್ಟೋ ಮೇಲಾಗಿದ್ದರೂ ಗಂಡನ ಆರೈಕೆ ಎಲ್ಲಿ ತಪ್ಪುವುದೋ ಎಂದು ಬೇಕಾಗಿಯೇ ನಟಿಸುತ್ತಿದ್ದಳು. "ಕಾಲು ನೋವು—ಮಂಡಿ ನೋವು—ಕೀಲುಗಳು ನೋವು—ಏಳ ಲಾರೆ—ಏನೂ ಮಾಡ್ಲಾರೆ" ಎಂದು ನರಳುತ್ತಿದ್ದು

ಹೆಂಡತಿ ಹಣ-ಒಡವೆಗಳನ್ನು ತಲೆ ದಿಂಬಿನೊಳಗೆ ಇಟ್ಟುಕೊಂಡು ಖಾಯಿಲೆ ಮಲಗಿಬಿಟ್ಟಿದ್ದಾಳೆ. ಅವಳಿಂದ ಅದನ್ನು ಪಡೆದುಕೊಳ್ಳುವುದು ಹೇಗೆ?

ಗಂಡ ಎಲ್ಲ ಮುಗಿಸಿ ಕೆಲಸಕ್ಕೆ ಹೊರಟ ಮೇಲೆ ಎದ್ದು ಬಂದು ಮನೆಯ ಮುಂದೆ ಬಿಸಿಲಿಗೆ ಕೈಕಾಲು ಚಾಚಿಬಿಡುತ್ತಿದ್ದಳು. ಅದು ಅನಂತು ವಿಗೂ ತಿಳಿದಿತ್ತು. ಆದರೆ ತುಟಿ ಪಿಟಕ್ಕೆನ್ನುತ್ತಿರ ಲಿಲ್ಲ. ಅವಳ ದಿಂಬಲ್ಲಿ ಅಡಗಿರುವ ಐಶ್ವರ್ಯ ದಿಂದ ಒಂದಲ್ಲಾ ಒಂದು ದಿನ ತಾನು ಸುಖ ವಾಗಿರಬಹುದು.

ಅನಂತುವಿನ ದಿನಚರಿ ಚಾಚೂ ತಪ್ಪುತ್ತಿರ ಲಿಲ್ಲ. ಐದು ಗಂಟೆಗೆ ಸರಿಯಾಗಿ ಏಳುತ್ತಿದ್ದ. ಐದು ಗಂಟೆ ಐದು ನಿಮಿಷಕ್ಕೆ ಕೊಡಗಳನ್ನೆತ್ತಿ ಕೊಂಡು ನೀರಿಗೆ ಬರುತ್ತಿದ್ದ. ಐದೂ ಕಾಲಿಗೆ ಒಲೆಗೆ ಬೆಂಕಿ ಹೊತ್ತಿಸಿ ನೀರು ಕಾಯಿಸುತ್ತಿದ್ದ. ಐದೂವರೆಗೆ ಸ್ನಾನ ಮುಗಿಸಿ ದೇವರಿಗೆ ದೀಪ ಹೊತ್ತಿಸಿ ಗಂಟೆ ಬಾರಿಸಿ ಪೂಜೆ ಮಾಡುತ್ತಿದ್ದ. ಅಕ್ಕಪಕ್ಕದವರಿಗೆ ಗಂಟೆ ನೋಡುವ ಆವಶ್ಯ ಕತೆಯೇ ಇರಲಿಲ್ಲ. ಅನಂತು ನೀರಿಗೆ ಬಂದ ಐದು ಗಂಟೆ ಐದು ನಿಮಿಷ—ಗಂಟೆ ಬಾರಿಸಿ ಮಂಗಳಾರತಿ ಮಾಡುತ್ತಿದ್ದಾನೆ, ಈಗ ಐದೂವರೆ ಎಂದು ತಿಳಿಯುತ್ತಿದ್ದರು. ಹೆಂಡತಿಯ ಶುಶ್ರೂಷೆ ಮುಗಿಸಿ ಸರಿಯಾಗಿ ಎಂಟು ಗಂಟೆಗೆ ಕೆಲಸಕ್ಕೆ ಹೊರಡುತ್ತಿದ್ದ. ಹೊರಡುವ ಮುನ್ನ ಮುಂದಿನ ಜಗಲಿಯ ಮೇಲೆ ಮಲಗಿರುತ್ತಿದ್ದ ಚೀಲಿಯನ್ನು ಒಳಗೆ ಹಾಕಿ ಬಾಗಿಲು ಮುಂದೆ ಮಾಡಿ ಹೋಗು ತ್ತಿದ್ದ.

ಅವನತ್ತ ಹೋಗುತ್ತಲೇ ಲಕ್ಷ್ಮಿ ನಿಧಾನವಾಗಿ ಎದ್ದುಬಂದು ಚೀಲಿಯನ್ನು ಹೊರಗೆ ಹಾಕಿ ಬಿಸಿಲಿಗೆ ಕೂಡುತ್ತಿದ್ದಳು. ಅವರಿವರ ಹತ್ತಿರ ಮಾತಾಡಿ ಮಧ್ಯಾಹ್ನ ಅನಂತು ಹಾಸಿಗೆ ಬಳಿ ಯಿಟ್ಟಿರುತ್ತಿದ್ದ ಊಟ ತಿಂಡಿ ಮುಗಿಸಿ ಮಲಗು ತ್ತಿದ್ದಳು. ಅನಂತರ ಮತ್ತೆ ಬಂದು ಹೊರಗೆ ಕುಳಿತು ಅವನು ಬರುವ ಮುನ್ನ ಒಳಗೆ ಹೋಗಿ ಮಲಗಿ ಬಿಡುತ್ತಿದ್ದಳು.

"ಲಕ್ಷ್ಮಿ ಆಟ ನೋಡಿದ್ಯಾ? ಎಲ್ಲಾ ಗಂಡನ ಕೈಲಿ ಮಾಡಿಸ್ಕೊಂಡು ಅವ್ನತ್ತ ಹೋಗುತ್ಲೇ ಹಾಯಾಗಿ ಬಂದು ಕೂತ್ಕೋತಾಳೆ!" ಅಕ್ಕಪಕ್ಕ ದವರಲ್ಲೂ ದೇವಮ್ಮ ಆಡಿಕೊಳ್ಳುತ್ತಿದ್ದಳು.

ಅಂದು ಅನಂತು ಬೇಗನೇ ಬಂದ. ಇಪ್ಪತ್ತು ಮೂವತ್ತರ ಒಂದು ಸೈಟು ಖರೀದಿಗೆ ಬಂದಿತ್ತು. ಹತ್ತು ಸಾವಿರ ಮೊದಲ ಕಂತು ಕಟ್ಟಿದರೆ ಮಿಕ್ಕಿದ್ದನ್ನು ಇಪ್ಪತ್ತನಾಲ್ಕು ಕಂತುಗಳಲ್ಲಿ ಕೊಡ ಬಹುದಿತ್ತು. ತನ್ನದೇ ಆದ ಮನೆ ಇರಬೇಕೆಂಬಾಸೆ ಅವನಿಗೆ. ಹೆಂಡತಿಯ ಕಾಲಿಗೆ ತೈಲ ತಿಕ್ಕುತ್ತಾ, ವಿಷಯ ಹೇಳಿದ.

"ನಿನ್ನ ಹತ್ರ ಇರೋ ಹಣ ಕೊಡು. ಸೈಟು ತೊಗೊಂಡು ಮನೆ ಕಟ್ಟಿಸಿಕೊಳ್ಳೋಣ. ಈ ವಠಾರದಲ್ಲಿ ಎಷ್ಟು ದಿನ ಇರೋದು. ಆ ಮನೆ ನಿಂಗೇ ತಾನೇ ?"

"ಊಂ—ನಾ ಕೊಡೋಲ್ಲ. ಎಲ್ಲಾದ್ರೂ ಸಾಲ ಮಾಡ್ಕೋ. ಆ ದುಡ್ಡು ಒಡ್ಗೆ ಇರೋದ್ರಿಂದ ಅದ್ರಾಸೆಯಿಂದ ನನ್ನ ಆರೈಕೆ ಮಾಡ್ತಾ ಇದ್ದೀಯ. ಇಲ್ದೆ ಹೋದ್ರೆ ನನ್ನ ಬಿಟ್ಟು ಯಾರ್ನಾದ್ರೂ ಕಟ್ಕೊಂಡು ಓಡಿಹೋಗ್ತೀಯಾ" ಎಂದುಬಿಟ್ಟಳು. ಏನು ಮಾಡಿದರೂ ಕೊಡಲೊಪ್ಪಲಿಲ್ಲ. ಅವಳು ಮೈಮರೆತು ಮಲಗುವಂತೆ ಪಂಡಿತರಿಂದ ಮದ್ದು ತಂದು ಅದನ್ನು ಹಾಲಿಗೆ ಹಾಕಿ ಕುಡಿಯಲು ಕೊಟ್ಟ. ಅವಳು ಮೈಮರೆತು ಮಲಗಿದಳು. ಅವಳು ಮಲಗಿದಳೆಂದು ಖಾತ್ರಿ ಮಾಡಿಕೊಂಡು ಅವಳ ದಿಂಬನ್ನು ಎತ್ತಿಕೊಂಡ. ಒಡವೆ ಮುಟ್ಟ ಲಿಲ್ಲ. ತನಗೆ ಬೇಕಾದ ಹತ್ತು ಸಾವಿರ ಮಾತ್ರ ತೆಗೆದುಕೊಂಡ. ದಿಂಬನ್ನು ಹಾಗೇ ಹೊಲಿದು ಅವಳ ತಲೆಕೆಳಗಿಡುವಾಗ ಅವಳು ಮುಲುಗಿದಳು. ಸ್ವಲ್ಪ ಎಚ್ಚರವಾಯಿತು. ಕಣ್ತೆರೆದು ನೋಡು ತ್ತಾಳೆ—ತನ್ನ ಗಂಡ! ಚಿಟ್ಟನೇ ಚೀರಿದಳು. ಅವಳ ದನಿ ಕೇಳಬಾರದೆಂದು ಅನಂತು ಬಾಯಿ ಭದ್ರ ವಾಗಿ ಮುಚ್ಚಿ ಹಿಡಿದ. ಕೊಂಚ ಹೊತ್ತು ಕೊಸರಾಡಿ ಮತ್ತೆ ಅಲ್ಲುಗಾಡದೇ ಮಲಗಿದಳು.

ಬೆಳಿಗ್ಗೆ ನಾಲ್ಕು ಗಂಟೆಗೇ ಎದ್ದು ದುಡ್ಡನ್ನು ಚೀಲದಲ್ಲಿ ಎಣಿಸಿಟ್ಟುಕೊಂಡ. ಲಕ್ಷ್ಮಿಯತ್ತ ನೋಡಿದ. ಮಿಸುಕಾಡದೇ ಮಲಗಿದ್ದಳು. ಮದ್ದಿನ ಮಹತ್ತು ಅಂಥದ್ದು ಎಂದುಕೊಂಡ—ಆದರೆ ಅದೇಕೋ ಅನುಮಾನ ಬಂದಿತು. ಹತ್ತಿರ ಬಂದು ನೋಡಿದ. ಉಸಿರಾಡುತ್ತಿಲ್ಲವೆನಿಸಿತು. ಮೂಗಿನ ಬಳಿ ಬೆರಳಿಟ್ಟು ನೋಡಿದ. ಎದೆಗೆ ಕಿವಿಕೊಟ್ಟು ಕೇಳಿದ. ಉಹುಂ—ಉಸಿರಾಟ, ಎದೆಬಡಿತ ನಿಂತುಹೋಗಿತ್ತು. ಕೈಕಾಲು ಮುಟ್ಟಿ ನೋಡಿದ. ತಣ್ಣಗೆ ಮಂಜಿನಂತೆ ಕೊರೆಯು ತ್ತಿತ್ತು. ಲಕ್ಷ್ಮಿ ಹೆಣವಾಗಿದ್ದಾಳೆ!

ಯಾಕೆ ಹೀಗಾಯಿತು ? ಬೆಚ್ಚಿದ. ರಾತ್ರಿ ತಾನು ಬಾಯಿ ಮುಚ್ಚಿದಾಗ ತಾನು ಅವಳ ಉಸಿರಾಟ ವನ್ನೇ ತಡೆಹಿಡಿದಿರಬೇಕು. ಕೊಸರಾಡಿ ಹಾಗೇ

ಬಿದ್ದುಕೊಂಡಳು. ಆಗಲೇ ಪ್ರಾಣ ಹೋಗಿರ ಬೇಕು. ತಾನು ಅವಳನ್ನು ಕೊಲ್ಲಲು ಯತ್ನಿಸಿರ ಲಿಲ್ಲ. ಅದು ಆಕಸ್ಮಿಕ! ಅವನು ಸಣ್ಣಗೆ ನಡುಗ ಲಾರಂಭಿಸಿದ. ಅಕ್ಕಪಕ್ಕದವರಿಗೆ ತಿಳಿದರೆ ಗತಿ! ಹೇಗಾದರೂ ತಾನು ತಪ್ಪಿಸಿಕೊಳ್ಳಬೇಕು. ಎಂದಿನಂತೆ ಎಲ್ಲಾ ಕೆಲಸ ಮುಗಿಸಿ ಹೊರಡಬೇಕು. ಕೈಚೀಲ ಹಿಡಿದು ಹೊರಡಬೇಕು. ದೇವಮ್ಮನಿಗೆ ಮಾತ್ರ ಹೇಳಿ ಹೋಗಬೇಕು. "ನಾನು ದೇವರು ಮಾಡಿಸೋಕ್ಕೆ ಹಳ್ಳಿಗೆ ಹೋಗಿ ಬರ್ತೀನಿ. ಲಕ್ಷ್ಮಿ ಇನ್ನೂ ಮಲ್ಗಿದ್ದಾಳೆ. ಗಮನ ಇರಲಿ!"

ಎಂದಿನಂತೆ ಐದು ಗಂಟೆ ಐದು ನಿಮಿಷಕ್ಕೆ ಕೊಡಗಳನ್ನು ಹಿಡಿದು ಬಂದು ನೀರೊಯ್ದ. ಐದೂವರೆಗೆ ಸ್ನಾನ ಮಾಡಿ ಮಂಗಳಾರತಿ ಗಂಟೆ ಬಾರಿಸಿದ. ಅಡಿಗೆ ಮಾಡಿಟ್ಟ. ಹಾಲು ಕಾಯಿಸಿ ಕಾಫಿ ಬೆರೆಸಿ ಕುಡಿದ. ಲಕ್ಷ್ಮಿಯ ಬಳಿ ಕೈಗೆಟಕುವಂತೆ ಎಲ್ಲಾ ಇಟ್ಟ. ಎಂಟು ಗಂಟೆಗೆ ಸರಿಯಾಗಿ ಚೀಲಿಯನ್ನು ಒಳಗೆ ಬಿಟ್ಟು ಬಾಗಿಲು ಮುಂದೆ ಮಾಡಿ ಕೈಯಲ್ಲಿ ಚೀಲ ಹಿಡಿದು ಹೊರಟ. ಅದರಲ್ಲಿ ಹತ್ತು ಸಾವಿರ ಭದ್ರವಾಗಿತ್ತು. ಯಾರಿಗೂ ಅವಳ ದಿಂಬಿನ ಚೀಲದಲ್ಲಿರುವ ಒಡವೆ ವಿಚಾರ ತಿಳಿದಿಲ್ಲ. ಅವಳು ನಿದ್ರೆಯಲ್ಲಿ ತೀರಿ ಹೋಗಿರಬೇಕೆಂದೇ ತಿಳಿಯುತ್ತಾರೆ. ರಾತ್ರಿ ಬಂದು ಆಘಾತವಾದಂತೆ ತಾನು ನಟಿಸಿ ಅಳಬೇಕು. ಅವಳನ್ನು ಮಣ್ಣುಮಾಡಬೇಕು. ಆಮೇಲೆ ಎಲ್ಲಾ ಸುಗಮ!

ದೇವಮ್ಮ ಮನೆಯ ಮುಂದೆ ರಂಗೋಲಿ ಯಿಡುತ್ತಿದ್ದಳು.

"ದೇವಮ್ಮ ಇವೊತ್ತು ಲಕ್ಷ್ಮಿ ಇನ್ನೂ ಎದ್ದಿಲ್ಲ. ಒಳ್ಳೇ ನಿದ್ರೇಲಿದ್ದಾಳೆ. ಎದ್ದು ಬಂದು ಬಿಸಿಲಿಗೆ ಕೂತಾಗ ನಾನು ದೇವರಿಗೆ ಮಾಡಿಸಲು ಹೋಗಿದ್ದೀನೀಂತಾ ತಿಳ್ಸು. ರಾತ್ರಿಗೆ ಬಂದು ಬಿಡ್ತೀನಿ" "ಸರಿಯಪ್ಪ. ನಿನ್ನಂತ ಗಂಡ ಎಲ್ಲಾ ಹೆಣ್ಣಿಗೂ ಸಿಕ್ರೆ ಎಷ್ಟು ಚೆನ್ನ. ಎಂತಾ ಚೆಂದಾಗಿ ಹೆಂಡ್ತೀನ್ನ ನೋಡ್ಕೋತೀ" ದೇವಮ್ಮ ನಕ್ಕಳು.

'ಚೀನಾಲಿ ಲಕ್ಷ್ಮಿ ಇಂತಾ ಒಳ್ಳೆ ಗಂಡಸಿಗೆ ಮೋಸ ಮಾಡ್ತಾಳೆ. ಅವನಿಗೆ ಇವಳು ಎದ್ದು ಬಂದು ಬಿಸಿಲಿಗೆ ಕೂಡುವುದು ಗೊತ್ತಿದ್ದರೂ ಸುಮ್ಮನಿರುವನಲ್ಲ. ಎಂತಹ ದೊಡ್ಡ ಗುಣ!"

ಅನಂತು ಸೈಟಿನ ಮಾರಾಟದ ದಳ್ಳಾಳಿಗೆ ಹಣವಿತ್ತು ಸೈಟಿನ ವ್ಯವಹಾರದಲ್ಲಿ ತೊಡಗಿದ್ದಾಗ ಪೇದೆ ಶಿವಲಿಂಗ ಬರುತ್ತಿದ್ದುದು ಕಂಡಿತು. ಇಲ್ಲಿಗೆ ಯಾಕೆ ಬರುತ್ತಿದ್ದಾನೆ? ಅನಂತು ಅಚ್ಚರಿಗೊಂಡ.

ಪೇದೆ ಅನಂತುವಿನ ಬಳಿ ಬಂದು ನಿಂತ. "ಏಯ್ ನಡೀ ನನ್ಜೊತೆ. ಸಾಹೇಬ್ರು ಕರ್ಕೊಂಡು ಬರೋಕ್ಕೆ ಹೇಳವ್ರೆ."

"ಯಾಕೆ?" ಅನಂತು ನಡುಗುತ್ತಾ ನಿಂತ.

"ಯಾಕಂತೆ ಕೇಳ್ತೀಯಾ ಭಡವಾ. ಅಲ್ಲಿ ಹೆಂಡ್ತೀ ಸತ್ತು ಬಿದ್ದವ್ಳೆ. ಇಲ್ಲಿ ಸೈಟು ವ್ಯವಹಾರ ಮಾಡ್ತಾ ಕೂತಿದ್ದೀಯಾ!"



"ಲಕ್ಷ್ಮಿ ಸತ್ತು ಹೋಗಿದ್ದಾಳಾ ?"

"ನೀನ್ಬಿಟ್ರೆ ಅವಳ ಹತ್ರ ಯಾರೂ ಇರಲಿಲ್ಲ. ನೀವಿಬ್ರೇ ಇರೋದು ಆ ಮನೇಲಿ. ಉಸಿರುಕಟ್ಟಿ ಸತ್ತಿದ್ದಾಳೆ. ನೀನೇ ಅವಳ್ನ ಕೊಲೆ ಮಾಡಿದ್ದೀಂತಾ ಗುಮಾನಿ.' ನಡೀ" ಅನಂತನ ಕೈಕಾಲುಗಳು ನಡುಗಹತ್ತಿತು. ತಾನೆಷ್ಟು ಎಚ್ಚರವಹಿಸಿ ಬಂದಿದ್ದೆ !

ಅವನಿಗೇ ಗೊತ್ತಿರಲಿಲ್ಲ. ಅವನು ಮಾಡಿದ ತಪ್ಪು ! ದೇವಮ್ಮನಿಗೆ ಹೇಳಿ ಹೊರಟಿದ್ದೇ ತಪ್ಪು. ಹೇಗಿದ್ದರೂ ಅನಂತು ದೇವರಿಗೆಂದು ಹೋಗಿದ್ದಾನೆ ಎಂದು ಆ ಮನೆಯತ್ತಲೇ ನೋಡುತ್ತಾ ಕುಳಿತಳು. ಎಂದಿನಂತೆ ಲಕ್ಷ್ಮಿ ಎದ್ದು ಚೀಲಿಯನ್ನು ಹೊರಗೆ ಹಾಕಿ ಬಿಸಿಲಿಗೆ ಕೂಡದಿದ್ದು ಕಂಡು ತಾನೇ ಬಾಗಿಲು ತಳ್ಳಿಕೊಂಡು ಒಳಗೆ ಬಂದು ಚೀಲಿಯನ್ನು ಹೊರಗೆ ಹಾಕಿದಳು. ಅನಂತು ನೋಡಿಕೋ ಗಮನ ಇರಲಿ ಎಂದಿರುವನಲ್ಲ !


"ಲಕ್ಷ್ಮಿ ಏಳಮ್ಮಾ ಎಲ್ಲಾ ಆರಿ ತಣ್ಣಗಾಗುತ್ತೆ. ನಿನ್ನ ಗಂಡ ದೇವರಿಗೆ ಹೋಗಿದ್ದಾನೆ" ಲಕ್ಷ್ಮಿಯ ಮುಸುಕು ತೆಗೆದು ನೋಡಿ ಚೀರಿದಳು. ಅವಳದೇ ಹೇಳಿಕೆ ಪೊಲೀಸರಿಗೆ ಸಾಕಾಗಿತ್ತು. ಅವಳು ಮುಖ್ಯ ಸಾಕ್ಷಿಯಾಗಿರಲಿಲ್ಲವೇ ?

ಚೀಲಿ ಬಿಸಿಲಿಗೆ ಮೈಯೊಡ್ಡಿ ಮೈನೆಕ್ಕಿಕೊಳ್ಳುತ್ತಿತ್ತು. ಅದರ ದಿನಚರಿ ಬದಲಾಗಬಹುದೇ ? ಅದು ಒಳಗೆ ಏನಾದರೂ ಉರುಳಿಸೀತೆಂದು ದೇವಮ್ಮ ಹೊರಗೆ ತಂದು ಬಿಟ್ಟಿದ್ದಳು.

ಜನ ಸೇರಿದ್ದರು. ಪೇದೆಯೊಂದಿಗೆ ಬಂದ ಅನಂತು ಯಾರತ್ತಲೂ ನೋಡಲಿಲ್ಲ. ಚೀಲಿಯನ್ನು ಕೈಗೆತ್ತಿಕೊಂಡು ಹೆಂಡತಿಯ ಹೆಣದತ್ತ ನಡೆದ. ಅದನ್ನು ತಾನು ಒಳಗೆ ಹಾಕದೇ ಹೋಗಿದ್ದರೆ... ! ●

ಏಕೆ ?

ಬಿರುಗಾಳಿಯ ತುಫಾನಿಗೆ
ನನ್ನ ಕನಸುಗಳು
ಕೊಚ್ಚಿಹೋಗಲು
ಬಿಟ್ಟುಬಿಡಬೇಕಿತ್ತು ನೀನು
ತಂಗಾಳಿಯಾಗಿ ಏಕೆ ಸುಳಿದೆ ?
ಸುಮಧ ಗಂಧವಾಗಿ ಏಕೆ ತೀಡಿದೆ ?



ಸುಮ್ಮನಿರಿ

ಕನಸುಗಳ ಕೊಳ್ಳುವಿರಾ ?
ಕೊಳ್ಳಲಾಗದಿದ್ದರೆ ಸುಮ್ಮನಿರಿ.
ಹೂಮನಸ್ಸಿಗೆ ಕಲ್ಲಿನಿಂದ
ಹೊಡೆದು ಗಾಯಮಾಡಬೇಡಿ



ನಕ್ಕಾರು ಗೆಳತಿ

ಪ್ರೀತಿಸು ಗೆಳತಿ
ಎದೆಯಾಳದಲ್ಲಿಟ್ಟು
ಪ್ರೀತಿಸು. ಆದರೆ,
ಆಳದಲ್ಲಿರುವ ಅಂತರಂಗವನ್ನು
ಬಿಟ್ಟುಕೊಡಬೇಡ.
ಬೇಕಿದ್ದರೆ ಮನಸ್ಸನ್ನ
ಬಿಚ್ಚಿಕೊ.
ಕನಸನ್ನ ಮಾತ್ರ
ಹಂಚಿಕೊಳ್ಳಬೇಡ!

ಹುಡುಕಾಟ

ಹತ್ತಾರು ನೂರಾರು
ಮುಖವಾಡಗಳ
ನಡುವೆ ನಿನ್ನ
ಹುಡುಕುತ್ತ ಹುಡುಕುತ್ತ
ನಾನಿಂದು
ಕಳೆದುಹೋಗುತ್ತಿದ್ದೇನೆ.

● ಕಮಲಾಮೂರ್ತಿ, ತುಮಕೂರು

ನಗೆ ಸೀರಿಯಲ್

ಕಂಡಕ್ಟರ್ ಕರಿಯಪ್ಪ ಜೂನಿಯರ್

9. ವಾಲೆ ಪತ್ತೇದಾರಿ ಫಲ

● ಎಂ. ಎಸ್. ನರಸಿಂಹಮೂರ್ತಿ

ಫೋಟೋ: ಕೆ. ಎನ್. ನಾಗೇಶ್‌ಕುಮಾರ್

ನಿಂಗಮಾರಹಳ್ಳಿ ಜನ ಬಹಳ ಜೋರು. ಮಾತಾಡುವ ಧಾಟಿಯಿಂದಲೇ ಅವರು ಬಲು ಘಾಟಿ ಎಂಬುದು ತಿಳಿಯುತ್ತದೆ. ಅಂಜುವುದಿಲ್ಲ, ಅಳುಕುವುದಿಲ್ಲ. ನಿಂಗಮಾರಹಳ್ಳಿಯಿಂದ ಬಂದು ಇಳಿದಿದ್ದ ನಿಂಗಿಯ ಸ್ವಭಾವವೂ ಡಿಟೋ. ಬಂದು ನಾಲ್ಕೈದು ದಿನಗಳಾಗಿವೆ. ತನ್ನ ಅಪ್ಪನ ಜೊತೆ ನಗುತ್ತಾ ಮಾತಾಡುವ ಇವಳು ತನ್ನನ್ನು ಕಂಡರೆ ಸಿಡಿದೇಳುತ್ತಾಳೆ. ಜೂನಿಯರ್ ಕರಿಯಪ್ಪನ ತಲೆ ಕೆಟ್ಟು ಗೇರ್ ಬಾಕ್ಸ್ ಆಯಿತು. ಯಾವ ಗೇರು ಹಾಕಿದರೂ ಯೋಚನಾಲಹರಿ ಸೀದಾ ರಸ್ತೆಯ ಮೇಲೆ ಹೋಗುತ್ತಿಲ್ಲ.

ಒಂದು ಬೆಳಿಗ್ಗೆ ಕರಿಯಪ್ಪ ಕಣ್ಣು ಬಿಡುವ ಮೊದಲು ಬಾಯಿಬಿಟ್ಟ. ಆಕಳಿಸಿದ. ಎದ್ದ. ಹಾಡೊಂದು ಕೇಳಿ ಬರುತ್ತಿದೆ. ಕಿಟಕಿಯಾಚೆ ನೋಡಿದ. ನಿಂಗಿ ತುಳಸಿಗೆ ಪೂಜೆ ಮಾಡುತ್ತಿದ್ದಾಳೆ. ಕಟ್ಟೆಗೆ ಸುತ್ತು ಹೊಡೆದು ಅಡ್ಡ ಬೀಳುತ್ತಾಳೆ.

ಇವಳೇನು ಕೇಳಿಕೊಳ್ಳುತ್ತಿರಬಹುದು ಎಂದು ಯೋಚಿಸಿದ. ತಿಳಿಯಲಿಲ್ಲ. ತುಳಸಿ ಮಾತೆಗೆ ಅರ್ಜಿಯಂತೂ ಹಾಕಿದ್ದಾಳೆ.

ಪೂಜಾ ದ್ರವ್ಯಗಳ ತಟ್ಟೆಯೊಡನೆ ನಿಂಗಿ ಒಳ ಬಂದಾಗ ಕರಿಯಪ್ಪ ಕೇಳಿದ.

'ಏನು ಇವತ್ತು ಇಷ್ಟು ಭಕ್ತಿ ?'

'ಸ್ರಾವಣ ಸುಕ್ರವಾರ. ಅದೂ ತಿಳೀದಾ ? ನಿನ್ ಬುದ್ದೀಗೆ ಸಾಮ್ರಾಣಿ ಆಕಬೇಕು' ಎಂದು ಮೂತಿ ಸೈಡಿಗೆ ತಿರುಗಿಸಿದಳು.

'ಪ್ರಸಾದ ಕೊಡಲ್ಲ ?' ಕರಿಯಪ್ಪ ರೇಗಿಸಿದ.

'ಮೊದಲು ಮುಸುಡಿ ತೊಳ್ಕೊಂಬಾ' ಥಟ್ಟನೆ ಬಂದಿತ್ತು ಉತ್ತರ.

ಕರಿಯಪ್ಪ ಸ್ನಾನ ಮುಗಿಸಿ ಬರುವ ವೇಳೆಗೆ ನಿಂಗಿ ತಿಂಡಿ ತಯಾರಿಸಿದ್ದಳು. ಕರಿಯಪ್ಪನ ಕೊಳೆ ಯೂನಿಫಾರಂಗೆ ನೀರು ತೋರಿಸೋಣವೆಂದು ಕೈಗೆತ್ತಿಕೊಂಡಳು. ಜೇಬುಗಳ ಜಪ್ತಿ ಮಾಡಿದಳು. ಒಂದು ಬಾಚಣಿಗೆ, ಒಂದಷ್ಟು ಚಿಲ್ಲರೆ, ಎರಡು ಹಳೇ ಟಿಕೇಟು, ಒಂದು ಅಡಿಕೆ ಪೊಟ್ಟಣ. ಮತ್ತೊಂದು ಜೇಬಲ್ಲಿ ಒಂದು ಪುಟ್ಟ ಬಾಕ್ಸು. ಒಡವೆಗಳ ಪೆಟ್ಟಿಗೆಯದು. ತೆಗೆದಳು. ಒಂದು ಜೊತೆ ವಾಲೆ ! ನಿಗಿನಿಗಿ ಮಿಂಚುತ್ತಿದೆ. ನಿಂಗಿಗೆ ಪುಲಕವಾಯಿತು. ಈ ಒಡವೆ ಯಾರಿಗಾಗಿ ತಂದಿರಬಹುದು ? ತನಗಾಗಿ ? ಛೇ ! ಇರಲಾರದು. ಆಗಲಿ ನೋಡೋಣ ಎಂದು ಜಪ್ತಿ ಮಾಡಿದ ಎಲ್ಲ ವಸ್ತುಗಳ ಜೊತೆ ವಾಲೆ ಬಾಕ್ಸನ್ನೂ ಟೇಬಲ್ಲಿನ ಮೇಲೆ ಇಟ್ಟಳು. ತನ್ನ ಪಾಡಿಗೆ ತಾನು ಒಳ ಹೋದಳು.

ಕರಿಯಪ್ಪ ಬಂದು ಇಸ್ತ್ರಿ ಮಾಡಿದ್ದ ಯೂನಿಫಾರಂ ಧರಿಸಿದ. ಇನ್ನೊಂದು ತಿಂಗಳು ಪರವಾಗಿಲ್ಲ ಎಂದುಕೊಂಡ. ಟೇಬಲ್ಲಿನ ಮೇಲಿದ್ದ ವಸ್ತುಗಳನ್ನು ಜೇಬಿಗೆ ಸೇರಿಸಿಕೊಂಡ. ಟಿಫನ್ ಮುಗಿಸಿ ಹೊರಟ.

ವಾಲೆ ಇನ್ನಾರಿಗೋ ಮಾಡಿಸಿದ್ದಾನೆ ಎಂಬುದು ನಿಂಗಿಗೆ ಅರ್ಥವಾಗಿ ಹೋಯಿತು. ಯಾರಿರಬಹುದು ಆ ನನ್ನ ಸವತಿ ! ಎಂದು ಹಲ್ಲು ಕಡಿದಳು. ಪತ್ತೇದಾರಿಕೆ ಪ್ರಾರಂಭಿಸಿದಳು.

ಆ ಸಂಜೆ ತರಕಾರಿ ಕೊಳ್ಳಲು ನಿಂಗಿ ಮಾರು ಕಟ್ಟೆಗೆ ಹೋಗಿದ್ದಾಗ ಅಲ್ಲೊಂದು ದೃಶ್ಯ ಕಂಡು ಸುಸ್ತಾದಳು. ಅದು ಬೇರೆ ಏನೂ ಅಲ್ಲ. ಕರಿಯಪ್ಪ ಡ್ಯೂಟಿ ಮುಗಿಸಿ ಬರುತ್ತಿದ್ದಾನೆ. ಅವನ ಜೊತೆ ಒಂದು ಹುಡುಗಿ ಇದೆ. ಇಪ್ಪತ್ತರ ಚೆಲುವೆ. ಅವರಿಬ್ಬರೂ ಕುಲುಕುಲು ನಗುತ್ತಾ ನಡೆದು ಬರುತ್ತಿದ್ದಾರೆ. ನಿಂಗಿಗೆ ಒಂದು ಕಡೆ

ಅಳು, ಮತ್ತೊಂದು ಕಡೆ ಕೋಪ. ಅವರನ್ನೇ ಹಿಂಬಾಲಿಸಿದಳು. ಮಾತುಗಳು ಸುಮಾರಾಗಿ ಕೇಳುತ್ತಿದ್ದವು. ಎಲ್ಲ ಅಸಂಬದ್ಧ ಪ್ರಲಾಪಗಳೇ.

'ಮೇಡಂ, ಟಿ.ವಿ. ರಾಮಾಯಣದಲ್ಲಿ ವಾಲಿಯ ಹೆಂಡತಿಗೆ ಬಾಲ ಯಾಕೆ ಇರಲಿಲ್ಲ?' ಕರಿಯಪ್ಪ ಪ್ರಶ್ನಿಸಿದ.

'ಬಾಲ ಇದ್ದಿರಬಹುದು. ಸೀರೆ ಒಳಗೆ ಬಾಲ ಇದ್ದರೆ ಅದು ವಾಲಿಗೆ ಮಾತ್ರ ತಿಳಿಯುತ್ತೆ.'

'ಮೇಕಪ್‌ಮ್ಯಾನ್‌ಗೂ ತಿಳೀದು ಅಂತೀರಾ?'

'ಗೊತ್ತಿಲ್ಲ' ಎಂದು ಲೈಲಾ ಮೇಡಂ ನಕ್ಕಳು. ಮುಂದೇನು ಮಾತಾಡಬೇಕೋ ಕರಿಯಪ್ಪನಿಗೆ ಹೊಳೆಯಲಿಲ್ಲ.

'ಬಂಗಾರ ನಿಮಗೆ ಇಷ್ಟಾನಾ?'

'ಇಲ್ಲಾ' ಎಂದಳಾಕೆ.

'ನಿಮಗೆ ಏನೋ ಕೊಡಬೇಕು ಅಂತಿದ್ದೆ'

'ಅದನ್ನು ನಿಮ್ಮ ಅತ್ತೆ ಮಗಳಿಗೇ ಕೊಡಿ. ಅವಳ್ಯಾರೋ ಇದ್ದಾಳಲ್ಲ, ನಿಂಗೀನೋ, ಭಂಗೀನೋ'

ನಿಂಗಿಗೆ ಮೈ ಉರಿಯಿತು. ಭಂಗಿ ಕುಡಿದ ಆವೇಶ ಬಂದಿತು. ಆದರೂ ಸಾವರಿಸಿಕೊಂಡು ಸುಮ್ಮನಾದಳು.

'ನಮ್ಮಪ್ಪನಿಗೆ ಅವಳ್ನ ಕಂಡರೆ ಇಷ್ಟ. ಆದ್ರೆ ನನಗೆ...' ಎಂದು ಕರಿಯಪ್ಪ ಮಾತು ನಿಲ್ಲಿಸಿ

ನಿಂಗಮಾರ ಹಳ್ಳಿ ನಿಂಗಿ ಜೂನಿಯರ್‌ನ ಪ್ಯಾಂಟ್ ಜೇಬಿನಲ್ಲಿ ಜೋಡಿ ವಾಲೆ ಕಂಡಾಗ ಪತ್ತೇದಾರಿ ಕೆಲಸ ಪ್ರಾರಂಭಿಸಲೇ ಬೇಕಾಯಿತು.

ಮೇಡಂ ಮುಖ ನೋಡಿದ.

'ನಿಮಗೆ?'

'ನೀವು ಅಂದ್ರೆ ಇಷ್ಟ'

ಮೇಡಂ ನಾಚಿದಳು.

'ಯೂ ಸಿಲ್ಲೀ ಗೈ, ಬೆಂಚ್ ಮೇಲೆ ನಿಲ್ಲಿಸ್ತೀನಿ ಅಷ್ಟೆ' ಎಂದಳು.

'ಈಗ್ಲೇ ಬರ್ಲಾ?' ಕರಿಯಪ್ಪ ಸಿದ್ಧನಾದ.

'ಮನೆಗೆ ಬಂದ್ರೆ ನಮ್ಮ ತಾಯಿಗೆ ಅನುಮಾನ ಬರುತ್ತೆ.'

'ಬೆಂಚ್ ಮೇಲೆ ನಿಲ್ಲಿಸೋಕೆ ಕರ್ಕೊಂಡ್ ಬಂದೆ ಅಂದ್ರಾಯ್ತು.'

"ಯಾಕೆ ಅವರ ಮನೇಲಿ ಬೆಂಚು ಇಲ್ವ?' ಅಂತ ಕೇಳಿದರೆ?'

ಮೇಡಂ ತರಕಾರಿ ಕೊಂಡಳು. ಕರಿಯಪ್ಪನೇ ಹಣ ನೀಡಿದ. ಅನಂತರ ಅವರಿಬ್ಬರೂ ಆಟೋ



ಹತ್ತಿ ಎಲ್ಲಿಗೋ ಹೋದರು.

ನಿಂಗಿಗೆ ಏನು ಮಾಡಬೇಕೋ ತೋಚಲಿಲ್ಲ. ಹೊಸ ಊರಿನಲ್ಲಿ ಎಲ್ಲಿಗೆಂದು ಹೋಗುವುದು? ನೇರವಾಗಿ ಮನೆಗೆ ಬಂದಳು. ಸೀನಿಯರ್ ಕರಿಯಪ್ಪ ಆರಾಮವಾಗಿ ಬಾಗಿಲಲ್ಲಿ ಕುಳಿತಿದ್ದ.

'ಯಾಕೆ ನಿಂಗಿ ಲೇಟು? ಮಾರ್ಕೆಟ್‌ನಾಗೇ ತಪ್ಪಿಸಿಕೊಂಡ್ ಬುಟ್ಯೇನೋ ಅಂತ ಭಯ ಆಯ್ತು ನನಗೆ.'

'ಇಲ್ಲ ಮಾವ. ನಿಧಾನವಾಗಿ ನಡ್ಕೊಂಡೇ ಬಂದೆ.'

'ಯಾಕೆ, ನಮ್ದೇ ಬಸ್ ಇತ್ತಲ್ಲ?'

'ಯಾವ ನಂಬರು ಎಲ್ಲಿಗೆ ಓಗ್ತದೋ ತಿಳೀದು. ನೇರ ಒಂದೇ ರಸ್ತೆ ಅಲ್ವ, ನಡೆಯೋದೇ ನನ್ಗೆ ಆರಾಮ' ಎಂದಳು.

ಮಾವನ ಮಗನ ಪ್ರತಾಪಗಳು ಹೇಳಲೋ ಬೇಡವೋ ಎಂದು ಯೋಚಿಸಿದಳು. ಕರಿಯಪ್ಪನ ಜೇಬಲಿದ್ದ ವಾಳೆ ನೆನಪಾಯಿತು.

'ಮಾವ, ನಿನ್ ಮಗಾ ಯಾಕೆ ನನ್ನ ಮಾತಾಡ್ಸೋಕೇ ಇಲ್ಲ?'

'ಅವನಿಗೆ ನಾಚ್ಕೆ ಇರಬೇಕು. ಎಣ್ಣು ಎಂಗಸ್ರು ಅಂತ ಗೊತ್ತಾದ್ರೆ ಮಾತಾಡೋದು ಕಮ್ಮೀನೇ'

'ನಂಗ್ಯಾಕೋ ನಂಬ್ಕೆ ಇಲ್ಲ. ಯಾವೋಳಿಗೋ ಗಂಟು ಬಿದ್ದವ್ನೆ ಅಂತ ಅನ್ನಿಸುತ್ತದೆ.'

'ನನ್ನ ಮಗ ಅಂಥ ಹಲ್ಕ ಕೆಲಸ ಮಾಡೊಲ್ಲ ನಿಂಗಿ'

'ಮತ್ತೆ ಅವನ ಜೇಬ್‌ನಾಗ ಒಂದು ಜೊತೆ ವಾಲೆ ಐತೆ?'

'ಯಾವ ಜೇಬ್‌ನಾಗ?'

'ಪ್ಯಾಂಟ್ ಜೇಬ್‌ನಾಗ'

'ನೀನು ಅಲ್ಲಿಗೆ ಯಾಕೆ ಕೈ ಆಕ್ದೆ?'

'ಪ್ಯಾಂಟು ಗೂಟಕ್ಕೆ ಸಿಕ್ಕಿಸಿದ್ದ. ನಿಮ್ ಬಸ್ ಥರಾ ಬೋ ಕೊಳಕಾಗಿತ್ತು. ಒಗೆದಾದ್ರೂ ಮಡಗೋಣ ಅಂತ ಜೇಬುಗಳು ನೋಡ್ದೆ.'

'ಬಂಗಾರದ ವಾಲೇನಾ?'

'ಹೌದು ಮಾವ. ಸಿಲ್ಕ್ ಬಟ್ಟೆ ಇರೋ ಡಬ್ಬೀನಾಗ ಮಡಕ್ಕೊಂಡವ್ನೆ.'

ತಂದೆಗೂ ಸಮಸ್ಯೆಯಾಯಿತು. ಅಷ್ಟು ಹಣ ಅವನಿಗೆ ಎಲ್ಲಿಂದ ಬಂತು? ಯಾರಿಗಾಗಿ ಮಾಡಿಸಿರಬಹುದು? ತನ್ನ ಬಳಿ ಯಾಕೆ ಹೇಳಲಿಲ್ಲ? ಎಂದೆಲ್ಲ ಯೋಚಿಸಿದ.

ಜೂನಿಯರ್ ಕರಿಯಪ್ಪ ಮನೆಗೆ ಬರುವ ವೇಳೆಗೆ ರಾತ್ರಿ ಎಂಟಾಗಿತ್ತು. ನಿಂಗಿ ಬಾಗಿಲ ಹಿಂದೆ ನಿಂತಿದ್ದಳು. ಸೀನಿಯರ್ ಸಿಟ್ಟಿನಿಂದ ಕುಳಿತಿದ್ದ. ಮಗನ ಮುಖ ಕಂಡ ಕೂಡಲೇ ಆರ್ಭಟಿಸಿದ.

'ಟ್ರಿಪ್ ಷೀಟ್‌ನಾಗ ಕ್ಲೋಸಿಂಗ್ ಟೈಂ ಎಷ್ಟು ಆಕಿದ್ದೆ?'

'ನಾಲ್ಕು ಗಂಟೆ ಅಪ್ಪ.'

'ಮತ್ತೆ ಯಾಕೆ ಇಷ್ಟು ಲೇಟು? ಇದೇನು ಮನೇನೋ-ಡಿಪೋನೋ?'

'ಯಾರೋ ಸಿಕ್ಕಿದ್ರು, ಲೇಟಾಯ್ತು.'

'ಸಿಕ್ಕಿದ್ದೋರು ಗಂಡ್ಸೋ ಎಂಗ್ಸೋ– ಕೇಳಿ ಮಾವ' ಎಂದು ಕುಮ್ಮಕ್ಕು ನೀಡಿದಳು ನಿಂಗಿ.

'ನಾಳೆ ನೋಡಿಕೊಂಡು ಬಂದು ಹೇಳ್ತೀನಿ' ಎಂದ ಕರಿಯಪ್ಪ. ನಿಂಗಿ ಬೆಪ್ಪಾದಳು.

'ಏನ್ಲಾ ಅದು ಜೇಬ್‌ನಾಗ?'

ಬೆಳಿಗ್ಗೆ ನಿಂಗಿ ಜೇಬುಗಳು ಝಡತಿ ಮಾಡಿದಾಗಲೇ ಕರಿಯಪ್ಪನಿಗೆ ಅಂದಾಜಿತ್ತು. ಅದೇ ರೀತಿ ಪರಿಸ್ಥಿತಿ ಬಂದಿದೆ.

'ಜೇಬ್‌ನಾಗಿರೋದೆಲ್ಲಾ ತೆಗಿ'

'ನಾ ಬಂದು ತೆಗೀಲಾ?' ಎಂದಳು ನಿಂಗಿ.

'ನಿನಗ್ಯಾಕೆ ಆ ಕಷ್ಟ?' ಎಂದು ಕರಿಯಪ್ಪ ಜೇಬಿನಿಂದ ಕರವಸ್ತ್ರ ತೆಗೆದ. ಜೊತೆಗೆ ವಾಲೆಗಳ ಡಬ್ಬಿ.

'ಅಗೋ ಮಾವ, ಅದೇ ನಾನು ಯೋಳಿದ್ದು' ಎಂದಳು ನಿಂಗಿ ಗೆದ್ದವಳಂತೆ.

'ಏನದು ವಡವೆ?'

'ಒಂದು ಜೊತೆ ವಾಲೆ. ನಿಂಗೀಗೆಂತ ತಂದಿದ್ದು.'

ನಿಂಗಿ ಅರಳಿ ಹೋದಳು. ಕೆನ್ನೆಗಳಿಗೆ ರಕ್ತ ಪಂಪಾಗಿ ಮುಖ ಕೆಂಪಾಯಿತು. ಅನ್ಯಾಯವಾಗಿ ಇವನ ಮೇಲೆ ಚಾಡಿ ಹೇಳಿ ಪತ್ತೇದಾರಿ ಕೆಲಸ ಮಾಡಿದೆನಲ್ಲ ಎಂದು ಪರಿತಪಿಸಿದಳು.

ಅಪ್ಪನಿಗೆ ವಾಲೆ ತೋರಿಸಿದ. ಅನಂತರ ನಿಂಗಿಗೆ ನೀಡಿದ.

'ತಗೋ, ಜೋಪಾನ. ಕಿವಿ ನಿನ್ನದು, ವಾಲೆ ನನ್ನದು'

'ಗಗನವು ಎಲ್ಲೋ ಭೂಮಿಯು ಎಲ್ಲೋ' ಹಾಡು ಹೇಳುತ್ತಾ ಅವಳು ವಾಲೆ ಡಬ್ಬಿ ಹಿಡಿದು ಹೊರಗೆ ಓಡಿದಳು. ಪಕ್ಕದ ಮನೆಯ

ಪಾಪಾಚಾರಿ ಮಗಳಿಗೆ ಅದನ್ನು ಕೂಡಲೇ ತೋರಿಸಬೇಕೆಂಬ ಆತುರ.

ತಂದೆ ಮಗನಿಗೆ ಬುದ್ಧಿವಾದ ಹೇಳಿದ.

'ದುಂದು ಖರ್ಚು ಮಾಡಬಾರ್ದು. ಇನ್ನಾ ಮುಂದೆ ಮದುವೆ ಖರ್ಚು, ಸೋಬಾನಾ ಖರ್ಚು, ಹೆರಿಗೆ ಖರ್ಚು, ರೂಟ್ ನಂಬರ್ ಖರ್ಚು ಎಲ್ಲಾ ಇರ್ತದೆ.'

ಹತ್ತು ನಿಮಿಷಗಳ ಕಾಲ ಅಪ್ಪ ಕೊರೆದ.

ಡಿಪ್ಪು – ಡಿಮ್ಮು

ಮಹಾಂತೇಶ, ಬೆಂಕಿಕೆರೆ

? *ಸರಕಾರಿ ಬಸ್ಸಿಗೂ ಕಟ್ಟಿಕೊಂಡ ಹೆಂಡತಿಗೂ ಇರುವ ವ್ಯತ್ಯಾಸವೇನು?*

* ಸರಕಾರಿ ಬಸ್ಸಿಗೆ ದಿನಕ್ಕೊಬ್ಬ ಡ್ರೈವರ್.

ಬಿ. ಎಂ. ಎಂ., ಹೊದಿಗ್ಗೆರೆ

? *ಇಲ್ಲೊಬ್ಬ ಸ್ನೇಹಿತ ಒಬ್ಬಳಿಗೆ 'ಅವಳು ಸಿಟಿ ಬಸ್ ಇದ್ದ ಹಾಗೆ' ಎನ್ನುತ್ತಾನಲ್ಲ, ಏಕೆ?*

* ಬಂದರೆ ಬಂದಳು, ಇಲ್ಲವಾದರೆ ಇಲ್ಲ. ಸಿಟ್ಟಾದರೆ ದಿಢೀರ್ ಸಂಪು.

ಪ್ರಕಾಶ್ ಡಿ'ಸೋಜ ಬ್ರಹ್ಮಾವರ್, ಹಿರಿಯಡ್ಕ

? *ಬಸ್ಸಿನಲ್ಲಿ ಕೆಲವೊಮ್ಮೆ ಡ್ರೈವರ್ ಕನ್ನಡಿ ಸರಿಪಡಿಸಿಕೊಳ್ಳುತ್ತಿರುತ್ತಾನೇಕೆ?*

* ಸೈಡು ಹೊಡೆಯುವ ಮೊದಲು ಸೈಡ್ ಮಿರರ್ ನೋಡಬೇಕು.

ಪಿ. ರಾಮಪ್ರಸಾದ್, ಕೊಣನೂರು


? *ಕೆಲವು ಬಸ್ಸುಗಳಲ್ಲಿ ಪ್ರಥಮ ಚಿಕಿತ್ಸೆಯ ಪೆಟ್ಟಿಗೆಗಳೇ ಇರುವುದಿಲ್ಲವಲ್ಲ?*

* ಅಪಘಾತಗೊಂಡವರಿಗೆ ಅಂತಿಮ ಚಿಕಿತ್ಸೆಯೇ ಬೇಕಾಗಿರುವುದರಿಂದ.

ನುಲ್ಲಿಪ್ಪಾಡಿ ರಾಘವೇಂದ್ರ, ಕಾಸರಗೋಡು

? *ಮುಂದಿನ ಡೋರಿನ ಮೂಲಕವೇ ಹುಡುಗಿಯರು ಬಸ್ಸು ಹತ್ತುವುದೇಕೆ?*

* ಹಿಂಭಾರವಾಗದಿರಲಿ ಎಂದು!



ಎ. ಎನ್. ಸುರೇಶ್, ಮೊಳಕಾಲ್ಮುರು

? *ಕೆಂಪು ಬಸ್ಸಿನಲ್ಲಿ ಪ್ರಯಾಣಿಕರ ಜೊತೆಯೇ ಕೋಳಿಗಳನ್ನೂ ತುಂಬುತ್ತಾರಲ್ಲ?*

* ಕುರಿಗಳ ಜೊತೆ ಕೋಳಿಗಳು!

ರೇಣುಕಾ, ಬೆಳ್ಳಿ

? *ಕಂಡಕ್ಟರುಗಳು ಟಿಕೆಟ್ ಕೊಡುವಾಗ ಅದಕ್ಕೆ ಎಂಜಲು ಹಚ್ಚಿ ಕೊಡುವುದನ್ನು ಯಾರಿಂದ ಕಲಿತರು?*

* ಶಬರಿಯಿಂದ!

ವಸಂತ ಹೆಬ್ಬಾರ್, ಅಂಡಿಂಜೆ

? *ಕೆಂಪು ಬಸ್ಸಿನಲ್ಲಿ ಟಿಕೇಟು ಕೇಳಿ ಪಡೆಯಿರಿ ಎಂಬ ಬೋರ್ಡು ಇರುತ್ತದಲ್ಲ, ಯಾಕೆ?*

* ಕೇಳದಿದ್ದರೆ ಕೆಲವರು ಟಿಕೆಟ್ ನೀಡುವುದಿಲ್ಲ ಎಂಬುದು ಇಲಾಖೆಗೂ ಗೊತ್ತು.

ಪಿ. ಆರ್. ಡಿ'ಸೋಜ, ಮಾಸ್ತಿಕಟ್ಟೆ

? *ಕೆಲವು ಬಸ್ಸುಗಳು ಸ್ಟಾಪಿನಲ್ಲಿ ನಿಲ್ಲದೆ ಮುಂದೆ ಅಥವಾ ಹಿಂದೆ ನಿಲ್ಲುವುದು ಯಾಕೆ?*

* ಪ್ರಯಾಣಿಕರಿಗೆ ಓಟದ ಸ್ಪರ್ಧೆಯಿಟ್ಟು ಗೆದ್ದವರಿಗೆ ಮಾತ್ರ ಸೀಟು ಕೊಡಲು.

ನಾಗೇಶ್ ಸೂರಗೊಂಡ, ಬೆಂಗಳೂರು–40

? *'ಮಹಿಳೆಯರು' ಎಂದು ಬರೆದು ಅದರಡಿ ಕೆಲವು ಸೀಟುಗಳು ಕಾದಿರಿಸುತ್ತಾರೆ, ಆದರೆ 'ಪುರುಷರಿಗೆ ಮಾತ್ರ' ಎಂದು ಬಸ್ಸುಗಳಲ್ಲಿ ಬರೆಯುವ ದಿನ ಮುಂದೆ ಬರಬಹುದೆ?*

* 'ಮಹಿಳೆಯರು' ಅಕ್ಷರಗಳ ಅಡಿ ಈಗಲೂ ಬರೆಯಬಹುದಲ್ಲ!

ಉಮಾಶಂಕರ ಕುಲಕರ್ಣಿ, ಹೊರ್ತಿ

? *ಬಸ್ಸಿನ ಕಂಡಕ್ಟರಿಗೂ ಹಣಕಾಸು ಮಂತ್ರಿಗೂ ಇರುವ ವ್ಯತ್ಯಾಸ?*

ಕಡೆಗೆ ಹೇಳಿದ.

'ಈ ವಾಲೆ ಕೊಳ್ಳೋಕೆ ದುಡ್ಡು ಎಲ್ಲಿ ಮಡಗಿದ್ದೆ? ಬೊಗಳು' ಎಂದು ತಾನೇ ಬೊಗಳಿದ.

ಅಷ್ಟರಲ್ಲಿ ವಾಲೆಗಳ ಡಬ್ಬಿ ಪಟಾರನೆ ಬಂದು ಕರಿಯಪ್ಪನ ಕಾಲಿನ ಮೇಲೆ ಬಿತ್ತು, ಡಬ್ಬಿಯಲ್ಲಿದ್ದ ವಾಲೆಗಳು ಈಚೆ ಬಂದು ಒಂದೊಂದು ಒಂದು ಮೂಲೆ ಸೇರಿದ್ದವು.


---

* ಕಂಡಕ್ಟರ್ ಎಂದಾದರೂ ಐವತ್ತು ಪೈಸೆ ಉಳಿಸಿಕೊಂಡರೆ ಅದು ಜುಜುಬಿ. ಪೈಸೆಗಳನ್ನು ಲಕ್ಷಗಳೊಂದಿಗೆ ಹೋಲಿಸಬಾರದು.

ಬಿ. ಎಸ್. ಕೂಡ್ಲೂರ್, ಚಿಕ್ಕಸೂಗೂರು

? *ಬಸ್ಸುಗಳಿಗೆ ಹುಡುಗರು ಕೈತೋರಿದರ ಮಾರ್ಗಮಧ್ಯೆ ನಿಲ್ಲುವುದಿಲ್ಲ. ಅದೇ ಹುಡುಗಿಯರು ಕೈ ತೋರಿದರೆ ಬಸ್ಸುಗಳು ನಿಲ್ಲುತ್ತವೆ. ಯಾಕೆ?*

* ಬಣ್ಣದ ಕೈ ಮೋಡಿಗೆ ಎಂಥ ಗಾಡಿಯೂ ನಿಲ್ಲುತ್ತದೆ.



ವೈ. ಮನ್ಸೂರ್, ತರೀಕೆರೆ

? *ಸರಕಾರಿ ಬಸ್ಸಿಗೆ ಎರಡು ತಲೆಯ ಗಂಡಭೇರುಂಡ ಚಿಹ್ನೆ ಯಾಕೆ?*

* ಒಂದು ತಲೆ ಪ್ರಯಾಣಿಕರದು, ಮತ್ತೊಂದು ಸಂಸ್ಥೆಯದು. ಒಂದನ್ನೊಂದು ನೋಡುವುದಿಲ್ಲ. ಆದರೆ ಯಾವ ತಲೆ ಕೆಟ್ಟರೂ 'ವ್ಯವಸ್ಥೆ' ಎಂಬ ಹೊಟ್ಟೆ ಕೆಡುತ್ತದೆ.

ಎಲ್. ವಿ. ಕುಮಾರಸ್ವಾಮಿ, ಜಗಳೂರು

? *ಬಸ್‌ಗಳಲ್ಲಿ 'ಅವಸರವೇ ಅಪಘಾತಕ್ಕೆ ಕಾರಣ' ಎಂದು ಬರೆದಿರುತ್ತಾರೆ. ಅದು ಯಾವುದರ ಪ್ರಚಾರ?*

* ಕುಟುಂಬ ಯೋಜನೆಯ ಪ್ರಚಾರ!

ಗುರುರಾಜ, ತೊದಲಬಾಗಿ

? *ಕೆಂಪು (ಬಸ್ಸು) ಎಂದರೆ ಡೇಂಜರ್. ಆದರೆ ಬಸ್ಸಿನ ಒಳಗೆ ಹೋದಾಗ ಷಾಕ್ ಹೊಡೆಯುವುದಿಲ್ಲವಲ್ಲ?*

* ಟಿಕೆಟ್ ದರ ಕೇಳಿದಾಗ ಕೆಲವರಿಗೆ ಷಾಕ್ ಹೊಡೆದಂತಾಗುತ್ತದೆ.

ಆನಂದ ಚಂ. ಹುಲಗಬಾಳಿ, ರಬಕವಿ

? *ಯಾವಾಗಲೂ ಬಸ್ಸಿನ ಕಂಡಕ್ಟರ್ ಎತ್ತರವಾದ ಸೀಟಿನ ಮೇಲೆ ಯಾಕೆ ಕೂರುತ್ತಾರೆ?*

* ಕುಳಿತಲ್ಲಿಂದಲೇ ತಲೆಗಳನ್ನು ಎಣಿಸಿ 'ಎಂಟ್ರಿ' ಹಾಕಲು ಇರಬಹುದೆ?

ಬಿ. ಎಂ. ಕಂಬಾರ, ಕಿತ್ತಲಿ

? *ಟಿಕೆಟ್‌ಗಳು ನೀಡಿದ ಮೇಲೆ ಎಂಟ್ರಿ ಹಾಕಲು ತಲೆಗಳನ್ನು ಎಣಿಸುವ ಹಳೆಯ ವಿಧಾನವೇ ಇದೆಯಲ್ಲ?*

* ಹಾಗೇನಿಲ್ಲ. ಕಾಲುಗಳನ್ನೆಲ್ಲ ಎಣಿಸಿ ಟೋಟಲನ್ನು ಎರಡರಿಂದ ಭಾಗಿಸಿಯೂ ಎಂಟ್ರಿ ಹಾಕಬಹುದು.

ಕೆ. ಎಲ್. ಸುರೇಶ್, ಇಂಫಾಲ್, ಮಣಿಪುರ

? *ಬಸ್ ಕಂಡಕ್ಟರ್ ಆಗಲು ಸಿಳ್ಳು ಹೊಡೆಯುವುದು ಅಭ್ಯಾಸ ಮಾಡಬೇಕೆಂದಿರುವೆ. ಆದಕ್ಕೆ ಸೂಕ್ತ ಜಾಗ ಯಾವುದು?*

* ಮಹಿಳಾ ಕಾಲೇಜು, ಹಾಸ್ಟೆಲ್‌ಗಳಿರುವ ರಸ್ತೆ.



ನಿಂಗಿ ಅಳುತ್ತಾ ಧುಸುಧುಮುಗೊಡುತ್ತಾ ಒಳ ಬಂದಳು.

'ಯಾಕಮ್ಮಾ ನಿಂಗಿ, ಏನಾಯ್ತು ?' ಮಾವ ಕೇಳಿದ.

'ಕಮಲಿ ಅವರಪ್ಪ ಪಾಪಾಚಾರಿ ವಾಲೆ ನೋಡ್ದ. ಎಷ್ಟು ತೊಲ ಅಂತ ಕೇಳ್ದೆ. ಉಜ್ಜಿ ಬಿಟ್ಟು ಏನಂದ ಗೊತ್ತಾ ?'

'ಯಾರನ್ನ ಉಜ್ಜಿದ್ದು ?' ಮಾವನಿಗೆ ಗಾಬರಿ.

'ವಾಲೇನ. ಅವನು ಹೇಳ್ದ... ಇದು ತುಂಬಾ ದುಬಾರಿನಮ್ಮ. ಹುಶಾರು ಅಂತ.'

'ಮತ್ತೆ ಯಾಕೆ ಅಳ್ತಿ ?'

'ಎಷ್ಟು ಬೆಲೆ ಬಾಳಬಹುದು ಅಂದೆ. ಅದಕ್ಕೆ ಅವನು ಡಜನ್ 36 ರೂಪಾಯಿ ಆಗುತ್ತೆ, ಜೊತೆ 3 ರೂಪಾಯಿ ಅಂತ ಹೇಳಿ ನನ್ನ ಅಣಕಿಸ್ತಾ ನಕ್ಕ.' ಈ ನಿನ್ನ ಮಗ ಮೋಸ ಮಾಡವ್ನೆ' ಎಂದು ರೋಧಿಸಿದಳು.

ಸೀನಿಯರ್‌ಗೂ ಕರುಳು ಚುರ್ ಎಂದಿತು.

'ಯಾಕ್ಲಾ ಇಂಗೆ ಮಾಡ್ದೆ ?'

'ಅದು ಬಸ್‌ನಲ್ಲಿ ಸಿಕ್ಕಿದ್ದು, ಡಿಪೋಗೆ ಕೊಟ್ರೆ. ಅವರು ನೋಡಿ 'ರೋಲ್ಡ್ ಗೋಲ್ಡು' ಅಂದ್ರು. ಪಾಕುಂಪೊಪ್ಪು ಮಾರೋವನಿಗೆ ಕೊಟ್ರೆ ಒಂದು ಬಿಲ್ಲೆ ಕೊಡ್ತಾರೆ ಅಂದ್ರು. ಅಷ್ಟರಲ್ಲಿ ಇವಳೇ ನನ್ನ ಜೇಬುಗಳು ಹುಡುಕಿ ರಾದ್ಧಾಂತ ಮಾಡಿದಳು' ಎಂದ ಕರಿಯಪ್ಪ ನಿಂಗಿಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ.

ನಿಂಗಿಯನ್ನು ಹೇಗೆ ಸಮಾಧಾನ ಪಡಿಸ ಬೇಕೋ ಸೀನಿಯರ್‌ಗೂ ತಿಳಿಯಲಿಲ್ಲ. ಕಡೆಗೆ ಮಗನಿಗೆ ಹೇಳಿದ.

'ಒಗ್ಲಿ, ಈದಪ ಒಂದು ಜೊತೆ ವಾಲೆ ಮಾಡಿಸಿಕೊಂಡು ಬಾ. ದುಡ್ಡು ನಾನೇ ಕೊಡ್ತೀನಿ.'

ನಿಂಗಿಗೆ ಸಂತೋಷವಾಯಿತು. ಮಗನಿಗಿಂತ ಅಪ್ಪನೇ ವಾಸಿ ಎಂಬ ತೀರ್ಮಾನಕ್ಕೆ ಬಂದಳು. ●



ದಾರಿ ತಪ್ಪಿದ ಪತ್ತೇದಾರಿ

● ಅನಂತ ಕಲ್ಲೋಳ

ತಾಬೇದಾರಿಯಲ್ಲಿ ಬದುಕು ಸವೆಸುವುದಕ್ಕಿಂತ ಪತ್ತೇದಾರಿ ಕೆಲಸವೇ ಸೊಗಸಿನದಾಗಬಹುದು ಎಂದು ಎಣಿಸಿದ ಗುಂಡಣ್ಣ. ಮೊನ್ನೆ ಮೊನ್ನೆ ಸುದ್ದಿಪತ್ರಿಕೆಗಳಲ್ಲಿ ಫೋಟೋ ಸಹಿತ ಪ್ರಕಟವಾದ ಸುದ್ದಿಯಿಂದಾಗಿ ಆತನಲ್ಲಿ ಈ ಬಗೆಯ ಭಾವನೆ ಬೇರೂರಿತ್ತು. ಡೊಳ್ಳುಬಾರಿಸಿದ ಕೈ, ಬ್ಯಾಡಮಿಂಟನ್ ಆಡಿದ ಕೈ, ಕರ್ನಾಟಕವನ್ನು ಆಳುವ ಕೈ 'Hands up' ಕೂಗಿಗೆ ಶರಣಾಗಿತ್ತು. ಪತ್ತೇದಾರಿ ಸಾಹಿತ್ಯ ಸಮ್ಮೇಳನದಲ್ಲಿ ಪತ್ತೇದಾರಿಯು ಘನಂದಾರಿ ಉದ್ಯೋಗವೆಂಬುದನ್ನು ಮನಗಂಡ ಗುಂಡ, ಸ್ವಂತ ಪತ್ತೇದಾರಿ ಸಂಸ್ಥೆಯನ್ನು ಹುಟ್ಟು ಹಾಕಿದ.


ಪತ್ತೇದಾರಿ ಉದ್ಯೋಗವನ್ನು ಆರಂಭಿಸಿದೊಡನೇ ಆತ ದಾರಿ ತಪ್ಪಿ ನಡೆಯೋದನ್ನ ವಾಡಿಕೆ ಮಾಡಿಕೊಂಡ. ನಿತ್ಯದ ದಾರಿಯಲ್ಲಿ ನಡೆದರೆ ಪತ್ತೇದಾರಿಕೆಗೆ ಅನುವು ಕಡಿಮೆ ಎಂದು ಆತನ ಧೋರಣೆ. ನಿತ್ಯದ ದಾರಿ ತಪ್ಪಿಸಿ ಬೇರೆ ದಾರಿಯಲ್ಲಿ ಸುಳಿದಾಡೋದನ್ನ ಆರಂಭಿಸಿದ. ಹೀಗೊಂದು ಸಲ ಆತ ರಾಜಮಾರ್ಗ ಬಿಟ್ಟು ಅಡ್ಡದಾರಿ ಹಿಡಿದು ಅಡ್ಡಾಡಿಕೊಂಡು ಬರುವಾಗ ಆತನ ತಲೆ ಸವರಿಕೊಂಡು 'ಧಡ್' ಎಂದು ಒಂದು ಕಾಗದದ ಮುದುಡೆ ಬಿತ್ತು. ಆತ ಅದನ್ನು ಎತ್ತಿಕೊಂಡು ಬಿಡಿಸಿ ಓದಿದ.

"ಯಾಕೆ ?"

"ಯಾಕೆಂದರೆ ಆತ್ಮಹತ್ಯೆಗಿಂತ ಕೊಲೆ ಮಾಡುವುದೇ ಶ್ರೇಯಸ್ಕರ."

ಈ ಪ್ರಶ್ನೋತ್ತರವಿದ್ದ ಆ ಕಾಗದದ ಮುದುಡೆ ಎಲ್ಲಿಂದ ಬಿದ್ದಿರಬಹುದು ಎಂದು ಗುಂಡಣ್ಣ ಪಕ್ಕಕ್ಕೆ ಹೊರಳಿ ನೋಡಿದ. ಏಳು ಅಂತಸ್ತಿನ ಅಪಾರ್ಟ್‌ಮೆಂಟಿನಲ್ಲಿ ಯಾವ ಕಿಟಕಿಯಿಂದ ಈ ಕಾಗದದ ಮುದುಡೆ ಬಿದ್ದಿರಬಹುದು ಎಂಬುದನ್ನು ನಿರ್ಧರಿಸಲಾಗಲಿಲ್ಲ ಗುಂಡಣ್ಣನಿಗೆ. ಆತ ಆ ಕಾಗದದ ಮುದುಡೆಯನ್ನು ತನ್ನ ಕೈಯಲ್ಲಿದ್ದ ಬ್ರೀಫ್‌ಕೇಸಿನಲ್ಲಿ ಭದ್ರವಾಗಿಟ್ಟುಕೊಂಡು ಮುಂದಡಿ ಇಟ್ಟ. ಆ ಅಪಾರ್ಟ್‌ಮೆಂಟ್ಸಿನ ಪಕ್ಕದಲ್ಲಿಯೇ ಇದ್ದ ತನ್ನ ವಾಸದಕೋಣೆ-ಕಂ-ಪತ್ತೇದಾರಿ ಸಂಸ್ಥೆಯ ಕಾರ್ಯಾಲಯಕ್ಕೆ ಬಂದವನೇ ಬೈನಾಕ್ಯುಲರ್‌ನ ಸಹಾಯದಿಂದ ನಿರೀಕ್ಷಣೆ ನಡೆಸಿದ.

ಆ ಏಳಂತಸ್ತಿನ ಅಪಾರ್ಟ್‌ಮೆಂಟ್ಸದಲ್ಲಿ ಕೆಳಗಿನ ಒಂದು, ಎರಡು ಮತ್ತು ಮೇಲಿನ ಏಳನೇ ಮಜಲಿನ ಕಿಟಕಿಗಳು ಮುಚ್ಚಿದ್ದವು. ಮೂರು, ನಾಲ್ಕು, ಐದು ಮತ್ತು ಆರನೇ ಅಂತಸ್ತಿನಲ್ಲಿಯ ಕಿಟಕಿಗಳು ತೆರೆದಿದ್ದವು. ಅವುಗಳನ್ನು ಒಂದೊಂದಾಗಿ ಬೈನಾಕ್ಯುಲರ್‌ನ ಮೂಲಕ ನೋಡತೊಡಗಿದ ಗುಂಡಣ್ಣ. ಮೂರನೆ ಅಂತಸ್ತಿನ ಕಿಟಕಿಯ ಮೂಲಕ ನೋಡಿದಾಗ ಅಲ್ಲಿ ಒಳಗೆ ಹಪ್ಪಳ ಮತ್ತು ಸಂಡಿಗೆ ಕರಿಯುವ ಕಾಯಕ ನಡೆದದ್ದು ಕಂಡಿತು. ನಾಲ್ಕನೇ ಮಜಲಿನಲ್ಲಿ ಕೇರಂ ಆಟ. ಐದನೇ ಅಂತಸ್ತಿನಲ್ಲಿ ಓರ್ವ ಯುವಕ ಹಾಗೂ



ಓರ್ವ ಯುವತಿ ತಮ್ಮ ಕೈಯಲ್ಲಿ ಪೆನ್ನು ಹಿಡಿದುಕೊಂಡು ಕುಳಿತದ್ದು ಹಾಗೂ ಕಾಗದದ ಮೇಲೆ ಏನೋ ಬರೆದು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದುದು ಕಂಡಿತು. ಆ ಮನೆಯಲ್ಲಿ ಮೂಲೆಯಲ್ಲಿ ಮಂಚದ ಮೇಲೆ ಒಬ್ಬ ಮುದುಕಿ ಮಲಗಿಕೊಂಡದ್ದು ಸಹ ಗುಂಡಣ್ಣನ ಬೈನಾಕ್ಯುಲರ್ ದಿಂದಾಗಿ ಕಂಡಿತು. ಆರನೇ ಅಂತಸ್ತಿನಲ್ಲಿಯ ಮನೆಯಲ್ಲಿ ಓರ್ವ ಸ್ತ್ರೀ ಹೆರಳು ಹಾಕಿಕೊಳ್ಳುತ್ತ ಕೊರಳು ಹೊರಳಿಸುತ್ತ ಕನ್ನಡಿ ನೋಡಿಕೊಳ್ಳುತ್ತ ನಿಂತಿದ್ದಳು.

ಗುಂಡಣ್ಣನಿಗೆ ನಿಖರವಾಯ್ತು. ತನ್ನ ತಲೆಯ ಮೇಲೆ ಬಿದ್ದ ಕಾಗದದ ಮುದುಡೆ ಐದನೇ ಮಜಲಿನ ಅಪಾರ್ಟ್‌ಮೆಂಟಿನ ಕಿಟಕಿಯಿಂದಲೇ ತೂರಿಬಂದುದು ಎಂದು! ಆತ ತನ್ನ ಬೈನಾಕ್ಯುಲರ್‌ದ ಗುರಿಯನ್ನು ಐದನೇ ಅಂತಸ್ತಿನ ಆ ಕಿಟಕಿಯ ಮೇಲೆ ಕೇಂದ್ರೀಕರಿಸಿದ. ಪವಡಿಸಿದ ಮುದುಕಿಗೆ ತಮ್ಮ ಸಂಭಾಷಣೆಯಿಂದ ಎಚ್ಚರವಾಗಬಾರದೆಂದೋ ಅಥವಾ ತಮ್ಮ ಮಾತುಕತೆಯು ಆ ಮುದುಕಿಗೆ ಕೇಳಬಾರದೆಂಬ ಉದ್ದೇಶದಿಂದಾಗಿಯೋ ಆ ಯುವಕ ಮತ್ತು ಯುವತಿ ಕಾಗದದ ಮೇಲೆ ಬರೆದು ಸಂಭಾಷಣೆ ನಡೆಸಿದ್ದಾರೆಂಬುದನ್ನು ಪತ್ತೇದಾರ ಗುಂಡಣ್ಣ ತಿಳಿದುಕೊಂಡ. ಆತ ಮತ್ತೊಂದು ಸಲ ಆ ಕಾಗದದ ಮುದುಡೆ ಬಿಡಿಸಿ ನೋಡಿದ. "ಯಾಕೆ?" ಎಂಬ ಪ್ರಶ್ನೆಯು ಗಂಡಸಿನ ಅಡ್ಡಾದಿಡ್ಡಿ ಅಕ್ಷರಗಳಲ್ಲಿ ಇದ್ದುದು ತೋರಿತು. "ಯಾಕೆಂದರೆ ಅತ್ಮಹತ್ಯೆಗಿಂತ ಕೊಲೆ ಮಾಡುವುದೇ ಶ್ರೇಯಸ್ಕರ" ಎಂಬ ಉತ್ತರವು ಹೆಂಗುಸಿನ ನಾಜೂಕು ಬರವಣಿಗೆಯಲ್ಲಿದ್ದುದು ಆತನಿಗೆ ಕಂಡುಬಂದಿತು. ಆತ ಹೀಗೆ ಯೋಚಿಸಿ ಮತ್ತೊಮ್ಮೆ ಬೈನಾಕ್ಯುಲರ್‌ನ್ನು ಆ ಕಿಟಕಿಯ ಕಡೆಗೆ ಹೊರಳಿಸಿ ನೋಡತೊಡಗಿದ. ಆದರೆ ಅಷ್ಟರಲ್ಲಿ ಆ ಕಿಟಕಿಯ ಬಾಗಿಲು ಮುಚ್ಚಲ್ಪಟ್ಟಿತು. ಗುಂಡಣ್ಣ ನಿರುಪಾಯನಾಗಿ ತನ್ನ ದೂರದರ್ಶಕ ಯಂತ್ರವನ್ನು ಪಕ್ಕಕ್ಕೆ ಎತ್ತಿಟ್ಟು ದೂರದರ್ಶನ ಪೆಟ್ಟಿಗೆಯ ಬಿರಡೆ ಒತ್ತಿದ. "ಕಿಟಕಿಯ ಮುಚ್ಚಿ, ದೀಪವ ಹಚ್ಚಿ ಎಸಗುವೆ ನನ್ನ ಕಾಯಕವಾ" ಎಂದು ಭಾವಾವೇಶದಿಂದ ಹಾಡುತ್ತ ಕುಣಿಯುತ್ತಿದ್ದಳು ಓರ್ವ ರೂಪಸಿ ಪೆದ್ದುಪೆಟ್ಟಿಗೆಯ ತೆರೆಯ ಮೇಲೆ. ಪೆದ್ದುಪೆಟ್ಟಿಗೆಯ ತೆರೆಯಮೇಲಿನ ತರುಣಿ ಹಾಡುತ್ತಿದ್ದಂತೆ

'ಆತ್ಮಹತ್ಯೆಗಿಂತಲೂ ಕೊಲೆ ಮಾಡುವುದೇ ಶ್ರೇಯಸ್ಕರ' ಎಂಬ ಚೀಟಿ ಅಚಾನಕ್ ಕೈಗೆ ಬಂದಾಗ ಗುಂಡಣ್ಣ ಬೈನಾಕ್ಯುಲರ್‌ನ್ನು ಹಿಡಿಯಬೇಕಾಗಿ ಬಂದಿತು.

ಯಾವ ಕಾಯಕ ಎಸಗಬಯಸಿದ್ದಳೋ ಯಾರಿಗ್ಗೊತ್ತು? ಅಂತೆಯೇ ಐದನೇ ಅಂತಸ್ತಿನ ಆ ಮನೆಯಲ್ಲಿಯ ಆ ತರುಣ ತರುಣಿ ಕಿಟಕಿಯ ಬಾಗಿಲು ಮುಚ್ಚಿದ ಬಳಿಕ ಯಾವ ಕೆಲಸದಲ್ಲಿ ತೊಡಗಿದ್ದರೋ ಯಾರಿಗ್ಗೊತ್ತು? ಆದರೆ ಈ ನವಪತ್ತೇದಾರ ಗುಂಡಣ್ಣ ಮಾತ್ರ ಇತ್ತ ಆತ್ಮಹತ್ಯೆ, ಕೊಲೆ ಇವುಗಳ ಬಗೆಗೆ ತಲೆಕೆಡಿಸಿಕೊಂಡು ಚಿಂತಾಗ್ರಸ್ತನಾಗಿದ್ದ.

ನಾಲ್ಕಾರು ದಿನಗಳು ಕಳೆದ ನಂತರ ಒಂದು ಘಟನೆ ಸಂಭವಿಸಿತು. ಗುಂಡಣ್ಣನ ನೆರೆಮನೆಯಲ್ಲಿದ್ದ ರಾಮಣ್ಣ ಓಡಾಡುತ್ತ ಬಂದು ಸುದ್ದಿ ಸಾರಿದ.

"... ಗುಂಡಣ್ಣ, ಪಕ್ಕದ ಅಪಾರ್ಟ್‌ಮೆಂಟ್ಸಿನ ಐದನೇ ಅಂತಸ್ತಿನಲ್ಲಿ ವಾಸವಾಗಿದ್ದ ಆ ಸಿರಿವಂತ ಮುದುಕಿ ಅಚಾನಕ್ ಆಗಿ ಸತ್ತಿದ್ದಾಳೆ. ಅವಳ ಶವಸಂಸ್ಕಾರದ ಎತ್ತುಗಡೆ ನಡೆದಿದೆ. ನಡೀ. ನಾವೂ ಹೋಗೋಣ."

ರಾಮಣ್ಣ ನಿರ್ದೇಶಿಸಿದ ತೋರುಬೆರಳಿನ ದಿಕ್ಕಿನಲ್ಲಿ ಗುಂಡಣ್ಣ ತನ್ನ ನೋಟ ಹರಿಸಿದ. 4-5 ದಿನಗಳ ಹಿಂದೆ ಅದೇ ಐದನೇ ಅಂತಸ್ತಿನ ಮನೆಯ ಕಿಟಕಿಯಿಂದ ತನ್ನ ತಲೆಯ ಮೇಲೆ ಆ ಕಾಗದದ ಮುದುಡೆ ಬಿದ್ದದ್ದನ್ನು ನೆನೆಸಿಕೊಂಡ ಗುಂಡಣ್ಣ. ಕೂಡಲೇ ಆತ ಕೂಗಿದ.

"... ಅಚಾನಕ್ ಸಾವು? ನೋ ನೋ, ಅದು ಖಂಡಿತವಾಗಿ ಕೊಲೆಯೇ. ಏಕೆಂದರೆ ಆ ಮುದುಕಿಯ ಮನೆಯಲ್ಲಿ ಇರುತ್ತಿದ್ದ ಆ ತರುಣಿಗೆ ಕೊಲೆಗೈಯುವುದೇ ಶ್ರೇಯಸ್ಕರ ಎಂಬ ದೃಢ ಅಭಿಪ್ರಾಯವಿದೆ. ಆಯ್ ಹ್ಯಾವ್ ಗಾಟ್ ಪ್ರೂಫ್!"

"ಗುಂಡಣ್ಣ ಏನು ನೀನು ಹೇಳೋದು? ಆ

ತರುಣಿ ಅವಳ ಮಗಳು. ಹುಚ್ಚುಚ್ಯಾರ ಆಡ ಬೇಡ..." ಎಂದು ರಾಮಣ್ಣ ಹೇಳುತ್ತಿದ್ದಂತೇ ಗುಂಡಣ್ಣ ತನ್ನೆಡೆಗೆ ಜಪ್ಪಿಸಿಟ್ಟುಕೊಂಡಿದ್ದ ಆ ಕಾಗದದ ಮುದುಡೆ ಹಿಡಿದುಕೊಂಡು ದುಡು ದುಡು ಆ ಐದನೇ ಅಂತಸ್ತಿನ ಮನೆಯ ಕಡೆಗೆ ನಡೆದ.

"ಇದು ಕೊಲೆ, ನೈಸರ್ಗಿಕ ಸಾವಲ್ಲ. ಮರಣೋತ್ತರ ತನಿಖೆಗೆ ಒಳಪಡಿಸಬೇಕು ಈ ಹೆಣವನ್ನು. ಸಿದಿಗೆಯಿಂದ ಎತ್ತಿಡಿ ಅದನ್ನು..." ಎಂದು ಗತ್ತಿನಲ್ಲಿ ಅಪ್ಪಣೆ ನೀಡುತ್ತ ತನ್ನ ಕೈಯ ಲ್ಲಿದ್ದ ಕಾಗದದ ಮುದುಡೆ ಪ್ರದರ್ಶಿಸಿದ. ಅಲ್ಲಿ ನೆರೆದವರಿಗೆಲ್ಲ ಆಶ್ಚರ್ಯಾಘಾತ. ಶೋಕಿಸುತ್ತ ಒಂದು ಮೂಲೆಯಲ್ಲಿ ಕುಳಿತು ಆ ತರುಣಿ ಮುಖವೆತ್ತಿ ಗುಂಡಣ್ಣನನ್ನು ನೋಡಿದಳು. ಪಕ್ಕದಲ್ಲಿಯೇ ಕುಳಿತಿದ್ದ ಆ ತರುಣ ಎದ್ದು ಬಂದು ಗುಂಡಣ್ಣನ ಕೈಯಲ್ಲಿದ್ದ ಕಾಗದದ ಮುದುಡೆ ಬಿಡಿಸಿ ನೋಡಿದ. ಆಮೇಲೆ ಆತ ಗುಂಡಣ್ಣನಿಗೆಂದ,


"ಮಹಾಶಯರೇ, ಈ ಒಕ್ಕಣೆಯಿಂದ ತಾವು ತಪ್ಪು ತಿಳಿವಳಿಕೆ ಮಾಡಿಕೊಂಡಂತಿದೆ. ನನ್ನ ಪ್ರೇಯಸಿಗೆ ನಾನು ಕೇಳಿದ್ದೆ, ತಾಯ್ನುಡಿಯಾದ ಕನ್ನಡದಲ್ಲಿ ಮಾತನಾಡದೆ ಇಂಗ್ಲೀಷಿನಲ್ಲೇಕೆ ಮಾತಾಡಬಯಸುವಿ ಎಂದು. ಅದಕ್ಕೆ ಅವಳು ಅಂದಿದ್ದಳು ಕನ್ನಡದಲ್ಲಿ ತಪ್ಪು ತಪ್ಪಾಗಿ ಮಾತ ನಾಡಿದರೆ ಆತ್ಮಹತ್ಯೆಯಾಗುತ್ತದೆ. ಪರಭಾಷೆ ಇಂಗ್ಲಿಷಿನಲ್ಲಿ ತಪ್ಪುತಪ್ಪಾಗಿ ನುಡಿದರೆ ಕೊಲೆ ಮಾಡಿದಂತೆ. ಆತ್ಮಹತ್ಯೆಗಿಂತ ಕೊಲೆ ಮಾಡು ವುದೇ ಶ್ರೇಯಸ್ಕರವೆಂದು ಅವಳು ಬರೆದದ್ದು ಆ ಅರ್ಥದಲ್ಲಿ."

ಈ ವಿವರಣೆಯನ್ನು ಕೇಳಿದ ಗುಂಡಣ್ಣನ ಮುಖ ವಿವರ್ಣಗೊಂಡಿತು. ಅಲ್ಲಿದ್ದವರೆಲ್ಲ ಗುಂಡಣ್ಣನಿಗೆ ಅಂದರು,

"ಪತ್ತೇದಾರ ಮಹಾಶಯರೇ ತಾವು ದಾರಿ ತಪ್ಪಿದ್ದೀರಿ, ತಮ್ಮ ಯೋಚನೆಯ ದಾರವೂ ತಪ್ಪಾಗಿದೆ."

ಗುಂಡಣ್ಣ ಆ ಕಾಗದದ ಮುದುಡೆ ಬಿಸಾಕಿ ಅಲ್ಲಿಂದ ಓಟ ಕಿತ್ತಿದ. ●

ಮಸಾಲೆದೋಸೆ: ಸಚಿವರ ಪತ್ತೇದಾರಿ



ರೇಶನ್ ಅಂಗಡ್ಯಾಗ ಛೊಲೋ ಅಕ್ಕಿ, ಗೋಧಿ ಸಿಗೋ ಹಂಗ ಯವಸ್ಥಾ ಮಾಡ್ರಿಯಪ್ಪಾ...

ಮುಗ್ಗ ರೇಶನ್ ಅಕ್ಕಿಗ್ಯಾಕ ಒದ್ದಾಡಕ ಹತ್ತಿದ್ಯೋ 25 ರೂಪಾಯಿಕ್ಕೊಂದು ದ್ವಾಸೆ ಸಿಗೊ ಜಾಗಾ ಪತ್ತೆ ಹಚ್ಚಿನಿ ರೊಕ್ಕ ಕೊಟ್ಟ ತಿಂದ್ಬಾ.

'ನಿತ್ಯೋತ್ಸವ'ದ ಕವಿ –

ಪ್ರೊ. ಕೆ.ಎಸ್. ನಿಸಾರ್ ಅಹಮದ್

● ಸಂದರ್ಶನ – ಲೇಖನ:
ಎಂ. ಕೆ. ಗೋಪಿನಾಥ್
ಫೋಟೋ: ಕೆ. ಎನ್. ನಾಗೇಶ್‌ಕುಮಾರ್

ಬೆಂಗಳೂರಿನಲ್ಲಿ ಒಂದು ದಿನ ಸಂಜೆ ಒಂದು ಕವಿಗೋಷ್ಠಿ ಏರ್ಪಾಡಾಗಿತ್ತು. ಕವನಗಳನ್ನು ವಾಚಿಸುವವರ ಪಟ್ಟಿಯಲ್ಲಿ ಖ್ಯಾತ ಕವಿ ಪ್ರೊ। ಕೆ. ಎಸ್. ನಿಸಾರ್ ಅಹಮದ್ ಅವರ ಹೆಸರೂ ಇತ್ತು. ನಿಸಾರರ ಸರದಿ ಬಂದಾಗ ಅವರೆದ್ದು ಬಂದು ತಮ್ಮ 'ರಂಗೋಲಿ ಮತ್ತು ಮಗ' ಕವನವನ್ನು ಭಾವಪೂರ್ಣವಾಗಿ ಓದಿದರು. ಅಂದಿನ ಸಭೆಯಲ್ಲಿ ನೆರೆದಿದ್ದ ಕಾವ್ಯಾಭಿಮಾನಿಗಳಿಗೆ ಬೇಕಾಗಿದ್ದುದು ಬೇರೇನೋ. ಸಭಿಕರ ಇಚ್ಛೆಯನ್ನು ಸೂಚಿಸುವ ಚೀಟಿಗಳು ವೇದಿಕೆಗೆ ಬರತೊಡಗಿದವು. ಅವುಗಳಲ್ಲಿ ಬಹುಪಾಲು ಚೀಟಿಗಳು ನಿಸಾರರನ್ನು 'ಕುರಿಗಳು ಸಾರ್ ಕುರಿಗಳು' ಪದ್ಯ ಓದಿ ಎಂದು ಕೇಳಿದ್ದವು. (ನಿಸಾರ್ ಆ ಪದ್ಯವನ್ನು ಓದಿಯೂ ಓದಿದರು.) 'ಕುರಿಗಳು ಸಾರ್ ಕುರಿಗಳು' ನಿಸಾರರನ್ನು, ಅವರ ಕಾವ್ಯವನ್ನು ಜನಮನಕ್ಕೆ ಹತ್ತಿರ ತಂದ ಕವಿತೆ. ಕನ್ನಡ ಕಾವ್ಯ ಜಗತ್ತಿನಲ್ಲಿ 'ಜನಪ್ರಿಯತೆ' ಎಂಬ ಶಬ್ದದ ಅರ್ಥವನ್ನೇ ಬುಡಮೇಲು ಮಾಡಿದ ಕವಿ ಪ್ರೊ। ಕೆ. ಎಸ್. ನಿಸಾರ್ ಅಹಮದ್. ತಮ್ಮ ಕಾವ್ಯವೊಂದರ ಬಲದಿಂದಲೇ ಜನಾಭಿಮಾನದ ತುತ್ತತುದಿಗೇರಿರುವ ನಿಸಾರರು ಕನ್ನಡ ಜನತೆಯ ಹೃನ್ಮನಗಳನ್ನು ಗೆದ್ದುಬಿಟ್ಟಿದ್ದಾರೆ.

ಕೊಕ್ಕರೆಹೊಸಹಳ್ಳಿ ಷೇಕ್‌ಹೈದರ್ ನಿಸಾರ್ ಅಹಮದ್‌ಗೆ ಈಗ ಐವತ್ತೇಳು ವರ್ಷ. ಷೇಕ್ ಹೈದರ್ – ಹಮೀದಾ ಬೇಗಂ ದಂಪತಿಗಳ ಏಳು ಜನ ಮಕ್ಕಳಲ್ಲಿ (ನಾಲ್ವರು ಹೆಣ್ಣುಮಕ್ಕಳು; ಗಂಡುಮಕ್ಕಳು ಮೂವರು) ನಿಸಾರ್ ಅಹಮದ್ ಹಿರಿಯರು.

1959ರಲ್ಲಿ ಸೆಂಟ್ರಲ್ ಕಾಲೇಜಿನಿಂದ



ಭೂವಿಜ್ಞಾನದಲ್ಲಿ ಎಂ.ಎಸ್ಸಿ. ಸ್ನಾತಕೋತ್ತರ ಪದವಿ ಪಡೆದು, ಭೂಗರ್ಭ ವಿಜ್ಞಾನದ ಅಧ್ಯಾಪಕ ರಾಗಿ ವಿಶ್ವವಿದ್ಯಾನಿಲಯದ ಸೇವೆಗೆ ಬಂದ ನಿಸಾರ್ ಅಹಮದ್ ಪ್ರಸ್ತುತ ಬೆಂಗಳೂರಿನ ಸರಕಾರಿ ವಿಜ್ಞಾನ ಕಾಲೇಜಿನಲ್ಲಿ ಪ್ರೊಫೆಸರ್ ಮತ್ತು ವಿಭಾಗದ ಮುಖ್ಯಸ್ಥರಾಗಿದ್ದಾರೆ.

ಹೊಸಕೋಟೆ ಹೈಸ್ಕೂಲಿನಲ್ಲಿ ವಿದ್ಯಾರ್ಥಿ ಯಾಗಿದ್ದಾಗಲೇ ಮೊದಲ ಕವಿತೆ ಬರೆದ ರಾದರೂ (1949ರ ಸುಮಾರಿನಲ್ಲಿ), ನಿಸಾರ ರಲ್ಲಿ ಸುಪ್ತವಾಗಿದ್ದ ಸಹಜ ಕವಿಯನ್ನು ಮೊದಲು ಗುರುತಿಸಿದವರು ಬೆಂಗಳೂರಿನ ಸರಕಾರಿ ಇಂಟರ್‌ಮಿಡಿಯಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಶ್ರೀ ಎಲ್. ಗುಂಡಪ್ಪನವರು. ತರುವಾಯ ನಿಸಾರ್ ಅಹಮದ್ ಭೂವಿಜ್ಞಾನದ ಆನರ್ಸ್ ಪದವಿಗೆ ಓದಲು ಸೆಂಟ್ರಲ್ ಕಾಲೇಜು ಸೇರಿದಾಗ ಶ್ರೀ ಜಿ. ಪಿ. ರಾಜರತ್ನಂ ಅವರ ಕಣ್ಣಿಗೆ ಬಿದ್ದರು. ಅದು ಆದದ್ದು ಹೀಗೆ—

ಆಗ ನಾಡಿನ ಪ್ರತಿಷ್ಠಿತ ಸಂಸ್ಥೆಯಾಗಿದ್ದ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಚೈತನ್ಯ ಸ್ವರೂಪಿ ನೇತಾರರಾಗಿದ್ದ ಪ್ರೊ। ಜಿ. ಪಿ. ರಾಜರತ್ನಂ ಸಂಘಕ್ಕೊಬ್ಬ ಕಾರ್ಯದರ್ಶಿಯನ್ನು ಆಯ್ಕೆ ಮಾಡುವ ಕಾಯಕಕ್ಕೆ ಕೈ ಎತ್ತಿಸಿ ಎಣಿಸಿ ನಿರ್ಧರಿಸುವ 'ಪ್ರಜಾಪ್ರಭುತ್ವ'ದ ಮಾರ್ಗ ಹಿಡಿಯದೆ, ಬೌದ್ಧಿಕವಾಗಿ ಹಾದಿ ತುಳಿದರು – 'ಬಾಯಿ ಇದ್ದವ ಬದುಕಿದ' ಎಂಬ ವಿಷಯ ಕೊಟ್ಟು, ಒಂದು ಪ್ರಬಂಧ ರಚಿಸಲು ತಮ್ಮ ವಿದ್ಯಾರ್ಥಿಗಳಿಗೆ ತಿಳಿಸಿ ದರು. ಉತ್ತಮ ಪ್ರಬಂಧ ರಚಿಸಿಗಾತ ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘಕ್ಕೆ ಕಾರ್ಯದರ್ಶಿ ಯಾಗುತ್ತಾನೆಂದೂ ಸೂಚಿಸಿದರು. ನಿಸಾರ್ ಅಹಮದ್ ಅವರ ಬರಹ ಉತ್ತಮವಾಗಿದ್ದು ಅವರು ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಇನ್ನೊಬ್ಬ ಖ್ಯಾತ ಕವಿ—ವಿಮರ್ಶಕ ಪ್ರೊ। ವಿ. ಸೀತಾರಾಮಯ್ಯನವರು ಆಗ ಸೆಂಟ್ರಲ್ ಕಾಲೇಜಿ ನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ರಾಜರತ್ನಂ— ವಿ.ಸೀ—ಈ ಪ್ರತಿಭಾ ಸಂಪನ್ನರ ಕಕ್ಷೆಯಡಿಯಲ್ಲಿ ಬಂದ ನಿಸಾರ್ ಅಹಮದ್ ಕವಿಯಾಗಿ ರೂಪು ಗೊಳ್ಳತೊಡಗಿದರು.

ವ್ಯಾಸಂಗದ ವಿಷಯ ವಿಜ್ಞಾನ. ಆಸಕ್ತಿ

ಕನ್ನಡ ಕಾವ್ಯಲೋಕದ ಸಾರ್ಥಕ ಕವಿ ಪ್ರೊ। ಕೆ. ಎಸ್. ನಿಸಾರ್ ಅಹಮದ್ ಅವರ ಬದುಕು-ಬರೆಹ ಮತ್ತು ಅನಿಸಿಕೆಗಳ ಕುರಿತ ಈ ಲೇಖನ—ಈ ಕವಿಯ ಬಗ್ಗೆ ಕನ್ನಡಿಗರಿಗೆ ಹೆಚ್ಚು ವಿವರಗಳನ್ನು ತಿಳಿಸುವ ಪ್ರಯತ್ನ ಮಾಡಿದೆ.


ಮುಂದಿನ ಸಂಚಿಕೆಯಿಂದ ಪ್ರೊ। ನಿಸಾರ್ ಅಹಮದ್ ಸಾಹಿತ್ಯ ವೈಚಾರಿಕ ಲೇಖನಗಳನ್ನು ಬರೆಯಲಿದ್ದಾರೆ.

ಇದ್ದದ್ದು ಕಾವ್ಯರಚನೆ – ಸಾಹಿತ್ಯಗಳಲ್ಲಿ. ಈ ಎರಡು ಕ್ಷೇತ್ರಗಳಲ್ಲೂ ಸ್ವಪರಿಶ್ರಮದಿಂದ ಉನ್ನತಿಗೇರಿದ ನಿಸಾರ್ ಅಹಮದ್ ಹುಟ್ಟಿದ್ದು ದೇವನಹಳ್ಳಿಯಲ್ಲಿ.

ನಿಸಾರ್ ಬರೆಯಲಾರಂಭಿಸಿದ್ದು ನವ್ಯ ಕಾವ್ಯ ಮಾರ್ಗದಲ್ಲಿ. ಅವರ ಪ್ರಥಮ ಕವನ ಸಂಕಲನ 'ಮನಸು ಗಾಂಧಿ ಬಜಾರು' ಹೊರಬಂದದ್ದು 1960ರಲ್ಲಿ. ನವೋದಯ ಕಾವ್ಯ ಸಂಪ್ರದಾಯ ವನ್ನು ಹಿಂದಕ್ಕೆ ಸರಿಸಿ, ಪ್ರೊ। ಗೋಪಾಲಕೃಷ್ಣ ಅಡಿಗ, ಪ್ರೊ। ವಿ. ಕೃ. ಗೋಕಾಕರು ನವ್ಯಕಾವ್ಯ ಸಂಪ್ರದಾಯವನ್ನು ಹುಟ್ಟುಹಾಕಿ, ಅದೇ ತಾನೇ ಕವಿಗಳಾಗಿ ರೂಪುಗೊಳ್ಳುತ್ತಿದ್ದವರನ್ನು ಬಲ ವಾದ ಸೆಳೆತಗಳಿಗೆ ಒಳಪಡಿಸುತ್ತಿದ್ದ ಕಾಲ ಅದು. ಹೊಸದಾಗಿ ಬರೆಯುತ್ತಿದ್ದ ಕವಿಗಳನ್ನು ದಿಕ್ಕು ಗೆಡಿಸುವ ಕಾವ್ಯ ವಾತಾವರಣ ಆ ಕಾಲದ್ದು.

ನವ್ಯ-ನವೋದಯ ಈ ಎರಡೂ ಕಾವ್ಯಪಂಥ ಗಳ ಸೆಳೆತ ಪ್ರಭಾವಗಳಿಂದ ಮುಕ್ತರಾಗಿರುವ 'ನಿಸಾರ್ ಕಾವ್ಯ' ಬರತೊಡಗಿದ್ದು 1967ರ ಹೊತ್ತಿಗೆ, ಅವರ ಮೂರನೆಯ ಕವಿತಾ ಸಂಗ್ರಹ 'ಸುಮುಹೂರ್ತ' ಹೊರಬಂದಾಗಿನಿಂದ ಈಚೆಗೆ.

ನಿಸಾರ್ ತಮ್ಮ ಕವನಗಳಿಗೆ ಕೊಡುವ ತಲೆಬರಹಗಳಿಗೆ ಮಾಂತ್ರಿಕಶಕ್ತಿ ಇರುವಂತೆ ತೋರುತ್ತದೆ—ಅವರ ಕವನಗಳಿರುವಂತೆಯೇ.



'ಕುರಿಗಳು, ಸಾರ್, ಕುರಿಗಳು', 'ನಿಮ್ಮೊಡನಿದ್ದೂ ನಿಮ್ಮಂತಾಗದೆ', 'ನಾನೆಂಬ ಪರಕೀಯ', 'ರಾಮನ್ ಸತ್ತ ಸುದ್ದಿ', 'ನಿತ್ಯೋತ್ಸವ' ಕವನಗಳ ಆಶಯಗಳನ್ನು ರೂಪಕವಾಗಿ, ಅಡಕವಾಗಿ ಪ್ರಕಟಿಸುವ ಶೀರ್ಷಿಕೆಗಳು ನಿಸಾರರ ವಿಶಿಷ್ಟತೆಗಳಲ್ಲಿ ಒಂದು.

ಇತ್ತೀಚೆಗೆ ಪ್ರಕಟವಾದ ನಿಸಾರರ 'ಸಮಗ್ರ ಕವಿತೆಗಳು' (1955-90) ಬೃಹತ್ಕೃತಿಯನ್ನು ಒಮ್ಮೆ ಅವಲೋಕಿಸಿದರೆ ಅವರ ಕಾವ್ಯ ಕೆಲವು ನಿಶ್ಚಿತ ಗುಂಪುಗಳಾಗಿ ಪ್ರತ್ಯೇಕಗೊಳ್ಳುವುದನ್ನು ಗಮನಿಸಬಹುದು. ಅವು:

ಎರಡು ವಿಭಿನ್ನ ಧರ್ಮ ಸಂಸ್ಕೃತಿಗಳ ನಡುವಣ ಸ್ವಕೀಯ ಆಂತರಿಕ ತುಡಿತ ತುಮುಲಗಳು ಅಂತಃಸಮತೆಯನ್ನು ಕದಡದೆ ಕಾಪಾಡಿಕೊಂಡು ಬಂದಿರುವ ಒಂದು ಕವಿಚೇತನ ವೈಯಕ್ತಿಕ ದುಃಖ ದುಮ್ಮಾನಗಳಿಗೆ ಸಾರ್ವತ್ರಿಕ ರೂಪ ಚಹರೆಗಳನ್ನು ಕೊಟ್ಟು, ಸಾರ್ವತ್ರಿಕ ವಿದ್ಯಮಾನಗಳನ್ನು ವೈಯಕ್ತಿಕ ನೋವಿನ ದನಿಯಾಗಿ ಹಾಡುವ 'ವಿವರಣೆ', 'ದ್ವಂದ್ವ', 'ಸವತಿ ಮಕ್ಕಳ ಹಾಗೆ ಕಾಣಬೇಡವ್ವ' 'ನಿಮ್ಮೊಡನಿದ್ದೂ ನಿಮ್ಮಂತಾಗದೆ' 'ಸ್ವಜನೋದ್ಧಾರಕರು' ಮುಂತಾದ ಜಿಜ್ಞಾಸು ಕವನಗಳದು ಒಂದು ಹರವು. ಈ ಕವನಗಳಲ್ಲಿ ನಿಸಾರ್ ಪರಂಪರೆಯನ್ನು ಧಿಕ್ಕರಿಸುವ ಸಿನಿಕರಾಗದೆ, ಸಮಾಜಶಾಸ್ತ್ರದ ಒಬ್ಬ ವಿನೀತ ವಿದ್ಯಾರ್ಥಿಯಾಗಿ ಕಾಣಿಸಿಕೊಳ್ಳುತ್ತಾರೆ.

ಹರಿತವಾದ, ತೀಕ್ಷ್ಣವಾದ ವಿಡಂಬನೆಯ ಮುಸುಕಿನಲ್ಲಿ ಜೀವನದರ್ಶನ ಮಾಡುವ ನಿಸಾರ್ ಮೇಲುಗೈಯಾಗುವ ಕವನಗಳದು ಇನ್ನೊಂದು ಗುಂಪು. 'ಪಂಜರದ ಗಿಣಿ', 'ಮುದುಕ', 'ಪ್ರಾಯ', 'ಶ್ರೀಸಾಮಾನ್ಯನ ಪ್ರತಿನಿಧಿ', 'ಮಾರಾಟಗಾತಿಯ ಮಾತುಕತೆ', 'ಹುಳುಕ', 'ಬೀದಿಯ ಮಾರಿ', 'ಸ್ವಯಂ ಸೇವೆಯ ಗಿಳಿಗಳು', 'ಖಾಲಿ ಸೈಟುಗಳು' ಅರ್ಥಪೂರ್ಣ ಮಾತುಗಾರಿಕೆಗೆ, ಲಲಿತವಾದ ಲಯದ ನಡಿಗೆಗೆ ಈ ಪ್ರಭೇದದ ಕವನಗಳು ಸಂಕೇತಗಳಾಗಿ ನಿಲ್ಲುತ್ತವೆ.

ವ್ಯಕ್ತಿಗೀತೆಗಳು ನಿಸಾರರ ಕಾವ್ಯದ ಒಂದು ಪ್ರಮುಖ ಭಾಗ. ಅವರ ಸಮಗ್ರ ಕವಿತೆಗಳಲ್ಲಿ ಹದಿನೈದಕ್ಕೂ ಹೆಚ್ಚು ವ್ಯಕ್ತಿಗೀತೆಗಳಿವೆ. ಈ ವ್ಯಕ್ತಿಗೀತೆಗಳ ಥಾಳಾದ ಗುಣವೆಂದರೆ ಅವು ಒಂದರಂತೊಂದಿಲ್ಲದಿರುವುದು. 'ಮುದ್ದಣ', 'ತೀ.ನಂ.ಶ್ರೀ.', 'ಮಾಸ್ತಿ', 'ಬಾಪು', 'ನೆಹರು', 'ಮದರ್ ತೆರೆಸ' ಹೀಗೆ ಈ ವ್ಯಕ್ತಿಗೀತೆಗಳಲ್ಲಿ ಚಿತ್ರಿತರಾದವರ ವ್ಯಾಪ್ತಿ ವಿಸ್ತಾರವಾದದ್ದು. ಈ ವ್ಯಕ್ತಿ ಜಗತ್ತಿನಲ್ಲಿ 'ಮೈಲಿ ಮೊಗದ ಮಹಾರಾಯ' ನಂಥ ಅನಾಮಿಕ ಆದರೆ ವರ್ಣರಂಜಿತ ವ್ಯಕ್ತಿಗಳಿಗೂ ಸ್ಥಾನವುಂಟು. ಅಪೂರ್ವ ಚಿತ್ರಗಾರಿಕೆಯಿಂದ ಮನತುಂಬುವ ಭಾವಲಹರಿಗಳಾಗಿ, ಪ್ರಬಂಧಾತ್ಮಕ ಕಾವ್ಯವಾಗಿ ಈ ವ್ಯಕ್ತಿಗೀತೆಗಳು ಪರಿಸರದ ಪ್ರತೀಕಗಳಾಗಿ ವ್ಯಕ್ತಿಗಳನ್ನು ಚಿತ್ರಿಸುವುದ

ರಲ್ಲಿ ಸದಭಿರುಚಿಯ ಕಲಾನೈಪುಣ್ಯವನ್ನು ನಿಸಾರರಿಗೆ ಸಾಧಿಸಿಕೊಡುತ್ತವೆ.

ಕಳೆದ ಕೆಲವು ವರ್ಷಗಳಲ್ಲಿ ನಿಸಾರರ ಕಾವ್ಯ ಹೆಚ್ಚು ಹೆಚ್ಚಾಗಿ ಭಾವಗೀತೆಗಳ ಕಡೆಗೆ ಒಲಿದಿದೆ. 'ನಿತ್ಯೋತ್ಸವ'ದಿಂದ ಈಚೆಗಿನ ನಿಸಾರರ ಕಾವ್ಯ ರಚನೆಗಳು ಗೇಯಗುಣವನ್ನು ಗಳಿಸಿಕೊಳ್ಳುವಲ್ಲಿ ಪ್ರವರ್ತಿಸುತ್ತವೆ. ಜೀವನದ ಜಗತ್ತಿನ ಅತಿ ಸಾಮಾನ್ಯ ವಿಷಯಗಳೂ ಅಸಾಮಾನ್ಯವಾಗುವಂತೆ ಚಿತ್ರಿಸಬಲ್ಲ ನಿಸಾರರ ಕಲಾವಂತಿಕೆಗೆ ಅವರ ಇತ್ತೀಚಿನ ಭಾವಗೀತೆಗಳ ಸಂಕಲನ 'ಬಹಿರಂತರ' ಒಂದು ಸಾಧನೆಯ ಪ್ರತೀಕ. ಚೆಲುವಿನ ಆರಾಧನೆ, ಪ್ರಕೃತಿಯ ಬಗೆಗಿನ ವಿಸ್ಮಯ ದೇಶಭಕ್ತಿ, ಭಾಷಾಭಿಮಾನ, ನಾಡು-ನುಡಿಗಳ ಬಗೆಗಿನ ಪ್ರೀತಿ, ನಿತ್ಯನೂತನ ವಸ್ತುವಾದ ಪ್ರಣಯ – ಹೀಗೆ 'ಬಹಿರಂತರ' ತೆರೆದಿಡುವ, ಕಾಣಿಸುವ ಕೋಮಲ ಜಗತ್ತು ವೈವಿಧ್ಯಪೂರ್ಣ.

ಭಾಷೆಯ ಬಳಕೆಯಲ್ಲಿ, ಬಳಕೆಯಲ್ಲಿನ ವಿನೂತನ ಪ್ರಯೋಗಗಳಿಗಾಗಿ ನಿಸಾರ್ ತುಂಬ ಹೆಸರು ಮಾಡಿದವರು. ಅಭಿವ್ಯಕ್ತಿಯ ಅಗತ್ಯಕ್ಕೆ ಕನ್ನಡ ಸಾಲದೆಂದು ಕಂಡಾಗ ಉರ್ದು, ಫಾರ್ಸಿ, ಇಂಗ್ಲಿಷ್ ಮತ್ತು ಅನೇಕ ಅನ್ಯದೇಶೀಯ ಶಬ್ದಗಳಿಂದ ಕನ್ನಡದ ಕಣಜ ತುಂಬಿದ್ದಾರೆ. 'ಸ್ತ್ರೀಮಂತ' 'ಸ್ತನಿತೆಯರು', 'ಭಾವಾಡಿಗ', 'ಅಮಲಿಗ' ಇಂತಹ ನೂರು ಶಬ್ದಗಳಾದರೂ ನಿಸಾರ್ ಕಾವ್ಯದಲ್ಲಿ ಕಣ್ಣಿಗೆ ಬೀಳುತ್ತವೆ. ಭಾಷೆಯಲ್ಲಿ ಸಿಗುವ ಈ ತಿರುವುಗಳು ನಿಸಾರ್ ಕಾವ್ಯದ ಧ್ವನಿಯ ಏರಿಳಿತಗಳಿಗೆ, ಒತ್ತುಗಳಿಗೆ ಒರಗುದಿಂಬುಗಳಾಗಿ ಸಂವಹನಕ್ಕೆ ಔಚಿತ್ಯಪೂರ್ಣತೆಯನ್ನು ಗಳಿಸಿಕೊಟ್ಟು ಇಡೀ ಕವನ ಒಂದು ಹೊಸ ಅರ್ಥವನ್ನು ಹೊಳೆಯಿಸುವಂತೆ ಮಾಡುತ್ತವೆ. ಪ್ರಖ್ಯಾತ ವಿಮರ್ಶಕರಾದ ಶ್ರೀ ಎಲ್. ಎಸ್. ಶೇಷಗಿರಿ ರಾವ್ ಅವರು ಸಾಹಿತ್ಯ ಸಭೆಯೊಂದರಲ್ಲಿ ಮಾತಾಡುತ್ತಾ 'ದಂಡನಾಯಕನ ಆಜ್ಞೆಗೆ ಮಣಿದು ಕವಾಯತು ಮಾಡುವ ಯೋಧರಂತೆ ಭಾಷೆ ನಿಸಾರರ ಆಣತಿಯನ್ನು ಪಾಲಿಸುತ್ತದೆ' ಎಂದು ಹೇಳಿದ್ದು ನಿಸಾರರ ಭಾಷಾ ಪ್ರೌಢಿಮೆಗೆ ಹಿಡಿದ ಕನ್ನಡಿ. ನಿವೃತ್ತ ಉಪಕುಲಪತಿ ಡಾ। ದೇ. ಜವರೇಗೌಡರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ನಿಸಾರರು ಕಸಿ ಮಾಡಿ ಕನ್ನಡಕ್ಕೆ ತಂದಿರುವ ಶಬ್ದಗಳನ್ನು ಕುರಿತೇ ಒಂದು ಮಹಾಪ್ರಬಂಧ ಬರೆದು ಡಾಕ್ಟರೇಟ್ ಗಳಿಸಬಹುದು' ಎಂದರು.

ಕನ್ನಡದಲ್ಲಿ ಪ್ರಪ್ರಥಮವಾಗಿ ಬಂದ ಭಾವಗೀತೆಗಳ ಕ್ಯಾಸೆಟ್ ನಿಸಾರರದ್ದು; ಅವರ ಭಾವಗೀತೆಗಳದ್ದು.

ಒಂದು ಅವಧಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದು (73-75)





ತರುವಾಯ ಆ ಸಂಸ್ಥೆಯ ಅಧ್ಯಕ್ಷರೂ ಆಗಿದ್ದರು (84-87). ಈ ಅವಧಿಯಲ್ಲಿ ಅಕಾಡೆಮಿಯ ಪುಸ್ತಕ ಪ್ರಕಟನೆಯ ಉದ್ಯಮಕ್ಕೆ ತುಂಬ ಇಂಬು ಸಿಕ್ಕಿತು. ಸಾಹಿತ್ಯವನ್ನು ಅಕ್ಷರಶಃ ಜನಸಾಮಾನ್ಯರ ಮಟ್ಟಕ್ಕೆ ಒಯ್ದು ಊರು ಊರುಗಳಲ್ಲಿ ಜಿಲ್ಲೆ ಜಿಲ್ಲೆಗಳಲ್ಲಿ ಸಾಹಿತ್ಯೋತ್ಸವಗಳನ್ನು ನಡೆಸಿದರು.

ಕವಿಯೆಂದೇ ಖ್ಯಾತರಾಗಿದ್ದ ನಿಸಾರ್ ಗದ್ಯ ಸಾಹಿತ್ಯದಲ್ಲೂ ಕೃಷಿ ಮಾಡತೊಡಗಿದ್ದು, ಅವರ ವೈಚಾರಿಕ ಬರಹಗಳ ಎರಡು ಸಂಕಲನಗಳು ಪ್ರಕಟವಾಗಿವೆ. ('ಮನದೊಂದಿಗೆ ಮಾತುಕತೆ' ಮತ್ತು 'ಓರಿಯರು ಹರಸಿದ ಹೆದ್ದಾರಿ'). ಬೇಸಿಗೆಯಲ್ಲಿ ಬೀಸಿ ಬರುವ ತಂಗಾಳಿಯಂತೆ ಇಲ್ಲಿನ ಬರಹಗಳ ರೀತಿ. 'ಕನ್ನಡಕ್ಕಾಗಿ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ' ಎಂಬ ಕುವೆಂಪುವಾಣಿ ನಿಸಾರರಿಗೆ ಧ್ಯೇಯವಾಕ್ಯ. ತಮ್ಮ ಗದ್ಯಬರಹಗಳಲ್ಲಿ ನಿಸಾರರು ನಾಡು, ನುಡಿ, ಅಭಿರುಚಿ ಸಂಸ್ಕೃತಿ, ಸಜ್ಜನಿಕೆ, ಸಾಹಿತ್ಯ ಜಗತ್ತಿನ ಹಿರಿಯ ತಲೆಯಾಳುಗಳ ನೆನವರಿಕೆ, ಜೀವನ ಮೌಲ್ಯಗಳಲ್ಲಿ ಉನ್ನತವಾದವುಗಳ ಬಗೆಗೆ ಮೆಚ್ಚುಗೆ, ಉಚ್ಚವಾದವುಗಳನ್ನೇ ಒಪ್ಪಿಕೊಳ್ಳುವ ಮನೋವೃತ್ತಿ – ಇವುಗಳ ಸಮ್ಯಗ್ ದರ್ಶನ ಮಾಡಿಸುತ್ತಾರೆ. ಸಾಹಿತ್ಯಕ ಗುಣಗಳಿಂದ ಪೋಷಿತವಾಗಿರುವ ನಿಸಾರರ ಗದ್ಯಬರಹಗಳು ಈಚೀಚಿನ ಅಪರೂಪದ ಬರಹಗಳು.

ತಮಗೆ ಮೆಚ್ಚಿಕೆಯಾದ ಇಂಗ್ಲಿಷ್ ಕೃತಿಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುವುದು ನಿಸಾರರ ಆಸಕ್ತಿಗಳಲ್ಲಿ ಒಂದು. ಚಿಲಿಯನ್ ಕವಿ ಪ್ಯಾಬ್ಲೊ ನೆರೂಡನ ಕವನಗಳಲ್ಲಿ ನಲವತ್ತನ್ನು ಅನುವಾದಿಸಿ 'ಬರೀ ಮರ್ಯಾದಸ್ಥರೆ' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಇದಕ್ಕೂ ಮೊದಲು ಎಂದರೆ 1974ರಲ್ಲಿ ಷೇಕ್ಸ್‌ಪಿಯರ್‌ನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕವನ್ನು ಅನುವಾದಿಸಿದರು. ಈ ನಾಟಕ ಅನೇಕ ಯಶಸ್ವಿ ರಂಗಪ್ರಯೋಗಗಳನ್ನು ಕಂಡಿತು. 1977ರಲ್ಲಿ 'ಒಥೆಲೊ' ಕನ್ನಡಕ್ಕೆ ಅನುವಾದವಾಗಿ ಬಂದಿತು. ನಿಸಾರರು ಷೇಕ್ಸ್‌ಪಿಯರ್‌ನ ಮೇಲಿನೆರಡು ನಾಟಕಗಳನ್ನು ಆಡುಮಾತಿನ ಸರಳ ಲಯಗಳಿಗೆ ಅಳವಡಿಸಿ ರಂಗ ಚಟುವಟಿಕೆಗೆ ಚಾಲನೆ ನೀಡಿದರು.

'ಹಕ್ಕಿಗಳು' ಎಂಬ ಮಕ್ಕಳ ಪುಸ್ತಕಕ್ಕೆ ಎನ್.ಸಿ.ಇ.ಆರ್.ಟಿ.ಯ ರಾಷ್ಟ್ರೀಯ ಬಹುಮಾನ (1978) ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ; 'ಹೆಜ್ಜೆ ಗುರುತು' ಎಂಬ ಅನುವಾದಿತ ಕಥೆಗಳ ಸಂಗ್ರಹಕ್ಕೆ 1981ರ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ; ಅದೇ ವರ್ಷ 'ಇದು ಬರಿ ಬೆಡಗಲ್ಲೋ ಅಣ್ಣ' ಎಂಬ ವಿಮರ್ಶಾ

ಲೇಖನಗಳ ಸಂಗ್ರಹಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಇವೆಲ್ಲಕ್ಕೂ ಶಿಖರಪ್ರಾಯವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿಗಳು ನಿಸಾರರಿಗೆ ಈವರೆಗೆ ಸಂದಿವೆ.

ನಿಸಾರರು 1966ರಲ್ಲಿ ಬೆಂಗಳೂರಿನ ಷಾನ್‌ವಾಜ್ ಬೇಗಂ ಅವರನ್ನು ವಿವಾಹ ವಾದರು. ಪತ್ನಿ, ಇಬ್ಬರು ಗಂಡುಮಕ್ಕಳು (ನವೀದ್ ನಿಸಾರ್ ಮತ್ತು ಫರೀದ್ ನಿಸಾರ್) ಹಾಗು ಇಬ್ಬರು ಹೆಣ್ಣುಮಕ್ಕಳು (ತನ್‌ವೀರ್ ಫಾತಿಮ ಮತ್ತು ಫರ್‌ಹೀನ್ ಫಾತಿಮ) ಇವರನ್ನೊಳಗೊಂಡ ಪುಟ್ಟ ಕುಟುಂಬದ ಧಣಿಯಾದ ನಿಸಾರರು ಸಂಸಾರದ ಜಂಜಡಕ್ಕೆ ತಲೆಕೊಡದೆ ತಮ್ಮ ಸಂಗ್ರಹದ (2,000) ಪುಸ್ತಕಗಳಲ್ಲಿ ಬೆರೆತುಬಿಟ್ಟಿರುತ್ತಾರೆ.

ಇನ್ನೆರಡು ವರ್ಷಗಳಲ್ಲಿ ಸರಕಾರಿ ಸೇವೆಯಿಂದ ನಿವೃತ್ತರಾಗಲಿರುವ ನಿಸಾರರು ಮುಂದಿನ ಬದುಕು ಸಾಹಿತ್ಯಕ್ಕೇ ಮೀಸಲು ಎಂದು ಹೇಳುತ್ತಾರೆ.

ನಂಜಿಲ್ಲದ ನವಿರು ಹಾಸ್ಯದ ಮಾತುಕತೆಗಳಿಗೆ ಹೆಸರಾದ ನಿಸಾರ್ ಸ್ನೇಹಜೀವಿ. ಉತ್ತಮ ವಾಗ್ಮಿ; ಔದಾರ್ಯ ದೊಡ್ಡತನಗಳಿಗೆ ಒಂದು ಅಡ್ಡ ಹೆಸರು.

ಪ್ರೊ। ನಿಸಾರ್ ಅಹಮದ್ ಸಂದರ್ಶನ

'ಕಾವ್ಯದಷ್ಟೇ ಓದುಗನೂ ಮುಖ್ಯ'

ಒಟ್ಟು ಕನ್ನಡ ಕಾವ್ಯ ಸಂದರ್ಭ ಹಾಗು ತಮ್ಮ ಸ್ವಂತ ಕಾವ್ಯ ರಚನೆಯ ಬಗೆಗೆ ನಿಸಾರ್ ಅವ ರೊಂದಿಗೆ ಚರ್ಚಿಸುವುದು ಒಂದು ರಸಾನುಭವ. ಖಚಿತ ನಿಲುವು, ನಿರರ್ಗಳ ಮಾತುಗಾರಿಕೆ, ವಾಕ್‌ಶುದ್ಧಿ ಮತ್ತು ಅಸಂದಿಗ್ಧತೆ ಪ್ರೊ। ಕೆ. ಎಸ್. ನಿಸಾರ್ ಅಹಮದ್ ಅವರ ವಿಚಾರವಂತಿಕೆಯ ಜಿನಸುಗಳು.

● ನಿಮ್ಮ ಪದ್ಯಗಳಲ್ಲಿ ಮತ-ಧರ್ಮಗಳನ್ನು ಕುರಿತಂತೆ ವಿಪುಲವಾದ ಜಿಜ್ಞಾಸೆ ಕಾಣುತ್ತದೆ. ಇದಕ್ಕೇನಾದರೂ ಕಾರಣವುಂಟೆ?

— ಯಾರು ಬೇಕೆನ್ನಲಿ ಬೇಡವೆನ್ನಲಿ ಮತ-ಧರ್ಮ ಗಳು ನಮ್ಮ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಪಾತ್ರ ವಹಿಸಿಯೇ ತೀರುತ್ತವೆ. ನನ್ನ ಅನುಭವವೂ ಇದೇ ಆಗಿದೆ. ನಾನಂತೂ—Religion—(ಮತ)ವನ್ನು ನಿಷಿದ್ಧವೆಂದು ಎಂದೂ ತಿಳಿದಿಲ್ಲ. ಮತ-ಧರ್ಮಗಳ ವಿಚಾರದಲ್ಲಿ ಮನುಷ್ಯನಿಗೆ ಆಯ್ಕೆ ಇಲ್ಲ; ಅವು ಹುಟ್ಟಿನಿಂದಲೇ ಬರುವಂಥವು. ಮತ-ಧರ್ಮಗಳನ್ನು ದೂರೀಕರಿಸದೆ, ಅವನ್ನು ಗೌರವದಿಂದ ಕಂಡು, ಅವುಗಳಿಂದ ಪಡೆದ ಲಾಭಕ್ಕೆ ಕೃತಜ್ಞನಾಗಿರಬೇಕೆಂಬ ಎಚ್ಚರ ನನ್ನ ಪದ್ಯಗಳಲ್ಲಿ ನೀವು ಗಮನಿಸಬಹುದು.

● ನಿಮ್ಮ ಕಾವ್ಯದ ಪ್ರಮುಖ ಲಕ್ಷಣವನ್ನು ನೀವೇ ಹೇಗೆ ಗುರುತಿಸಿಕೊಂಡಿದ್ದೀರಿ?

— ಪರಂಪರೆಯ ದಟ್ಟ ನೆರಳಲ್ಲೆ ಹೊಸ ಮಾರ್ಗ ಕ್ರಮಣ ನನ್ನ ಕಾವ್ಯದ ಮಹತ್ವದ ಭಾಗ ಎಂದು ನನಗೆನಿಸುತ್ತದೆ. ಈ ಜಗತ್ತಿನಲ್ಲಿ ನಿಜಕ್ಕೂ ಹೊಸದೆಂಬುದು ಯಾವುದು? ಹಳೆಯದು ರೂಪ ಮಾರ್ಪಡಿಸಿಕೊಂಡು ಹೊಸ ಪರಿವೇಷ ದಲ್ಲಿ ಮೂಡಿಬರುತ್ತದೆ ಅಷ್ಟೆ. ನಿರ್ಮಿತ ಹಾದಿಗಳು ಸಂಪ್ರದಾಯವಾದರೆ, ಆ ದಾರಿಯಲ್ಲಿ ಬೈಸಿಕಲ್ ಮೇಲೊ ಮೋಟಾರು ವಾಹನ ದಲ್ಲೊ ಚಲಿಸುವುದು ಹೊಸತನ. ನನ್ನ ಕಾವ್ಯ ರಚನೆಯ ಮಹದಾಶಯಗಳಲ್ಲಿ ಭಿನ್ನತೆ ಸಾಧಿಸು ವುದೂ ಒಂದಾಗಿದೆ. ಸಮೂಹವಾದದಲ್ಲಿ ನನಗೆ ಖಂಡಿತ ವಿಶ್ವಾಸವಿಲ್ಲ. ನಾನು ನಾನೇ ಆಗಬೇಕು. ಈ ಛಲ, ಎಚ್ಚರಗಳು ನನ್ನ ಕಾವ್ಯದಲ್ಲಿ ಕೆಲಸ ಮಾಡಿರುವುದು ಹೌದು.

● ನಿಮ್ಮ ಕಾವ್ಯಧೋರಣೆ ಏನು?


— ಧೋರಣೆ ಎಂಬ ಶಬ್ದವೇ ನನಗೆ ಹಿಡಿಸದು. ನನ್ನ ಕಾವ್ಯದ ಆಶಯಗಳಲ್ಲಿ ಕೆಲವನ್ನು ಗುರುತಿಸ ಬಹುದು. ಹೀಗೆ — (1) ಎರಡು ಭಿನ್ನ ಸಂಸ್ಕೃತಿ ಗಳ ನಡುವೆ ನಿಂತು ಬರೆಯುತ್ತಿದ್ದರೂ ನಾನು

ಏಕಾಕಿಯಾಗಬಾರದೆಂಬ ಪ್ರಜ್ಞೆ. (2) ಅನನ್ಯವಾದ ಪ್ರತಿಮೆ ಪ್ರತೀಕಗಳ ಬಳಕೆಯಿಂದ ಶುದ್ಧ ಕಾವ್ಯಕ್ಕೆ ಆದಷ್ಟೂ ಹತ್ತಿರವಾಗಬೇಕೆಂಬ ತುಡಿತ. (3). ಕಾವ್ಯ ರಸಾಸ್ವಾದನೆಯಲ್ಲಿ ಕಾವ್ಯಪ್ರೇಮಿಗಳಿಗೆ, ಕಾವ್ಯಾಭ್ಯಾಸಿಗಳಿಗೆ ಸಂತೋಷ ಒದಗಿಸುವುದು. (4) ಹೊಸ ಹೊಸ ಶಬ್ದಗಳನ್ನು ಟಂಕಿಸುವುದು, ಚಲಾವಣೆಯಲ್ಲಿ ಇಲ್ಲದೆ ನಿಂತಿರುವ ಅಪರೂಪದ ಶಬ್ದಗಳ ಮರುಬಳಕೆ ಮತ್ತು (5) ಭಾಷೆಯಲ್ಲಿ ಒಂದು ಬಗೆಯ ವಿಶಿಷ್ಟತೆ ಸಾಧಿಸುವುದು. ಮುಖ್ಯವಾಗಿ ನಾನೊಬ್ಬ Complaint box ಆಗಿಯೊ ಇಲ್ಲವೆ ಬರೀ ಪ್ರತಿಕ್ರಿಯಾತ್ಮಕ ವ್ಯಕ್ತಿಯೊ ಆಗದೆ, ಭಾವ ಶ್ರೀಮಂತಿಕೆಯ ಅತ್ಯುಚ್ಚ ಮಜಲನ್ನು ತಲುಪುವುದು ನನ್ನ ಕಾವ್ಯದ ಗಂತವ್ಯ.

● ಬರೀ ಕವಿಯಾಗಿ ಅಷ್ಟೇ ಅಲ್ಲ ಗದ್ಯ ಲೇಖಕರಾಗಿಯೂ ನೀವು ಖ್ಯಾತಿ ಗಳಿಸಿದ್ದೀರಿ. ಅಂದಹಾಗೆಯೇ ನಿಮಗೆ ಪ್ರಿಯರಾದ ಲೇಖಕರು ಯಾರು?

— ಮುಖ್ಯವಾಗಿ ಐದು ಜನ ಪ್ರಾತಃಸ್ಮರಣೀಯರಾದ ಕನ್ನಡ ಬರಹಗಾರರ ಹೆಸರನ್ನು ಹೇಳಬಹುದು. ಅವರು ಕ್ರಮವಾಗಿ– ಡಿ.ವಿ.ಜಿ., ಕುವೆಂಪು, ಬೇಂದ್ರೆ, ವಿ.ಸೀ., ಪು.ತಿ.ನ.

ಕವಿಗಳಾಗಿ ನನ್ನ ಮೇಲೆ ಗಾಢ ಪ್ರಭಾವ ಬೀರಿರುವವರು ಕುವೆಂಪು. ಅವರ ಭಾವ ಸಂಪನ್ನತೆ ಮತ್ತು ಗದ್ಯ-ಪದ್ಯಗಳ ಹೃದ್ಯತೆ ನನಗೆ ಅಚ್ಚು-ಮೆಚ್ಚು. ಕಾವ್ಯದ ಆಯಾಮಗಳನ್ನು ವಿಸ್ತರಿಸಿಕೊಳ್ಳುವಲ್ಲಿ ಬೇಂದ್ರೆ ಪ್ರಭಾವ ಬೀರುತ್ತಾರೆ. ಗದ್ಯ ಬರಹಗಾರರಲ್ಲಿ ಡಿ.ವಿ.ಜಿ. ಮತ್ತು ವಿ.ಸೀ. ತುಂಬ ಇಷ್ಟವಾದವರು. ಅತ್ಯಂತ ಗಂಭೀರ ವಿಷಯವನ್ನು ('ಸಂಸ್ಕೃತಿ') ಅದೆಷ್ಟು ಸುಲಭದ್ದು ಎಂದು ತೋರುವಂತೆ ಬರೆದ ಡಿ.ವಿ.ಜಿ. ವಿಚಾರಶೀಲತೆ, ಶಬ್ದಸಂಪತ್ತು ಹಾಗು ಬರಹದ ಸಾಂದ್ರತೆ, ಬರಹಕ್ಕೆ ಅವರು ತರುವ ಸಮಗ್ರತೆ ನನಗೆ ಆದರ್ಶ. ಕೃತಿಯ ಆಂತರ್ಯವನ್ನು ಒಳಹೊಕ್ಕು ನೋಡುವ ವಿ.ಸೀ. ವಿಮರ್ಶಾರೀತಿ ನನಗೆ ಆಪ್ಯಾಯನಕರ. ಶ್ರೀ ನರಸಿಂಹಸ್ವಾಮಿ ಮತ್ತು ಶ್ರೀ ಅಡಿಗರು ಕವಿಗಳಾಗಿ ನನಗೆ ಆಪ್ತರು. ಕಾವ್ಯಜಗತ್ತಿನಿಂದ ಆಚೀಚೆ ಹೆಚ್ಚು ತಲೆ ಹಾಕದ ಇವರಿಬ್ಬರದು ಒಂದು ದೃಷ್ಟಿಯಲ್ಲಿ ಸೀಮಿತ



ಪ್ರಪಂಚ. ಪರಿಮಿತ ಪರಿಮಂಡಲದಲ್ಲಿ ಬರುವ ಅನುಭವ ವಿಶೇಷಗಳನ್ನು ಈ ಇಬ್ಬರೂ ವಿಭಿನ್ನ ರೀತಿಯಲ್ಲಿ ಆದರೆ ಪ್ರಭಾವ ಬೀರುವಂತೆ ದಾಖಲಿಸುತ್ತಾರೆ. ನಮ್ಮ ಮುಖ್ಯ ಗದ್ಯ ಬರಹಗಾರರಲ್ಲಿ ಪು.ತಿ.ನ. ಅವರೂ ಒಬ್ಬರು. ಪೌರಾಣಿಕ ಜಗತ್ತನ್ನು ವಾಸ್ತವಿಕತೆಯ ನೆಲೆಗಳಿಗೆ ತಂದು ತೋರಬಲ್ಲವರು ಪ್ರಾಯಃ ಪು.ತಿ.ನ. ಒಬ್ಬರೇ.

● ಸಾಹಿತ್ಯೋಪಾಸನೆಯಿಂದ ನಿಮಗಾಗಿರುವ ಅನುಭವ ವಿಶೇಷಗಳು ಯಾವುವು?

— ಸಾಹಿತ್ಯ ನನ್ನನ್ನೊಬ್ಬ ಶ್ರದ್ಧಾವಂತ ಓದುಗನನ್ನಾಗಿಯೂ, ವಿಮರ್ಶಕನನ್ನಾಗಿಯೂ ಪರಿವರ್ತಿಸಿದೆ. ಜೀವನವನ್ನು ನೋಡಲು ಒಂದು ಹೊಸದಾದ ದೃಷ್ಟಿಶಕ್ತಿಯನ್ನು ಸಾಹಿತ್ಯ ದಯಪಾಲಿಸಿದೆ. ಸಾಹಿತ್ಯದಲ್ಲಿ ಸಂತೈಕೆ ಮುಖ್ಯ ಗುಣ. ಇದನ್ನು ಕವಿ ರವೀಂದ್ರರು ಸಾಧಿಸಿದ್ದಾರೆ. ನಮ್ಮಲ್ಲೇ ಕುವೆಂಪು ಮತ್ತು ಪು.ತಿ.ನ. ಇದನ್ನು ಸಾಧಿಸಿದ್ದಾರೆ. ನನ್ನ ಮಾದರಿಗಳು ಇಂಥವರಿಂದ ಪಡೆದುಕೊಂಡವು. ●

ನನ್ನೂರು ನನ್ನ ಜನ

ತುಮಕೂರು ಜಿಲ್ಲೆ ಒಂದು ಹಕ್ಕಿ ನೋಟ

• ಪ್ರೊ। ಜಿ. ಎಸ್. ಸಿದ್ಧಲಿಂಗಯ್ಯ

• ಫೋಟೋ: ಕೆ. ಜಿ. ಶಿವಯೋಗಿ

ರಾಮಾಯಣ ಭಾರತ ಕತೆಗಳ ಸ್ಮೃತಿಯಿರದ ಪ್ರದೇಶಗಳೇ ಭಾರತದಲ್ಲಿಲ್ಲ ಎನ್ನಬೇಕು. ತುಮಕೂರು ಜಿಲ್ಲೆಯ ನೆನಪಾಗುತ್ತಿದ್ದಂತೆ ದೇವರಾಯನದುರ್ಗದ ನಾಮದ ಚಿಲುಮೆಯ ನೆನಪೂ ಮೂಡುತ್ತದೆ.

ಶ್ರೀರಾಮಚಂದ್ರ ಸಂಚಾರ ಮಾಡುತ್ತಿದ್ದಾಗ ಒಮ್ಮೆ ದೇವರಾಯನದುರ್ಗದ ಮೇಲೆ ನಿಂತ ರಂತೆ. ಪ್ರಾತಃಕಾಲ ನಾಮಧಾರಣೆಗೆ ಅಗತ್ಯ ವಾದ ನೀರೆಲ್ಲೂ ಕಾಣಲಿಲ್ಲ. ತತ್‌ಕ್ಷಣವೆ ಬಾಣ ವೊಂದನ್ನು ತೆಗೆದುಕೊಂಡು ಬಂಡೆಯಲ್ಲಿ ನಾಟಿ ದರಂತೆ. ಚಿಲ್ಲೆಂದು ನೀರು ಚಿಲುಮೆಯಾಗಿ ಒಸರಿತು. ಆ ನೀರಿನಲ್ಲಿ ನಾಮವನ್ನು ಕಲಸಿ ಕೊಂಡು ಧರಿಸಿದರಂತೆ. ಅಂದಿನಿಂದ ದೇವ ರಾಯನ ದುರ್ಗದ ಬಂಡೆಯಿಂದ ಜಿನುಗುವ ಆ ಚಿಲುಮೆಗೆ ನಾಮದ ಚಿಲುಮೆಯೆಂದೇ ಹೆಸರಾ ಯಿತಂತೆ.

ಇದಕ್ಕಿಂತ ವಿಚಿತ್ರವಾದದ್ದು ಇನ್ನೊಂದು ಕತೆ, ತುಮಕೂರು ಜಿಲ್ಲೆಯ ಗೂಳೂರಿನ ಸಮೀಪದ ಗ್ರಾಮದ್ದು. ಬೇಲೂರಿನ ಜಗತ್ಪ್ರಸಿದ್ಧವಾದ ಚೆನ್ನಕೇಶವ ದೇವಾಲಯದ ಪಕ್ಕದಲ್ಲಿರುವ ಚೆನ್ನ

ದೇವರಾಯನ ದುರ್ಗ



ಕೇಶವನ ವಿಗ್ರಹವನ್ನು ಪ್ರತಿಷ್ಠಾಪಿಸುವ ಪೂಜೆ ಆರಂಭವಾಯಿತಂತೆ. ಆ ವಿಗ್ರಹವನ್ನು ಇನ್ನೇನು ಪ್ರತಿಷ್ಠಾಪಿಸಬೇಕು, ಆಗ ಒಬ್ಬ ಚಿಕ್ಕ ಹುಡುಗ ಓಡೋಡಿ ಬಂದು ನಿಲ್ಲಿ ನಿಲ್ಲಿ ಎಂದು ಅಬ್ಬರಿಸಿದ. ಅವನ ದನಿಯ ಆತಂಕವನ್ನು ಕಂಡು ಅಲ್ಲಿದ್ದ ದೊರೆಯೇ ಮೊದಲುಗೊಂಡು ಆ ವಿಗ್ರಹವನ್ನು ಕಡೆದಿದ್ದ ಮಹಾಶಿಲ್ಪಿ ಜಕಣಾಚಾರಿಯೂ ಆಶ್ಚರ್ಯಗೊಂಡದ್ದೇ ಅಲ್ಲದೆ ಹುಡುಗನ ವರ್ತನೆಯನ್ನು ಉದ್ಧಟತನವೆಂದು ಭಾವಿಸಿ ಆತನನ್ನು ಗದರಿದರಂತೆ. ಆದರೆ ಹುಡುಗ ಹೆದರದೆ ಪ್ರಭುಗಳ ಕಡೆಗೆ ತಿರುಗಿ ಆ ವಿಗ್ರಹ ದೋಷಯುಕ್ತವಾಗಿದೆ; ಪೂಜೆಗೆ ಅನರ್ಹ ಎಂದು ದಿಟ್ಟವಾಗಿ ನುಡಿದನಂತೆ. ಹುಡುಗನ ಮಾತಿನ ದೃಢತೆ, ಕಣ್ಣುಗಳ ಹೊಳಪು, ಸರಳತೆಗಳಿಗೆ ಬೆರಗಾದ ಜಕ್ಕಣ ಈ ವಿಗ್ರಹ ದೋಷಪೂರ್ಣವಾಗಿದ್ದರೆ ಇಗೊ ಇದನ್ನು ಕಡೆದ ಈ ಕೈಯನ್ನೆ ಕತ್ತರಿಸಿಡುತ್ತೇನೆ ಎಂದು ಸವಾಲು ಹಾಕಿದ. ಪ್ರಭುಗಳಿಗೆ ಬೇರೆ ದಾರಿಯೇ ಇರಲಿಲ್ಲ. ಎಲ್ಲಿ ಮಗು, ಇದರ ದೋಷವೇನು ತೋರಿಸು ಎನ್ನುತ್ತಲೆ, ಹುಡುಗ ತನ್ನ ಕೈಯಲ್ಲಿದ್ದ ಉಳಿಯಿಂದ ಮೃದುವಾಗಿ ವಿಗ್ರಹದ ಹೊಟ್ಟೆಯ ಭಾಗವನ್ನು ಬಡಿದಾಗ ಕಲ್ಲಿನ ನಾದ ಬರದೆ ನೀರು ತುಂಬಿದ ಎಡೆಯ ಸದ್ದಾಯಿತು. ಬೆರಗಾದ ಶಿಲ್ಪಿ ಇಲ್ಲಿ ದೋಷವೇನಿದೆ ತೋರಿಸು? ಎಂದು ಗದರಿದ. ಹುಡುಗ ಒಂದು ಸಲ ಶಿಲ್ಪಿಯ ಕಡೆಗೂ ಮತ್ತೊಂದು ಸಲ ದೊರೆಯ ಕಡೆಗೂ ಕಣ್ಣಾಡಿಸಿ ಉಳಿಯಿಂದ ಮೆಲ್ಲನೆ ಒಂದು ಪೆಟ್ಟನ್ನು ಹಾಕುತ್ತಿದ್ದಂತೆ ಆ ಭಾಗ ಡೊಳ್ಳೆಂದು ಬಿರಿದು ನೀರು ಸುರಿಯತೊಡಗಿತು. ಒಳಗಿದ್ದ ಕಪ್ಪೆ ಹೊರಕ್ಕೆ ಚಿಮ್ಮಿತು. ಹುಡುಗನ ಅದ್ಭುತ ಪ್ರತಿಭೆಗೆ ಬೆರಗಾಗಿ ಪ್ರಭುಗಳು ಮೆಚ್ಚುಗೆ ಸೂಚಿಸಲು ಸಿದ್ಧರಾಗುತ್ತಿದ್ದಂತೆ ಇತ್ತ ಶಿಲ್ಪಿ ಜಕ್ಕಣ ತನ್ನ ಕಿರುಗತ್ತಿಯಿಂದ ಬಲಗೈಯನ್ನು ಕತ್ತರಿಸಿ ಮುಂದಿಟ್ಟನಂತೆ. ಅದೇ ಹೊತ್ತಿಗೆ ಪತಿಯಿಂದ ತ್ಯಕ್ತಳಾಗಿದ್ದ ಜಕ್ಕಣನ ಮಡದಿ ಅಲ್ಲಿಗೆ ಓಡಿಬಂದು ಗಂಡ ಕೈ ಕತ್ತರಿಸಿಕೊಂಡಿರುವುದನ್ನು

ಮೂಡಲಪಾಯ ಯಕ್ಷಗಾನ



ಅವರ ವಚನಗಳು 'ಷಟ್‌ಸ್ಥಲ ಜ್ಞಾನ ಸಾರಾ ಮೃತ' ಎಂದೇ ಖ್ಯಾತವಾಗಿವೆ.

ಗುಬ್ಬಿಯು ತೋಂಟದ ಸಿದ್ಧಲಿಂಗಯತಿಗಳ ಗುರುಗಳಾದ ಗೋಸಲ ಸಿದ್ದೇಶ್ವರರ ಗದ್ದುಗೆ ಯಿರುವ ಊರಾಗಿದೆ. ಗುಬ್ಬಿಯ ಮಲ್ಲಣಾರ್ಯ ನಿಗೆ ದೀಕ್ಷೆಯನ್ನು ನೀಡಿದವರು ಅವರೇ. ಗಣ ಭಾಷಿತ ರತ್ನಮಾಲೆ, ವಾತುಲಾಗಮಗಳನ್ನು ರಚಿಸಿದ ಮಲ್ಲಣ್ಣ ಗುಬ್ಬಿಯವನು. ಭಾವ ಚಿಂತಾರತ್ನ, ವೀರಶೈವಾಮೃತ ಮಹಾಪುರಾಣ ಗಳ ಕರ್ತೃ ಮಲ್ಲಣ್ಣ ಇವನ ಮೊಮ್ಮಗನೇ ಆಗಿ ದ್ದಾನೆ. ಈತನ ಮಗ ಶಾಂತೇಶ ತೋಂಟದ ಸಿದ್ದೇಶ್ವರ ಪುರಾಣವನ್ನು ರಚಿಸಿದ್ದಾನೆ. ನಿಟ್ಟೂರು ನಂಜಯ್ಯನು ವೇದಾಂತಸಾರ ವೀರಶೈವ ಚಿಂತಾ ಮಣಿಯನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. ಕೇಶಿರಾಜನ ಶಬ್ದಮಣಿದರ್ಪಣಕ್ಕೆ ವ್ಯಾಖ್ಯಾನ ಬರೆದಿದ್ದಾನೆ. ಭೈರವೇಶ್ವರ ಕಾವ್ಯದ ಕಥಾ ಸೂತ್ರ ರತ್ನಾಕರದ ಕರ್ತೃ ಶಾಂತಲಿಂಗದೇಶಿಕ ಸಾಸಲಿ ನವನು. ಗೂಳೂರಿನ ಸಿದ್ಧವೀರಣ್ಣ ನಾಲ್ಕನೆಯ ಶೂನ್ಯ ಸಂಪಾದನೆಯ ಕರ್ತೃ. ಶಿವಗಣ ಪ್ರಸಾದಿಯ ಮಹಾಪ್ರತಿಭೆಯಿಂದ ರೂಪುಗೊಂಡ ಮಹಾಕೃತಿ ಶೂನ್ಯ ಸಂಪಾದನೆ ತನ್ನ ಶಿಖರ ಸ್ಥಿತಿಯನ್ನು ಮುಟ್ಟಿದ್ದು ಸಿದ್ಧವೀರಣ್ಣನಲ್ಲಿ.

ವಚನ ಸಾಹಿತ್ಯದ ಸಂಕಲನ, ಸಂಗೋಪನ ಹಾಗೂ ಶೂನ್ಯ ಸಂಪಾದನೆಯ ಪರಂಪರೆಗಳಲ್ಲಿ ತುಮಕೂರು ಜಿಲ್ಲೆ ಮಹತ್ವದ ಪಾತ್ರವಹಿಸಿದೆ. ವೀರಶೈವರ ಇತಿಹಾಸದಲ್ಲೂ ಅಷ್ಟೇ.

ಈ ಜಿಲ್ಲೆ ಸ್ವಾತಂತ್ರ್ಯ ಚಳವಳಿಯಲ್ಲೂ ಮಹತ್ವದ ಪಾತ್ರವನ್ನು ವಹಿಸಿದೆ. 1939ರಿಂದಲೂ ಈ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದ ಮುಖ್ಯರು ತಾಳಕೆರೆ ಸುಬ್ರಮಣ್ಯಂ, ವೆಂಕಟರಂಗ ಅಯ್ಯಂಗಾರ್, ಆರ್. ಎಸ್. ಆರಾಧ್ಯ, ಬಿ. ಸಿ. ನಂಜುಂಡಯ್ಯ, ಎಂ. ವಿ. ರಾಮರಾವ್, ಜಿ. ವಿ. ನಾರಾಯಣಮೂರ್ತಿ ಮೊದಲಾದವರು. ಇವರಲ್ಲಿ ವೆಂಕಟರಂಗ ಅಯ್ಯಂಗಾರ್, ಜಿ. ವಿ. ನಾರಾಯಣ ಮೂರ್ತಿಗಳನ್ನುಳಿದರೆ ಮಿಕ್ಕವರು ಸಚಿವರು, ಲೋಕ ಸಭಾಸದಸ್ಯರು

ನಾಗಲಾಪುರದ ಈಶ್ವರ ದೇವಸ್ಥಾನ



ಇತ್ಯಾದಿ ಫಲಗಳನ್ನು ಪಡೆದವರು. ಕಾಂಗ್ರೆಸ್ ಪಕ್ಷದ ಅವನತಿಯೊಂದಿಗೇ ರಾಜಕೀಯವಾಗಿಯೂ ಈ ಜಿಲ್ಲೆ ಹಿಂದೆ ಸರಿಯುತ್ತ ಬಂದುದನ್ನು ನೋಡುತ್ತೇವೆ. ಜಾತೀಯತೆ, ಸ್ವಾರ್ಥ ಸಾಧನೆಗಳೇ ಕಾರಣವಾಗಿ ತುಮಕೂರು ಜಿಲ್ಲೆಗೆ ದೊರಕಬೇಕಾದ ಆದ್ಯತೆ ಈಗ ದೊರೆಯುತ್ತಿಲ್ಲ. ತುಮಕೂರು ನಗರ ಇಂದೂ ತನ್ನ ಕುಡಿಯುವ ನೀರಿನ ಸಮಸ್ಯೆಯ ಸುಳಿಯಿಂದ ಮೇಲೆದ್ದೇ ಇಲ್ಲ.

ಕೆಲವು ಸಣ್ಣಪುಟ್ಟ ಕೈಗಾರಿಕೆಗಳು ಅಲ್ಲಲ್ಲಿ ಆರಂಭಗೊಂಡಿದ್ದರೂ ಇಲ್ಲಿನ ಬೆಳವಣಿಗೆ ಏನೇನೂ ಅಲ್ಲ ಅನ್ನಬೇಕು. ಕೇವಲ ವೈಯಕ್ತಿಕವಾದ ಆಸ್ತಿವಿಸ್ತರಣೆಯ ಪ್ರಯತ್ನಗಳಾಗಿವೆಯೇ ಹೊರತು ರಾಷ್ಟ್ರ ಹೆಮ್ಮೆ ಪಡುವಂಥ ಕೈಗಾರಿಕೆಗಳು ಇಲ್ಲವೇ ಇಲ್ಲ. ಎಚ್.ಎಂ.ಟಿ ತನ್ನ ಶಾಖೆಯೊಂದನ್ನು ಇಲ್ಲಿ ತೆರೆದಿದ್ದರೂ ಅದಿನ್ನೂ ಒಂದು ಪುಟ್ಟ ಶಾಖೆಯಾಗಿಯೇ ಉಳಿದು ಬಿಟ್ಟಿದೆ.

ಶಿಕ್ಷಣ ಕ್ಷೇತ್ರದಲ್ಲಿ ಈ ಜಿಲ್ಲೆಯ ಸಾಧನೆ ನಿಜವಾಗಿ ಗಮನಾರ್ಹವಾದುದು. ಇಲ್ಲಿಯ ಶ್ರೀ ಸಿದ್ಧಗಂಗಾ ಕ್ಷೇತ್ರದ ಕಾಣಿಕೆ ಮಹತ್ವದ್ದು. ಅದರ ಅಧ್ಯಕ್ಷರಾದ ಡಾ| ಶಿವಕುಮಾರ ಸ್ವಾಮಿಗಳು ರೂಪಿಸಿರುವ ಶಿಕ್ಷಣ ಸಂಸ್ಥೆಗಳ ವ್ಯಾಪ್ತಿ ಪ್ರಾಥಮಿಕ ಶಾಲೆಗಳಿಂದ ಕಾಲೇಜುಗಳವರೆಗೆ, ತಂತ್ರಜ್ಞಾನದಲ್ಲಿ ಇಂಜಿನಿಯರಿಂಗ್ ಕಾಲೇಜಿನವರೆಗೆ ಮತ್ತೆ ಶಿಕ್ಷಣ ಕಾಲೇಜು ಮತ್ತು ಸಂಸ್ಕೃತದ ಕಾಲೇಜುಗಳನ್ನೂ ಹೊಂದಿದ್ದು ಇಡೀ ಜಿಲ್ಲೆಯಲ್ಲಿ ತನ್ನ ವಿದ್ಯಾಜಾಲವನ್ನೂ ಹರಡಿಕೊಂಡಿರುವ ಈ ವಿದ್ಯಾ ಸಂಸ್ಥೆಗಳು ವಿಶ್ವವಿದ್ಯಾಲಯದ ಘನತೆಗೆ ತಕ್ಕುವಾಗಿವೆ. ಇದಕ್ಕೂ ಹೆಚ್ಚಿನದೆಂದರೆ 'ಇಲ್ಲಿ ನಡೆಯುವ ದಾಸೋಹ. ಸುಮಾರು ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿಯ ಏರ್ಪಾಡು ಮತ್ತೆ-ಬಂದ ಅತಿಥಿ ಅಭ್ಯಾಗತರಿಗೆಲ್ಲ ನಡೆಯುವ ದಾಸೋಹ.

ಈ ವಿದ್ಯಾಸಂಸ್ಥೆಗಳೇ ಅಲ್ಲದೆ ತಿಪಟೂರಿನ ಕಲ್ಪತರು ವಿದ್ಯಾಸಂಸ್ಥೆಯೂ ಮಹತ್ವದ ಸಾಧನೆ ಮಾಡಿದೆ. ತಿಪಟೂರಿನ ಸುತ್ತಮುತ್ತಲಿನ ಜನರ ಶೈಕ್ಷಣಿಕ ಅಗತ್ಯಗಳನ್ನು ಅವು ನೋಡಿಕೊಳ್ಳುತ್ತಿವೆ. ತುಮಕೂರಿನ ಬಳಿಯಿರುವ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ ಇತ್ತೀಚಿನದಾದರೂ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳನ್ನು ಪಡೆದು ತನ್ನ ಶೈಕ್ಷಣಿಕ ಕಾರ್ಯ- ನಿರ್ವಹಣೆ ಮಾಡುತ್ತಿದೆ.



ಡಾ| ಶಿವಕುಮಾರ ಸ್ವಾಮಿಗಳು

ಪ್ರಥಮ ದರ್ಜೆ ಕಾಲೇಜೊಂದನ್ನೂ ಇದು ನಡೆಸುತ್ತಿದೆ. ಇದೇ ರೀತಿ ಚಿಕ್ಕನಾಯಕನ ಹಳ್ಳಿ ಮತ್ತು ಮಧುಗಿರಿ ಮತ್ತಿತರ ಕಡೆ ಖಾಸಗಿ ಶಿಕ್ಷಣ ಸಂಸ್ಥೆಗಳು ಕಾಲೇಜುಗಳನ್ನು ನಡೆಸುತ್ತಿವೆ.

ತುಮಕೂರು ನಗರವೊಂದರಲ್ಲೇ (ಅದರ ಸಮೀಪದ ಗ್ರಾಮ ಕೂಡ ಸೇರಿ) ಒಂದು ಮೆಡಿಕಲ್ ಕಾಲೇಜು, ಎರಡು ಇಂಜಿನಿಯರಿಂಗ್ ಕಾಲೇಜುಗಳು, ಶಿಕ್ಷಣ ಕಾಲೇಜುಗಳು, ನ್ಯಾಯ ಶಾಸ್ತ್ರಕಾಲೇಜುಗಳು, ಐದಕ್ಕೂ ಹೆಚ್ಚು ಪ್ರಥಮ ದರ್ಜೆ ಕಾಲೇಜುಗಳನ್ನು ಹೊಂದಿದ್ದು ವಿದ್ಯಾರ್ಥಿಗಳಿಗಿರುವ ಸೌಲಭ್ಯ ಸಾಲದೆನಿಸುತ್ತಿದೆ. ಹಳೆಯ ಜಯದೇವ ವಿದ್ಯಾರ್ಥಿನಿಲಯ, ಶ್ರೀ ಸಿದ್ಧರಾಮಣ್ಣ ಉಚಿತ ವಿದ್ಯಾರ್ಥಿನಿಲಯಗಳೇ ಅಲ್ಲದೆ ಕುರುಬರು, ಮರಾಠೆಯವರು, ಒಕ್ಕಲಿಗರು, ಬ್ರಾಹ್ಮಣರು ಜಾತಿಗಳ ವಿದ್ಯಾರ್ಥಿನಿಲಯಗಳೂ ಇವೆ.

ಒಂದು ಕಾಲಕ್ಕೆ ಈ ಜಿಲ್ಲೆ ಫುಟ್‌ಬಾಲ್ ಕ್ರೀಡೆಗೆ ಹೆಸರಾಗಿತ್ತು. ಬಿ. ಜಯರಾಂ ಮತ್ತು ನಾಗೇಂದ್ರರಂಥ ಕ್ರೀಡಾಪಟುಗಳು ರಾಷ್ಟ್ರಮಟ್ಟದ ಫುಟ್‌ಬಾಲ್ ಆಟಗಾರರಾಗಿದ್ದರು. ಬಿ. ಜಯರಾಂ ಅವರ ಸೋದರ ರಂಗಣ್ಣನವರ ಟೆನಿಸ್ ಪ್ರತಿಭೆ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿತ್ತು. ರಾಜ್ಯ ಮಟ್ಟದ ಕೆಲವು ಫುಟ್‌ಬಾಲ್ ಹಾಗೂ ಕ್ರಿಕೆಟ್ ಆಟಗಾರರು ಇಲ್ಲಿದ್ದರು. ಹಾಗೆಯೇ ಇಲ್ಲಿಯ ಗರಡಿಯ ಮನೆಗಳೂ ತುಂಬ ಖ್ಯಾತವಾಗಿದ್ದು ಭಾರತದ ಶ್ರೇಷ್ಠ ಕುಸ್ತಿ ಪಟುಗಳು ಇಲ್ಲಿ ಪಾಲ್ಗೊಳ್ಳುತ್ತಿದ್ದರು.

ನಾಟಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಗುಬ್ಬಿ ವೀರಣ್ಣನವರನ್ನಂತು ಮರೆಯುವಂತೆಯೇ ಇಲ್ಲ. ನಮ್ಮ ರಂಗಭೂಮಿಯ ಇತಿಹಾಸದೊಂದಿಗೇ ಬೆರೆತುಹೋದ ಮಹತ್ವದ ವ್ಯಕ್ತಿ ಅವರು. ಮತ್ತೊಬ್ಬ ಪ್ರತಿಭಾವಂತ ನಟ, ನಾಟಕಕಾರ ಓರಣ್ಣಯ್ಯ ತುರುವೇಕೆರೆ ತಾಲ್ಲೂಕಿನವರು. ಅವರ ಮಗ ಮಾಸ್ಟರ್ ಓರಣ್ಣಯ್ಯನವರೂ ಅಷ್ಟೇ ಪ್ರಸಿದ್ಧ ಕಲಾವಿದರಾಗಿದ್ದಾರೆ. ಸಿ. ಬಿ.ಮಲ್ಲಪ್ಪ ಮತ್ತು ಎಂ. ಎನ್. ಗಂಗಾಧರ ರಾಯರೂ ಅಷ್ಟೇ ಪ್ರಸಿದ್ಧರಾಗಿದ್ದ ರಂಗಕಲಾವಿದರು. ಒಂದು ಕಾಲದಲ್ಲಿ ತುಮಕೂರಿನಲ್ಲಿ ಕಂಪೆನಿ ನಾಟಕಗಳ ಪ್ರದರ್ಶನದ ಮಹಾಪೂರವೇ ಇದ್ದಿತ್ತು. ಇತ್ತೀಚೆಗೆ ರಂಗ ಚಟುವಟಿಕೆಯ ಕೆಲವು ಗುರುತುಗಳು ಕಾಣುತ್ತಿವೆ.

ವಿದ್ವತ್ಪರಂಪರೆಗೆ ಈ ಜಿಲ್ಲೆ ಎಂದೂ ಎರ

ನನ್ನೂರು ನನ್ನ ಜನ

ನನ್ನದು ಕುಗ್ರಾಮ

ಅದೊಂದು ಕುಗ್ರಾಮ. ಬಹುಶಃ ಜಿಲ್ಲೆಯಲ್ಲಿಯೇ ಅತ್ಯಂತ ಬಡಗ್ರಾಮವೆಂದು ಹೇಳಿದರೂ ತಪ್ಪಲ್ಲ! ಆವರ ತಾಲ್ಲೂಕಿನ ಶೇ 90% ಜನಗಳಿಗೆ ಆ ಊರ ಹೆಸರು ಗೊತ್ತಿಲ್ಲ! ಉದಾಹರಣೆಯೆಂದರೆ ಅಲ್ಲಿಯ ಪ್ರಾಥಮಿಕ ಶಾಲೆಗೆ ವರ್ಗವಾಗಿ ಬಂದ ಶಿಕ್ಷಕ ತಾಲ್ಲೂಕ್ ಕೇಂದ್ರದ ಬಸ್‌ಸ್ಟ್ಯಾಂಡ್‌ನಲ್ಲಿ ಆ ಊರ ಮಾರ್ಗ ಕೇಳಿದರೆ "ಈ ತಾಲ್ಲೂಕಿನಲ್ಲಿ ಆ ಊರಿಲ್ಲ" ಎಂದು ಹೇಳಿಬಿಡುತ್ತಿದ್ದರಂತೆ. ಪಾಪ! ಯಾರೋ ಕೊನೆಗೊಮ್ಮೆ ಮಾರ್ಗ ತೋರಿಸಿದ್ದಾರೆ.

ಇಂಥ ಖ್ಯಾತಿ ಪಡೆದ ಗ್ರಾಮವೇ ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಗೋಮಾರದಹಳ್ಳಿ (ಗೋವು+ಮಾರದ+ಹಳ್ಳಿ?).

ಈ ಊರು ನನ್ನ ಹುಟ್ಟೂರು. 50 ವಾಸದ ಮನೆಗಳು. ಅಂತರಿಕವಾಗಿ ಒಂದೇ ಮನೆ! ಇಲ್ಲಿಯವರೆಲ್ಲ ಒಂದೇ ಮನೆಯಿಂದ ಹಂಚಿಕೆಯಾಗಿರುವರೆಂದು ತಿಳಿಯಬೇಡಿರಿ. ಮೂರು ಜಾತಿ ವರ್ಗಕ್ಕೆ ಸೇರಿದ ಜನರಿದ್ದಾರೆ. ಆದರೂ ಈವರೆಗೆ ಒಂದೇ ಮನೆಯವರು ಎಂತಿದ್ದಾರೆ.

ಎಲ್ಲಾ ಕಡೆ ಹಬ್ಬ ಹರಿದಿನಗಳನ್ನು ಕ್ಯಾಲೆಂಡರಿನಲ್ಲಿ ಪ್ರಕಟಿಸಿದ ದಿನದಂದು ಆಚರಿಸುವುದು ಸರ್ವೇಸಾಮಾನ್ಯ. ಆದರೆ ಇಲ್ಲಿ ಹಾಗಲ್ಲ. ಹಬ್ಬದ ಮಾಸದಲ್ಲಿ ಯಾವಾಗ ಬೇಕಾದರೂ ಮಾಡುತ್ತಾರೆ. ಮಾಡುವುದಕ್ಕೆ ಮೊದಲು ಒಂದು ವಾರ ಮುಂಚಿತವಾಗಿ ಮನೆಮಂದಿಯನ್ನೆಲ್ಲಾ ಗ್ರಾಮದೇವಸ್ಥಾನದ ಮುಂದೆ ಸೇರಿಸಿ ಎಂದು ಆಚರಿಸುವುದು? ನಿಮಗೆ ಅನುಕೂಲ ಎಂದಾಗುತ್ತದೆ? ನಮಗೆಲ್ಲರಿಗೂ ಯಾವ ದಿನ ಅನುಕೂಲವಾದ ದಿನ? ಎಂದು ತಮ್ಮಲ್ಲಿ ಚರ್ಚಿಸುತ್ತಾರೆ. ಆಗ ಎಲ್ಲರೂ ಒಂದು ಒಮ್ಮತಕ್ಕೆ ಬಂದಾಗ ಹಬ್ಬದ ದಿನ ನಿಗದಿಪಡಿಸುತ್ತಾರೆ. ಒಂದು ಮನೆಯವರೇನಾದರು ಅಂದು ನನಗೆ ಆಗುವುದಿಲ್ಲವೆಂದರೆ ಒಕ್ಕೊರಲಿನಿಂದ ಮುಂದೂಡುತ್ತಾರೆ!

ಹಬ್ಬ ಮಾತ್ರವಲ್ಲ, ಮದುವೆ-ಮುಂಜಿಯಂತಹ ಸಮಾರಂಭಗಳನ್ನು ಒಂದೇ ಮನೆಯವರೆಂಬುವಂತೆ ಮಾಡಿ ಮುಗಿಸುತ್ತಾರೆ.

ಹಾಂ! ಈ ಊರಿನಲ್ಲಿ ನಿರುದ್ಯೋಗಿಯೆನ್ನುವ ಒಬ್ಬ ಪದವೀಧರನೂ ಇಲ್ಲ! ಪದವಿಪೂರ್ವ ಕಾಲೇಜು ಪ್ರವೇಶಿಸಿರುವವರು ನಾಲ್ವರು!

ಇದ್ದಾನೆ ಓರ್ವ ಮಾತ್ರ ಸರ್ಕಾರಿ ಕೆಲಸದಲ್ಲಿ! ಕೆ.ಇ.ಬಿ.ನಲ್ಲಿ ಲೈನ್‌ಮನ್!


● **ಪಿ. ಮಂಜುನಾಥ್ ತಿಪಟೂರು**

ವಾಗಿಲ್ಲ. ಶರಣ ಸಾಹಿತ್ಯದ ಅತ್ಯಪೂರ್ವ ಸಾಧನೆಗಳಿಗೆ ಕಾರಣವಾದ ಇತಿಹಾಸವುಳ್ಳ ಈ ಜಿಲ್ಲೆಯ ಸೃಜನಶೀಲ ಹಾಗೂ ಸೃಜನೇತರ ಪ್ರತಿಭೆಗಳ ಪರಂಪರೆ ಜೀವಂತವಾಗಿಯೇ ಇದೆ.

ಪಂಪಭಾರತವನ್ನು ಸಂಪಾದಿಸಿದ ಗಣಿತ ಶಾಸ್ತ್ರಜ್ಞ ಪ್ರೊ. ಬೆಳ್ಳಾವೆ ವೆಂಕಟನಾರಾಣಪ್ಪ, ರಂಗಚಾಲನೆಗೆ ಅತ್ಯಪೂರ್ವ ನಾಟಕಗಳನ್ನು ರಚಿಸಿದ ಬೆಳ್ಳಾವೆ ನರಹರಿಶಾಸ್ತ್ರಿ, ನಡೆದಾಡುವ ವಿಶ್ವಕೋಶವೆಂದೇ ಖ್ಯಾತರಾಗಿದ್ದ ಪ್ರೊ. ಡಿ. ಎಲ್. ನರಸಿಂಹಾಚಾರ್ಯ, ಆಧುನಿಕ ಅಭಿನವಗುಪ್ತನೆಂಬ ಖ್ಯಾತಿ ಪಡೆದಿದ್ದ ಆಚಾರ್ಯ ತೀ. ನಂ. ಶ್ರೀಕಂಠಯ್ಯ, ನವೋದಯ ಕಾಲದ ಭಾಷಾ ಶಾಸ್ತ್ರಜ್ಞ ಕ. ವೆಂ. ಲಕ್ಷ್ಮಣಾಚಾರ್, ಅದ್ಭುತ ವಾಗ್ಮಿಯಾಗಿದ್ದ ಪ್ರೊ. ಕೆ. ವೆಂಕಟನಾರಣಪ್ಪ, ಸ್ವಸಾಮರ್ಥ್ಯದಿಂದಲೇ ಬೆಳೆದ ಹುಲುಕುಂಟೆಯ ಕೀರ್ತನಾಚಾರ್ಯ ಬಿ. ಶಿವಮೂರ್ತಿ ಶಾಸ್ತ್ರಿ ಇಂಥ ವ್ಯಕ್ತಿತ್ವಗಳ ನೆನಪು ರೋಮಾಂಚಕಾರಿಯಾದದ್ದು, ಇಂದೂ ಇದೇ ರೀತಿ ಸೃಜನ ಹಾಗೂ ಸೃಜನೇತರ ವಿಭಾಗ ಎರಡರಲ್ಲಿಯೂ ತುಂಬ ಪ್ರಮುಖರಾದ ವ್ಯಕ್ತಿಗಳಿರುವುದು ಈ ಜಿಲ್ಲೆಯ ಸಾಂಸ್ಕೃತಿಕ ಸಿರಿಗೆ ದ್ಯೋತಕವಾಗಿದೆ. ಇಂಥ ಅದ್ಭುತವಾದ ಶೈಕ್ಷಣಿಕ ಅವಕಾಶಗಳು, ಸೃಜನ ಹಾಗೂ ಸೃಜನೇತರ ಕ್ಷೇತ್ರಗಳಲ್ಲಿ ಪ್ರಮುಖರಾದ ವ್ಯಕ್ತಿಗಳು ಇದ್ದರೂ ಈ ಜಿಲ್ಲೆ ಕರ್ನಾಟಕದಲ್ಲಿ ಪ್ರಮುಖ ಪಾತ್ರ ವಹಿಸುವಲ್ಲಿ ಅಶಕ್ತವಾಗಿದೆ. ಕೇವಲ ಜಿಲ್ಲೆಗಲ್ಲ, ರಾಜಕ್ಕೇ ದಿಕ್ಕು ತೋರಬಲ್ಲಂಥ ನಾಯಕತ್ವ ಜಿಲ್ಲೆಯಲ್ಲಿ ಮೂಡಬೇಕಾಗಿದೆ. ಇಲ್ಲಿರುವ ಬೆಟ್ಟದ ಕಲ್ಲುಗಳನ್ನು ಒಡೆದು ಮಾರಾಟ ಮಾಡುವುದನ್ನು ನಿಲ್ಲಿಸಿ ಅಲ್ಲಲ್ಲಿರುವ ಸಣ್ಣಸಣ್ಣ ಕಾಡುಗಳನ್ನು ದೊಡ್ಡದಾಗಿ ಬೆಳೆಸಬೇಕಾಗಿದೆ, ಇಲ್ಲಿನ ಜಲ ಸಮಸ್ಯೆಗೆ ದೀರ್ಘಕಾಲದ ಪರಿಹಾರವನ್ನೂ ಕಂಡುಕೊಳ್ಳಬೇಕಾಗಿದೆ. ಹಾಗಾದಾಗಲೇ ಜಿಲ್ಲೆ ಸರ್ವತೋಮುಖರಾಗಿ ಬೆಳೆದು ಜಿಲ್ಲೆಯಲ್ಲಿರುವ ಜನರಿಗೆ ಉತ್ತಮ ಜೀವನಾವಕಾಶಗಳು ಪ್ರಾಪ್ತವಾಗುತ್ತವೆ.

ಪರಂಪರೆಯ ವೈಭವದ ಸ್ಮೃತಿಯಲ್ಲಿ ಮೈ ಮರೆಯದೆ ಇರುವ ಅಲ್ಪಸ್ವಲ್ಪ ಖನಿಜ ಸಂಪತ್ತನ್ನು ಬಳಸಿಕೊಂಡು ಜನೋಪಕಾರಿಯೂ ಉತ್ಪಾದಕವೂ ಆದ ಯೋಜನೆಗಳಿಂದ ತುಮಕೂರನ್ನು ಮಹತ್ತರ ಜಿಲ್ಲೆಯಾಗಿ ರೂಪಿಸಬೇಕಾಗಿದೆ. ವಿಹಾರ ಸ್ಥಳಗಳಾಗಿ ಸಿದ್ಧರಬೆಟ್ಟ, ದೇವರಾಯನ ದುರ್ಗ ಮೊದಲಾದುವುಗಳನ್ನು ರೂಪಿಸಬೇಕಾದ ಅಗತ್ಯವೂ ಇದೆ—ಎಲ್ಲಾ ಅವಕಾಶಗಳನ್ನೂ ಬಳಸಿಕೊಂಡು ಈ ಜಿಲ್ಲೆ ಮಹತ್ತರವಾದ ಸ್ಥಾನವನ್ನು ಪಡೆಯಲೆಂದು ಹಾರೈಸುತ್ತೇನೆ.

ಜಿಲ್ಲೆಯ ಪ್ರಮುಖಾಂಶಗಳನ್ನು ಎತ್ತಿ ತೋರುವ ಪ್ರಬಂಧವೇ ಹೊರತು ಹೆಸರುಗಳ ಪಟ್ಟಿ ಮಾಡುವ ಕಾರ್ಯ ಈ ಬಂಧಕ್ಕೆ ಹೊರತಾದದ್ದೆಂದು ನಮ್ರವಾಗಿ ಸೂಚಿಸುತ್ತೇನೆ. ●



ತುಮಕೂರು ಜಿಲ್ಲೆ

ಪ್ರವಾಸಿಗರ ಕಾಶ್ಮೀರ

● ಡಾ। ಸಾ. ಶಿ. ಮರುಳಯ್ಯ

'ರಾಗಿಣಿ', ಸರ್ವೀಸ್ ರಸ್ತೆ,
ವಿಜಯನಗರ 2ನೆ ಹಂತ,
ಬೆಂಗಳೂರು – 560 040.

● ಫೋಟೋ: ಕೆ. ಜಿ. ಶಿವಯೋಗಿ

ತುಮಕೂರು ಜಿಲ್ಲೆ ಪ್ರವಾಸಿಗರ ಕಾಶ್ಮೀರ; ಯಾತ್ರಾರ್ಥಿಗಳ ಮೆಕ್ಕಾ, ಮುಮುಕ್ಷುಗಳ ಕಾಶಿ; ಧರ್ಮಗುರುಗಳ ವ್ಯಾಟಿಕನ್, ಆಳಿದವರ ಹಸ್ತಿನಾವತಿ, ಬಾಳಿದವರ ಭಾಗೀರಥಿ! ಹೆಜ್ಜೆ ಇಟ್ಟೆಡೆಯಲ್ಲಿ ಹಚ್ಚ ಹಸುರಿನ ಪಚ್ಚೆ; ಕತ್ತೆತ್ತಿದರೆ ಕಾಣುತ್ತವೆ ಮುಗಿಲೊಡನೆ ಮಾತನಾಡುವ ಗಿರಿಶಿಖರಗಳು, ಬಯಲು ಸೀಮೆಯಾದರೂ ಇದು ಶಿಂಷಾ ಮತ್ತು ಸುವರ್ಣಮುಖಿ ಎಂಬ ಪುಣ್ಯ ನದಿಗಳ ವಿಹಾರಭೂಮಿ, ತೆಂಗು, ಅಡಕೆ, ಮಾವು, ಬೇವು, ಬಾಳೆ, ಹಲಸು, ಮರುಗ, ಮಲ್ಲಿಗೆಗಳ ಆಗರ. ಬೆಳ್ಳಾರ ಬಂಗಾರ ಬೆಳೆದರೆ, ಕುದುರೆ ಕಣಿವೆ ಹಬ್ಬಿಗೆ ಗುಡ್ಡ ಕಾರೇಕುರ್ಚಗಳು ಮ್ಯಾಂಗನೀಸ್ ಬಿಡಿಸುತ್ತವೆ. ಅಮ್ಮಸಂದ್ರ ಸಿಮೆಂಟ್ ಸುರಿದರೆ ಹುಳಿಯಾರು ಸುಣ್ಣ ಸುಡುತ್ತೆ, ಬಿಳಿಗೆರೆ ಕಿಬ್ಬನ ಹಳ್ಳಿಗಳು ಆದಿಶಿಲಾಯುಗ ಮತ್ತು ಮಧ್ಯಶಿಲಾಯುಗಗಳ ಅವಶೇಷಗಳನ್ನು ಕೊಟ್ಟರೆ, ತಿಪಟೂರು ನವಶಿಲಾಯುಗದ ಬೂದಿಗುಡ್ಡವನ್ನು ಕೊಟ್ಟಿದೆ. ಕಡಬ ಕದಂಬ ಮಹರ್ಷಿಗಳ ತಪೋಕ್ಷೇತ್ರ, ತುರುವೇಕೆರೆ ಮೃಕಂಡು ಮುನಿಗಳ ಯೋಗಭೂಮಿ, ಕ್ಯಾತಸಂದ್ರ ಗೌತಮ ಮುನಿಗಳ ಆಶ್ರಮ, ಮಂದರಗಿರಿ ಜಿನೇಂದ್ರ ಯತಿಗಳ ಚೈತ್ಯಾಲಯ. ನಾಮ ಕಲಿಸಲು ಬಂಡೆಯ ಒಡಲಿಂದ ಶ್ರೀರಾಮನು ನೀರು ತೆಗೆದ ತಾಣ ನಾಮದ ಚಿಲುಮೆ, ಸಂಪಗೆ ಮಹಾಭಾರತದ ಸುಧನ್ವನಾಳಿದ ಚಂಪಕಾನಗರ, ಶಕಪುರುಷ ಶಾಲೀವಾಹನ ತುರುವೇಕೆರೆ ತಾಲೂಕು ತಂಡಗದಲ್ಲಿ ಹುಟ್ಟಿದನಂತೆ, ಅಮರಶಿಲ್ಪಿ ಜಕಣಾಚಾರಿ ಕೈದಾಳದಲ್ಲಿ ಜನಿಸಿದನಂತೆ! ಇದು ಗಂಗರಾಡಿದ ಅಂಗಳ, ಚಾಲುಕ್ಯ ರಾಷ್ಟ್ರಕೂಟರ ಆಡುಂಬೊಲ. ಕಾಂಚಿಯಿಂದ ಬಂದ ಪಲ್ಲವರು ಇಲ್ಲಿ ಕರ್ನಾಟಕದಲ್ಲಿ ನೊಳಂಬರಾದರು. ಅವರು 'ಎಳುನಾಡ ಪ್ರಭು'ಗಳೆಂದು ಖ್ಯಾತರಾದದ್ದು ಈಗಿನ ಎಳನಾಡುವಿನಲ್ಲಿ. ಇದು ನೊಳಂಬವಾಡಿ ಹನ್ನೆರಡು ಸಾವಿರದ ವಿಶಾಲ ರಾಜ್ಯ, ಹಾಗಲವಾಡಿಯ ಪಾಳೇಗಾರರಾಳಿದ ಪ್ರಸಿದ್ಧ ಪಾಳೇಪಟ್ಟು. ಶಿರಾದಲ್ಲಿ ನವಾಬರಿದ್ದರೆ, ಹೊಳವನ ಹಳ್ಳಿಯಲ್ಲಿ ಪಾಳೇಗಾರರಿದ್ದರು. ಪಾವಗಡದಲ್ಲಿ ಚೋಳರು, ಬಯಲು ಭಾಗದಲ್ಲಿ ಗಂಗರು, ಹೊಯ್ಸಳರು, ಚಾಲುಕ್ಯರು, ವಿಜಯನಗರದ ಅರಸರು, ಮೈಸೂರು ರಾಜರು ಎಲ್ಲರೂ ಆಳ್ವಿಕೆ ನಡೆಸಿದ್ದಾರೆ ಇಲ್ಲಿ. ಶಿಲ್ಪ–ವಾಸ್ತುಶಿಲ್ಪಗಳು, ಸಾಹಿತ್ಯ-ಸಂಸ್ಕೃತಿಗಳು, ಧರ್ಮ-ದರ್ಶನಗಳು ಹಲವು ಹತ್ತೆಂಟು ಮುಖಗಳಲ್ಲಿ ಬೆಳಕು ಕಂಡಿವೆ ಕೂಡ.

ಸರ್ವಧರ್ಮ ಸಮನ್ವಯ ವೇದಿಕೆ: ಹನ್ನೆರಡನೆಯ ಶತಮಾನದ ಶಿವಯೋಗಿ ಸಿದ್ಧರಾಮರು ಅನುಷ್ಠಾನ ಮಾಡಿದ್ದಾರೆ ಎಳನಾಡು ಮತ್ತು ಗೋಡೆಕೆರೆಗಳಲ್ಲಿ. ಎಡೆಯೂರು ಸಿದ್ಧಲಿಂಗೇಶ್ವರರ ಪೂಜ್ಯ ಗುರುಗಳಾದ ಗೋಸಲ ಚನ್ನಬಸವೇಶ್ವರರು ನಿತ್ಯದರ್ಶನವೀಯುತ್ತಿದ್ದಾರೆ ಗುಬ್ಬಿಯಲ್ಲಿ ಸಮಾಧಿಸ್ಥರಾಗಿ. ಹದಿನಾರನೆಯ ಶತಮಾನದ ವಿಶ್ವಜ್ಯೋತಿ ಸಿದ್ಧಲಿಂಗೇಶ್ವರರು ನಿರ್ವಿಕಲ್ಪ ಸಮಾಧಿಯಲ್ಲಿದ್ದಾರೆ ಎಡೆಯೂರಿನಲ್ಲಿ. ಶ್ರೀ ಸಿದ್ಧಲಿಂಗೇಶ್ವರರ ಕರಕಮಲ



ಗೂಳೂರು ಗಣೇಶ

ಸಂಜಾತರಾದ ಶ್ರೀ ಬೋಳ ಬಸವೇಶ್ವರು ಕಾಯ ಸಹಿತ ಕೈಲಾಸವೈದಿದ್ದಾರೆ ಬಿಜ್ಜಾವರದಲ್ಲಿ ಹದಿನೇಳನೆಯ ಶತಮಾನದಲ್ಲಿ. ಹದಿನೆಂಟನೆಯ ಶತಮಾನದಲ್ಲಿ ಮಹಾಗುರು ಮರುಳ ಸಿದ್ದೇಶ್ವರರು ನೆಲೆನಿಂತಿದ್ದಾರೆ ಕುಪ್ಪೂರು ಗದ್ದಿಗೆ ಮಠದಲ್ಲಿ. ಹುಟ್ಟಿನಿಂದ ಮುಸಲ್ಮಾನರಾದರೂ ಭಾವನೆಯಲ್ಲಿ ಭಾರತೀಯರಾಗಿ ಹಿಂದೂ ಗಳಿಗೂ ಪ್ರಿಯರಾಗಿದ್ದ ತಾತಯ್ಯನವರು ಗೋರಿ ಯಲ್ಲಿದ್ದಾರೆ ಚಿಕ್ಕನಾಯಕನಹಳ್ಳಿಯಲ್ಲಿ. ಈ ಜಿಲ್ಲೆಯಲ್ಲಿ ಜೈನ ಸವಣರು, ಹೆಬ್ಬಾರ ವೈಷ್ಣವ ಯತಿಗಳು, ಅವಧೂತರು ಅಡ್ಡಾಡಿದ್ದಾರೆ, ಪಾವನಗೊಳಿಸಿದ್ದಾರೆ ತಮ್ಮ ಪದರಜದಿಂದ. ಇಂದಂತೂ ಅಭಿನವ ಬಸವೇಶ್ವರರೆನಿಸಿದ ಸಿದ್ದಗಂಗಾಧೀಶ ಶ್ರೀ ಶ್ರೀ ಶ್ರೀ ಡಾ॥ ಶಿವ ಕುಮಾರ ಮಹಾಸ್ವಾಮಿಗಳು ಸುಳಿದಾಡುವ ಬೆಳಕಾಗಿದ್ದಾರೆ. ಕೆರಗೋಡಿ ರಂಗಾಪುರ, ಶಿಢ್ಲೆಹಳ್ಳಿ ಗುರುಕುಲ, ತಮ್ಮಡಿಹಳ್ಳಿ ವಿರಕ್ತ ಮೂರ್ತಿಗಳು, ನೊಣವಿನ ಕೆರೆ ಶಿವಯೋಗಿ ಗಳು, ಚಿಕ್ಕತೊಟ್ಟಲಗೆರೆ ಅಡವೀ ಸ್ವಾಮಿಗಳು, ದೊಡ್ಡಗುಣಿ ಮತ್ತು ಎಡೆಯೂರುಗಳಲ್ಲಿನ ರಂಭಾಪುರೀ ಪೀಠದ ಶಾಖಾಧಿಕಾರಿಗಳು, ಗುಬ್ಬಿ ಮತ್ತು ತುಮಕೂರುಗಳಲ್ಲಿರುವ ಮಠಾಧೀಶರು ಗಳು, ಕ್ರೈಸ್ತ ಗುರುಗಳು ಎಲ್ಲರೂ ಇದ್ದಾರೆ. ಎಚ್. ಎಂ. ಗಂಗಾಧರಯ್ಯನವರಿಂದ ಸಿದ್ಧಾರ್ಥ ನಗರದಲ್ಲಿ ಬೌದ್ಧವಿಹಾರ ನಿರ್ಮಾಣವಾಗು ತ್ತಿದೆ. ಹೀಗೆ ತುಮಕೂರು ಸರ್ವಧರ್ಮ ಸಮ ನ್ವಯ ವೇದಿಕೆಯಾಗಿದೆ.

ಶಿಕ್ಷಣ: ನರ್ಸರಿಯಿಂದ ಮೆಡಿಕಲ್ ಕಾಲೇಜಿನ ವರೆಗೆ ಎಲ್ಲ ಫ್ಯಾಕಲ್ಟಿಯ ಶಿಕ್ಷಣ ವ್ಯವಸ್ಥೆ ಇದೆ. ಸಕಲ ವಿಭಾಗಗಳಲ್ಲೂ ಸರ್ವಾಂಗ ಸುಂದರ ವಾಗಿ ಬೆಳೆದುನಿಂತಿದೆ. ಇನ್ನು ಕೆಲವೇ ವರ್ಷ ಗಳಲ್ಲಿ ತುಮಕೂರು ತನ್ನದೇ ಆದ 'ವಿಶ್ವ ವಿದ್ಯಾಲಯ'ವನ್ನು ಹೊಂದುವಷ್ಟು ಶ್ರೀಮಂತ ವಾಗಿದೆ ಶಿಕ್ಷಣದಲ್ಲಿ. ಸಿದ್ದಗಂಗಾ, ಆದಿಚುಂಚನ ಗಿರಿ, ತಮ್ಮಡಿಹಳ್ಳಿ, ಕೆರಗೋಡಿ ರಂಗಾಪುರ, ಶಿಢ್ಲೆಹಳ್ಳಿ ಮೊದಲಾದ ಕ್ಷೇತ್ರಗಳ ಶ್ರೀ ಶ್ರೀ ಗಳವರು ಶಿಕ್ಷಣಕ್ಕೆ ವಿಶೇಷ ಪ್ರೋತ್ಸಾಹ ನೀಡು ತ್ತಿದ್ದಾರೆ. ಎಚ್.ಎಂ. ಗಂಗಾಧರಯ್ಯನವರು ದಲಿತ ವರ್ಗದ ದೈವ ಆಗಿದ್ದಾರೆ. ದಿವಂಗತ ಜಿ. ವಿ. ನಾರಾಯಣಮೂರ್ತಿಯವರು ಚಿಕ್ಕ

ತುಮಕೂರು ಜಿಲ್ಲೆಯ ಸಾಹಿತ್ಯ-ಸಂಸ್ಕೃತಿ-ಕಲೆ ಮತ್ತು ಇಲ್ಲಿನ ಅದ್ಭುತ ಪ್ರವಾಸೀ ಕೇಂದ್ರಗಳ ಬಗ್ಗೆ ತುಮಕೂರು ಜಿಲ್ಲೆಯವರೇ ಆದ, ಹಿರಿಯ ಕವಿ ಡಾ॥ ಸಾ. ಶಿ. ಮರುಳಯ್ಯ ಅವರು ಇಲ್ಲಿ ಕಾಣಿಸಿದ್ದಾರೆ.

ನಾಯಕನ ಹಳ್ಳಿ ಮತ್ತು ಮಾಯಸಂದ್ರಗಳಲ್ಲಿ, ಪಲ್ಲಾಗಟ್ಟಿ ಅಡವಪ್ಪನವರು ತಿಪಟೂರಿನಲ್ಲಿ ಶಿಕ್ಷಣ ಬೆಳಗಲು ಕಾರಣರಾಗಿದ್ದಾರೆ.

ಸಾಹಿತ್ಯ: ಸಾಹಿತ್ಯ ಕ್ಷೇತ್ರದ ಪಲವರು ದಿಗ್ಗಜರನ್ನು ಕೊಟ್ಟ ಕೀರ್ತಿ ತುಮಕೂರು ಜಿಲ್ಲೆಯದು. ಪ್ರಸಿದ್ಧ ವಚನಕಾರ ಅಮರಗೊಂಡ ಮಲ್ಲಿಕಾರ್ಜುನ (12ನೇ ಶತಮಾನ), ಗಣ ಭಾಷ್ಯ ರತ್ನಮಾಲೆ, ವಾತುಲಾಗಮ ಟೀಕೆ, ಪುರಾತನರ ವಚನ ಸಂಗ್ರಹ-ಈ ಕೃತಿಗಳನ್ನಿತ್ತ ಮಲ್ಲಣ್ಣ, ಭಾವಚಿಂತಾರತ್ನ, ಪುರಾತನರ ರಗಳೆ, ವೀರಶೈವಾಮೃತ ಮಹಾಪುರಾಣ (ವಿಶ್ವಕೋಶ) ಕೊಟ್ಟ ಮಲ್ಲಣಾರ್ಯ, ತೋಂಟದ ಸಿದ್ದೇಶ್ವರ ಪುರಾಣ ಬರೆದ ಶಾಂತೇಶ-ಇವರೆಲ್ಲರೂ ಗುಬ್ಬಿ ಯವರು, ಹಳೇ ಮೈಸೂರು ಭಾಗದ ಮೊತ್ತ ಮೊದಲ ಕನ್ನಡ ಕಾದಂಬರಿಕಾರ ಸೋಲೂರು ಮುರಿಗಾರಾಧ್ಯ ಗುಬ್ಬಿಯವನು. ಇವರ ಕೃತಿ 'ಶೃಂಗಾರ ಚಾತುರ್ಯೋಲ್ಲಾಸಿನಿ' (1896), ಕೇಶಿರಾಜನ ಶಬ್ದಮಣಿ ದರ್ಪಣಕ್ಕೆ ಟೀಕು ಬರೆದ ಮತ್ತು ವೀರಶೈವ ಚಿಂತಾಮಣಿ ಎಂಬ ದರ್ಶನ ಗ್ರಂಥವಿತ್ತ ನಿಷ್ಠೂರ ನಂಜಯ್ಯ ಗುಬ್ಬಿ ತಾಲೂಕು ನಿಟ್ಟೂರಿನವನು. ಶ್ರೇಷ್ಠ ರೀತಿಯಲ್ಲಿ 'ಶೂನ್ಯ ಸಂಪಾದನೆ'ಯನ್ನು ರೂಪಿಸಿಕೊಟ್ಟ ಸಿದ್ದವೀರ ಣ್ಣೊಡೆಯ ಗೂಳೂರಿನವನು; ಸಂಪಾದನೆಯ ಪರ್ವತೇಶ್ವರ, ವಿರಕ್ತ ತೋಂಟದಾರ್ಯ ಇವರೂ ಅಲ್ಲಿಯವರೆ. ಕನ್ನಡದ ಕಣ್ವ ಆಚಾರ್ಯ ಬಿ. ಎಂ. ಶ್ರೀಯವರ ಜನ್ಮಸ್ಥಳ ಬೆಳ್ಳೂರು 'ನಡೆದಾಡುವ ವಿಶ್ವಕೋಶ' ಎಂದೆನಿಸಿದ್ದ ಡಾ॥ ಡಿ. ಎಲ್. ಎನ್. ಹುಟ್ಟಿದ್ದು ಚಿಕ್ಕನಾಯಕನ

ಹಳ್ಳಿಯಲ್ಲಿ. ಆಧುನಿಕ ಅಭಿನವ ಗುಪ್ತರೆನಿಸಿದ ಆಚಾರ್ಯ ತೀ. ನಂ. ಶ್ರೀಯವರ ಹುಟ್ಟೂರು ಚಿಕ್ಕನಾಯಕನ ಹಳ್ಳಿ ತಾಲೂಕಿನ ತೀರ್ಥಪುರ. ಕರ್ನಾಟಕ ಕವಿಕೇಸರಿ ನರಸಿಂಹಶಾಸ್ತ್ರಿ ಬೆಳ್ಳಾವಿಯವರು. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಾಪನೆ ಪ್ರಗತಿಗಳಿಗೆ ಕಾರಣರಾದ ಬೆಳ್ಳಾವೆ ವೆಂಕಟನಾರಣಪ್ಪ, ಬಿ. ಶಿವಮೂರ್ತಿ ಶಾಸ್ತ್ರೀ, ಜಿ. ಎಸ್. ಸಿದ್ದಲಿಂಗಯ್ಯ–ಇವರು ತುಮಕೂರಿನವರು. ಬಂಡಾಯ ಪಂಥದ ಪ್ರಬುದ್ಧ ಪ್ರಸ್ಥಾನಕಾರ ಬರಗೂರು ರಾಮಚಂದ್ರಪ್ಪ ಚಲಚ್ಚಿತ್ರರಂಗದ ಖ್ಯಾತ ಕವಿ ದೊಡ್ಡರಂಗೇಗೌಡ, ಪ್ರಸಿದ್ಧ ವಚನಕಾರ ಟಿ. ಎನ್. ಮಹಾದೇವಯ್ಯ, ವ್ಯಾಕರಣ ವಿದ್ವಾಂಸ ಕ. ವೆಂ. ರಾಘವಾಚಾರ್, ಕೆ. ವೆಂಕಟರಾಮಪ್ಪ, ಹಾಸ್ಯ ಲೇಖಕಿ ಟಿ. ಸುನಂದಮ್ಮ, ಕಾದಂಬರಿಗಾರ್ತಿ ಸಾಯಿಸುತೆ, ಮಾ. ನ. ಚೌಡಪ್ಪ, 'ಬುದ್ಧಚರಿತ ವಚನ ಮಧು' ಎಂಬ ಮಹಾಕಾವ್ಯವಿತ್ತ ದಿ| ಕಾಶೀ ವಿಶ್ವನಾಥಶೆಟ್ಟಿ, ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿದ್ದು ತಮ್ಮ ಬದುಕಿನುದ್ದಕ್ಕೂ ಎಲ್ಲ ವಿಧದಿಂದಲೂ ನ್ಯಾಯ ದೊರಕಿಸಿಕೊಟ್ಟ ನಿಟ್ಟೂರು ಶ್ರೀನಿವಾಸರಾವ್, ಡಿ. ಎಂ. ಚಂದ್ರಶೇಖರ್, ಟಿ. ಎನ್ ಮಲ್ಲಪ್ಪ–ಇವರೇ ಮೊದಲಾದ ಅಸಂಖ್ಯಾತರಿದ್ದಾರೆ ಗೌರವದ ಮಾಲಿಕೆಯಲ್ಲಿ.

ರಂಗಭೂಮಿ: ಗುಬ್ಬಿ ಕನ್ನಡ ರಂಗಭೂಮಿಯ ತೂಗುದೊಟ್ಟಿಲು ವಿನೋದ ರತ್ನಾಕರ ಜಿ. ಹೆಚ್. ವೀರಣ್ಣನವರದು ಬಹು ದೊಡ್ಡ ಹೆಸರು. ಅವರು ವ್ಯಕ್ತಿಯಾಗಲ್ಲ ಒಂದು ಶಕ್ತಿಯಾಗಿ, ಒಂದು ಮಹಾಸಂಸ್ಥೆಯಾಗಿ ಬೆಳೆದವರು, ಕನ್ನಡ ರಂಗಭೂಮಿಯನ್ನು ಬೆಳಗಿಸಿದವರು. ಗುಬ್ಬಿ ಚಂದ್ರಣ್ಣನವರು ಅವರ ಮೊದಲ ಪ್ರೇರಣೆ. ಗುಬ್ಬಿ ಶ್ರೀ ಚೆನ್ನಬಸವೇಶ್ವರಸ್ವಾಮಿ ನಾಟಕ ಮಂಡಲಿ ಕಟ್ಟಿ ಒಂದು ಶತಮಾನ ಕಾಲ ಅವಿಶ್ರಾಂತವಾಗಿ ನಡೆಸಿಕೊಂಡು ಬಂದ ಹಾಗೂ ನೂರಾರು ಸಾವಿರಾರು ಜನ ನಟ ನಟಿಯರನ್ನು ಸೃಷ್ಟಿಸಿದ ಹೆಗ್ಗಳಿಕೆ ಅವರದು. ಅದೇ ರೀತಿ ಚಿಕ್ಕನಾಯಕನ ಹಳ್ಳಿಯ ಅಭಿನವ ಭಕ್ತ ಶಿರೋಮಣಿ ಸಿ. ಬಿ. ಮಲ್ಲಪ್ಪನವರ ಶ್ರೀ ಚಂದ್ರಮೌಳೀಶ್ವರ ನಾಟಕ ಸಭಾ (1927), ಹಾಸ್ಯ ಚಕ್ರವರ್ತಿ ಕೆ. ಹಿರಣ್ಣಯ್ಯನವರ 'ಹಿರಣ್ಣಯ್ಯ

ನನ್ನೂರು ನನ್ನ ಜನ

ಓಹ್, ತುಮಕೂರು!

ರಮ್ಯಕ್ಕೆ ಜಿ. ಎಸ್. ಸಿದ್ದಲಿಂಗಯ್ಯ, ನವ್ಯಕ್ಕೆ ಎಚ್. ಎಸ್. ಶಿವಪ್ರಕಾಶ್, ಬಂಡಾಯಕ್ಕೆ ಬರಗೂರು ರಾಮಚಂದ್ರಪ್ಪ, ಮಹಾಕಾವ್ಯ ರಚನೆಗೆ ಕಾಶಿ ವಿಶ್ವನಾಥ ಶೆಟ್ಟಿ, ಸಮನ್ವಯ ಸಾಧನೆಗೆ ಎಚ್. ಜಿ. ಸಣ್ಣಗುಡ್ಡಯ್ಯ ಮತ್ತು ಶಾಂತಾಸನ್ಮತಿ ಕುಮಾರ್, ಹಾಸ್ಯ ಸಾಹಿತ್ಯಕ್ಕೆ ಟಿ. ಸುನಂದಮ್ಮ, ವಚನ ಸಾಹಿತ್ಯಕ್ಕೆ ಕಮಲಾ ಹಂಪನಾ, ಚಿತ್ರ ಸಾಹಿತ್ಯಕ್ಕೆ ದೊಡ್ಡರಂಗೇಗೌಡ, ಪತ್ರಿಕೋದ್ಯಮಕ್ಕೆ ಎಚ್. ಆರ್. ಗುಂಡೂರಾಪ್, ಶಿಕ್ಷಣ ಕ್ಷೇತ್ರಕ್ಕೆ ಸಿ. ಎಚ್. ಮರಿದೇವರು, ವಿಮರ್ಶೆಗೆ ಕೆ. ಜಿ. ನಾಗರಾಜಪ್ಪ ಮತ್ತು ಕೆ. ಬಿ. ಸಿದ್ದಯ್ಯ, ಸಂಶೋಧನೆಗೆ ತೀ. ನಂ. ಶಂಕರನಾರಾಯಣ, ಕಾದಂಬರಿಗೆ ಈಚನೂರು ಸೋದರಿಯರು ಮತ್ತು ಸಾಯಿಸುತೆ, ನಾಟಕಕ್ಕೆ ಕವಿತಾಕೃಷ್ಣ ಮತ್ತು ಸುಲೋಚನಾದೇವಿ ಆರಾಧ್ಯ, ಅನುವಾದ ಸಾಹಿತ್ಯಕ್ಕೆ ಎಂ. ವಿ. ನಾಗರಾಜ ರಾವ್, ಶೈಕ್ಷಣಿಕ ರಂಗಕ್ಕೆ ಎಚ್. ಆರ್. ದಾಸೇಗೌಡ, ಮಕ್ಕಳ ಸಾಹಿತ್ಯಕ್ಕೆ ಟಿ. ಎಸ್. ನಾಗರಾಜ ಶೆಟ್ಟಿ ಮತ್ತು ಎಸ್. ವಿ. ಶ್ರೀನಿವಾಸ ರಾವ್, ಗಮಕಕ್ಕೆ ಎಚ್. ಶೇಷಾದ್ರಿ, ಸಣ್ಣಕಥೆಗೆ ಟಿ. ಎಚ್. ಹೊನ್ನಲಿಂಗಪ್ಪ, ಜೀವನ ಚರಿತ್ರೆಗೆ ಟಿ. ಜಿ. ಪ್ರಭಾಶಂಕರ ಮತ್ತು ಜಿ. ಕೆ. ಜಯಸಿಂಹ ರಾವ್, ಕನ್ನಡ ಸಾಹಿತ್ಯಕ್ಕೂ ನ್ಯಾಯ ದೊರಕಿಸಿಕೊಟ್ಟವರು ಉಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶರಾದ ನಿಟ್ಟೂರು ಶ್ರೀನಿವಾಸ ರಾವ್ ಮತ್ತು ಡಿ. ಎಂ. ಚಂದ್ರಶೇಖರ್.

(ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಡಾ| ಸಾ. ಶಿ., ಮರುಳಯ್ಯ ಅವರ ಅಧ್ಯಕ್ಷ ಭಾಷಣದಿಂದ)

ಮಿತ್ರಮಂಡಳಿ'–ಇವು ಹೆಸರಾಂತ ನಾಟಕ ಮಂಡಲಿಗಳು. ಅಂತೆಯೇ ಗೊರಗೊಂಡನಹಳ್ಳಿ ನಾಟಕಸಂಘ (1888), ಶಂಕರೀವಿಲಾಸ ನಾಟಕ ಸಂಘ (1908), ಬಾಲ ಕಲಾವರ್ಧನಿ, ಗುಬ್ಬಿ (1925) (ಇದು ಗುಬ್ಬಿ ಕಂಪನಿಗೆ ಸೇರಿದ ಒಂದು ಮಿನಿ ಕಂಪನಿ), ತುಮಕೂರು ಚಾಮುಂಡೇಶ್ವರಿ ನಾಟಕ ಮಂಡಲಿ, ಸೀತಾ ಮನೋಹರ ನಾಟಕ ಸಂಘ, ತುಮಕೂರು–ಮೊದಲಾದ ವೃತ್ತಿ ನಾಟಕ ಮಂಡಳಿಗಳ ಮಾತೃಗರ್ಭವಾಗಿದೆ ತುಮಕೂರು. ಮತ್ತೆ ಅಭಿನವ ಕಲಾದರ್ಶಿ ಬಿ. ಕೆ. ಈಶ್ವರಪ್ಪ (ಚಿಕ್ಕನಾಯಕನಹಳ್ಳಿ) ನಟಭಯಂಕರ ಎಂ.ಎನ್. ಗಂಗಾಧರರಾಯ, ಚಲಚ್ಚಿತ್ರ ನಟ, ವಿನೋದಪಟು ಟಿ. ಆರ್. ನರಸಿಂಹರಾಜು (ತಿಪಟೂರು), ಬೆಳ್ಳೂರು ನಂಜುಂಡಯ್ಯ, ಚೇಳೂರು ಸಿದ್ದಪ್ಪ, ತುಮಕೂರು ನಾಗರತ್ನ, ಬಿ. ಜಯಮ್ಮ, ಮಾಲತಮ್ಮ, ಸ್ವರ್ಣಮ್ಮ, ಸುಂದರಮ್ಮ ಮೊದಲಾದ ಅಸಂಖ್ಯಾತ ನಟ ನಟಿಯರ ತವರು ತುಮಕೂರು ಜಿಲ್ಲೆ.

ಜಿಲ್ಲಾ ಜಾನಪದ: ತುಮಕೂರು ಜಿಲ್ಲೆಯ ಬಯಲಾಟ (ಯಕ್ಷಗಾನ ಅಥವಾ ಮ್ಯಾಳ)ದಲ್ಲಿ ಒಂದು ವೈಶಿಷ್ಟ್ಯ ಇದೆ. ಪಡುವಲಪಾಯದಲ್ಲಿ ತೆಂಕುತಿಟ್ಟು ಮತ್ತು ಬಡಗು ತಿಟ್ಟು ಇರುವಂತೆ ಮೂಡಲಪಾಯದಲ್ಲಿ ತುಮಕೂರು ಸುತ್ತು ಮತ್ತು ತಿಕೋಟ ಸುತ್ತು ಎಂದು ವಿಂಗಡಿಸಬಹುದು. ಇವೆರಡೂ ಎರಡು ವಿಭಿನ್ನ ಸಂಪ್ರದಾಯಗಳು. ತುಮಕೂರು ಸುತ್ತಿನ ಬಯಲಾಟ ಅಥವಾ ಮ್ಯಾಳದಲ್ಲಿ 'ಮುಖವೀಣೆ' ಎಂಬ ಶಹನಾಯ್ ಮಾದರಿಯ, ಕೇವಲ ಆರು ಅಂಗುಲ ಉದ್ದವುಳ್ಳ ಒಂದು ವಾದ್ಯ ವಿಶೇಷವಿದೆ. ತಿಕೋಟ ಸುತ್ತಿನಲ್ಲಿ ಅದಿಲ್ಲ. ಸಭಾವಂದನೆ ಮತ್ತು ವೇಷಾಲಂಕಾರಗಳಲ್ಲೂ ವ್ಯತ್ಯಾಸವಿದೆ.

ಹಾಗಲವಾಡಿ ಜುಂಜಪ್ಪ ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ವಿಶೇಷ. ಒಂದು ಉದ್ದವಾದ ಬಿದಿರು ಕೋಲಿಗೆ ಬೆಳ್ಳಿಯಿಂದ ಮಾಡಿದ ಸರ್ಪಗಳನ್ನು ಸಿಕ್ಕಿಸಿಕೊಂಡು 'ಎತ್ತಪ್ಪ ಜುಂಜಪ್ಪ' ಎಂದು ಹಾಡುತ್ತಾ ಬರುತ್ತಾರೆ ಕಾಡುಗೊಲ್ಲರು. ಇದು ಒಂದು ವಿಶಿಷ್ಟ ಜಾನಪದ ದೇವತೆ ಈ ಜಿಲ್ಲೆಯಲ್ಲಿ.

ಕರಪಾಲಮೇಳಕ್ಕೆ ತಿಪಟೂರು ಪ್ರಸಿದ್ಧ.

ಸಿದ್ದರ ಬೆಟ್ಟದ ನೂತನ ದೇಗುಲ





ಚೆನ್ನರಾಯನ ದುರ್ಗದ ಮುರಹರಿ ದೇವಸ್ಥಾನ

ಪ್ರಶಸ್ತಿ ವಿಜೇತ ಕರಪಾಲ ಸಿದ್ದಯ್ಯ ಇದ್ದಾರೆ. ಶೆಟ್ಟೀಕೆರೆ, ತಿಪಟೂರಮ್ಮ, ಬಿದಿರೆ ಅಮ್ಮ, ಹುಳಿಯಾರಮ್ಮ ಬೇವಿನಹಳ್ಳಿ ಅಮ್ಮ ಮೊದಲಾದ ದೇವರುಗಳ ಜೊತೆಯಲ್ಲಿ ಚೋಮನನ್ನು ಕುಣಿಸುತ್ತಾರೆ. ಕ್ರೂರ ಮತ್ತು ಸಾತ್ವಿಕ ಸ್ವಭಾವ ಗಳ ಸಂಕೇತ ಸ್ವರೂಪಗಳಾದ ಕರೀಚೋಮ, ಬಿಳೀಚೋಮ ಎರಡಿವೆ.

ಕುಪ್ಪೂರು ಗದ್ದಿಗೆ ಶ್ರೀ ಮರುಳಸಿದ್ದೇಶ್ವರರ ಜಾತ್ರೆ ಅಕಾಲದಲ್ಲಿ ಅಂದರೆ ಡಿಸೆಂಬರ್ ತಿಂಗಳಲ್ಲೂ, ಚಿಕ್ಕನಾಯ್ಕನ ಹಳ್ಳಿ ಆಂಜನೇಯ ಸ್ವಾಮಿ ಜಾತ್ರೆ ಆಷಾಢದಲ್ಲೂ ನಡೆಯುತ್ತದೆ. ಮಿಕ್ಕ ಜಾತ್ರೆಗಳು ಸಾಮಾನ್ಯವಾಗಿ ಯುಗಾದಿ ಆದ ಮೇಲೆ ಬೇಸಗೆಯ ಬಿಡುವಿನ ದಿನಗಳಲ್ಲಿ ನಡೆಯುತ್ತವೆ. ಎಳನಾಡು, ಗೋಡೆಕೆರೆ ಜಾತ್ರೆ ಗಳು ಅಕಾಲಿಕಗಳು. ಸಾಸಲು ಬನದಮ್ಮನ ಜಾತ್ರೆಯೂ ಅಷ್ಟೆ. ದಸೂತಿ, ಕಾರೇಹಳ್ಳಿ, ಲೋಕಮ್ಮನ ಹಳ್ಳಿ ಮೊದಲಾದೆಡೆಗಳವು ಜನ-ಜಾನುವಾರು ಜಾತ್ರೆಗಳು. ದೊಡ್ಡೆಣ್ಣೇ ಗೆರೆಯ ಲಂಬಾಣಿಗಳ ಜಾತ್ರೆ ತುಂಬಾ ಅಪ ರೂಪದ್ದು. ಹೆಸರಹಳ್ಳಿ ಲಕ್ಕವ್ವನ ಜಾತ್ರೆಯಲ್ಲಿ ಅಶ್ಲೀಲ ಪದಗಳನ್ನು ಹಾಡುತ್ತಾರೆ. ಹಾಗೆ ಬಯ್ದು ಆಡಿದರೇನೇ ಆ ದೇವರ ಕಳಶ ಮುಂದೆ ಬರುವುದು! ಇದೊಂದು ವಿಚಿತ್ರ ಜಾತ್ರೆ. ಗೊರವಯ್ಯಗಳೆಂಬ ವೃತ್ತಿಗಾಯಕರು (ಕುರುಬರು) ಅಂತಹ ಹಾಡುಗಳನ್ನು ಹಾಡುತ್ತಾರೆ. ಅಲ್ಲಿ ಬೈಗುಳವೂ ದೇವತೆಗೆ ಮಂತ್ರ ಇದ್ದ ಹಾಗೆ! ತಿಪಟೂರು ತಾಲೂಕು ಕೊನೇಹಳ್ಳಿಯಲ್ಲಿ ಮೂಡಲಪಾಯದ ಒಂದು ಜನಪದ ಯಕ್ಷಗಾನ ರಂಗಮಂದಿರ ಇದೆ. ಇದು ಡಾ। ಜೀಶಂಪವರ ಪ್ರಯತ್ನದ ಫಲ.


ಅಭಿನವ ವೀರಭದ್ರ ಎಂದು ಖ್ಯಾತರಾದ ತುಮಕೂರು ನೀಲಕಂಠಯ್ಯನವರ 'ವೀರಭದ್ರ ನರ್ತನ' ನಿಜಕ್ಕೂ ರೋಮಾಂಚನಕಾರಿ. ಇದು ಈ ಜಿಲ್ಲೆಯದೇ ಆದ ವಿಶಿಷ್ಟ ಕಲೆ.

ಗಿರಿಧಾಮಗಳು ಮತ್ತು ಪ್ರವಾಸಿ ಕೇಂದ್ರಗಳು: ಕೊರಟಗೆರೆ ತಾಲೂಕಿನ ಸಿದ್ದರಬೆಟ್ಟ ಜಿಲ್ಲೆಯ

ಒಂದು ಉತ್ತಮ ಗಿರಿಧಾಮ. ಅದೇ ರೀತಿ ಕಿಬ್ಬನ ಹಳ್ಳಿ ಬಳಿ ಇರುವ ಅತ್ತಾಳು ನರಸಿಂಹ ಸ್ವಾಮಿ ಬೆಟ್ಟ, ಪಾವಗಡ ತಾಲೂಕಿನ ನಿಡಗಲ್ಲು ಬೆಟ್ಟ, ಕುಪ್ಪೂರು ಮಲ್ಲೇಶ್ವರನ ಬೆಟ್ಟ, ತುಮಕೂರು ಬಳಿಯ ದೇವರಾಯನ ದುರ್ಗ, ಮಧುಗಿರಿ ಬೆಟ್ಟ, ಹುತ್ರಿದುರ್ಗ ಮೊದಲಾದವು ಒಳ್ಳೆಯ ಗಿರಿಧಾಮಗಳಾಗಲು ಯೋಗ್ಯಸ್ಥಳಗಳು. ಆದರೆ ಸರಕಾರದ ಅವಜ್ಞತೆಯಿಂದಾಗಿ ಹಿಂದುಳಿದಿವೆ. ಗಮನ ಹರಿಸಿದರೆ ಇಂದಿಗೂ ಯೋಗ್ಯ ಗಿರಿಧಾಮಗಳಾಗಬಲ್ಲವು.

ದೇವಾಲಯಗಳು ಮತ್ತು ಪುಣ್ಯ ಕ್ಷೇತ್ರಗಳು: ಚನ್ನರಾಯನ ದುರ್ಗದ ಮುರಹರಿ ದೇಗುಲ, ವಿಘ್ನಸಂತೆಯ ಲಕ್ಷ್ಮೀ ನರಸಿಂಹ ದೇವಾಲಯ, ನಾಗಲಾಪುರದ ಈಶ್ವರನ ಗುಡಿ, ಸಿಬಿಯ ನರಸಿಂಹ, ನಿಟ್ಟೂರ ಬಸದಿ, ತುಮಕೂರಿನ ಕೋಡಿಬಸವಣ್ಣ ಮತ್ತು ಆಂಜನೇಯ, ಕೈದಾಳದ ಚೆನ್ನಕೇಶವ, ದೇವರಾಯನ ದುರ್ಗದ ಭೋಗ ನರಸಿಂಹ, ಆರಳಗುಪ್ಪೆ ಚೆನ್ನಕೇಶವ, ಎಡೆಯೂರ ಸಿದ್ಧಲಿಂಗೇಶ್ವರ, ಗುಬ್ಬಿಯ ಚನ್ನ ಬಸವೇಶ್ವರ, ಶಿರಾದ ಮಾಲಿಕ್ ರಿಹಾಜಿ ದರ್ಗಾ, ಮಧುಗಿರಿಯ ಕಲ್ಲೇಶ್ವರ ಮತ್ತು ವೆಂಕಟರಮಣ ಅವಳಿ ದೇವಾಲಯಗಳು, ಪಂಕಜನ ಹಳ್ಳಿಯ ಮಲ್ಲಿಕಾರ್ಜುನ, ಅತ್ತಿಹಾಳು ಯೋಗ ನರಸಿಂಹ ಸ್ವಾಮಿ, ತುರುವೇಕೆರೆ ಬೇಟರಾಯ ಸ್ವಾಮಿ—ಇವೇ ಮೊದಲಾದವು ಜಿಲ್ಲೆಯ ಪ್ರಸಿದ್ಧ ದೇವಾಲಯಗಳು.

ಪ್ರೇಕ್ಷಣೀಯ ಸ್ಥಳಗಳು: 1: ಗೂಳೂರು ಗಣೇಶ ಜಗತ್ಪ್ರಸಿದ್ಧ. ಇಲ್ಲಿನ ಗಣೇಶನನ್ನು ತಯಾರಿಸಲು ಎರಡು ತಿಂಗಳಕಾಲ ಹಿಡಿಯುತ್ತದೆ.



2. ಕೈದಾಳ ಗೂಳೂರಿಗೆ ಹತ್ತಿರದಲ್ಲಿರುವ ಹಳ್ಳಿ. ಇದು ಅಮರಶಿಲ್ಪಿ ಜಕಣಾಚಾರಿಯ ಜನ್ಮಸ್ಥಳ. ದ್ರಾವಿಡ ವಾಸ್ತು ಶೈಲಿಯ ಚೆನ್ನಕೇಶವ ದೇವಾಲಯ ಇದೆ. ಇದರ ಎದುರು ಗಂಗಾಧರೇಶ್ವರನ ದೇಗುಲ ಇದೆ. ಇದು ಯಾತ್ರಾ ಸ್ಥಳವೂ ಹೌದು, ಪ್ರೇಕ್ಷಣೀಯ ತಾಣವೂ ಹೌದು.

3. ಗುಬ್ಬಿ ಒಂದು ಸಾಂಸ್ಕೃತಿಕ ಕೇಂದ್ರ. ಅನೇಕ ಜನ ವೀರಶೈವ ಕವಿಗಳು ಇಲ್ಲಿಯವರು. ಗೋಸಲ ಚನ್ನಬಸವೇಶ್ವರರ ಗದ್ದಿಗೆ ಇದೆ. ಚಿದಂಬರಾಶ್ರಮವಿದೆ. ಕನ್ನಡ ರಂಗಭೂಮಿಯ ಮಾತೃಸ್ಥಾನ. ಹಳೆಯ ಮೈಸೂರು ಭಾಗದ ಮೊದಲ ಕಾದಂಬರಿಕಾರ ಸೂ. ಮುರಿಗಾರಾಧ್ಯ ನನ್ನು ಕೊಟ್ಟ ನೆಲ.

4. ಎಡೆಯೂರು ಜಗತ್‌ಪ್ರಸಿದ್ಧ ಯಾತ್ರಾಸ್ಥಳ. ವೀರಶೈವ ಧಾರ್ಮಿಕ ಕೇಂದ್ರ. ಕುಣಿಗಲ್ ತಾಲೂಕಿನಲ್ಲಿ ಬೆಂಗಳೂರು—ಹಾಸನ ಹೆದ್ದಾರಿಯಲ್ಲಿದೆ. ಶ್ರೀ ತೋಂಟದ ಸಿದ್ಧಲಿಂಗೇಶ್ವರ ನಿರ್ವಿಕಲ್ಪ ಸಮಾಧಿ ಇದೆ ಇಲ್ಲಿ. ಇದರ ಮೇಲೆ ಕಟ್ಟಿರುವ ದೇವಾಲಯ ದ್ರಾವಿಡ ಶೈಲಿಯದು. ಯುಗಾದಿಯ ಆರಂಭದ ಪ್ರತಿವರ್ಷವೂ ಇಲ್ಲಿ ಬಹುದೊಡ್ಡ ಜಾತ್ರೆ ನೆರೆಯುತ್ತದೆ. ಎಲ್ಲ ಧರ್ಮೀಯರೂ ಇಲ್ಲಿಗೆ ನಡೆದುಕೊಳ್ಳುತ್ತಾರೆ.

5. ತುರುವೇಕೆರೆಯಲ್ಲಿ ಫಾಲ್ಗುಣ ಮಾಸದಲ್ಲಿ ಬೇಟೆರಾಯನ ಜಾತ್ರೆ ನಡೆಯುತ್ತೆ.

6. ನಿಜಗಲ್ಲು ಬೆಂಗಳೂರು—ತುಮಕೂರು ರಸ್ತೆಯಲ್ಲಿದೆ. ಪಕ್ಕದಲ್ಲೊಂದು ಬೆಟ್ಟ. ಇದು ಗಿರಿಧಾಮವಾಗಲು ಯೋಗ್ಯವಾದ ಸ್ಥಳ. ಮೇಲೆ ವೀರಭದ್ರನ ಗುಡಿ ಇದೆ.

7. ನಿಟ್ಟೂರು ಬೆಂಗಳೂರು ಹೊನ್ನಾವರ ರಸ್ತೆಯಲ್ಲಿದೆ. ಶಾಂತೇಶ್ವರ ಬಸದಿ ಇಲ್ಲಿನ ಖ್ಯಾತಿ. ಶಾಸನಗಳಿವೆ ಇಲ್ಲಿ.

8. ನೊಣವಿನಕೆರೆಯಲ್ಲಿ ಊರು ತುಂಬ ದೇವಾಲಯಗಳಿವೆ. ಒಂದು ವೀರಶೈವ ವಿರಕ್ತ ಮಠವೂ ಇದೆ. ವೇಣುಗೋಪಾಲ ಸ್ವಾಮಿ ದೇವಾಲಯದಲ್ಲಿ ಪಂಚಲೋಹದ ಆಂಜನೇಯನ ವಿಗ್ರಹ ಇದೆ. ಪ್ರತಿವರ್ಷವೂ ಮೇ ತಿಂಗಳು ಬ್ಯಾಟರಾಯನ ಜಾತ್ರೆ ನಡೆಯುತ್ತೆ.

9. ಪಂಕಜನ ಹಳ್ಳಿ ಚಿಕ್ಕನಾಯ್ಕನ ಹಳ್ಳಿ ಹತ್ತಿರ ಬೆಟ್ಟದ ಓರೆಯಲ್ಲಿದೆ. ಮಲ್ಲಿಕಾರ್ಜುನ ಸ್ವಾಮಿ ದೇವಾಲಯ ಇದೆ. ಇದು ದ್ರಾವಿಡ ಶೈಲಿಯದು. ನಿಜಕ್ಕೂ ಇದೊಂದು ಪ್ರೇಕ್ಷಣೀಯ ಸ್ಥಳ.

10. ಪಾವಗಡದ ಬಳಿ ಒಂದು ದೊಡ್ಡ ಬೆಟ್ಟ ಇದೆ. ಇದು ಗಿರಿಧಾಮವಾಗಿ ರೂಪಗೊಳ್ಳಲು ಯೋಗ್ಯಸ್ಥಳ.

11. ಮಧುಗಿರಿಯ ಕೋಟೆ ಬೆಟ್ಟದ ಮೇಲಿದೆ. ಇದು ಗಿರಿಧಾಮವಾಗಲು ಯೋಗ್ಯವಾದ ಸ್ಥಳ.

12. ಹುಳಿಯೂರಿನ ಬಳಿ ಇರುವ ಬೋರನ ಕಣಿವೆ ಒಳ್ಳೆಯ ಜಲರಾಶಿ ಇರುವ ಪ್ರದೇಶ. ಅಮೃತೂರು ಬಳಿ ಇರುವ ಮಾರ್ಕೋನ ಹಳ್ಳಿ ಅಣೆಕಟ್ಟು ಅಂಥದೇ. ಪ್ರವಾಸಿಗರ ಕಣ್ಮನ ಗಳನ್ನು ತಣಿಸುವ ತಾಣಗಳು.

13. ತಿಪಟೂರು ತಾಲೂಕಿಗೆ ಸೇರಿದ ಅರಳುಗುಪ್ಪೆಯಲ್ಲಿ ಹೊಯ್ಸಳ ವಾಸ್ತು ಶೈಲಿಯ ಚೆನ್ನಕೇಶವ ಮತ್ತು ದ್ರಾವಿಡ ವಾಸ್ತು ಶೈಲಿಯ ಕಲ್ಲೇಶ್ವರ ದೇವಾಲಯಗಳಿವೆ. ಕಲ್ಲೇಶ್ವರ ದೇವಾಲಯದ ನವರಂಗದ ಭುವನೇಶ್ವರಿ ಅದ್ಭುತ ರಮ್ಯ ಕಲಾಕೃತಿ. ಮೇಲ್ಛಾವಣಿಯ ನಟರಾಜನೂ ಅಷ್ಟೇ. ಅಷ್ಟದಿಕ್ಪಾಲಕರು ದಿಗಂಗನೆಯರ ಜೊತೆಯಲ್ಲಿರುವುದು ಇಲ್ಲಿನ ಶಿಲ್ಪ ವೈಶಿಷ್ಟ್ಯ. ಅರಳಗುಪ್ಪೆ ನಿಜಕ್ಕೂ ಒಂದು ಪ್ರೇಕ್ಷಣೀಯ ಸ್ಥಳ.

14. ಕುಣಿಗಲ್ಲಿನಲ್ಲಿ ಅಶ್ವವರ್ಧನ ಶಾಲೆ (ಸ್ಟಡ್ ಫಾರಂ) ಇದೆ. ಹೊಯ್ಸಳ ಶೈಲಿಯ ನರಸಿಂಹನ ಗುಡಿ ನೋಡಲು ಚೆನ್ನಾಗಿದೆ. 'ಮೂಡಲ್ ಕುಣಿಗಲ್ ಕೆರೆ...' ಜಾನಪದ ಹಾಡಿನ ಅಂದದ ಕೆರೆ ಇದೆ.

15. ಸಿದ್ಧಗಂಗೆ ಸುಪ್ರಸಿದ್ಧ ಯಾತ್ರಾಸ್ಥಳ. ವೀರಶೈವ ಧಾರ್ಮಿಕ ಕೇಂದ್ರ, ಶಿಕ್ಷಣ ಕೇಂದ್ರವೂ ಹೌದು. ಬೆಟ್ಟದ ಮೇಲೆ ಸಿದ್ಧಗಂಗೆ ಬಂಡೆಯಲ್ಲಿ ಉಕ್ಕಿ ಬರುತ್ತಾಳೆ. ಎಂದೆಂದಿಗೂ ಬತ್ತದ ಚಿಲುಮೆ ಇದು. ಅಧ್ಯಾತ್ಮದ ಚಿಲುವೆಯೂ ಹೌದು. ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾ ಸ್ವಾಮಿಗಳ ತಪಃ ಪ್ರಭಾವದಿಂದ ಇದೊಂದು ಪುಣ್ಯತಾಣವಾಗಿದೆ. ಶಿವರಾತ್ರಿಯಲ್ಲಿ ಇಲ್ಲಿ ಬಹು ದೊಡ್ಡ ಜನ-ಜಾನುವಾರು ಜಾತ್ರೆ ನಡೆಯುತ್ತದೆ. ತುಮಕೂರು ಕಡೆ ಬಂದವರು ಸಿದ್ಧಗಂಗೆ ಭೇಟಿ ಕೊಡಲೇಬೇಕು. ●

ಮಿಂಚಿನಗೊಂಚಲು

ಚಿಗುರು

ಮರೆವಿನಲ್ಲೂ ಮೂಡಿದ
ಅರಿವು ಪಲ್ಲವಿಸಿತ್ತು ಹೊಸ ಕವನ
ಕೊರಗಿನಲ್ಲೂ ಬೆಳಗಿದ
ಕಲ್ಪನೆ ಕೊನರಿಸಿತ್ತು ಆಶಾನಂದನ !

ಹುಸಿಬಂಧ

ಬಾಂಧವ್ಯಗಳ ಬಲೆಯಲ್ಲಿ
ಸಿಕ್ಕಿಬಿದ್ದ ಮೀನು-ನಾನು
ಅಂತಃಕರಣ ಜಲವಿಲ್ಲದೆ
ಒಣಗಿದೆ ಹೂವಂಥ ಹೃದಯವೂನು !

ಉತ್ಪನ್ನ

ಬನ್ನಗೋಜಲಿನಲ್ಲಿ
ಚೆನ್ನವಾಗಲಿಲ್ಲ ಕವನ-
ಕಣ್ಣೀರ ಕಡಲಿನಲ್ಲಿ
ಉತ್ಪನ್ನವಾಗಲಿಲ್ಲ ತುತ್ತು ಅನ್ನ !

ಕ್ಷಣಿಕ

ರಾಗ ಸಿರಿಥೈಲಿಯಲಿ
ರಂಗಿನ ಕನಸುಗಳು-
ಕನಸಿನರಮನೆಯಲ್ಲಿ
ಸುಖವೆಲ್ಲಾ ಅಣಬೆಗಳು !

ಬುದ್ಬುದಗಳು

ಯೌವ್ವನದುಯ್ಯಾಲೆಯಲಿ
ಕೈಬೀಸಿವೆ ಕಾಮನೆಗಳು,
ಶೃಂಗಾರದ ಜೇಕಿನಲಿ
ಬುದ್ಬುದವಾದುವು ಭಾವನೆಗಳು !

● ದೊಡ್ಡರಂಗೇಗೌಡ

ನಮ್ಮೂರು ನಮ್ಮ ಜನ

ಸಜ್ಜನಿಕೆ ಸರಳತೆಯ ತುಮಕೂರು

● ಟಿ. ಸುನಂದಮ್ಮ

'ಮುಂದಿನ ಶತಮಾನದ ಚಿತ್ರಣ'.... 'ಇನ್ನು ಅರುವತ್ತು ವರ್ಷಕ್ಕೆ ನಾವು ಹೀಗಿರುತ್ತೇವೆ'– ಇಂತಹ ತಲೆಬರಹದ ಲೇಖನಗಳನ್ನು ಓದುತ್ತಿರುತ್ತೀರಿ. ಆದರೆ ನಾನು ನಿಮ್ಮನ್ನು ಅರ್ಧ ಶತಮಾನದ ಹಿಂದಕ್ಕೆ ಕರೆದೊಯ್ಯುತ್ತಿದ್ದೇನೆ!

ನಾನು ತುಮಕೂರು ತಾತನ ಮೊಮ್ಮಗಳು; ತುಮಕೂರು ಮಾವನವರ ಸೊಸೆ. ತಾತನ ಮನೆ 'ಪಂಚಾಂಗದ ಬೀದಿ'ಯಲ್ಲಿ, ದಪ್ಪ ಕಂಬದ ಜಗುಲಿಯ ಮನೆ. ರಸ್ತೆಗೇಕೆ ಆ ಹೆಸರು ಎನ್ನುವುದನ್ನು ವಿವರಿಸಿದರೆ ನಾನು 'ಬುದ್ದು.' ಆದರೂ...? ತಾತ ಪುಟ್ಟಾ ಜೋಯಿಸರಂತೆ ವೆಂಕಟಸುಬ್ಬಾ ಜೋಯಿಸ, ವೆಂಕಟಕೃಷ್ಣ ಜೋಯಿಸ, ಕುಂಬಿ ಜೋಯಿಸ – ಹೀಗೆ ಪಂಚಾಂಗ ಪ್ರವೀಣರ ವಾಸಸ್ಥಾನ ಆ ರಸ್ತೆ. ಹಿಂದಿನ ಬೀದಿ 'ಆಚಾರ್ರ ಬೀದಿ', ವಿವರಣೆ ಡಿಟ್ಟೋ. ಅಗ್ರಹಾರ ಬೀದಿಯೂ ಸೇರಿದ ಈ ಮೂರು 'ರಾಜಮಾರ್ಗ'ಗಳನ್ನು ಪ್ಲಾನ್ ಮಾಡಿದ ಮಹಾಮೆದುಳು ಯಾವುದೆಂದು ಗೊತ್ತಿದ್ದರೆ ಆತನಿಗೆ ಸರ್ದಾರ್ ಪಟೇಲರಿಗೆ ಸುಭಾಷ್ ಚಂದ್ರರಿಗೆ ಕೊಟ್ಟಂತೆ 'ಅಭಯಂತ ರತ್ನ' ಎಂದು ಬಿರುದು ಕೊಡಬಹುದಿತ್ತು.

ತುಮಕೂರು ತವರು ಮನೆ, ಮಾವನ ಮನೆ ಎರಡೂ ಆದ, ಎರಡೂ ಕಡೆ ಸುಖದ ಸೋಪಾನವನ್ನೆ ಕಂಡವರು, ಹಿರಿಯ ಲೇಖಕಿ ಟಿ.ಸುನಂದಮ್ಮ. ಇಂದಿನಿಂದ ಐವತ್ತು ವರ್ಷಗಳಿಗೂ ಹಿಂದೆ ಹೋಗಿ ಮತ್ತೆ ಇಂದಿಗೆ ಹಿಂತಿರುಗಿ ಈ ನೆನಪು ಲೇಖನದಲ್ಲವರು ತಮ್ಮೂರಿನ ಆಗುಹೋಗುಗಳನ್ನು ತಿಳಿಸಿದಾರೆ.

ತಾತನ ಮನೆ ಎದುರು ಎರಡು ಮನೆಗಳು 'ಎಲ್' ಆಕಾರದ ಪಾಯದ ಮೇಲೆ ನಿಂತಿವೆ; ಮಗ್ಗುಲ ಸಾಲಿನ ಮನೆಗಳು ಮಕ್ಕಳು 'ಠೂ' ಬಿಟ್ಟಂತೆ ವಿರುದ್ಧ ದಿಕ್ಕನ್ನು ನೋಡುತ್ತಿವೆ. ಪಂಚಾಂಗದ ಬೀದಿಯಿಂದ ಅಗ್ರಹಾರದ ಬೀದಿಗೆ ಹೋಗಲು ಒಂದು ಎತ್ತಿನ ಗಾಡಿ ಸಾಗಲು ಸಾಕೆಂದು ಬಿಟ್ಟಿರುವ ಓಣಿ.ಮುಂದೆ ಅಡ್ಡಾದಿಡ್ಡಿಯಾಗಿ ಮನೆ-ದನ-ಚಿಳ್ಳೆ ಪಿಳ್ಳೆಗಳ ಮಧ್ಯೆ ನಡೆದರೆ 'ಹೇಮಾ ಹನುಮಂತಯ್ಯ ಬೀದಿ'; ಇಲ್ಲೊಂದು ಮರದ ಕಂಬ ಜಗುಲಿಯ ಕೆಂಪು ಮನೆ ಮಾವ ಸಿದ್ದನಂಜಪ್ಪನವರದು.

ನಿಮ್ಮದು ಅಂದಿನ ಕಾಲದಲ್ಲಿ ಅಂತರ್ಜಾತೀಯ ಮದುವೆಯೇ ಎಂದು ಮೂಗಿನ ಮೇಲೆ ಬೆರಳೇರಿಸಿದಿರಾ? ಬೆರಳಿಳಿಸಿ. ತುಮಕೂರು ಜನ ತುಂಬ ದೈವ ಭಕ್ತರು; ಅಂತೆಯೇ ಪರಸ್ಪರ ಜಾತಿ ಮೈತ್ರಿಯವರು ಸಹ. ಬೆಟ್ಟದ ಮೇಲಿನ ರೇವಣ ಸಿದ್ದೇಶ್ವರನಿಗೆ ಹರಕೆ ಹೊತ್ತವರ ಮಕ್ಕಳಿಗೆ ಅವನದೇ ನಾಮಕರಣ. ಚಿಕ್ಕ ಮಾವನವರು ಸಿದ್ದರಾಮಯ್ಯ, ನಂಟರೊಬ್ಬರ ನಾಮಧೇಯ ಸಿದ್ದನರಸಯ್ಯ!

ನಮ್ಮೂರವರು ಬಹುಪಾಲು ವೆಂಕಟೇಶ್ವರನ ಒಕ್ಕಲು. ಒಬ್ಬ 'ವೆಂಕಟ'ನೋ ಒಬ್ಬ 'ಶ್ರೀನಿವಾಸ'ನೋ ಪ್ರತಿ ಕುಟುಂಬದಲ್ಲಿರಬೇಕು. ಜತೆಗೆ ಮತ್ತೊಂದು ದೇವರ ಜಂಟಿ ಮಾಡಿ ಹೆಸರಿಸುವರು. ವೆಂಕಟರಾಮ–ವೆಂಕಟಕೃಷ್ಣ–ವೆಂಕಟ ನಾರಾಯಣ... ಹೀಗೆ. ಶಿವನಿಗೋ ಸುಬ್ರಹ್ಮಣ್ಯನಿಗೋ ನರಸಿಂಹನಿಗೋ ಕೋಪ ಬಂದೀತೆಂದು

ವೆಂಕಟ ಪ್ಲಸ್ ಸುಬ್ಬ-ನಂಜ-ನರಸ-ನಾಗರನ್ನು ಸೇರಿಸಿ ಡಬ್ಬಲ್ ದೇವತೆಗಳನ್ನು ತೃಪ್ತಿ ಪಡಿಸುತ್ತಿದ್ದರು.

ಮದುವೆ ಮುಂಜಿ ಶುಭದಿನಗಳಲ್ಲಿ ಸಿಕ್ಕಾಪಟ್ಟೆ ಜನ ಸೇರಿರುವಾಗ, 'ಶ್ರೀನಿವಾಸಾ' ಎಂದು ಕರೆದರೆ ಕನಿಷ್ಠ ಇಪ್ಪತ್ತೈದು ಶ್ರೀನಿವಾಸಗಳು ಪ್ರತ್ಯಕ್ಷವಾಗುವ ಸಂಭವವಿದ್ದುದರಿಂದ, ಒಬ್ಬೊಬ್ಬರಿಗೂ 'ಐಡೆಂಟಿಟಿ' ಅಂಟು ಹಾಕುತ್ತಿದ್ದರು. ದೊಡ್ಡ ಶ್ರೀನಿವಾಸ–ಪುಟ್ಟ ಶ್ರೀನಿವಾಸ–ಬಿದರೆ ಶ್ರೀನಿವಾಸ–ನಾರವಂಗಲದ ಸೀನ–ಕೋಳಾಲದ ಸೀನ–ಕೊರಟಗೆರೆ ಸೀನ–ತೋಪಿನ ಮನೆ ಶ್ರೀನಿವಾಸ–ತುರುವೇಕೆರೆ ಸೀನ... ಈ ಮಾದರಿ! ತುಮಕೂರಿನ ನಮ್ಮ ನಂಟರ ಕುಟುಂಬಗಳಲ್ಲಿ ಇನ್ನೊಂದು ವಿಶೇಷ ಉಂಟು. ಹಿರಿಯ ಮಗನ ಅಡ್ಡ (ಮುದ್ದು) ಹೆಸರು–'ಶಾಮಣ್ಣ'. ಇಲ್ಲಿಯೂ ಯಥಾಪ್ರಕಾರ ಪುನಃ ಪ್ರಸಾರದ ಅಪಾಯವಿದ್ದುದರಿಂದ ಅವರುಗಳು ಪುಟ್ಟ ಶಾಮಣ್ಣ–ಸಣ್ಣ ಶಾಮಣ್ಣ–ಕುಳ್ಳ ಶಾಮಣ್ಣ, (ಬರೀ) ಶಾಮಣ್ಣ ಎಂದೆಲ್ಲ ಶಾಮಾವತಾರ ಕೇಳಬೇಕಾಗುತ್ತಿತ್ತು!

ಕೋಲಾರ ಜಿಲ್ಲೆಯ ಊರುಗಳು 'ಪಲ್ಲಿ'ಗಳಾದರೆ ತುಮಕೂರು ಜಿಲ್ಲೆಯಲ್ಲಿ 'ಸಂದ್ರ'ಗಳ ಸಾಂದ್ರತೆ. ಕ್ಯಾತ್ಸಂದ್ರ-ಬಾಣಸಂದ್ರ–ತಿಮ್ಮಸಂದ್ರ-ಅಮ್ಮಸಂದ್ರ...! ನಮ್ಮ ಮಾವನವರ ತಂದೆ ತಿಮ್ಮಸಂದ್ರದ ಶಾನುಭೋಗರು. ಮಾವನವರು ಮಕ್ಕಳೊಂದಿಗನೆಂದು ಅಧಿಕಾರವನ್ನು ತಮ್ಮನಿಗೆ ಬಿಟ್ಟು ಕೊಟ್ಟರು. ತಿಮ್ಮಸಂದ್ರದಲ್ಲಿ ಮೂರಂತಸ್ತಿನ ಮಹಲು. ಹಳ್ಳಿಗೆ ಸಿದ್ದರಾಮಯ್ಯನವರೇ ರಾಜ! ನಲವತ್ತು ವರ್ಷಗಳ ಕೆಳಗೆ ಅವರ ಒಬ್ಬ ಮಗಳ ಮದುವೆಗೆ ನಾವು ನಿಡುವಂದದವರೆಗೆ ರೈಲಿನಲ್ಲಿ, ನಂತರದ ಹನ್ನೆರಡು ಮೈಲಿ ಮೆತ್ತೆ ಹಾಸು ಒರಗು ದಿಂಬಿನ ಎತ್ತಿನ ಗಾಡಿಯಲ್ಲಿ ಪ್ರಯಾಣ ಮಾಡಿದ್ದು, ಸುಣ್ಣ ಹೊಡೆದು, ಸಗಣಿ ನೆಲಸಾರಿಸಿ, ರಂಗವಲ್ಲಿ ಅಲಂಕರಿಸಿಕೊಂಡು ಬೀಗರ ಬಿಡದಿಯಾಗಿ ಕಾಯಕಲ್ಪ ಪಡೆದಿದ್ದ ಕುರಿ 'ರೊಪ್ಪ', ಹಳ್ಳಿಯ ಕೊಂಬು ಕಹಳೆ ಓಲಗದ ಅದ್ದೂರಿ ಮದುವೆ, ಇಂದಿಗೂ ಒಂದು ಹಳೆಯ ಚಲನಚಿತ್ರದ ದೃಶ್ಯಗಳಾಗಿ ಮನಸ್ಸಿನಲ್ಲಿ ಉಳಿದಿವೆ!

ತುಮಕೂರಿನ ಜನ ತುಂಬ ಊಟ ತಿಂಡಿ ಪ್ರಿಯರೇನಲ್ಲ. ಆದರೆ ದೈವ ಭಕ್ತಿ, ಧರ್ಮ ಶ್ರದ್ಧೆ ಅಧಿಕವಾಗಿದ್ದು, ಹಬ್ಬ-ಹರಿದಿನ-ವ್ರತ-ಉದ್ಯಾಪನೆ ಪಾಂಗಿಕವಾಗಿ ಆಚರಿಸುವರು.

ಕರ್ಮ – ಶ್ರಾದ್ಧ– ವೈಕುಂಠಗಳಿಗೂ ಅಷ್ಟೇ ಪ್ರಾಮುಖ್ಯತೆ. ಆಯಾ ದಿನಗಳಲ್ಲಿ ನಿಯಮಿತವಾಗಿರುವ ಅಡಿಗೆ-ಭಕ್ಷ-ಭೋಜ್ಯಗಳನ್ನು ಕಾಪೀ ಬರೆದಂತೆ ಅನುಸರಿಸುತ್ತಿದ್ದರು. ಮೈಸೂರವರು 'ಹುಳಿತೊವ್ವೆ ಮಜ್ಜಿಗೆ ಹುಳಿ'ಯವರಾದರೆ ತುಮಕೂರಿನವರು 'ಕಾರಾಮಣಿ ಬದನೇ

ಗಣೇಶ ಬಂದ ಕಾಯಿಕಡಬು ತಿಂದ

ಗಣೇಶನ ನಯನ ಮನೋಹರ ರೂಪ ನೋಡಲು ನಮ್ಮ ಗೂಳೂರಿಗೆ ಬನ್ನಿ. ಕಲ್ಲಿನ ಮಂಟಪದ ಪೂರ್ತಿ ಕುಳಿತಿರುವ ವಿನಾಯಕ ವರ್ಷದಿಂದ ವರ್ಷಕ್ಕೆ ರೂಪಾಂತರಗೊಂಡು ಗೂಳೂರಿನ ಕೀರ್ತಿಗೆ ಕಾರಣನಾಗಿದ್ದಾನೆ. ವಿನಾಯಕ ಚವತಿಯಂದು ಮಣ್ಣು ಕಲೆಸಿ ಗಣಪನ ಸೃಷ್ಟಿಗೆ ನಾಂದಿ ಹಾಡಿ ಕಾರ್ತಿಕಕ್ಕೆ ಜಾತ್ರೆಗೆ ಸಿದ್ಧನಾಗುತ್ತಾನೆ ಬೆನಕ. ಒಂದು ತಿಂಗಳು ಸುತ್ತಮುತ್ತಲ ಊರುಗಳಿಂದ ಜನ ಗುಂಪುಗುಂಪಾಗಿ ಬಂದು ವಿನಾಯಕನ ದರ್ಶನದಿಂದ ಧನ್ಯರಾಗುತ್ತಾರೆ. ಮೈಸೂರು ಮಹಾರಾಜ ದಿ। ಜಯಚಾಮರಾಜ ಒಡೆಯರೂ ಬರುತ್ತಿದ್ದರಂತೆ. ಗೂಳೂರಿಗೆ ಸನಿಹದಲ್ಲಿ "ಕೈದಾಳ" ಎಂಬ ಕ್ಷೇತ್ರದಲ್ಲಿ ಸುಂದರ, ಚನ್ನಕೇಶವ ದೇವಾಲಯವಿದೆ. ದಶಾವತಾರ ವಿಗ್ರಹಗಳನ್ನೊಳಗೊಂಡ ಮೂರ್ತಿ ಬಲು ಸುಂದರ. ಜಕಣಾಚಾರಿಯ ಅಪೂರ್ವ ಕೆತ್ತನೆಯ ಮೂರ್ತಿಯೆಂದು ಹೇಳುತ್ತಾರೆ. ಗೂಳೂರು, ಕೈದಾಳ ತುಮಕೂರು ಜಿಲ್ಲೆಯಲ್ಲಿ ಕೇವಲ ಮೂರು ಮೈಲುಗಳಷ್ಟು ಸಮೀಪದಲ್ಲಿದೆ. ಕುಣಿಗಲ್ ಕಡೆಯಿಂದ ತುಮಕೂರಿನಿಂದಲೂ ಸಾರಿಗೆಯ ಅನುಕೂಲವಿದೆ.

"ನೀವೂ ಬನ್ನಿ ಗಣಪನ ದರ್ಶನಕ್ಕೆ, ಚನ್ನಕೇಶವನ ಆಲಯಕೆ"

● ಕೆ. ಆರ್. ಉಷಾ

ಕಾಯಿಹುಳಿ, ಎಣ್ಣೆ ಹುಳಿಯನ್ನ (ಚಿತ್ರಾನ್ನ) ದವರು. ಒಬ್ಬಟ್ಟೋ ಕಜ್ಜಾಯವೋ ಕರಿಗಡುಬೋ ಮಾಡಿದ್ದರೂ ಸಿಹಿಗೆ ಮೊದಲ 'ರ್‍ಯಾಂಕ್' ಇಲ್ಲ. ಊಟಕ್ಕೆ ಕೂತವರನ್ನು ಉಪಚರಿಸುವ ಅತಿಥೇಯರು ಕೇಳುತ್ತಿದ್ದುದು, "ಅಡಿಗೆ ಹೇಗಿದೆ? ಸಾರು ಹುಳಿಗೆ ಉಪ್ಪು ಕಾರ ಸಾಕೆ?"

ತಾಳಿಪ್ಪಟ್ಟು, ತಪ್ಪಲೆರೊಟ್ಟಿ, ಒತ್ತುಶಾವಿಗೆ, ನುಚ್ಚಿನುಂಡೆ, ಹುಯ್ಗಡುಬು ನಮ್ಮೂರ ವಿಶೇಷ. ರಾಗಿಸೀಮೆಯಾದ್ದರಿಂದ ರಾಗಿರೊಟ್ಟಿ ಹುರಿಟ್ಟು ಉಪ್ಪಿಟ್ಟುಗಳಿಗೂ ತಿಂಡಿತಟ್ಟೆಯಲ್ಲಿ ಸ್ಥಾನ. ಹಬೆಯಲ್ಲಿ ಬೇಯಿಸಿದ ಕಾಯಿಕಡುಬು, ಉದ್ದಿನ (ಹುದುಗು) ಕಡುಬು; ನಂಚಿಕೆಗೆ ತೆಂಗಿನಕಾಯಿ ಚಟ್ನಿ, ಬೆಲ್ಲ ಬೆರೆತ ಕಾಯಿಹಾಲು ತಯಾರಾದರಂತೂ ಒಬ್ಬೊಬ್ಬರು ಎರಡೆರಡು 'ಒಬ್ಬೆ' ಲೊಟ್ಟೆ ಹೊಡೆದು ತಿನ್ನುವರು.

ಇವೆಲ್ಲವನ್ನೂ ಮೀರಿದ ಜಿಹ್ವಾಪ್ರಿಯ, ಅವರೇಕಾಯಿ. ತುಮಕೂರು ಜಿಲ್ಲೆ ಅವರೇಕಾಯಿಯ ತೌರೂರು. ಸೀಸನ್ನಿನಲ್ಲಿ ತೊಗರೀಬೇಳೆ ಡಬ್ಬ ಬಾಯಿ ಹೊಲಿದು ಕೂತಿರುತ್ತದೆ. ಹೊಲಗಳಲ್ಲಿ ಬೆಳೆದ ಮೂಟೆ ಕಾಯಿ ಮೂಲೆಗಲಂಕಾರ; ಪೆಸ್ಟಿಸೈಡ್ ಸ್ನಾನಮಾಡಿಲ್ಲದ ಸೊಗಡು ಸಿರಿ! ಇವತ್ತಿನ 'ಅಡಿಗೆಸ್ಪರ್ಧೆ'ಯಲ್ಲಿ ಪ್ರಥಮ ಬಹುಮಾನ ಗಿಟ್ಟಿಸಬಲ್ಲ ವೈವಿಧ್ಯ ತಯಾರಿ! ಈ ವೈವಿಧ್ಯದ 'ಫೇವರಿಟ್' ಹಿದಕವರೇಬೇಳೆ ಮೇಲೋಗರ. ಹಸಿಜೀರಿಗೆ ಬಿಸಿಜೀರಿಗೆ ಮೆಣಸು ಗಸಗಸೆ ಕೊಬರಿ ಏನೆಲ್ಲ ಮಸಾಲೆ ಅರೆದು, ಕಡಲೆಕಾಯಿ ಬೀಜ ಕೊಬರಿ ಪಚ್ಚಡಿ ಕರಿಬೇವು ಒಗ್ಗರಿಸಿದಾಗ ಸಿದ್ಧ, ಈ ಅಮೃತ. ನಾಲಿಗೆಗೆ ತೊಡೆಯಲು ಹಸಿಮಜ್ಜಿಗೆ (ಪಳಿದ್ಯ) ಗರಿಗರಿ ಅರಳುಸಂಡಿಗೆ, ಮೇಲೋಗರದಲ್ಲಿ ಮುಳುಗಿಸಿ ನುಂಗಲಿಕ್ಕೆ ಮುದ್ದೆ!

ಹಲಸಿನಹಣ್ಣು–ಕದ್ದು ಮುಚ್ಚಿಡಲು ಸಾಧ್ಯವಾಗದ ಸು(ಅತಿ)ವಾಸನೆ; ಇದು ತುಮಕೂರಿನ ಸ್ಪೆಷಲ್ ಫಲ. ಗುಡ್ಡಗಟ್ಟಲೆ ಬೆಳೆ, ಬೇರೆ ಊರಿನ ನಂಟರು ಸ್ನೇಹಿತರು "ತುಮಕೂರಿನ ಹಲಸಿನ ಹಣ್ಣು ಬರುವುದನ್ನೇ" ಕಾದಿರುವ ಪದ್ಧತಿ. ಕುಪ್ಪೂರು ಹಣ್ಣನ್ನು ಇಡಿಯಾಗಿ ತಿನ್ನುತ್ತಿದ್ದೆವು ಎಂದರೆ ನಾವು ಬಕಾಸುರರೆಂದು ಕೊಂಡೀರಿ. ಹಣ್ಣಿನ ಗರ್ಭದಲ್ಲಿರುತ್ತಿದ್ದುದು ಇಪ್ಪತ್ತು ಇಪ್ಪತ್ತೈದು ಜೇನುಸುರಿಸುವ ಚಂದ್ರತೊಳೆಗಳು!

ತುಮಕೂರು ಜನ ಸರಳರು, ಸಹೃದಯರು, ಸಮಯಕ್ಕಾಗುವವರು, ಸಹ ಬಾಳ್ವೆ ನಡೆಸುವವರು. ಆ ದಿನಗಳಲ್ಲಿ ಕಲ್ಯಾಣಮಂಟಪ ವಿರಲಿಲ್ಲ, ಬಾಡಿಗೆಗೆ ಪಾತ್ರೆ ಸಿಗುತ್ತಿರಲಿಲ್ಲ, ಪಾಕಪ್ರವೀಣರೂ ಇಲ್ಲ. ಚಿಂತೆ ಇಲ್ಲ! ನೂರರಿಂದ ಐನೂರು ಮಂದಿಗೆ ಆಗುವ ಅಡಿಗೆ ಪಾತ್ರೆ ಸೆಟ್‌ಗಳು ನಮ್ಮ ಮಾವನವರ ಮನೆಯಲ್ಲಿ. ಪುಕ್ಕಟೆ ಸಪ್ಲೈ! ಹೆಂಗಸರ (ಚಂದಾ ಇಲ್ಲದ) ಸಹಕಾರ ಸಂಘ, ಮನೆಯಲ್ಲೇ ತಯಾರಿಸುವ ಹಪ್ಪಳ-ಸಂಡಿಗೆ-ಶಾವಿಗೆ-ಉಪ್ಪಿನಕಾಯಿ ನಾಲ್ಕಾರು ನೆರೆಹೊರೆ ಗೃಹಿಣಿಯರಿಂದ. ಹಿಟ್ಟು ಕಲಸಿ 'ಬಟ್ಟು'ಮಾಡಿ ಹಂಚಿದರೆ ಸಂಜೆಗೆ ಒಣಗಿಸಿ ತಂದಿಟ್ಟ ಹಪ್ಪಳ; ಎಳೆಎಳೆ ಶಾಮಿಗೆ; ಗೋಲಗೋಲಸಂಡಿಗೆ ಚಕ್ಕುಲಿ ಹಿಟ್ಟು– ಇವೂ ಇಂಥದೇ ಸಹಕಾರದ ಉತ್ಪನ್ನಗಳೇ! ಅಂಗಳದಲ್ಲಿ ಚಪ್ಪರ, ನಾಲ್ಕು ಮನೆಯಲ್ಲಿ ಊಟಕ್ಕೆ ಎಲೆಹಾಕುವ ವ್ಯವಸ್ಥೆ, ಮಗುಟ ಉಟ್ಟು ಮಡಿಮಡಿಯಾಗಿ ಬಡಿಸುವ ನಂಟರುಭಂಟರು; 'ವ್ಯಾಕ್ಯೂಮ್ ಕ್ಲೀನರ್' ಸ್ಪೀಡಿನಲ್ಲಿ ಉಂಡ ಎಲೆ ಎತ್ತುವ ಸ್ವಯಂಸೇವಕಿಯರು. ಬಾಣಸಿಗ ಬಂದರೆ ಸರಿ, ಬಾರದಿದ್ದರೆ ತಜ್ಞರ ನೆರವೂ ಸಿದ್ಧ. ಸಾಕಮ್ಮ–ಸುಬ್ಬಿಯಮ್ಮ–ತಿಪ್ಪತ್ತೆ–ಕುಪ್ಪಜ್ಜಿಯರು ಅವರೆತ್ತರದ ತಪ್ಪಲೆ ಕೊಳದಪ್ಪಲೆಗಳಲ್ಲಿ ಅಡಿಗೆ ಮಾಡಿಬಿಡುತ್ತಿದ್ದರಲ್ಲ?

ಶುಭವಾಗಲೀ ಅಶುಭವಾಗಲೀ ಎಲ್ಲರನ್ನೂ ಊಟಕ್ಕೆ ಕರೆಯಬೇಕು; ಅವರವರ ಲೋಟ ಅವರವರೇ ಒಯ್ಯಬೇಕು. ಬೆಳ್ಳಿಲೋಟ ಶ್ರೀಮಂತಿಕೆಯ ಸಂಕೇತ! ಸಣ್ಣಪುಟ್ಟ ಕಾರ್ಯಕ್ರಮಗಳಿಗೆ 'ಮನೆಗೊಬ್ಬರು ಬನ್ನಿ' ಎಂದು ಆಹ್ವಾನಿಸಿದರೆ ಅವಮಾನ ಅಲ್ಲವೇ? ಆಗ ಹಾಗೆ ಕರೆಯುವುದರಲ್ಲಿ, ಕುಟುಂಬದ ಒಂದೇ ಪ್ರಜೆ ಹಾಜರಾತಿ ಹಾಕಿಬರುವುದರಲ್ಲಿ ಹೀನಾಯ ವಿಲ್ಲ!

ಅವಿಭಕ್ತ ಕುಟುಂಬಗಳೇ ಹೆಚ್ಚು. ಕರೆಯದೇ ಬರುವ ಕಲ್ಲಪ್ಪಗಳು, ಇರುವಷ್ಟು ದಿನ ನಿಮ್ಮ ಟವಲಿನಲ್ಲಿ ಮೈಒರೆಸಿ ಭಾವನ ಸೋಪಿನಲ್ಲಿ ಮೈಉಜ್ಜಿ ಮಾವನ ಪಂಚೆ ಉಟ್ಟು ತಾನೇ ಎಲೆ ಹಾಸಿ ಉಣ್ಣುವ ಬಾದರಾಯಣಗಳು. ನಿಜವಾದ ನಂಟರ ಶಾಖೋಪಶಾಖೆ– ಹೊತ್ತಿಗೆ ಮಿನಿಮಂ ಮುವ್ವತ್ತು ಎಲೆ! ಹೆಂಗಸಿಗೆ ಮನೆಯೊಳಗೆ

ಸಾಕಷ್ಟು ಸ್ವಾತಂತ್ರ್ಯ; ಆದರವಳು ಎರಡನೇ ದರ್ಜೆ ಪ್ರಜೆ. ಅವಳ ಟಾಯ್ಲೆಟ್ ವಸ್ತುಗಳೆಂದರೆ ಹಲ್ಲುಜ್ಜಲು ಬೆರಣಿಕರಕು, ಮೈತೊಳೆಯಲು ಹೆಸರುಹಿಟ್ಟು, ಕೆನ್ನೆಗೆ ತೊಡೆಯಲು ಅರಿಶಿನಪುಡಿ, ಅಂಗಾಲು ಚರ್ಮವೇ ಚಪ್ಪಲಿ. ಹೊಸಸೊಸೆಯಾಗಿ ನಾನು ಅತ್ತೇಮನೆ ಪ್ರವೇಶಿಸಿದ ಮಾರನೇ ಬೆಳಗ್ಗೆ ಮನೆಗಂಡಸರಲ್ಲಿ ಗಹನವಾದ ಚರ್ಚೆ. ಸ್ನಾನದ ಮನೆಗೂಡಿನಲ್ಲಿ ಹೊಸಸೇರ್ಪಡೆ ಸೋಪುಪೆಟ್ಟಿಗೆ–ಟೂತ್‌ಪೇಸ್ಟ್–ಬ್ರಷ್ ಯಾರದೆಂದು;... ಭೂಪನೊಬ್ಬ ಸಮಸ್ಯೆ ಬಿಡಿಸಿದಾಗ ಅವರ ತೆರೆದ ಬಾಯಿ ಮುಚ್ಚಲೇ ಇಲ್ಲ!

ಮನರಂಜನೆಯೆಂದರೆ (ಗಂಡಸರಿಗೂ ಹೆಂಗಸರಿಗೂ) ಹರಿಕತೆ ಪುರಾಣಗಳು. ಇಂದು ಅಂತಾರಾಷ್ಟ್ರೀಯ ಖ್ಯಾತಿ ಪಡೆದಿರುವ 'ಪ್ರಭಾತ್' ಸಂಸ್ಥೆಯ ಮೂಲಪುರುಷ ಗೋಪೀನಾಥದಾಸರ ಅಭಿವೃದ್ಧಿಯ ಮೊದಲ ಮೆಟ್ಟಲು, ತುಮಕೂರು. ಎಂದೋ ಬರುವ ಹಾಡುಗಾರನಿಗೆ ಯಾರದ್ದಾದರೂ ಮನೆಯಲ್ಲಿ ಅವಕಾಶ; ಪ್ರವೇಶ ಪುರುಷರಿಗೆ ಮಾತ್ರ!

ಕಳೆದ ವರ್ಷ ತಿಮ್ಮಸಂದ್ರಕ್ಕೆ ಹೋಗಿದ್ದೆ. ಕಂಭದ ನರಸಿಂಹ ಹಾಗೆಯೇ ನಿಂತಿದ್ದಾನೆ; ಮಾರಮ್ಮ ಅಂತೆಯೇ ಕೂತಿದ್ದಾಳೆ. ಪೂಜೆ ಉತ್ಸವಗಳು ಸಾಂಗೋಪಾಂಗವಾಗಿ ನಡೆಯುತ್ತವೆ. ಆದರೆ ಮೂರಂತಸ್ತಿನ ಮಹಲು ಗತ ವೈಭವದ ಕುರುಹು ಮಾತ್ರ!

ಇಪ್ಪತ್ತು ವರ್ಷಗಳನಂತರ ಪಂಚಾಂಗದ ಬೀದಿಗೆ ಭೇಟಿಕೊಟ್ಟೆ. ಬಹುತೇಕ ಮುಚ್ಚಿದ, ಬೀಗ ಹಾಕಿದ ಬಾಗಿಲುಗಳು. ಊರ ಹೊರಗೆ ಕಟ್ಟಿಕೊಂಡ ಮನೆಗಳಿಗೆ, ಬೇರೆ ಊರಿಗೆ, ಬೇರೆ ದೇಶಗಳಿಗೆ, ಹಾರಿಹೋಗಿದ್ದಾರೆ, ಹೊಸಪೀಳಿಗೆಯವರು.

ಇಂದಿನ ತುಮಕೂರು ನಾಗರಿಕತೆಯಲ್ಲಿ ದಾಪುಗಾಲು ಹಾಕಿದೆ. ದೊಡ್ಡ ಕಾರ್ಖಾನೆಗಳು ವಾತಾವರಣವನ್ನು ಬದಲಾಯಿಸಿವೆ; ಶಿಕ್ಷಣ ಸಂಸ್ಥೆಗಳ ಮಹಾಪೂರವೇ ನಿರ್ಮಾಣವಾಗಿದೆ. ಹೆಣ್ಣುಮಕ್ಕಳು ಗಂಡುಮಕ್ಕಳಂತೆಯೇ ವಿದ್ಯಾವಂತೆಯರು ಉದ್ಯೋಗಸ್ಥೆಯರು ಉದ್ದಿಮೆದಾರರೂ ಆಗಿದ್ದಾರೆ.

ಆದರೂ, ತುಮಕೂರು ಜನ ಅದೇ ಸಜ್ಜನಿಕೆ, ಸರಳತೆ, ಆತ್ಮೀಯತೆಯೊಂದಿಗೆ ಹಿಂದಿನ ಸಂಸ್ಕೃತಿಯನ್ನು ಉಳಿಸಿಕೊಂಡಿದ್ದಾರೆ; ಅಲ್ಲಿ ನಾನು ವಾಸಮಾಡಿದ್ದು ಕೆಲವೇ ತಿಂಗಳಾದರೂ 'ಟಿ' ಅಕ್ಷರದ ಯಕ್ಷಿಣಿ ನನ್ನನ್ನು ತುಮಕೂರಿನವಳಾಗಿ ಉಳಿಸಿದೆ, ಉಳಿಸಿಕೊಂಡಿದ್ದಾರೆ ನನ್ನೂರ ಜನ! ●

ನಾವು ಮತ್ತು ನಮ್ಮ ಅವರೆ

"ಅಯ್ಯಪ್ಪ, ತುಮಕೂರಿನೋರು ಅವರೆಕಾಯಿ ತಿಂದ ಹಾಗೇ ಯಾರೂ ತಿನ್ನಕ್ಕಾಗಲ್ಲಪ್ಪ" ಇದು ಅಕ್ಕಪಕ್ಕದ ಊರುಗಳವರ ಅಂಬೋಣ. ತುಮಕೂರಿನಲ್ಲಿ ಸಿಗುವಷ್ಟು ಸೊಗಡಾದ ಅವರೇಕಾಯಿ ಇನ್ನೆಲ್ಲೂ ಸಿಗುವುದಿಲ್ಲ ಅನ್ನುವುದೂ ನಿಜ. ಚಳಿಗಾಲಕ್ಕೆ ಈ ಊರಿನಲ್ಲಿ ಅವರೇಕಾಯಿ ಕಾಲ ಎಂದೇ ಹೆಸರು. ಅವರೇಕಾಯಿ ಸಿಪ್ಪೆ ತಿಂದ ಹಸುವಿನ ಹಾಲೂ ಸಹ ಒಂದು ವಿಧದ ಘಾಟು.

ಅವರೇಕಾಳು ಪದಾರ್ಥ, ಮುದ್ದೆ, ರೊಟ್ಟಿ, ಚಪಾತಿ, ದೋಸೆ, ಏನಾದರೂ ಸರಿ ಹೊಂದಿಕೆಯಾಗುತ್ತದೆ. ಬೆಳಗ್ಗಿನ ಫಲಾಹಾರಕ್ಕೆ ಅವರೇಕಾಳು ಉಪ್ಪಿಟ್ಟು, ಅವರೇಕಾಳು ಚಿತ್ರಾನ್ನ, ಮಸಾಲೆ ರೊಟ್ಟಿ, ಇಡ್ಲಿ, ವಡೆ ಹೀಗೆ ಸರ್ವಂ ಅವರೇಕಾಳು ಮಯಂ. ಹಿಸುಕಿದ ಸಿಪ್ಪೆಯನ್ನು ಹೊರಗೆ ಚೆಲ್ಲಿರೊ ಎಂದು ಹುಡುಗರಿಗೆ ಕೊಟ್ಟರೆ ಅವು ಆಕಾಶಕ್ಕೆ ಎರಚಿ ಓಣಿಯೆಲ್ಲಾ ಹಸಿರು ಮುತ್ತು.

ದೆಬ್ಬವರೆ, ಕಡ್ಲವರೆ ಎರಡು ಮುಖ್ಯ ಪ್ರಬೇಧವಾದರೂ ಅನುಭವಿ ಕಣ್ಣುಗಳು ಯಾವ ಕಡೆ ತೋಟ? ದೇವರಾಯನ ದುರ್ಗದ್ದೊ? ಶೆಟ್ಟಿಹಳ್ಳಿಯದೊ? ಬೈಲಾಂಜನೇಯ ಗುಡಿಯದೋ ಎಂಬುದನ್ನೂ ಕಂಡುಹಿಡಿದಾವು.

ಏನೇ ಹೇಳಿ ನೀವೊಮ್ಮೆ ತುಮಕೂರಿಗೆ ಬಂದು ಅವರೇಕಾಯಿ ಆತಿಥ್ಯ ಸವಿಯಲೇಬೇಕು.

● ರತ್ನಕಲಾ

ಚಿತ್ರಕವನ ಸ್ಪರ್ಧೆ – 110



ಕವನಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: 5-9-1992

ಫೋಟೋ: ನಾಗರಾಜ ವಾರಂಬಳ್ಳಿ

ಧಾರಾವಾಹಿ

ಪ್ಲಾನಿ

● 'ಚಿರಂಜೀವಿ'

ಅಧ್ಯಾಯ–5:

ಮದುವೆ ಸಂಭ್ರಮ

ಮರುದಿನ ಬೆಳಗ್ಗೆ ರಘು ಎದ್ದಾಗ ತುಂಬಾ ತಡವಾಗಿ ಹೋಗಿತ್ತು. ಒಂಬತ್ತು ಘಂಟೆ ದಾಟಿಹೋಗಿತ್ತು. ಕಣ್ಣುಬಿಟ್ಟು ಹಾಸುಗೆಯಿಂದ ಎದ್ದು ಕುಳಿತಾಗ ತಲೆಭಾರವಾದಂತನ್ನಿಸಿ, ಸಣ್ಣಗೆ ನೋಯುತ್ತಿತ್ತು. ರಘು ಹಾಸುಗೆಯ ಮೇಲೆಯೇ ಹಿಂದೆ ದಿಂಬಿಗೆ ಒರಗಿಕೊಂಡು ಕುಳಿತ. ರಾತ್ರಿ ಅವನಿಗೆ ಬಹಳ ಹೊತ್ತು ನಿದ್ದೆಯೇ ಬಂದಿರಲಿಲ್ಲ. ಹೊರಳಾಡುತ್ತ ಮಲಗಿದ್ದ. ಏನೇನೊ ಅಸ್ಪಷ್ಟ ಕನಸುಗಳು, ಏನೇನೋ ಆಲೋಚನೆಗಳು. ರೆನಾಲ್ಟ್‌ನಲ್ಲಿ ನಿಧಾನವಾಗಿ ಶಾಲಿನಿಯನ್ನು ಕೂಡಿಸಿಕೊಂಡು ಹೊರಟಹಾಗೆ, ಅನಂತರ ಇದ್ದಕ್ಕಿದ್ದ ಹಾಗೆಯೇ ವೇಗ ಜಾಸ್ತಿಯಾದ ಹಾಗೆ, ನೂರು, ನೂರೈವತ್ತು, ಇನ್ನೂರು ಕಿಲೋಮಿಟರ್ ವೇಗ ತಲುಪಿದ ಹಾಗೆ–ನೆಲದಿಂದ ಮೇಲೆದ್ದು ಕಾರು ಚಿಮ್ಮುತ್ತ ಮುನ್ನಡೆದಂತೆ. ಅನಂತರ ನೋಡಿದರೆ ಶಾಲಿನಿ ಪಕ್ಕದಲ್ಲಿಲ್ಲ. ತಾನೊಬ್ಬನೇ ಡ್ರೈವ್ ಮಾಡುತ್ತಿದ್ದಾನೆ. ಬೆದರಿ ಸ್ಟೀರಿಂಗ್ ಬಿಟ್ಟು 'ಶಾಲಿ, ಶಾಲಿ' ಎಂದು ಕೂಗಿದಂತೆ, ಮತ್ತೆ ಎಚ್ಚರ. ಮಂಚ, ನಿದ್ದೆಯಿಲ್ಲದೆ ಹೊರಳಾಟ, ಬೆವರು.

ಬಾಗಿಲು ತಳ್ಳಿಕೊಂಡು ಸೀತಾಬಾಯಿ ಒಳಗೆ ಬಂದರು. ರಘು ದಿಂಬಿಗೆ ಒರಗಿ ಯೋಚಿಸುತ್ತ ಕುಳಿತಿರುವುದು ಕಾಣಿಸಿತು. ಅವರ ಹೊಟ್ಟೆಯಲ್ಲಿ ಸಂಕಟದ ಹೊರಳಾಟವಾಯಿತು. 'ಏನೊ, ಏನೊ ಇದು. ದಿನಾ ಬೆಳಗ್ಗೆ ಬೇಗ ಏಳ್ತಿದ್ದೋನು, ಇವತ್ತು ಇಷ್ಟೊತ್ತು ಮಲಗ್ಬಿಟ್ಟಿದ್ದೀಯ ? ನಾನು ಆಗ್ಲೆ ಮೂರ್ನಾಲ್ಕು ಸಲ ಬಂದು ಹೋದೆ. ಗೊರಕೆ ಹೊಡೆಯೊ ನಿದ್ದೆ ನಿಂಗೆ, ಏನೇನೊ ಮುಲುಗಾಟ ಬೇರೆ'–ಎಂದರು ಸೀತಾಬಾಯಿ. ರಘುವಿನ ಹಣೆಯಮೇಲೆ ಕೈಯಿಟ್ಟರು. ಸ್ವಲ್ಪ ಬಿಸಿಯಾಗಿರುವ ಹಾಗೆ ಅನ್ನಿಸಿತು. 'ಹಣೆ ಬಿಸಿಯಾಗಿದ್ಯಲ್ಲೊ, ಚೂರುಪಾರು ಜ್ವರ ಬಂದಿರೊ ಹಾಗಿದೆ' ಎಂದರು. ಹಿಂದೆಯೇ ಬಂದ ರಮೇಶನಿಗೆ, 'ರಮೇಶ, ಹೋಗೋ, ಅಪ್ಪನ್ನ ಕರ್ಕೊಂಡ್ಬಾ, ರಘುಗೆ ಜ್ವರ ಬಂದ ಹಾಗಾಗಿದೆ ಅಂತ ಹೇಳು'–ಎಂದರು. ಅವನು ಸರಸರನೆ ಓಡಿದ. 'ಏನಮ್ಮ, ನಂಗೇನಾಗಿಲ್ಲ. ಇಷ್ಟಕ್ಕೆಲ್ಲ ಇಷ್ಟೊಂದು ಆತುರ ಪಡ್ತಿದ್ದೀಯಲ್ಲಮ್ಮಾ'–ಎಂದ ರಘು.

ಮುಂದಿನ ಐದು ನಿಮಿಷಗಳಲ್ಲಿ ರಾಮರಾಯರು ಸರಸರನೆ ಮೇಲೆ ಓಡಿ ಬಂದರು.

ಹೊಸಕಾರು ರೆನಾಲ್ಟ್ ತನ್ನದಾದಾಗ ರಘು ಹೊಸ ತಿರುವುಗಳನ್ನು ಕಂಡಿದ್ದ–ಅವನ ಫ್ಯಾಕ್ಟರಿಗೆ ದೊಡ್ಡ ಆರ್ಡರ್‌ಗಳು ಬಂದವು. ರೆನಾಲ್ಟ್ ತನ್ನ ಜೊತೆ ಮಾತನಾಡುವ ಹಾಗೆ ಸ್ಪಂದಿಸುವ ಹಾಗೆ ನಡೆದುಕೊಳ್ಳುತ್ತಿದೆಯೇನೋ ಎನ್ನುವ ಸಂದೇಹ ಬಂದಿತು. ಮತ್ತೆ, ಆ ಒಂದು ದಿನ ನಂದಿಬೆಟ್ಟದವರೆಗೂ ಅತಿವೇಗದಿಂದ ಆ ಕಾರು ದೌಡಾಯಿಸಿ ತನ್ನ ಹತೋಟಿ ತಪ್ಪಿತು. ಹೀಗೆಲ್ಲಾ ಏಕಾಗುತ್ತಿದೆ?

ಬರುವ ಮೊದಲು ಅವರು ಡಾಕ್ಟರ್‌ಗೆ ಫೋನು ಮಾಡಿಯೇ ಬಂದಿದ್ದರು. ರಮೇಶ ಸಪ್ಪೆಮುಖ ಮಾಡಿಕೊಂಡಿದ್ದ. 'ಏನಾಯ್ತೆ, ಏನಾಯ್ತೆ, ಜ್ವರ ಯಾಕೆ ಬಂತು? ಎಂಥ ಜ್ವರಾನೊ? ನಿನ್ನೆಯೆಲ್ಲ ಆರೋಗ್ಯವಾಗಿದ್ನಲ್ಲ?' ಎನ್ನುತ್ತಲೇ ರಾಯರು ಮಗನ ಹತ್ತಿರ ಬಂದು ಹಣೆಮುಟ್ಟಿ ನೋಡಿದರು. ಅಲ್ಪಸ್ವಲ್ಪ ಕಾವು ಕಾಣಿಸಿತು. ಈಗೊಂದು ಐದಾರು ದಿನಗಳಿಂದ ಮಗನ ದೈನಂದಿನ ಕಾರ್ಯಕ್ರಮಗಳು ವ್ಯವಸ್ಥಿತವಾಗಿಲ್ಲದಿರುವುದನ್ನು ರಾಯರು ಗಮನಿಸಿದ್ದರು. ಬೆಳಗ್ಗೆ ಚುರುಕಾಗಿ ತಯಾರಾಗುತ್ತಿದ್ದವನು ಈಗ ಸಾವಕಾಶವಾಗಿ ಒಂದೊಂದು ಕೆಲಸವನ್ನೂ ಮಾಡಿಕೊಳ್ಳುತ್ತಿದ್ದ. 'ಕಾರ್ ಇದ್ಯಲ್ಲ, ಸ್ವಲ್ಪ ನಿಧಾನವಾಗಿ ಹೋಗಿ ತಲುಪಿದ್ರೂ ಪರ್‍ವಾಗಿಲ್ಲ'– ಎನ್ನುತ್ತಿದ್ದ. ಸಂಜೆ ಒಂದೊಂದು ದಿನ ಒಂದೊಂದು ಹೊತ್ತಿಗೆ ಮನೆಗೆ ಬರುತ್ತಿದ್ದ. ನಿನ್ನೆಮೊನ್ನೆಯಂತೂ ತುಂಬಾ ತಡವಾಗಿ ಬಂದಿದ್ದ. ನಿನ್ನೆ ಘಂಟೆಗಟ್ಟಲೆ ವೇಗವಾಗಿ ಡ್ರೈವ್ ಮಾಡಿ ಬಂದಿದ್ದಾನೆ. ರಾಯರು ಆಲೋಚಿಸುತ್ತ ಕುಳಿತಾಗಲೇ ಡಾಕ್ಟರ್ ರಾಮಗೋಪಾಲ್ ಬಂದರು. ಮನೆ ಡಾಕ್ಟರು-ಸುಪರಿಚಿತರು. ಕಿರಿಯರಾದರೂ ಅಪಾರ ತಾಳ್ಮೆ, ಬುದ್ಧಿಶಕ್ತಿಯವರು. 'ವಾಟ್ ರಘು ಹೌ ಆರ್ ಯೂ?' ಎನ್ನುತ್ತಲೇ ಒಳಬಂದರು. ರಘುವಿನ ಹಣೆ ಮುಟ್ಟಿ ನೋಡಿ, ಕೈಹಿಡಿದು ಪಲ್ಸ್ ನೋಡಿ, ಅನಂತರ ಥರ್ಮಾಮೀಟರ್ ತೆಗೆದು ಝಾಡಿಸಿ ಅವನ ಬಾಯಲ್ಲಿಟ್ಟು ಕೈಹಿಡಿದುಕೊಂಡರು.

'ಹೌದು ಒಂದ್ಸ್ವಲ್ಪ ಜ್ವರ ಇದೆ. ಅಂತಹ ಯೋಚಿಸೊ ಹಾಗೆ ಏನೂ ಇಲ್ಲ. ಒಂದೆರಡು ಮಾತ್ರೆ ಕೊಡ್ತೀನಿ. ಈ ಸಂಜೆಗೇ ಎಲ್ಲ ಸರಿ ಹೋಗತ್ತೆ. ಸ್ವಲ್ಪ ಆಯಾಸ ಆಗಿರೋಹಾಗಿದೆ'- ಎನ್ನುತ್ತ ಡಾಕ್ಟರ್ ವಿವರಗಳನ್ನು ವಿಚಾರಿಸತೊಡಗಿದರು.

ನಿನ್ನೆ-ಮೊನ್ನೆ ಮಾನಸಿಕವಾಗಿ ಒಂದಿಷ್ಟು ಸಪ್ಪೆಯಾಗಿದ್ದದ್ದು, ಸಂಜೆ ಏನು ಮಾಡಲೂ ತೋರದೆ 'ಡ್ರೈವ್' ಹೋಗಿಬಂದದ್ದು. ಅನಿ



ರೀಕ್ಷಿತ ವೇಗ—ದೂರ: ಎಲ್ಲವನ್ನೂ ರಘು ವಿವರಿಸಿದ. ಡಾಕ್ಟರ್ ಮತ್ತೆ ಸ್ವಲ್ಪ ಹೊತ್ತು ಆಲೋಚಿಸುತ್ತ ಕುಳಿತರು. 'ರಘು, ಈ ದಿನ—ನಾಳೆ ನೀವು ಒಂದಿಷ್ಟು ರೆಸ್ಟ್ ತಗೋಬೇಕು. ಇನ್ನು ಸ್ವಲ್ಪದಿನ ಸ್ಪೀಡ್ ಡ್ರೈವಿಂಗ್ ಬೇಡ. ನಿಮ್ಮ ಮನಸ್ಸು ಬೇರೆ ಏನೇನೊ ಯೋಚ್ನೆ ಮಾಡ್ತಿದೆ. ನೀವು ಸ್ವಲ್ಪ ಹುಷಾರಾಗಿರ್ಬೇಕು. ನಾರ್ಮಲ್ ದಿನಚರಿಗಿಂತಲೂ ಬೇರೆಯಾದ ಚಟುವಟಿಕೆಗಳಲ್ಲಿ ಇನ್ನು ಸ್ವಲ್ಪದಿನ ತೊಡಗಬೇಡಿ'—ಎಂದು ಡಾಕ್ಟರ್ ಹೇಳಿದ್ದು ಕೇಳಿ ಸೀತಾಬಾಯಿ ಕುಸಿದು ಕುಳಿತರು.

ಮಹಡಿಯಿಂದ ವಾಪಸ್ಸಾದ ಮೇಲೆ ಡಾಕ್ಟರ್ ಹೇಳಿದರು: 'ನೀವೇನೂ ಯೋಚನೆ ಮಾಡ್ಬೇಕಾಗಿದ್ದಿಲ್ಲ. ಹೋದವಾರ ಎಲ್ಲ ಮನೇಲಿ ನೆಂಟರು-ಇಷ್ಟರು, ಸಂಭ್ರಮ-ಓಡಾಟ, ಹೊಸದಾಗಿ ಕಾರ್ ಬಂದದ್ದು ಹೀಗೆ ಇದ್ಬಿಟ್ಟು ಈಗ ಆ ಕಾರ್ಯಕ್ರಮಗಳೆಲ್ಲ ಥಟ್ಟನೆ ನಿಂತು ರಘುಗೆ ಬೋರ್ ಹೊಡೆಯೋ ಹಾಗೆ ಆಗ್ತಿರಬೇಕು ಅನ್ಸತ್ತೆ. ಒಂದೆರಡು ದಿನ ಎಲ್ಲ ಸರಿಯಾಗುತ್ತೆ.' 'ನನಗೂ ಹಾಗೇ ಅನ್ಸಿತ್ತು ಡಾಕ್ಟರ್. ಈ ಸಲ ಅವ್ನು ಶಾಲಿನಿ ಜತೆ ತುಂಬಾ ಸಂಭ್ರಮದಿಂದ ಓಡಾಡ್ಬಿಟ್ಟು ಪ್ರತಿ ದಿನ ಕಾರ್ನಲ್ಲಿ ಅವ್ರಿಬ್ರೂ ಸುತ್ತಾಡೋರು: ಸಿನಿಮಾ, ಹೋಟಲು ಅಂತ ಓಡಾಡೋರು, ಈಗ ಸಂಜೆ ಬಂದ್ರೆ ಅವನಿಗೆ ಕಾಲಕಳ್ಯೊಕ್ಕೆ ಆಗ್ತಿಲ್ಲ'-ಎಂದರು ರಾಮರಾಯರು. 'ಅದಕ್ಕೆ ಆದಷ್ಟು ಬೇಗ ಮದ್ವೆ ಮುಗಿಸ್ಬಿಡೋಣ ಅಂದ್ಕೊಂಡಿದೀವಿ' ಎಂದರು ಸೀತಾಬಾಯಿ.

ಅದೇ ದಿನ ಮಧ್ಯಾಹ್ನ ನಾಣಿಮಾವ ಫೋನ್ ಬಂತು. ಒಂದೆಯೇ ರಘುವಿಗೆ ಶಾಲಿನಿ ಬರೆದ ಪತ್ರವೂ ಬಂದಿತು. 'ಮದ್ವೆ ಬೇಗ ಮಾಡೋಣ ಅಂತ ನಿರ್ಧರಿಸಿದ್ದು ತುಂಬಾ ಸಂತೋಷವಾಗಿದೆ. ನಿಮ್ಮ ಕಾಗದ ಇನ್ನೂ ಕೈಗೆ ಬಂದಿಲ್ಲ. ಫೋನ್ ಮಾಡಿದ್ದು ಕೇಳಿ ಎಲ್ರಿಗೂ ಸಂತೋಷ ಆಗಿದೆ. ಶಾಲಿನಿ ಇಲ್ಲಿಗೆ ಬಂದಾಗ್ನಿಂದ ಸಪ್ಪೆಯಾಗಿದ್ಳೋಳು ಈ ಸಮಾಚಾರ ಕೇಳಿ ಚುರುಕಾಗಿದ್ದಾಳೆ!'—ಎಂದು ನಾಣಿಮಾವ ಹೇಳಿದಾಗ, ರಾಮರಾಯರಿಗೆ ಎಲ್ಲವೂ ಅರ್ಥವಾಗಿತ್ತು. 'ಎರಡೂ ಕಡೆ ವಿರಹವೇದನೆ ಆಗ್ತಿದೆ' ಅಂದುಕೊಂಡರು. ಅವರಿಗೆ ಒಂದಿಷ್ಟು ಸಮಾಧಾನವೂ ಆಗಿತ್ತು. ಆಶ್ಚರ್ಯವೂ ಆಗಿತ್ತು. ರಘು ಯಾವಾಗಲೂ ಹೇಗೆ ನಿರ್ಲಿಪ್ತನಾಗಿರುತ್ತಿದ್ದವನು, ಇಷ್ಟೊಂದು ಭಾವನೆಗಳ ವ್ಯಕ್ತಿ ಇರಬಹುದು ಎಂದೇ ಅವರಿಗನ್ನಿಸಿರಲಿಲ್ಲ. ಎಷ್ಟು ಸೂಕ್ಷ್ಮ ವ್ಯಕ್ತಿ, ಗಂಭೀರವಾಗಿ ಎಲ್ಲವನ್ನೂ ಹತ್ತಿಕ್ಕಲು ಪ್ರಯತ್ನಿಸುತ್ತಿದ್ದಾನೆ ಎಂದುಕೊಂಡರು. ಆದರೆ ನಾಣಿಮಾವನಿಗೆ ಏನೂ ತಿಳಿಸಲಿಲ್ಲ.

'ನನಗೂ ಒಬ್ಬಳೇ ಬೇಸರವಾಗ್ತಿದೆ. ಒಬ್ಬಳೇ ಬೆಂಗಳೂರಿಗೆ ಕೂಡಲೇ ಬಂದುಬಿಡಲೇ ಅನ್ನಿಸುತ್ತಿದೆ'—ಎಂದು ಶಾಲಿನಿ ಮತ್ತೆ ಬರೆದಿದ್ದಳು. ಈ ಕಾಗದ ಬರೆಯುವಾಗ ಮದುವೆಯ ನಿರ್ಧಾರದ ಸಮಾಚಾರ ಅವಳಿಗಿನ್ನೂ ತಿಳಿದಿರಲಾರದು.

ರಘು ಹಾಯಾಗಿ ಬೆಳಗ್ಗೆ-ಸಂಜೆ ನಿದ್ರೆ ಮಾಡಿದ. ಮಧ್ಯಾಹ್ನ-ಸಂಜೆ ಎರಡು ಸಲವೂ ರಂಗನಾಥ ಬಂದುಹೋಗಿದ್ದ. 'ಕಾರ್ನಲ್ಲಿ ಏನೊ ಪ್ರಾಬ್ಲಂ ಇರೋಹಾಗಿದೆ. ಎರಡು ಸಲ ಆಫ್ ಆಗೋಯ್ತು. ಇದ್ದಕ್ಕಿದ್ದಂತೆ ಸ್ಪೀಡ್ ಜಾಸ್ತಿ ಆಗೋಯ್ತು. ಒಂದ್ಸಲ ಚೆಕಪ್‌ಗೆ ಕೊಟ್ರೆ ಒಳ್ಳೇದು ಅನ್ನಿಸ್ತಿದೆ'—ಎಂದ ರಘು. ತತ್‌ಕ್ಷಣ ರಂಗನಾಥ, ಲಾರೆನ್ಸ್ ಜೋಸೆಫ್‌ಗೆ ಫೋನ್ ಮಾಡಿದ. ಮುಂದಿನ ಅರ್ಧ ಘಂಟೆಯಲ್ಲಿ ಜೋಸೆಫ್ ತಾನೇ ಬಂದುಬಿಟ್ಟಿದ್ದ. ರಘುವಿನ ಕ್ಷೇಮ ಸಮಾಚಾರ ವಿಚಾರಿಸಿ ರೆನಾಲ್ಟ್ ಕಾರನ್ನು ತಾನೇ ಡ್ರೈವ್ ಮಾಡಿಕೊಂಡು ತೆಗೆದುಕೊಂಡು ಹೋರಟುಹೋದ ಜೋಸೆಫ್. ರಂಗನಾಥ ಕತ್ತಲಾಗುವವರೆಗೂ ಮಾತನಾಡುತ್ತ ಕುಳಿತಿದ್ದು ಹೊರಟುಹೋದ.

ಆ ರಾತ್ರಿ ಅಲ್ಪಸ್ವಲ್ಪ ಸಮಾಧಾನದಿಂದ ನಿದ್ದೆಮಾಡಿದರೂ ರಘುವಿಗೆ ನಡುನಡುವೆ ಏನೋ ಮಂಪರು. ಏನೊ ಆಲೋಚನೆಗಳು. ನಿದ್ದೆ ಆಳವಾದಾಗ ಮಸಕುಮಸಕಾಗಿ ಸಿನಿಮಾ ಚಿತ್ರಗಳನ್ನು ನೋಡಿದಂತೆ ಒಂದು ಕನಸು, ಒಂದು ರೀತಿ ನಿನ್ನೆಯ ಕನಸಿನ ಎರಡನೆ ಭಾಗದ ಹಾಗೆ, ವೇಗವಾಗಿ ಹಾರುವಂತೆ ಮುಂದುವರಿದ ರೆನಾಲ್ಟ್ ಕಾರು, ಪಕ್ಕದಲ್ಲಿದ್ದ ಶಾಲಿನಿ ಇದ್ದಕ್ಕಿದ್ದ ಹಾಗೆಯೇ ಮಾಯ. ಮತ್ತೆ ಪಕ್ಕದಲ್ಲಿ ಶಾಲಿನಿ ಬಂದಂತನ್ನಿಸಿತು. ಶಾಲಿನಿ ಎಂದು ಮಾತನಾಡಿಸಲು ನೋಡಿದಾಗ ಯಾರೊ ಬೇರೆ ಹೆಣ್ಣಿನಂತೆ ಕಂಡಿತು. ಮುಖ ಸರಿಯಾಗಿ ಕಾಣಿಸದಿದ್ದರೂ ಇದು ಶಾಲಿನಿ ಅಲ್ಲ ಯಾರಿರ

ಬಹುದು ಅಂದುಕೊಂಡಾಗ ಕನಸು ಕಲಕಿತ್ತು.

ಮರುದಿನ ರಘು ಹಾಸುಗೆಬಿಟ್ಟು ಎದ್ದುಬಿಟ್ಟ. ಆಯಾಸ ಇನ್ನೂ ಇತ್ತು. ನಿನ್ನೆ ಆಹಾರ ಸರಿಯಾಗಿ ತೆಗೆದುಕೊಂಡಿರಲಿಲ್ಲ. ಬೆಳಗ್ಗೆ ಬೇಗ ಎದ್ದು ಬಿಸಿನೀರಿನಲ್ಲಿ ಬಟ್ಟೆ ಅದ್ದಿ ಹಿಂಡಿ ಮೈಯೊರೆಸಿಕೊಂಡ. ಸ್ವಲ್ಪ ಹಾಯೆನಿಸಿತು. ನೋವು-ಭಾರ ಇರಲಿಲ್ಲ. ಹೊರಗೆಲ್ಲೂ ಹೋಗುವುದು ಬೇಡ ಅಂದದ್ದರಿಂದ ಸ್ವಲ್ಪ ತಿಂಡಿ-ಕಾಫಿ ಮುಗಿಸಿ ಮನೆಮುಂದೆ ಹೂದೋಟದಲ್ಲಿ ಪೇಪರ್ ಓದುತ್ತ ಕುಳಿತ. ರಂಗನಾಥ ಬಂದು ಒಂದಿಷ್ಟು ಹೊತ್ತು. ಮಾತನಾಡುತ್ತ ಕುಳಿತುಕೊಂಡ. 'ಈ ಒಂದು ದಿವಸ ಎಲ್ಲೂ ಹೋಗ್ಬೇಡ, ರಘು. ಹಾಯಾಗಿ ಮನೇಲಿದ್ದು ರೆಸ್ಟ್ ತಗೋ'-ಎಂದು ರಾಮರಾಯರು ಹೇಳಿದರು.

ಸಂಜೆ ಕಾರ್ಖಾನೆ ಮುಚ್ಚಿದ ಮೇಲೆ ರಂಗನಾಥ ಬಂದು ಮಾತನಾಡುತ್ತ ಕುಳಿತಿದ್ದಾಗಲೇ ಅನಿರೀಕ್ಷಿತವೊಂದು ನಡೆಯಿತು. ಲಾರೆನ್ಸ್ ಜೋಸೆಫ್‌ನ ಜೊತೆಗೆ ಮೂರು ನಾಲ್ಕು ಮಂದಿ ಪೊಲೀಸರು ಜೀಪ್‌ನಲ್ಲಿ ಬಂದಿಳಿದರು. ಅವರಲ್ಲೊಬ್ಬರು ರಘು-ರಂಗನಾಥ ಇಬ್ಬರಿಗೂ ಪರಿಚಿತರೇ ಆಗಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ರಾಜಾರಾವ್. ರಂಗನಾಥನೇ ಎಲ್ಲರನ್ನೂ ಸ್ವಾಗತಿಸಿ ಕೂಡಿಸಿದ. 'ರೆನಾಲ್ಟ್ ಕಾರು ನನ್ನ ಗ್ಯಾರೇಜ್‌ನಲ್ಲಿ ಇರೋದು ನೋಡಿ ಪೊಲೀಸರು, ಕಾರಿನ ಮಾಲಿಕರು, ನಿನ್ನೆ ಮೊನ್ನೆ ಡ್ರೈವ್ ಮಾಡಿದವರು ಮೊದಲಾದ ವಿವರ ಕೇಳಿದರು. ಅವರನ್ನು ನಿಮ್ಮಲ್ಲಿಗೇ ಕರ್ಕೊಂಡು ಬಂದಿದೀನಿ'—ಲಾರೆನ್ಸ್ ಜೋಸೆಫ್ ಹೇಳಿದ.

'ಮಿಸ್ಟರ್ ರಘು, ಮೊನ್ನೆ ಸಂಜೆ ರೆನಾಲ್ಟ್ ಕಾರನ್ನ ನೀವೇ ಡ್ರೈವ್ ಮಾಡಿದ್ರಾ?' ಎಂದು ರಾಜಾರಾವ್ ಕೇಳಿದರು. 'ಹೌದು ಸಾರ್, ಏನಾಯ್ತು?' ಎಂದು ರಘು ಕೇಳಿದ. 'ಬೆಂಗಳೂರು-ನಂದಿದುರ್ಗ ಮಾರ್ಗವಾಗಿ ನೀವು ಹೋಗಿ ವಾಪಸ್ಸಾದದ್ದುಂಟೇ?' ಎಂದವರು ಮತ್ತೆ ಕೇಳಿದರು. 'ಹೌದು ಸಾರ್, ಹೋಗಿಬಂದೆ. ನಾನೊಬ್ನೆ ಕಾರ್‌ನಲ್ಲಿ ಇದ್ದೆ—ಡ್ರೈವ್ ಮಾಡಿದೆ'—ಎಂದ ರಘು. 'ರೆನಾಲ್ಟ್ ಕಾರನ್ನ ಅತೀ ವೇಗದ ಡ್ರೈವಿಂಗ್‌ಗಾಗಿ ನಮ್ಮ ಟ್ರಾಫಿಕ್ ಪೊಲೀಸರು ಮೂರುನಾಲ್ಕು ಕಡೆ ಕಾರಿನ ನಂಬರು ನೋಟ್ ಮಾಡಿದ್ದಾರೆ. ಫಾಲೋ ಮಾಡೋ ಆಲೋಚನೇನೂ ಮಾಡಿದ್ದಾರೆ. ಮತ್ತೆ ನಮ್ಮ ಸೆಂಟ್ರಲ್ ಕಂಟ್ರೋಲ್‌ಗೂ ಸಮಾಚಾರ ನೀಡಿದ್ದಾರೆ. ಈ ಅತೀವೇಗದ ಡ್ರೈವಿಂಗ್‌ಗಾಗಿ ನಾವು ನಿಮಗೆ ಛಾರ್ಜ್‌ಷೀಟ್ ಕೊಡ್ಲೇಬೇಕಾಗಿದೆ'—ಎಂದರು. ರಾಜಾರಾವ್, 'ಲಾರೆನ್ಸ್ ಜೋಸೆಫ್ ಗ್ಯಾರೇಜ್‌ನಲ್ಲಿ ಆ ಗಾಡಿನ ನೋಡಿ, ಮಾಲಿಕರು ನೀವು ಅಂತ ತಿಳಿದ್ಮೇಲೆ, ನಿಮಗೆ ಹುಷಾರಿಲ್ಲ ಎಂದು ಜೋಸೆಫ್ ಹೇಳಿದ್ದರಿಂದ, ಜೊತೆಗೆ ನನಗೂ ನಿಮ್ಮ ಪರಿಚಯ ಇದ್ದಿದ್ರಿಂದ ನಾನೇ ನಿಮ್ಮನ್ನ ಹುಡುಕಿಕೊಂಡು ಬಂದೆ' ಎಂದರವರು.



ನೀವು ಅನೇಕರ ಸಾಹಿತ್ಯ ಕದ್ದಿದ್ದೀರಿ ಅಂತ ಕಂಪ್ಲೇಂಟ್ ಬಂದಿದೆ. ಅದಕ್ಕೇ ಆರೆಸ್ಟ್ ಮಾಡಲು ಬಂದಿದ್ದೇನೆ.

'ತುಂಬಾ ಥ್ಯಾಂಕ್ಸ್ ಸಾರ್. ಹೌದು ನಾನು ವೇಗವಾಗಿ ಆ ಕಾರನ್ನು ಓಡಿಸಿದ್ದು ನಿಜ. ಆದ್ರೆ ಒಂದು ಮಾತಂತೂ ನಿಜ. ನೀವು ನನ್ನನ್ನ ನಂಬ್ತೀರಿ ಅಂತ ಹೇಳ್ತಿದೀನಿ: ನನಗೆ ಅಷ್ಟು ವೇಗವಾಗಿ, ಅದೂ ನಂದಿಬೆಟ್ಟದಷ್ಟು ದೂರ ಕಾರ್ ಓಡಿಸ್ಬೇಕು ಅನ್ನೊ ಯೋಚ್ನೆ ಇರ್ಲಿಲ್ಲ ಸಾರ್. ನಾನು ಏನೇನೋ ಯೋಚ್ನೆ ಮಾಡ್ತಾ ಇದ್ದೆ: ಮನಸ್ಸು ಸ್ವಲ್ಪ ಟೊಳ್ಳಾಗಿತ್ತು. ಆದ್ರಿಂದ ಏನಾಯ್ತು, ಹೇಗಾಯ್ತು ಅಂತ ವಿವರಣೆ ನೀಡೊಕ್ಕೂ ನಂಗಾಗ್ತಾ ಇಲ್ಲ. ಕಾರ್ನಲ್ಲೆ ಏನೊ ಡಿಫೆಕ್ಟ್ ಇರ್ಬೋದು ಅಂತ ನಂಗೆ ಅನ್ನಿಸ್ತು. ಅದಕ್ಕೆ ಚೆಕಪ್‌ಗಾಗಿ ಲಾರೆನ್ಸ್ ಜೋಸೆಫ್

ಅವ್ರಿಗೇ ಕೊಟ್ಟಿದೀನಿ'—ಎಂದ ರಘು. 'ಹೌದು ಸಾರ್. ನಾನು ಅದನ್ನ ನಿಮ್ಗೆ ಹೇಳಿದ್ದೀನಿ'— ಎಂದ ಜೋಸೆಫ್. ರಾಜಾರಾವ್ ಕೆಲನಿಮಿಷ ತಡೆದುಕೂತರು. ಅಷ್ಟರಲ್ಲಿ ಕಾಫಿ ಬಂದಿತು. ಕಾಫಿ ಕುಡಿಯುತ್ತ ರಘು ಹೇಳಿದ: 'ಏನೇ ಕಾರಣಗಳಿರ್ಲಿ, ತಪ್ಪು ಖಂಡಿತಾ ಆಗಿದೆ, ಸಾರ್. ಟ್ರಾಫಿಕ್ ರೂಲ್ಸ್ ವಿರುದ್ಧ ನಾನು ಕಾರ್ ಓಡ್ಸಿದೀನಿ. ಇದಕ್ಕೆ ತಪ್ಪುದಂಡ ಕಟ್ಟೋಕ್ಕೆ ಸಿದ್ಧವಾಗಿದೀನಿ.' ರಾಜಾರಾಯರು ಮುಗುಳು ನಗೆ ಬೀರಿದರು. 'ದಟ್ಸ್ ಲೈಕ್ ಎ ಗುಡ್ ಸಿಟಿಜನ್. ಆಯ್ತು ನಾಳೆ ನಾಡಿದ್ದರಲ್ಲಿ ನಮ್ಮ ಮನುಷ್ಯನೊಬ್ಬನನ್ನ ದಂಡ ಮೊಬಲಗು ಕಟ್ಟಿದ ರಶೀದಿ ಜೊತೆಗೆ ಕಳಿಸ್ತೀನಿ. ರಶೀದಿ ತೊಗೊಂಡು ಹಣ ಕಟ್ಟಿಡಿ. ನಾನಿನ್ನು ಬರ್ತೀನಿ, ಗುಡ್‌ಲಕ್'— ಎನ್ನುತ್ತ ರಾಜಾರಾಯರು ಕೈಕುಲುಕಿ ಹೊರಟು ಹೋದರು. 'ನಾಳೆ ಚೆಕಪ್ ಮಾಡಿ ರಿಸಲ್ಟ್ ತಿಳಿಸ್ತೀನಿ' ಎಂದು ಹೇಳಿ ಲಾರೆನ್ಸ್ ಜೋಸೆಫ್ ಹೋದ.

'ಅಬ್ಬಾ, ನಮಗೆ ಗೊತ್ತಿಲ್ದೇನೇ ಏನೇನಾಗೋಗತ್ತೆ?' ಎಂದ ರಘು, 'ಇಷ್ಟರಲ್ಲೆ ಮುಗೀತು—ರಾಜಾರಾವ್ ನಮಗೆ ಮೊದ್ಲೆ ಪರಿಚಯವಿದ್ದಿದ್ರಿಂದ ಹೀಗೆ ಮುಗೀತು. ಇಲ್ದಿದ್ರೆ ಕಾರನ್ನ ಅವ್ರು ಎಳ್ಕೊಂಡು ಹೋಗಿ, ಕೋರ್ಟು ಕಛೇರಿ ಅಲೆಸಿರೋರು'—ಎಂದ ರಂಗನಾಥ. ಇವನ್ನೆಲ್ಲ ಬೆಪ್ಪಾಗಿ ನೋಡುತ್ತಿದ್ದ ರಾಮರಾಯರು-ಸೀತಾಬಾಯಿ 'ಸದ್ಯ ದೇವರ ದಯ, ಏನೂ ಆಗ್ಲಿಲ್ಲ'—ಎಂದುಕೊಂಡರು.

ಅಂತೂ ಏನೋ ಕಾರಣ: ರಘುವಿಗೆ ಬಲವಂತದ ಮಾಘಸ್ನಾನ: ಎರಡು ದಿನಗಳ ಸಂಪೂರ್ಣ ವಿಶ್ರಾಂತಿ ಆಗಿಹೋಯಿತು. ಮೊಟ್ಟ ಮೊದಲ ಬಾರಿಗೆ ಅವನು ತನ್ನ ಸುತ್ತಮುತ್ತ, ರಾಜ್ಯ-ದೇಶ-ಪ್ರಪಂಚಗಳಲ್ಲಿ ಏನೇನಾಗುತ್ತಿದೆ ಎನ್ನುವುದನ್ನು ತಿಳಿದುಕೊಂಡಿದ್ದ. ಪ್ರತಿದಿನ ಪೇಪರ್ ಓದಲೂ ಅವನಿಗೆ ಸಮಯವಿರುವುದಿಲ್ಲ. ಈ ಎರಡು ದಿನ ಎಲ್ಲ ಪತ್ರಿಕೆಗಳನ್ನೂ ಮೊದಲಿನಿಂದ ಕಡೆಯವರೆಗೂ ಓದಿ ಮುಗಿಸಿದ. ಮನೆಯಲ್ಲಿ ರಮೇಶನ ಸಡಗರದ ಗದ್ದಲ, ತಂದೆ ತಾಯಿ ಒಂದೊಂದು ಹೊತ್ತಿನಲ್ಲಿ ಒಂದೊಂದು ರೀತಿ ಮಾಡುವ ಚರ್ಚೆ ಇವನ್ನೆಲ್ಲ ನೋಡುವುದೂ ಅವನಿಗೆ ಸಾಧ್ಯವಾಯಿತು.

ರಮೇಶ ಎರಡನೆ ಪಿಯುಸಿಯಲ್ಲಿ ಓದುತ್ತಿದ್ದ. ಅವನಿಗೂ-ರಘುವಿಗೂ ವಯಸ್ಸಿನಲ್ಲಿ ಆರೇಳು ವರ್ಷ ವ್ಯತ್ಯಾಸವಿತ್ತು. ರಘು ಹಿರಿಯ ವ್ಯಕ್ತಿಯ ಹಾಗೆ ಗಂಭೀರವಾಗಿ ಓದಿನಲ್ಲಿ, ವೃತ್ತಿಯಲ್ಲಿ ಮುಂದುವರಿಯುತ್ತಿದ್ದಾಗ, ರಮೇಶ ಇನ್ನೂ ಮನೆ ಮುಂದೆ ಕ್ರಿಕೆಟ್ ಆಡುತ್ತ, ಚಿಕ್ಕ ಹುಡುಗನಂತೆ ಎಲ್ಲೆಲ್ಲೊ ಓಡಾಡುತ್ತ, ಗದ್ದಲಮಾಡುತ್ತ, ಬಯ್ಯಿಸಿಕೊಳ್ಳುತ್ತ ಇದ್ದ. ಅವನಿಗೆ ಕಾರು-ಮೋಟರ್‌ಸೈಕಲ್ ರೇಸ್‌ಗಳೆಂದರೆ ತುಂಬ ಆಸಕ್ತಿ. ಆ ಸಂಬಂಧವಾಗಿ ಇಂಗ್ಲಿಷ್‌ನಲ್ಲಿ ಬರುವ ಪತ್ರಿಕೆಗಳನ್ನೆಲ್ಲ ಕೊಂಡು ಓದಿ ಶೇಖರಿಸುತ್ತಿದ್ದ. ತಂದೆಯನ್ನು ಬಲವಂತಮಾಡಿ ಯಮಹಾ ಮೋಟರ್ ಸೈಕಲ್ ಕೊಂಡು ಕೊಂಡಿದ್ದ. ಅವನ ವೇಗ-ಹುಮ್ಮಸ್ಸು ನೋಡಿ ಎಲ್ಲರೂ ಆಶ್ಚರ್ಯಪಡುತ್ತಿದ್ದುದುಂಟು. 'ರಘು ಅಣ್ಣ, ನಾನೂ ರೇಸ್‌ಗಳಲ್ಲಿ ಪಾರ್ಟಿಸಿಪೇಟ್ ಮಾಡ್ಬೇಕು. ಟರ್ಬೊ ಮಾಡ್ಕೊಂಡು ನನ್ನ ಯಮಹಾ ಗಾಡೀನ ರೇಸ್ ಟ್ರ್ಯಾಕ್‌ನಲ್ಲಿ ಓಡಿಸ್ಬೇಕು' ಎಂದವನು ಹೇಳುವಾಗ ರಘು ಆಶ್ಚರ್ಯಪಡುತ್ತಿದ್ದ. ಇಂಗ್ಲಿಷ್ ಕ್ಯಾಸೆಟ್‌ಗಳನ್ನು ಹಾಕಿ ಹಾಡುಕೇಳುತ್ತ ಅದೇ ರೀತಿಯಲ್ಲಿ ರಮೇಶ ಡ್ಯಾನ್ಸ್ ಮಾಡುತ್ತಿದ್ದ. 'ಟ್ಯಾಲೆಂಟೆಡ್ ಫೆಲೋ, ಆದ್ರೆ ಈಗ ಓದಿನ ಕಡೆ ಗಮನ ಹರಿಸ್ಬೇಕು. ಒಂದು ಡಿಗ್ರಿ ಮಾಡ್ಕೊಂಡ್ರೆ ಆಮೇಲೆ ಕೆರಿಯರ್ ಚೂಸ್ ಮಾಡ್ಕೊಂಡು ಸ್ಪೆಷಲೈಸ್ ಮಾಡ್ಕೊಬೌದು'—ಎಂದು ರಘು ರಂಗನಾಥನಿಗೆ ಹೇಳುತ್ತಿದ್ದ.

ಮರುದಿನ ಸಂಜೆ ರಂಗನಾಥ ತನ್ನ ಕಾರಿನಲ್ಲಿ ಬಂದು ರಘುವನ್ನು ಲಾರೆನ್ಸ್ ಜೋಸೆಫ್ ಗ್ಯಾರೇಜ್‌ಗೆ ಕರೆದೊಯ್ದ. ಜೋಸೆಫ್ ಅತ್ಯಾದರದಿಂದ ಇವರಿಬ್ಬರನ್ನು ಬರಮಾಡಿಕೊಂಡ. 'ಬೆಂಗಳೂರಿನಲ್ಲೆ ಎಕ್ಸ್‌ಪರ್ಟ್ ಸರ್ವೀಸ್ ಇಂಜಿನಿಯರ್ ಒಬ್ಬರಿಂದ ಚೆಕ್ ಮಾಡ್ಸಿದೀನಿ. ಗ್ಯಾರೇಜ್‌ನಲ್ಲಿ ಎಲೆಕ್ಟ್ರಿಕಲ್, ಮೆಕಾನಿಕಲ್ ಟೆಸ್ಟ್ ಮಾಡ್ಸಿದೀನಿ. ನಿಜ ಹೇಳೋದಾದ್ರೆ, ಒಂದು ಪುಟ್ಟ ದೋಷ ಕೂಡ ಈ ಕಾರ್‍ನಲ್ಲಿ ಕಾಣಿಸ್ಲಿಲ್ಲ. ನನ್ನ ಇಷ್ಟು ವರ್ಷದ ಅನುಭವದಲ್ಲಿ ಧೈರ್ಯ


ವಾಗಿ ಹೇಳ್ತೀನಿ: ಇಟ್ ಈಸ್ ಫೈನ್, ಟ್ರಬಲ್ ಫ್ರೀ ಕಾರ್'–ಎಂದ ಲಾರೆನ್ಸ್ ಜೋಸೆಫ್. 'ಹಾಗಾದ್ರೆ ಇದ್ದಕ್ಕಿದ್ದಾಗೆ ನಿಂತೋಗಿದ್ದು, ಓವರ್‌ಸ್ಪೀಡ್ ಆಗಿದ್ದು ಇವೆಲ್ಲ ಹೇಗೆ ಮಿಸ್ಟರ್ ಜೋಸೆಫ್'–ರಘು ಕೇಳಿದ. 'ಐ ಥಿಂಕ್ ಇವೆಲ್ಲ ನಿಮ್ಮ ಆ ದಿನದ ಮನಸ್ಸಿನ ಸ್ಥಿತಿಯ ಹಾಗೆ ಆಗಿದೆ ಅನ್ಸತ್ತೆ ಮಿಸ್ಟರ್ ರಘು. ಆ ದಿವ್ಸ ನೀವು ತುಂಬಾ ಯೋಚ್ನೆ ಮಾಡ್ತಿದ್ದಿರ್ಬೇಕು–ದಟ್ ಹ್ಯಾಸ್ ರಿಫ್ಲೆಕ್ಟೆಡ್ ಇನ್ ಯುವರ್ ಡ್ರೈವಿಂಗ್' ಎಂದ ಲಾರೆನ್ಸ್ ಜೋಸೆಫ್. 'ನಾಳೆ ಬೆಳಗ್ಗೆ ನಾನೇ ನಿಮ್ಮ ಮನೆಗೆ ರೆನಾಲ್ಟ್‌ನ್ನು ಡ್ರೈವ್ ಮಾಡ್ಕೊಂಡು ತಂದ್ಬಿಡ್ತೀನಿ' ಎಂದೂ ಹೇಳಿದ.

ವಾಪಸ್ಸಾಗುವಾಗ ರಂಗನಾಥ್ ಹೇಳಿದ: ನಂಗೂ ಜೋಸೆಫ್ ಮಾತು ನಿಜ ಅನ್ನಿಸ್ತಿದೆ. ನೀನು ತುಂಬಾ ಯೋಚ್ನೆ ಮಾಡ್ತಿದ್ದೀಯ-ಇದನ್ನ ನಾನೂ ಗಮನಿಸಿ ಹೇಳಿದ್ದೆ. ಐ ಥಿಂಕ್ ಯೂ ಆರ್ ಫೀಲಿಂಗ್ ಲೋನ್ಲಿನೆಸ್. ಶಾಲಿನಿ ಕುಟುಂಬ ಹೋದ್ಮೇಲೆ ನಿಂಗೆ ಸರಿಯಾಗಿ ಹೊಂದ್ಕೊಳ್ಳಿಕ್ಕೆ ಆಗಿಲ್ಲ. ನನಗೆ ಇದು ಚೆನ್ನಾಗಿ ಅರ್ಥ ಆಗಿದೆ. ಜೊತೆಗೆ ಆ ದಿವ್ಸ ನಿಂಗೆ ಬೆಳಗ್ಗೇನೂ ಅಲ್ಪಸ್ವಲ್ಪ ಜ್ವರ ಇದ್ದಿರ್ಬೇಕು. ಜ್ವರ-ಯೋಚನೆ ಎರಡರ ಮಂಪರಿನಲ್ಲಿ ನೀನು ಅವತ್ತು ಏನೇನೊ ಮಾಡ್ಬಿಟ್ಟಿದ್ದೀಯ' ರಂಗನಾಥನ ಮಾತು ಕೇಳುತ್ತ, ಜೋಸೆಫನ ಮಾತು ಮೆಲುಕು ಹಾಕುತ್ತ ರಘು ಹೀಗೆಲ್ಲ ಆಗಿದ್ದಿರಬಹುದು ಅಂದುಕೊಂಡ.

ಮರುಬೆಳಗ್ಗೆಯೇ ರೆನಾಲ್ಟ್ ಗಾಡಿಯನ್ನು ಜೋಸೆಫ್ ಮನೆಗೆ ತಂದುಬಿಟ್ಟು ಕೈಕುಲುಕಿ ಹೊರಟುಹೋದ. 'ಹುಷಾರಪ್ಪ ರಘು, ನಿಧಾನವಾಗೇ ಓಡ್ಸು' ಎಂದು ತಂದೆತಾಯಿ ಇಬ್ಬರೂ ಹೇಳಿದಾಗ, 'ಹಂಗೇ ಮಾಡ್ತೀನಿ, ಹುಷಾರಾಗಿರ್ತೀನಿ. ಏನೂ ಯೋಚ್ನೆ ಮಾಡ್ಬೇಡಿ'–ಎಂದು ಹೇಳಿ ರಘು ಕಾರ್ಖಾನೆಗೆ ಹೊರಟ.

ಎರಡು ಮೂರು ದಿನಗಳ ವಿಶ್ರಾಂತಿಯ ತರುವಾಯ ಮತ್ತೆ ರಘುವಿನ ಎಂದಿನ ಚಟುವಟಿಕೆಗಳು ಪ್ರಾರಂಭವಾಗಿದ್ದವು. ಬೆಂಗಳೂರಿನ ವಿವಿಧ ಚಿಕ್ಕ ದೊಡ್ಡ ಕಾರ್ಖಾನೆಗಳು, ತುಮಕೂರು, ಕೋಲಾರ, ಹೊಸೂರು, ವೈಟ್‌ಫೀಲ್ಡ್ ಹೀಗೆ ಇಂಡಸ್ಟ್ರಿಯಲ್ ಎಸ್ಟೇಟ್‌ಗಳನ್ನು ಭೇಟಿಮಾಡಿ, ಅಧಿಕಾರಿಗಳನ್ನು ಭೇಟಿಮಾಡಿ, ಕೆಲಸ ತರುವುದು, ಹಣ ವಸೂಲಿ ಕೆಲಸಗಳು ಎಂದಿನಂತೆ

ಬಂದಿ



ನಿಮ್ಮಲ್ಲಿ
ನಾನು ಬಂದಿ
ನನ್ನಲ್ಲಿ
ನೀವು ಬಂದಿ
ತಾಸೆರಡು ಸರಿದದ್ದೇ
ತಿಳಿಯಲಿಲ್ಲ
ಸಮಯ ಗೋಣಗಿತ್ತು
ಬಂದಿಯಾದದ್ದು
ನೀವಲ್ಲ
ನಾನು

● ಭಾಗ್ಯ ಜಯಸುದರ್ಶನ

ಪ್ರಾರಂಭವಾದವು. ರೆನಾಲ್ಟ್ ವೇಗದ ದೈತ್ಯ ಎಂದು ಗೊತ್ತಾದಮೇಲೆ ಅದನ್ನು ಅತೀ ವೇಗವಾಗಿ ಓಡಿಸದೆ, ಸುಮಾರು ವೇಗವಾಗಿ ಹೋಗಿ ಬರುತ್ತಿದ್ದ ರಘು. ಸಾಧಾರಣ ವೇಗದಲ್ಲೂ ಅದು ಸುತ್ತಲಿನ ಉಳಿದನೇಕ ಕಾರುಗಳಿಗಿಂತಲೂ ಚುರುಕಾಗಿತ್ತು. ರೆನಾಲ್ಟ್ ರಸ್ತೆಯ ಮೇಲೆ ಸದ್ದುಗದ್ದಲವಿಲ್ಲದೆ, ತೇಲಿದಂತೆ ಹೋಗುತ್ತಿರುವುದನ್ನು ಗಮನಿಸಿದ ಅನೇಕರು ಇವನಿಗೆ ಮೆಚ್ಚುಗೆ ತಿಳಿಸಿದ್ದರು. 'ಹೊಚ್ಚ ಹೊಸ ಕಾರಿಗಿಂತಲೂ ಅದ್ಭುತವಾದ ಕಂಡೀಷನ್‌ನಲ್ಲಿ ಈ ಕಾರು ಇದೆ'–ಎನ್ನುತ್ತಿದ್ದರು.

ರಘುವಿನ ಈ ಘಟನೆ ಚಿಕ್ಕ ಅಸ್ವಸ್ಥತೆ ಮದುವೆ ಕೆಲಸಗಳನ್ನು ತುಂಬ ಚುರುಕುಗೊಳಿಸಿತ್ತು. ರಾಮರಾಯರು–ನಾಣಿಮಾವ ಟೆಲಿಫೋನ್‌ನಲ್ಲಿ ಅನೇಕ ಸಲ ಮಾತನಾಡಿಕೊಂಡಿದ್ದರು. ನಾಣಿಮಾವ ಒಂದು ಸಲ ಬೆಂಗಳೂರಿಗೆ ಬಂದಿದ್ದರು. 'ಒರಿಮಗಳ ಮದುವೆ ತುಂಬ ವಿಜೃಂಭಣೆಯಿಂದ ನಡೀಬೇಕು ಅಂತಿದಾಳೆ ಲಕ್ಷ್ಮೀ. ಮದ್ರಾಸ್‌ನಲ್ಲಿ ಮಾಡಿ ನೆಂಟರಿಷ್ಟರೆಲ್ಲ ಅಷ್ಟು ದೂರ ಬರೊ ಬದ್ಲು ಬೆಂಗಳೂರಿನಲ್ಲೆ ಮದ್ವೆ ಮಾಡ್ಬಿಡೋಣ ಅಂತ ಮಾತಾಡ್ಕೊಂಡಿದೀವಿ' ಎಂದರು ನಾಣಿಮಾವ. 'ಅದೇ ಸರಿ ಕಣೋ ನಾಣಿ. ಬೆಂಗ್ಳೂರ್ನಲ್ಲೆ ಮಾಡೋಣ.

ಸ್ನೇಹಿತರು-ನೆಂಟರಿಸ್ಟರು ಎಲ್ಲಾ ಇಲ್ಲೇ ಇರೋದು'– ಎಂದರು ಸೀತಾಬಾಯಿ. ಈ ಸಲ ನಾಣಿಮಾವ ಬಂದಾಗ ಪುರೋಹಿತರನ್ನು ಕರೆಸಿ ಮುಂದಿನ ಎರಡುಮೂರು ತಿಂಗಳಲ್ಲಿರುವ ಮೂರು-ನಾಲ್ಕು ಲಗ್ನಗಳನ್ನು ನಾಣಿಮಾವ ಗುರುತುಮಾಡಿ ಕೊಂಡರು. 'ಈಗೇನು ಯಾವ್ದಕ್ಕೂ ಕಾಯ್ಬೇ ಕಾಗಿಲ್ಲ-ಹಣಕೊಟ್ರೆ ಎಲ್ಲೂ ಸಿಗತ್ತೆ: ಕೈಬೀಸ್ಕೊಂಡು ಬಂದು ಮದ್ವೆ ಮುಗಿಸಿಕೊಟ್ಟು ಕೈಬೀಸ್ಕೊಂಡು ಹೊರ್ಟ್ಹೋಗ್ಬೌದು'–ಎಂದರು ರಾಮರಾಯರು.

ಮುಂದಿನ ಎರಡು ಎರಡೂವರೆ ತಿಂಗಳಲ್ಲಿ ಬೀಳುವ ಶುಭಲಗ್ನವನ್ನು ಎರಡು ಕಡೆಯವರೂ ತೀರ್ಮಾನಿಸಿದರು. 'ಮದ್ರಾಸ್‌ಗೆ ಹೋಗಿ ಹೆಂಗಸರ ಅನುಕೂಲಗಳನ್ನ ನೋಡ್ಕೊಂಡು ಡೇಟ್ ತಿಳಿಸ್ತೀನಿ. ಅದ್ರಂತೆ ಫಿಕ್ಸ್ ಮಾಡಿದ್ರೆ ಆಯ್ತು'-ಎಂದು ನಾಣಿಮಾವ ಹೊರಟು ನಿಂತರು. 'ರಘು, ಮದ್ವೆಗೆ ಮೊದ್ಲೆ ಒಂದ್ಸಲ ಮದ್ರಾಸ್‌ಗೆ ಬಾ. ಹಾಯಾಗಿ ಒಂದೆರಡು ದಿನ ಕಾಲ ಕಳೀಬೌದು' ಎಂದು ಆಹ್ವಾನಿಸಿಹೋದರು.

ಮನೆಯಲ್ಲಿ ಮದುವೆ ಸಂಭ್ರಮ-ಬಿಸಿ ಪ್ರಾರಂಭ ವಾಯಿತು. ಮದ್ರಾಸ್‌ಗೆ ಹೋಗಿ ನಾಣಿಮಾವ ದಿನಾಂಕವನ್ನು ಖಚಿತಗೊಳಿಸಿದ ಮೇಲಂತೂ ಮನೆಯಲ್ಲಿ ಹಗಲು-ರಾತ್ರಿ ಅದೇ ಮಾತಾ ಯಿತು. ಸೀತಾಬಾಯಿ ಕಾಲಿಗೆ ಚಕ್ರಕಟ್ಟಿಕೊಂಡವ ರಂತೆ ಮನೆತುಂಬಾ ಓಡಾಡಿದರು. ನೆಂಟರಿಷ್ಟರ ಮನೆಗಳಿಗೆಲ್ಲ ಹೋಗಿ ಹೇಳಿಬಂದರು. ಪೇಟೆಗೆ ಹೋಗಿ ಒಡವೆ-ವಸ್ತ್ರ ಎಂದು ಖರೀದಿಗೆ ಪ್ರಾರಂಭಿಸಿದರು.

ರಘು ಮನಸ್ಸು ಈಗ ಸ್ವಲ್ಪ ನಿರಾಳವಾಗಿತ್ತು. ಉಲ್ಲಸಿತವೂ ಆಗಿತ್ತು. ಈ ಉಲ್ಲಾಸ-ಸ್ಥಿರತೆ ಅವನ ಪ್ರತಿದಿನದ ಕೆಲಸಗಳಲ್ಲಿ ಕಂಡಿತು. ಅತ್ಯುತ್ಸಾಹದಿಂದ ಅವನು ಓಡಾಡುತ್ತಿದ್ದ. ಸಂಜೆ ಮನೆಗೆ ಬಂದು ದೊಡ್ಡವರೊಂದಿಗೆ ಮಾತು ಕತೆಗಳಲ್ಲಿ ಭಾಗಿಯಾಗುತ್ತಿದ್ದ. ದಿನಾಂಕ ನಿಷ್ಕರ್ಷೆ ಯಾದ ಮೇಲೆ ರಘು ತನ್ನ ಆತ್ಮೀಯ ಗೆಳೆ ಯರು ಕೆಲವರಿಗೆ ತನ್ನ ಮದುವೆ ಸುದ್ದಿ ತಿಳಿಸಿ ಪತ್ರಬರೆದ. ದಿನಾಂಕ ತಿಳಿಸಿ ಖಂಡಿತ ಬಿಡುವು ಮಾಡಿಕೊಂಡು ಬರಲೇಬೇಕು ಎಂದು ಬರೆದ.

ಹೀಗೆ ಬರೆದವರಲ್ಲಿ, ರಘುವಿಗೆ ರಂಗನಾಥ ನಷ್ಟೆ ಆತ್ಮೀಯನಾಗಿದ್ದ ರಾಜಶೇಖರ ಬಹು ಮುಖ್ಯನಾದವನು–ರಾಜಶೇಖರ ಆಗರ್ಭ ಶ್ರೀಮಂತರ ಒಬ್ಬನೇ ಮಗ. ರಘು ಜೊತೆಯಲ್ಲೆ ಬಿ.ಇ. ಓದಿದವನು. ರಘುವಿನ ಬುದ್ಧಿವಂತಿಕೆ ಅಧ್ಯಯನಗಳ ಪೂರ್ಣ ಉಪಯೋಗ ಪಡೆದು ಕೊಂಡಿದ್ದವನು. ಕಾಲೇಜಿನಲ್ಲಿ ಅರ್ಥವಾಗದ ಅನೇಕ ವಿಷಯಗಳನ್ನು ರಾಜಶೇಖರನಿಗೆ ರಘು ವಿವರಿಸಿದ್ದುಂಟು. ಪರೀಕ್ಷೆ ವೇಳೆಯಲ್ಲಿ ಅನೇಕ ಮುಖ್ಯ ವಿಷಯಗಳನ್ನು ಸುಲಭವಾಗಿ ಅರ್ಥ ವಾಗುವಂತೆ ತಿಳಿಸಿ ರಾಜಶೇಖರ ಚೆನ್ನಾಗಿ ತೇರ್ಗಡೆಯಾಗುವಂತೆ ರಘು ಶ್ರಮಿಸುತ್ತಿದ್ದ. ಆಗರ್ಭ ಶ್ರೀಮಂತನಾಗಿದ್ದರೂ ರಾಜಶೇಖರ ನಿಗೆ ವ್ಯಾಪಾರಕ್ಕಿಂತಲೂ ಓದಿನಲ್ಲಿ ತುಂಬಾ ಆಸೆ. ಓದಿ ಪದವಿಗಳಿಸಿ, ಸಂಶೋಧನ ವಿದ್ಯಾರ್ಥಿ ಯಾಗಿ, ಪರಿಣತ ವಿಜ್ಞಾನಿಯಾಗಬೇಕು ಎಂದೆಲ್ಲ ರಾಜಶೇಖರನ ಆಸೆ. ರಘು ಗೆಳೆಯನ ಆಸೆ ಆಕಾಂಕ್ಷೆಗಳಿಗೆ ತುಂಬು ಬೆಂಬಲ ಕೊಟ್ಟಿದ್ದ.

ರಾಜಶೇಖರ ಬಿ.ಇ. ಮುಗಿಸಿದ ಕೂಡಲೇ ಅಮೆರಿಕಾಕ್ಕೆ ಹೊರಟುಹೋದ. ಅಲ್ಲಿ ಎಂ.ಎಸ್. ಡಿಗ್ರಿಗೆ ಓದುತ್ತ 'ನ್ಯಾಸಾ'ದಲ್ಲಿ ಇಂಜಿನಿಯರಿಂಗ್ ವಿಜ್ಞಾನಿಯಾಗಿ ವೈಮಾನಿಕ ಸಂಶೋಧನೆಯಲ್ಲಿ ದುಡಿಯುತ್ತ ಅಧ್ಯಯನ ಮಾಡುತ್ತಿದ್ದ. ಗೆಳೆಯನ ಈ ಅಭಿವೃದ್ಧಿ ರಘುವಿಗೆ ಯಾವಾಗಲೂ ಅತಿ ಸಂತೋಷದ ವಿಷಯ. ತನ್ನಂತಹ ಸಾಮಾನ್ಯ ದರ್ಜೆ ವಿದ್ಯಾರ್ಥಿಯನ್ನು ಮೇಲ್ದರ್ಜೆಗೇರಿಸಿ ಸಂಶೋಧನಾ ವಿದ್ಯಾರ್ಥಿಯಾಗಲು ಸಹಾಯ ಮಾಡಿದ ರಘುವಿನ ಸ್ನೇಹವನ್ನು ರಾಜಶೇಖರ ಮರೆಯುವುದು ಸಾಧ್ಯವೇ ಇರಲಿಲ್ಲ. ರಾಜಶೇಖರ ಅಮೆರಿಕೆಯಿಂದ ತಪ್ಪದೆ ಬರೆಯುತ್ತಿದ್ದ. ಇಲ್ಲಿಂದ ರಘು ಆಗಾಗ ಪತ್ರಬರೆಯುತ್ತಿದ್ದ. ರಘು ಕಾರ್ಖಾನೆ ಪ್ರಾರಂಭಿಸುವಾಗ ಹೊಸ ಮಿಷೀನು ಗಳನ್ನು ಕೊಳ್ಳಲು ವಿದೇಶಿ ವಿನಿಮಯ ಹಣದ ಸಹಾಯ ಮಾಡಿದ್ದ. ಹೀಗೆ ಅವರಿಬ್ಬರ ಆತ್ಮೀಯತೆ ಸೊಗಸಾಗಿ ಬೆಸೆದುಕೊಂಡಿತ್ತು.

ರಘು ಅವನಿಗೆ ಪತ್ರ ಬರೆದ: 'ಪ್ರಿಯ ರಾಜಾ, ನನ್ನ ಮದುವೆ ನಿಶ್ಚಯವಾಗಿದೆ. ನಿನಗೆ ಗೊತ್ತಲ್ಲ, ನನ್ನ ಸೋದರಮಾವನ ಮಗಳು ಶಾಲಿನಿ ಯೊಂದಿಗೆ, ಇನ್ನು ಎರಡೂವರೆ ತಿಂಗಳಲ್ಲಿ ಮದುವೆ. ದಿನಾಂಕ ಬರೆಯುತ್ತಿದ್ದೇನೆ. ಗುರುತು ಮಾಡಿಕೊ. ಲಗ್ನಪತ್ರಿಕೆ ಸಿದ್ಧವಾದ ಕೂಡಲೇ ಕಳುಹಿಸಿಕೊಡುತ್ತೇನೆ. ನೀನು ಬರಲೇಬೇಕು. ಯಾರು ಬಂದರೂ, ಬರದಿದ್ದರೂ ನೀನು

ಬಂದಂತೆ ಆಗುವುದಿಲ್ಲ.'

ರಾಜಶೇಖರ ರಘುವಿನ ಹಾಗೆ ರಾಜ ಗಾಂಭೀರ್ಯದ ವ್ಯಕ್ತಿಯಾಗಿರಲಿಲ್ಲ. ಶ್ರೀಮಂತ ಪುತ್ರನ ಎಲ್ಲ ಉತ್ಸಾಹಗಳೂ ಅವನಲ್ಲಿದ್ದವು. ದಿನಕ್ಕೊಂದೊಂದು ಉಡುಪು, ಹೊಸ ಮಾಡೆಲ್ ಕಾರುಗಳು, ಹೋಟಲ್-ಪಾರ್ಟಿ. ಕಾಲೇಜ್ ದಿನಾಚರಣೆಯಲ್ಲಿ ಎಲ್ಲ ಕಾರ್ಯಕ್ರಮಗಳಲ್ಲೂ ಭಾಗಿ, ಸ್ವಾಗತ ಭಾಷಣ, ವಂದನಾರ್ಪಣೆ, ನಾಟಕ, ಚರ್ಚೆ, ಕ್ಯಾಂಟೀನ್ ಆಡಳಿತ, ಕ್ರೀಡೆಗಳು-ಎಲ್ಲದರಲ್ಲೂ ರಾಜಶೇಖರ ಭಾಗವಹಿಸಿಬಿಡುತ್ತಿದ್ದ. ಓದಿನಲ್ಲಿ ಬುದ್ಧಿವಂತ ಎನ್ನುವುದಕ್ಕಾಗಿ ರಘುವಿನ ಗೆಳೆತನ ಆಗಿತ್ತು. ರಘುವಿನ ಒಳ್ಳೆಯ ಗುಣದಿಂದ ಸ್ನೇಹ ಗಾಢವಾಗಿತ್ತು. ಇದು ಚೆನ್ನಾಗಿ ಬೆಸೆದುಕೊಳ್ಳಲು ರಾಜಶೇಖರನೇ ಕಾರಣ. ತಾನೇ ಬಂದು ಮಾತನಾಡಿಸಿ, ಜೊತೆಯಲ್ಲಿ ಕರೆದುಕೊಂಡು ಹೋಗಿ ಕನಸುಗಳನ್ನು ಕಾಣುತ್ತ ರಘುವನ್ನು ಹತ್ತಿರ ಸೆಳೆದುಕೊಂಡಿದ್ದ. ರಾಜಶೇಖರನ ಅತಿ ಸಹಜ ನಡವಳಿಕೆ, ಎಲ್ಲ ವಿಷಯಗಳಲ್ಲೂ ಮುಕ್ತ ಭಾವನೆಗಳು, ಶ್ರೀಮಂತಿಕೆಯ ದೊಡ್ಡಸ್ತಿಕೆಯನ್ನು ತೋರಿಸಿಕೊಳ್ಳದಿರುವುದು ಇವೆಲ್ಲ ರಘುವಿಗೆ ತುಂಬ ಮೆಚ್ಚುಗೆ ಆಗಿತ್ತು. ರಾಜಶೇಖರ ಹುಡುಗಿಯರೊಂದಿಗೆ ಓಡಾಡುತ್ತಾನೆ, ಅವನಿಗೆ ತುಂಬ ಗೆಳತಿಯರಿದ್ದಾರೆ ಎಂದೆಲ್ಲ ಕಿವಿಗೆ ಬಿದ್ದಿದ್ದರೂ ರಘು ತಲೆಕೆಡಿಸಿಕೊಂಡಿರಲಿಲ್ಲ. ಅದು ರಾಜಶೇಖರನ ವೈಯಕ್ತಿಕ ವಿಷಯ, ತನಗೂ ಅದಕ್ಕೂ ಸಂಬಂಧವಿಲ್ಲ ಎಂದು ಸುಮ್ಮನಾಗಿಬಿಟ್ಟಿದ್ದ. ರಾಜಶೇಖರ ಕೆಲವೊಮ್ಮೆ ಹುಡುಗಿಯರ ವಿಷಯ ಮಾತನಾಡುವುದನ್ನೂ ರಘು ಕೇಳಿದ್ದ. ಆದರೆ ರಾಜಶೇಖರ ಎಲ್ಲೂ ಕೀಳು ಕೆಲಸಗಳಿಗೆ, ಕೆಟ್ಟ ಚಟಗಳಿಗೆ, ಪೋಲಿ ಅಲೆತಕ್ಕೆ ಬಿದ್ದಿಲ್ಲ ಎನ್ನುವುದು ರಘುವಿಗೆ ಚೆನ್ನಾಗಿ ಗೊತ್ತಿತ್ತು. ಕಾಲೇಜು, ಅನಂತರ ರಘುವಿನೊಂದಿಗೆ ಪಾಠಪ್ರವಚನ, ಮೈದಾನದಲ್ಲಿ ಆಟ—ಹೀಗೆ ರಾಜಶೇಖರನ ಚಟುವಟಿಕೆಗಳೆಲ್ಲ ರಘುವಿಗೆ ಗೊತ್ತಿತ್ತು.

ಮರುವಾರವೇ ರಾಜಶೇಖರ ಅಮೆರಿಕದಿಂದ ರಾತ್ರಿ ಫೋನ್ ಮಾಡಿದ: 'ಕಂಗ್ರಾಟ್ಸ್ ಮೈ ಡಿಯರ್ ಬಾಯ್... ಅಂತೂ ಸೆಟಲ್ ಆಗ್ತಿದೀಯ, ಐಯ್ಯಾಂ ವೆರಿ ಹ್ಯಾಪಿ. ಮದ್ವೆಗೆ ಖಂಡಿತ ಬರ್ತೀನಿ. . ಲೌ'-ಎಂದಿದ್ದ. ಮುಂದಿನ ವಾರ ಅಮೆರಿಕದಿಂದ ರಾಜಶೇಖರನ ದೀರ್ಘ-ಸಂತೋಷದ ಪತ್ರ ಬಂದಿತು. ಪ್ರೀತಿ-ಸ್ನೇಹವನ್ನೆಲ್ಲ ಅದರಲ್ಲಿ ತುಂಬಿ ತುಳುಕಾಡಿಸಿದ್ದ: 'ಪ್ರಿಯ ರಘು, ನಿನ್ನ ಮದುವೆಯ ಸಮಾಚಾರ ಕೇಳಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ.



ಕಂಗ್ರಾಟ್ಸ್, ಗಾಡ್ ಬ್ಲೆಸ್ ಯೂ, ನಿನ್ನಂಥ ಬುದ್ಧಿವಂತ ಅಮೆರಿಕಾದಲ್ಲಿ ಇರ್ಬೇಕಾಗಿತ್ತು. ಹೆಚ್ಚು ಹೆಚ್ಚು ಕಲಿಯೋದಕ್ಕೆ, ಸಂಶೋಧನಾ ವಿದ್ಯಾರ್ಥಿಯಾಗಿ ಹೊಸದು ಹೊಸದು ಕಂಡು ಹಿಡಿಯೋದಕ್ಕೆ ಇಲ್ಲಿ ತುಂಬಾ ಅವಕಾಶಗಳಿವೆ. ನಿನ್ನಂಥ ಬ್ರಿಲಿಯಂಟ್‌ಗಳನ್ನ ಇಲ್ಲಿ ಸಂತೋಷದಿಂದ ಸ್ವಾಗತಿಸ್ತಾರೆ. ಹೀಗೆ ನೀನು ಇಲ್ಲಿ ಬರೋದು ಬಿಟ್ಟು ಯಾವುದೊ ಪುಟ್ಟ ಕಾರ್ಖಾನೆ ಸ್ಥಾಪಿಸಿ, ಬಿಸಿಲ್ನಲ್ಲಿ ಓಡಾಡ್ತಾ ಒದ್ದಾಡ್ತಿರೋದು ನೋಡಿದ್ರೆ ವ್ಯಥೆಯಾಗತ್ತೆ. ಎನಿವೇ–ಇಟ್ ಈಸ್ ಯುವರ್ ಛಾಯ್ಸ್; ನೀನೇ ಇಷ್ಟಪಟ್ಟು ಆಯ್ಕೆ ಮಾಡ್ಕೊಂಡಿರೋದು. ಅದ್ರಲ್ಲೆ ನೀನು ಬೆಳೀತಿರೋದು ತಿಳಿದು ಸಂತೋಷಾನೂ ಅನುಭವಿಸಿದೀನಿ. ಈಗ ಮದ್ವೆ-ನಿನ್ನ ಬದುಕಿನ ಇನ್ನೊಂದು ಯಶಸ್ಸಾಗಲಿ ಅಂತ ಹಾರೈಸ್ತೀನಿ.'

ರಾಜಶೇಖರನ ನೆನಪನ್ನೆ ಹೊತ್ತು ರೆನಾಲ್ಟ್‌ನಲ್ಲಿ ಕಾರ್ಖಾನೆಗೆ ಹೋಗಿ, ಅನಂತರ ಇತರ ಕಡೆಗಳಿಗೆ ರಘು ಹೋಗಿಬಂದ. ರಾಜಶೇಖರನ ವ್ಯಕ್ತಿತ್ವ ಒಡನಾಟ ಯೋಚಿಸುತ್ತ ಒಂದು ಕಡೆ ಕಾರಿನ ವೇಗ ಹೆಚ್ಚಿಸಿದಾಗ, ಆಗ ಹಿಂದೊಮ್ಮೆ ಮಾಡಿದ ಕರ್ಕಶ ದನಿಯನ್ನೆ ಕಾರು ಮತ್ತೆ ಮಾಡಿತು. ಕಾರು ವೇಗ ನಿಧಾನಮಾಡಿಕೊಳ್ಳುತ್ತ ನಿಲ್ಲುವಂತಾಯಿತು. ಹಿಂದಿನ ಅನುಭವದಿಂದ ಈಸಲ ರಘು ತಾನೇ ಕಾರನ್ನು ಪಕ್ಕಕ್ಕೆ ಕೊಂಡೊಯ್ದು ನಿಲ್ಲಿಸಿದ.

ಒಂದು ರೀತಿ ನೆರಳಿನಲ್ಲಿ ನಿಲ್ಲಿಸಿದ್ದರೂ ಕಾರು ಫಳಫಳನೆ ಹೊಳೆಯುತ್ತಿರುವಂತೆ ಕಾಣಿಸುತ್ತಿತ್ತು. ಹಿಂದೆ ಒಂದೆರಡು ಸಲ ಅನ್ನಿಸಿದಂತೆ ಅದು ಜೀವಂತಿಕೆಯಿಂದ ತನ್ನನ್ನೆ ಗಮನಿಸುತ್ತಿದೆಯೇನೊ ಅನ್ನಿಸಿತು. ಏನೊ ಒಂದು ರೀತಿ ಇಡೀ ಕಾರು ಮೃದುವಾಗಿ ಅಲುಗಾಡುತ್ತಿದೆಯೇನೊ ಅನ್ನಿಸಿತು.

ಸ್ವಲ್ಪ ಹೊತ್ತು ಬಿಟ್ಟು ಮತ್ತೆ ಸ್ಟೀರಿಂಗ್ ಮುಂದೆ ಕುಳಿತು ಕೀ ಹಾಕಿ ತಿರುಗಿಸಿ ಕಾರ್ ಸ್ಟಾರ್ಟ್ ಮಾಡಿದಾಗ, ಕರ್ಕಶ ಸದ್ದು ಇರಲಿಲ್ಲ ಬದಲಾಗಿ ತಾಳಬದ್ಧ ಗೆಜ್ಜೆಸದ್ದಿನಂತಹ ತಿಳಿ ನಿನಾದದ ಗಲಗಲನೆ ಹೆಣ್ಣಿನ ನಗುವಿನ ಸದ್ದು. ರಘು ಕಾರಿನಾಚೆ ಹುಡುಗಿಯರಿದ್ದಾರೇನೊ ಎಂದು ತಿರುಗಿನೋಡಿದ. ಯಾರೂ ಕಾಣಿಸಲಿಲ್ಲ.

● (ಸಶೇಷ)

ನನ್ನೂರು ನನ್ನ ಜನ

ಸಿದ್ದಗಂಗಾ ಮಠ

"ಸಿದ್ದಗಂಗೆ ಊಟಕ್ಕೆ ಚೆಂದ, ಶಿವಗಂಗೆ ನೋಟಕ್ಕೆ ಚೆಂದ" ಎಂಬ ಗಾದೆಯೊಂದಿದೆ. ಆದರೆ ಈಗ ಸಿದ್ದಗಂಗೆ ಊಟಕ್ಕೆ ಮಾತ್ರವಲ್ಲ ಶಿಕ್ಷಣಕ್ಕೂ ಪ್ರಮುಖ ಸ್ಥಳವಾಗಿದೆ. ತುಮಕೂರಿನಿಂದ ಸುಮಾರು 8 ಕಿ.ಮೀ. ಪೂರ್ವಕ್ಕೆ, ಬೆಂಗಳೂರು – ಪೂನಾ ಹೆದ್ದಾರಿಯಿಂದ ಸುಮಾರು 1 ಕಿ.ಮೀ. ಉತ್ತರಕ್ಕೆ ಇರುವ ಇದು ತುಮಕೂರು ಜಿಲ್ಲೆಯ ಮುಖ್ಯವಾದ ಗುರುಮಠ. ಬಾಲವಾಡಿಯಿಂದ ಹಿಡಿದು ಬಿ.ಇ. ವರೆಗೆ ಶಿಕ್ಷಣವನ್ನು ಮಠ ನೀಡುತ್ತಿದೆ. ಅಂಧ ಮಕ್ಕಳಿಗಾಗಿ 1ರಿಂದ 7ನೇ ತರಗತಿಯವರೆಗೆ ಉಚಿತ ವಸತಿ ಶಾಲೆ ಇಲ್ಲಿದೆ. ಸುಮಾರು 40 ಹೈಸ್ಕೂಲುಗಳು, 6-7 ಪದವಿಪೂರ್ವ ಕಾಲೇಜುಗಳು, 2 ಪದವಿ ಕಾಲೇಜು ಅಲ್ಲದೆ ಫಾರ್ಮಸಿ ಕಾಲೇಜು, ಬಿ.ಎಡ್. ಕಾಲೇಜು, ಟಿ.ಸಿ.ಎಚ್. ಕಾಲೇಜು ಮತ್ತು ತಾಂತ್ರಿಕ ಮಹಾವಿದ್ಯಾಲಯ ಈ ಸಂಸ್ಥೆ ನಡೆಸುತ್ತಿರುವ ಶಿಕ್ಷಣಾಂಗಗಳು. ಇಲ್ಲಿ ಸುಮಾರು 5000 ವಿದ್ಯಾರ್ಥಿಗಳು ಉಚಿತ ಊಟ, ವಸತಿಯೊಂದಿಗೆ ಶಿಕ್ಷಣ ಪಡೆಯುತ್ತಿದ್ದಾರೆ.

ವರ್ಷಕ್ಕೊಮ್ಮೆ ಇಲ್ಲಿ ನಡೆಯುವ ಶ್ರೀ ಸಿದ್ದಲಿಂಗೇಶ್ವರ ಜಾತ್ರೆ ಮತ್ತು ವ್ಯವಸಾಯ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ರಾಜ್ಯ ವ್ಯಾಪಿ ಪ್ರಸಿದ್ಧವಾಗಿದೆ. ಈ ಮಠವನ್ನು ನಡೆಸಿ ಬೆಳೆಸಿದ ಕೀರ್ತಿಯು ಪರಮಪೂಜ್ಯ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರಿಗೆ ಸಲ್ಲಬೇಕು.

ಇದು ಒಂದು ಪ್ರವಾಸಿ ಸ್ಥಳವೂ ಆಗಿದೆ. ಬೆಟ್ಟದ ಮಧ್ಯದಲ್ಲಿ ಕಲ್ಲುಬಂಡೆಗಳಿಂದ ಸುತ್ತುವರಿದಿರುವ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ದೇವಸ್ಥಾನ ಮುಟ್ಟಲು 130 ಮೆಟ್ಟಿಲುಗಳನ್ನು ಹತ್ತಬೇಕು.

● ಬಿ. ಎಸ್. ಲತೇಶ್

ಷೊಕ್ ಧಾರಾವಾಹಿ—9

ಶಾಲಿನಿ



● ಶೇಷನಾರಾಯಣ

ಶಾಲಿನಿ ಒಂದು ಕ್ಷಣ ಬೆಮತು ಹೋದಳು.

ಅನಿರೀಕ್ಷಿತವಾದ ಘಟನೆ. ಹೀಗಾಗುತ್ತದೆ ಎಂದು ಅವಳು ಕನಸು ಮನಸ್ಸಿನಲ್ಲಿಯೂ ನಿರೀಕ್ಷಿಸಿರಲಿಲ್ಲ.

ದಿವಾಕರ ಅವಳ ಕೈಯನ್ನು ಭದ್ರವಾಗಿ ಹಿಡಿದು "ಶಾಲಿನೀ, ಐ ಲವ್ ಯೂ, ಐ ಲವ್ ಯೂ ಶಾಲಿನೀ..." ಎಂದು ಆವೇಶದಿಂದ ನುಡಿದಿದ್ದ. ನಿನ್ನ ಒಪ್ಪಿಗೆಯನ್ನು ತಿಳಿಸು ಎನ್ನುವಂತೆ ಅವರು ನಿಂತಿದ್ದ ಮರದ ಕೊಂಬೆ ಒಂದು ಸಲ ತೂಗುಯ್ಯಾಲೆ ಮಾಡಿತು. ತತ್‌ಕ್ಷಣ ಆ ಮರದ ಮೇಲಿಂದ ಕೆಲವು ಹಳದಿಯ ಹೂವುಗಳು ತಪತಪನೆ ಉದುರಿದವು.

ಶಾಲಿನಿ ಬೆಮತು ಹೊಯ್ದಾಡತೊಡಗಿದಳು. ಹಿಂದೊಮ್ಮೆ ಅವಳ ಗೆಳತಿಯರು ಸುಮನಾ, ವನಮಾಲ, ಶ್ರೀಲತಾ ಏನೋ ಮಾತಿಗೆ ಮಾತು ಬಂದು "ಹುಡುಗಿಯರು ಮಾತಾಡುವಾಗ ಭಾರೀ ಭಾರೀ ಜಂಭ ಕೊಚ್ತಾ ಇರ್ತಾರೆ. ಆದರೆ ಥಟ್ಟನೆ ಎಂಥದಾದರೂ ಪರಿಸ್ಥಿತಿ ಒದಗಿ ಬಂದರೆ ಕಕ್ಕಾವಿಕ್ಕಿಯಾಗ್ತಾರೆ" ಎಂದಿದ್ದರು. ಅದು ಈಗ ತನಗೇ ಹೇಳಿದ ಮಾತುಗಳ ಹಾಗೆ ಇದೆಯಲ್ಲ.

ದಿವಾಕರ ಅವಳ ಕೈಹಿಡಿದಿದ್ದಾನೆ. 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎನ್ನುತ್ತ ಇದ್ದಾನೆ. ಪ್ರಾಯ ತುಳುಕುವ ವಯಸ್ಸಿನಲ್ಲಿ ಒಂದು ಗಂಡು ಒಂದು ಹೆಣ್ಣಿನ ಕೈಹಿಡಿಯುವಾಗ ಆಗುವ ಅನುಭವವೇ ಬೇರೆ, ಹಿತವೇ ಬೇರೆ.

ದಿವಾಕರ ತನಗೆ ಒಪ್ಪಿಗೆಯ ಹುಡುಗನೇ. ಅವನ ಬಗ್ಗೆ ತನಗೆ ಒಳ್ಳೆಯ ಅಭಿಪ್ರಾಯ ಇದೆ.

ಈಗ ಅವನಿಗೆ ಏನು ಉತ್ತರ ಹೇಳಬೇಕು ಎಂದು ಅವಳು ಚಡಪಡಿಸುವಷ್ಟರಲ್ಲಿ ಕೆಮಿಸ್ಟ್ರಿ ಲೆಕ್ಚರರ್ ಶಶಿಧರ ಯಾರೊಂದಿಗೋ ಮಾತಾಡುತ್ತ ಇತ್ತ ಹೆಜ್ಜೆಹಾಕಿ ಬರುತ್ತಿದ್ದರು.

ಹುಡುಗಿಯರನ್ನು ಕಂಡರೆ ನರ್ವಸ್ ಆಗುವ ಶಶಿಧರ, ಈಗ ಮೊದಲಿನ ಸ್ಥಿತಿಯನ್ನು ದಾಟಿದ್ದರು. ದಿನದಿನವೂ ಎಷ್ಟೋ ಹುಡುಗಿಯರಿಗೆ ಪಾಠ ಹೇಳುತ್ತ ಇದ್ದರೆ ನರ್ವಸ್ ಉಳಿಯುತ್ತದೆಯೆ? ಇತ್ತೀಚೆಗೆ ಶಾಲಿನಿಯೊಂದಿಗೆ ಅವರು ಸಲಿಗೆಯಾಗಿಯೂ ಮಾತುಕತೆಗೆ ಪ್ರಾರಂಭಿಸುತ್ತಿದ್ದರು.

ಒಂದು ದಿನ ಸ್ಟಾಫ್‌ರೂಂನಲ್ಲಿ ಅವರೊಬ್ಬರೇ ಇದ್ದಾಗ , ಏನೋ ಕೇಳಲು ಹೋಗಿ, "ನಿಮ್ಮ ತಂದೆ ತಾಯಿ ಯಾರು? ಏನ್ಮಾಡ್ತಿದಾರೆ? ನಿಮ್ಮ ಮನೆ ಎಲ್ಲಿ?" ಎಂದು ಹೀಗೆಲ್ಲ ವಿಚಾರಿಸಿದರು.

ಈಗ ಅವರು ಇತ್ತ ಬರುತ್ತಿರುವುದನ್ನು ನೋಡಿ ಶಾಲಿನಿ ಥಟ್ಟನೆ ದಿವಾಕರನ ಕೈಯಿಂದ ತನ್ನ ಕೈಯನ್ನು ಬಿಡಿಸಿಕೊಂಡಳು. ಅವನಿಗೆ ಏನು

ದಿವಾಕರನ ಸುಂದರ—ಖುಷಿ ಕೊಡುವ ಗೆಳೆತನ, ಡಾ। ಪ್ರತೀಕನ ಒಳ್ಳೆಯತನ ಶಾಲಿನಿಯನ್ನು ಅನಿಶ್ಚಿತ ಸ್ಥಿತಿಗೆ ಒಯ್ದಿದ್ದಾಗಲೇ ದಿವಾಕರ ಒಂದು ಸಂಜೆ ಅವಳ ಕೈಹಿಡಿದು 'ಐ ಲವ್ ಯೂ ಶಾಲಿನಿ' ಎಂದುಬಿಡಬೇಕೆ?

(ಮುಂದೆ....)

ಉತ್ತರ ಹೇಳಬೇಕು ಎನ್ನುವ ಯೋಚನೆ ಹೊರಟುಹೋಗಿ, ಶಶಿಧರನ ಕಣ್ಣುಗಳಿಗೆ ತಾನು ಈಗ ಬೀಳದೆ ಇದ್ದರೆ ಸಾಕು—ಎಂದು ಅವಳ ಮನಸ್ಸು ಚಡಪಡಿಸಿತು.

ಮದುವೆಯಾಗದ ಒಂದು ಗಂಡು, ಒಂದು ಹೆಣ್ಣು ಕೈಹಿಡಿದು ನಿಂತಿದ್ದರೆ ನಡೆದರೆ ಕುಳಿತರೆ ಸಾಮಾನ್ಯವಾಗಿ ಜನ ಅವರಿಬ್ಬರಿಗೂ ಸಂಬಂಧ ಕಲ್ಪಿಸಿ ಬಿಡುವುದು ಉಂಟು! ಅವರು ಗಂಡ ಹೆಂಡತಿಯರಾಗಿರಬಹುದು, ಗಂಡ ಹೆಂಡತಿ ಆಗಲು ಸಜ್ಜಾಗುವವರು ಇರಬಹುದು—ಯಾರಾದರೂ ಸರಿಯೇ.

ಆದರೆ ನಮ್ಮ ಜನಕ್ಕೆ ನಮ್ಮ ಕೆಲಸ ನಮಗೆ ಯಾರು ಏನು ಮಾಡಿಕೊಂಡರೆ ನಮಗೇನು ಎಂದು ಸುಮ್ಮನಿರುವುದಿಲ್ಲ. ಇಂಥವಕ್ಕೆಲ್ಲ ಬಗೆಬಗೆಯ ಬಣ್ಣ ಹಚ್ಚಿ ಹಾರಲು ಬಿಡುತ್ತಾರೆ. ಉತ್ಪ್ರೇಕ್ಷೆಯಾಗಿ ಮಾತಾಡಿ ಆತ್ಮಸಂತೋಷ ಪಟ್ಟುಕೊಳ್ಳುತ್ತಾರೆ.

ಈಗ ತಾನು ಹೀಗೆ ಇಲ್ಲಿ ನಿಂತಿರುವುದನ್ನು ನೋಡಿ ಶಶಿಧರ 'ಓಹೋ, ಈ ಹುಡುಗಿಯೂ ಹೀಗೆಯೋ? ಇವಳೂ ಇಂಥವಳೋ?' ಎಂದು ಭಾವಿಸಿ ನಾಳೆ ಪಾಠ ಮಾಡುವಾಗ ತನ್ನನ್ನು ಅಳೆಯುವಂತೆ ಒಂದು ಬಗೆಯಾಗಿ ನೋಡಿದರೆ?

ಈ ಗಡಿಬಿಡಿಯಲ್ಲಿ ಶಾಲಿನಿ ದಿವಾಕರನಿಗೆ ಏನೊಂದು ಉತ್ತರವನ್ನೂ ಹೇಳದೆ "ನಾನು ಬರ್‍ತೀನಿ" ಎಂದಷ್ಟೇ ನುಡಿದು, ಹಿಂದಕ್ಕೆ ಸರಿದು, ಹುಲ್ಲುಹಾಸಿನ ಕಾಲುಹಾದಿಯಲ್ಲಿ ಸರಸರನೆ ಹೆಜ್ಜೆಹಾಕತೊಡಗಿದಳು. ಅವಳು ನಿಂತಿದ್ದ ರಸ್ತೆಯ ಮುಂದೆ ಬಂದರೆ ಕೆಮಿಸ್ಟ್ರಿ ಲೆಕ್ಚರರ್ ಶಶಿಧರನಿಗೆ ಎದುರಾಗಬೇಕಾಗುತ್ತದೆ, ಅವರನ್ನು ಮಾತನಾಡಿಸಬೇಕಾಗುತ್ತದೆ ಎಂದೇ ಹೆದರಿ ಅವಳು ಹಿಂದಕ್ಕೆ ತಿರುಗಿ ಕಾಲುಹಾದಿ ಹಿಡಿದಿದ್ದಳು.

ಆದರೆ ಅವಳು ನೆನಸಿದಹಾಗೆ ಭಯಪಟ್ಟ ಹಾಗೆ ಅಲ್ಲಿ ಏನೂ ನಡೆದಿರಲಿಲ್ಲ. ಶಶಿಧರ ತನ್ನ ಸ್ನೇಹಿತರೊಂದಿಗೆ ಮಾತಾಡುತ್ತ ನಿಧಾನವಾಗಿ ಅಲ್ಲಿ ಹೆಜ್ಜೆಹಾಕಿ ಬರುತ್ತಿದ್ದವರು ಶಾಲಿನಿ ಇಲ್ಲಿ ನಿಂತಿರುವುದನ್ನು ಗಮನಿಸಲೇ ಇಲ್ಲ. ಅವಳು ನಿಂತ ಜಾಗ ಸ್ವಲ್ಪ ಕತ್ತಲೂ ಆಗಿತ್ತಷ್ಟೆ. ಅವರ ಸ್ನೇಹಿತರು ಮಾತ್ರ ಇತ್ತ ಒಮ್ಮೆ ಕಣ್ಣುಹಾಯಿಸಿ ಮತ್ತೆ ಮಾತಿನಲ್ಲಿಯೇ ಮಗ್ನರಾಗಿ ಮುಂದೆ ಮುಂದೆ ಹೆಜ್ಜೆಹಾಕತೊಡಗಿದರು. ಕಾಲೇಜಿನ ಸುತ್ತಮುತ್ತ ಮರಗಿಡಗಳ ಕೆಳಗೆ ಹುಲ್ಲುಹಾಸಿನ ಮೇಲೆ ಪೊದರುಗಳ ಬಳಿ ಇಂಥ ಜೋಡಿಗಳು ನಿಂತು ಮಾತಾಡಿಕೊಳ್ಳುವುದು ಸಹಜವಷ್ಟೆ. ಹಾಗಾಗಿ ಅವರು ಒಮ್ಮೆ ಇತ್ತ ಕಣ್ಣುಹಾಯಿಸಿ ಮುಂದೆ ಮುಂದೆ ಸಾಗಿದ್ದರು.

ದಿವಾಕರ ಮಾತ್ರ ಪೆಚ್ಚಾದ. ಶಾಲಿನಿ ಏನೊಂದು ಉತ್ತರವನ್ನೂ ತನಗೆ ಹೇಳಲಿಲ್ಲ. ನನ್ನ ಮೇಲೆ ಅವಳಿಗೆ ಪ್ರೀತಿ ಇದೆಯೋ ಇಲ್ಲವೋ? ನಾನು ಹೀಗೆ ಮಾಡಿದ್ದು ನಡೆದುಕೊಂಡದ್ದು ಒರಟುತನ ಆಯಿತೇನೋ? 'ನಾನು ನಿನ್ನನ್ನು ಮದುವೆಯಾಗಬೇಕು ಎಂದಿದ್ದೇನೆ. ನಿನಗೆ ಒಪ್ಪಿಗೆ ಇದೆಯೇ?' ಎಂದು ಹೇಳಬೇಕಿತ್ತೇನೋ? ಸ್ನೇಹಿತರು ಎನ್ನುವ ರೀತಿಯಲ್ಲಿ ಹೀಗೆ ಮಾತಾಡಿ ಬರುತ್ತಿದ್ದರೆ, ಕತ್ತಲಾದ ಜಾಗವನ್ನು ನೋಡಿ, ಆಕ್ರಮಣ ಮಾಡುವ ಹಾಗೆ, ಹಠಾತ್ತನೆ ಅವಳ ಕೈಹಿಡಿದದ್ದು ಅವಳಿಗೆ ಹಿಡಿಸಲಿಲ್ಲವೋ ಏನೋ? ಸಿಟ್ಟು ಬಂತೋ? ತನ್ನನ್ನು ಅವಳು ಪೋಲಿ ಹುಡುಗ ಎಂದು ಭಾವಿಸಿಕೊಂಡಳೋ?

ಅಪರಾಧಿಯಂತೆ ದಿವಾಕರ ನಿಂತು ಅವಳು ಬಿರಬಿರನೆ ಹೆಜ್ಜೆಹಾಕುತ್ತ ಇರುವುದನ್ನೇ ದಿಟ್ಟಿಸಿದ. ಬೆಳಕಿರುವ ಕಡೆ ಅವಳ ಬೆನ್ನು, ಬೆಳಕಿಲ್ಲದ ಜಾಗದಲ್ಲಿ ಒಂದು ಆಕೃತಿ ಹೀಗೆ ಶಾಲಿನಿ ತೂರಿಹೋಗುತ್ತಿದ್ದಳು.

ಆಕೆ ಈಗ ಮುಖ್ಯ ರಸ್ತೆಗೆ ಹೋಗಿ ಸೇರಿಬಿಟ್ಟಿದ್ದಳು. ಈಗಾಗಲೇ ದೀಪಗಳು ಎಲ್ಲ ಕಡೆ ಹೊತ್ತಿಕೊಂಡಿದ್ದವು. ಆ ರಸ್ತೆಯ ಸಾಲು ದೀಪಗಳ ಸಹ.

ಅಲ್ಲಿಯೇ ಬಸ್‌ಸ್ಟಾಪ್. ಕೆಂಪು ಮೂತಿಯ ಒಂದು ಬಸ್ ಈಗ ಬಂದೇಬಿಟ್ಟಿತು. ಶಾಲಿನಿ ಬಸ್ ಹತ್ತಿ ಒಳಗೆ ಸೇರಿಬಿಟ್ಟಳು. ಒಮ್ಮೆಯೂ ಆಕೆ ಈಕಡೆ ಹಿಂತಿರುಗಿ ನೋಡಲಿಲ್ಲ.

ಹಗಲು ಒಬ್ಬೊಬ್ಬರಿಗೆ ಒಂದೊಂದು ಸಮಯ. ರಾತ್ರಿ ಮಾತ್ರ ತಾಯಿ—ತಂದೆ—ಮಗಳು ಒಟ್ಟಿಗೆ ಕುಳಿತು ಊಟ ಮಾಡುವುದು ರೂಢಿ.

ಆದರೆ ಇವೊತ್ತು ಊಟದಲ್ಲಿ ರುಚಿಯೇ ಇಲ್ಲ. ಎಲ್ಲವೂ ಒಗಚು. ಎಲ್ಲವೂ ಸಪ್ಪೆ. ಅವಳಿಗೆ ಪ್ರಿಯವಾದ ಬೆಂಡೆಕಾಯಿಯ ಗೊಜ್ಜನ್ನು ತಾಯಿ

ಜ್ಯೋತಿ ಮಾಡಿದ್ದಳು. ಗೊಜ್ಜು ಮಾಡಿದ ದಿನ ಶಾಲಿನಿ ಹುಳಿ, ತಿಳಿಸಾರು—ಹೀಗೆ ಯಾವುದನ್ನೂ ಉಪಯೋಗಿಸದೇ ಅನ್ನಕ್ಕೆ ತುಪ್ಪ ಹಾಕಿ ಚೆನ್ನಾಗಿ ಹಿಚುಕಿ ಕಲಸಿ ಗೊಜ್ಜಿನಲ್ಲಿಯೇ ಅನ್ನವನ್ನು ತಿಂದು ಮುಗಿಸುತ್ತಾಳೆ.

ತಂದೆ ಹರಿಪ್ರಸಾದ್ ಈಗ ಕೇಳಿಯೇ ಬಿಟ್ಟರು:

"ಯಾಕಮ್ಮಾ, ಏನೋ ಒಂದು ಥರ ಇದೀಯ? ಹುಷಾರಾಗಿದ್ದೀ ತಾನೇ?"

ಶಾಲಿನಿ ಒಂದು ಕ್ಷಣ ನಡುಗಿದಳು. ಮನಸ್ಸು ಎಲ್ಲೆಲ್ಲೋ ಅಲೆಹಾಯುತ್ತ ಇದ್ದರೆ ಮುಖದಲ್ಲಿ ಹೇಗೆ ಕಳೆ ಇದ್ದೀತು? ಯಾವುದರಲ್ಲಿ ರುಚಿ ಕಂಡೀತು?

"ಇಲ್ಲಪ್ಪಾ, ಏನಿಲ್ಲ. ಹುಷಾರಾಗಿದೀನಿ."

"ಯಾಕೇ? ಗೊಜ್ಜು ಚೆನ್ನಾಗಿಲ್ವೇನೇ? ಸರಿಯಾಗಿ ಊಟಾನೇ ಮಾಡ್ತಾ ಇಲ್ವಲ್ಲೇ!" ತಾಯಿಯ ಪ್ರಶ್ನೆ.

ಈಗಲೂ ತಾನು ಏನಾದರೊಂದು ಕಾರಣ ಹೇಳದಿದ್ದರೆ ಮತ್ತೆ ತಾಯಿ ಏನಾದರೂ ಪ್ರಶ್ನೆಗಳನ್ನು ಕೆದಕಿಯಾಳು ಎಂದು ಶಾಲಿನಿ "ಇಲ್ಲಮ್ಮಾ,



ಸಂಜೆ ಗೆಳತಿಯರೊಂದಿಗೆ ಕ್ಯಾಂಟೀನಿಗೆ ಹೋಗಿದ್ದೆ. ಅದಕ್ಕೇ ಊಟ ಸೇರ್‍ತಾ ಇಲ್ಲ" ಎಂದಳು.

ಊಟ ಮುಗಿದ ಮೇಲೆ ಶಾಲಿನಿ ತನ್ನ ಪಾಠಗಳನ್ನು ಓದಿಕೊಳ್ಳಲು ಕುಳಿತಳು. ರಾತ್ರಿ ಒಂಬತ್ತು ಒಂಬತ್ತೂವರೆಯವರೆಗೆ ಓದುವುದು ಬರೆಯುವುದು ಅವಳ ದಿನಚರಿ.

ಆದರೆ ಇವೊತ್ತು ಓದಲು ಅವಳಿಗೆ ಮನಸ್ಸೇ ಇಲ್ಲ. ಪುಟಗಳ ಹಾಳೆಗಳನ್ನು ಮಗುಚಿಹಾಕುವ ಹಾಗೆ ಮನಸ್ಸೂ ಸಹ ಎಲ್ಲೆಲ್ಲೋ ಮಗುಚತೊಡಗಿದೆ. ಮನಸ್ಸು ಒಂದು ಸ್ಥಿಮಿತದಲ್ಲಿ ಇಲ್ಲದಿದ್ದ ಮೇಲೆ ಓದುವುದು ಹೇಗೆ ಸಾಧ್ಯ? ಓದಿದರೂ ತಲೆಯಲ್ಲಿ ಉಳಿಯುವ ಬಗೆಯಾದರೂ ಹೇಗೆ? ಸುಮ್ಮನೇ ಸೆಕೆಂಡುಗಳು, ನಿಮಿಷಗಳು, ಗಂಟೆಗಳೂ ಜಾರಿ ಒಂಬತ್ತೂವರೆ ಆಗಿಬಿಟ್ಟಿದೆ.

ರಾತ್ರಿ ತಾಯಿಯೊಂದಿಗೇ ಅವಳು ಮಲಗುವುದು ರೂಢಿ. ಕೆಲವು ಸಲ ಜ್ಯೋತಿ ತಮ್ಮ ಕೈಯನ್ನು ಮಗಳ ಬೆನ್ನಮೇಲೆ ಚಾಚುವುದೂ ಉಂಟು; ಬಳಸಿಕೊಳ್ಳುವುದೂ ಉಂಟು.

ಆದರೆ ಇವೊತ್ತು ಶಾಲಿನಿಗೆ ಎಷ್ಟು ಹೊತ್ತಾದರೂ ನಿದ್ದೆ ಬರಲೇ ಇಲ್ಲ. ಮಧ್ಯೆ ಒಂದು ಸಲ ಜ್ಯೋತಿಗೆ ಎಚ್ಚರಾಗಿ "ಯಾಕೇ, ನಿದ್ದೆ ಬರ್‍ತಾ ಇಲ್ವೇನೇ?" ಎಂದು ಪ್ರಶ್ನೆಯನ್ನು ಹಾಕಿದರು.

"ಹ್ಞೂನಮ್ಮಾ. ಯಾಕೋ ನಿದ್ದೇನೇ ಬರ್‍ತಾ ಇಲ್ಲ" ಎಂದು ಉತ್ತರ ಕೊಟ್ಟಳು ಶಾಲಿನಿ.

ಬಹಳ ಸಮಯ ಕಳೆದು, ರಾತ್ರಿ ಹನ್ನೊಂದು ಗಂಟೆಯ ಮೇಲೆ ಶಾಲಿನಿ ಕಣ್ಣುಮುಚ್ಚಿದಳು, ನಿದ್ದೆ ಹೋದಳು.

ಆಗ ಬಗೆಬಗೆಯ ಬಣ್ಣದ ಕನಸುಗಳು.

ದಿವಾಕರ ಮತ್ತೆ ಬಂದಿದ್ದಾನೆ. ಕಾಲೇಜು ಬಳಿಯೇ. ಅದೇ ಮರದ ಕೆಳಗೆ. ಸುತ್ತಲೂ ಉದುರಿರುವ ಹಳದಿಯ ಹೂವುಗಳು ಆ ಹೂರಾಶಿಯಲ್ಲಿ ನಿಂತು ಅವಳ ಕೈಯನ್ನು ಭದ್ರವಾಗಿ ಹಿಡಿದು 'ನಾನು ನಿನ್ನನ್ನು ಪ್ರೀತಿಸುತ್ತೇನೆ. ನಿನ್ನ ಒಪ್ಪಿಗೆ ಕೊಡು' ಎಂದು ಆತ ಕೇಳುತ್ತ ಇದ್ದಾನೆ.

ಶಾಲಿನಿ ಈಗ ಹಳದಿ ಸೀರೆ ಉಟ್ಟಿದ್ದಾಳೆ. ಹಳದಿ ಬ್ಲೌಸ್ ತೊಟ್ಟಿದ್ದಾಳೆ. ಸುತ್ತಲೂ ಹರಡಿರುವ ಮಂಡಿಯುದ್ದ ಹಳದಿಯ ಹೂರಾಶಿ. ಎಲ್ಲವೂ ಹಳದಿ. ಅವಳೊಂದಿಗೆ ಸಿಸರ್ಗವೂ ಮ್ಯಾಚಿಂಗ್. ಮಂಗಳಮಯ.

ಆಗ ಹಠಾತ್ತನೆ ಡಾ। ಪ್ರತೀಕ ಅಲ್ಲಿಗೆ ಬರಬೇಕೆ? ಇವನು ಹೇಗೆ ಇಲ್ಲಿಗೆ ಬಂದ? ಯಾತಕ್ಕೆ ಬಂದ? ನಾನು ಇಲ್ಲಿರುವುದು ಇವನಿಗೆ ಹೇಗೆ ತಿಳಿಯಿತು?

ಮೊನ್ನೆ ರಾತ್ರಿ ತಾನು ಓದಿಕೊಳ್ಳುತ್ತ ಇದ್ದಾಗ, ತಾಯಿ ತಂದೆ ಮೆಲ್ಲಗೆ ಮಾತಿಗೆ ಪ್ರಾರಂಭಿಸಿದ್ದರು. ಅದು ಅವಳ ಮದುವೆಯ ವಿಚಾರ. ಡಾಕ್ಟರ್ ಪ್ರತೀಕನ ಮನೆಯವರು ಶಾಲಿನಿಯನ್ನು ತಂದುಕೊಳ್ಳಲು ಉತ್ಸುಕತೆ ತೋರಿದ್ದಾರೆ. ಅವರಿಗೆ ಏನಾದರೂ ಉತ್ತರ ಹೇಳಬೇಕು—ಹೀಗೆ. ಅವಳ ಓದು ಮುಗಿಯಲಿ ಎನ್ನುವುದು ತಂದೆಯ ಅಭಿಪ್ರಾಯ.

ಡಾಕ್ಟರ್ ಪ್ರತೀಕನಿಗೂ ತನ್ನ ಮೇಲೆ ಒಲವು ಇದೆ ಎನ್ನುವುದನ್ನು ಶಾಲಿನಿ ಗ್ರಹಿಸಿದ್ದಾಳೆ. ತಾಯಿಗೆ ಅವನ ಮೇಲೆ ಹೆಚ್ಚು ಅಭಿಮಾನ. ತಂದೆಗೋ? ದಿವಾಕರನ ಮೇಲೋ? ಪ್ರತೀಕನ ಮೇಲೋ?

ತಂದೆ ತಾಯಿಗಳ ಒಲವು ಹೇಗಾದರೂ ಇರಲಿ. ತನ್ನ ಬಗೆ ಹೇಗೆ? ಇಬ್ಬರೂ ತನ್ನನ್ನು ಒಪ್ಪುವುದಾದರೆ ತಾನು ಯಾರನ್ನು ಆಯ್ಕೆ ಮಾಡಬೇಕು? ಆಯ್ಕೆ ತನಗೆ ಸೇರಿದ ವಿಚಾರವಷ್ಟೆ!

ಈಗ ಹಠಾತ್ತನೆ, ತಾನು ಈ ಕತ್ತಲ ಜಾಗದಲ್ಲಿ ನಿಂತಿರುವಾಗ, ದಿವಾಕರ ತನ್ನ ಕೈಹಿಡಿದು ಒಪ್ಪಿಗೆ ಕೇಳುತ್ತ ಇರುವಾಗ, ಇವನು ಇಲ್ಲಿಗೆ ಬರಬೇಕೆ? ಛೇ ಛೇ ಏನು ಅಸಂಬದ್ಧ!

ಡಾ। ಪ್ರತೀಕ ಒಂದು ಸಲ ಇವರನ್ನೇ ದಿಟ್ಟಿಸಿ ನೋಡಿದ. ಅವನ ಕಣ್ಣುಗಳು ಕೆಂಪುಗೋಲಿ ಆಗುತ್ತ ಇವೆಯೋ? ಗಿರಗಿಟ್ಟಿ ಆಗುತ್ತ ಇವೆಯೋ?

ತತ್‌ಕ್ಷಣ ಶಾಲಿನಿ ದಿವಾಕರನಿಂದ ಕೈಬಿಡಿಸಿಕೊಂಡಳು. ಆಗ ಭರ್ರೋ ಎಂದು ಗಾಳಿ ಮೊರೆಯಿತು. ಪ್ರಚಂಡ ಗಾಳಿ. ಬಿರುಗಾಳಿಯೇ. ಆ ಬಿರುಗಾಳಿಯ ರಭಸಕ್ಕೆ ಆ ಮರ ಮಾತ್ರ ಅಲ್ಲ ಅಲ್ಲಿ ಉದ್ದಕ್ಕೂ ಇರುವ ಸಾಲುಮರಗಳು, ಕಾಲೇಜಿನ ಹಿಂದೆ ಮುಂದೆ ಇರುವ ಎಲ್ಲ ಮರಗಳು ಹೀಗೆ ಎಲ್ಲವೂ ಒಮ್ಮೆಲೆ ಭೋರೆಂದು ಮೊರೆದವು. ಕೊಂಬೆಕೊಂಬೆಗಳನ್ನು ಜಗ್ಗಾಡಿದವು. ಉದ್ದಕ್ಕೂ ಅಲ್ಲಿ ಎಲ್ಲ ಕಡೆ ಕೀರಲು ದನಿ. ಮೇಲೆದ್ದ ಧೂಳು. ಧೂಳಿನೊಂದಿಗೆ ಹಾರಿದ ತರಗೆಲೆಗಳು.

ನಿಸರ್ಗ ಹೀಗೆ ಕುಣಿಯುತ್ತಲೇ ಅವರು ನಿಂತಿದ್ದ ಮರದ ಮೇಲಿಂದ ಹಳದಿಯ ಹೂವುಗಳು ಈಗ ಒಂದೇ ಸಮನೆ ಉದುರತೊಡಗಿದವು. ಹೀಗೆ ಉದುರುತ್ತ ಇರುವುದು ಹೂರಾಶಿ ಅಲ್ಲ. ಹೂಮಳೆಯೇ. ಹಾಗೆ ಓತಪ್ರೋತ. ಹೂನದಿ ಹರಿಯುವ ಹಾಗೆ ಹಳದಿಯ ಪ್ರವಾಹ.

ಫಕ್ಕನೇ ಶಾಲಿನಿಗೆ ಎಚ್ಚರ.

ಹೂಮಳೆಯೂ ಇಲ್ಲ. ಹೂನದಿಯೂ ಇಲ್ಲ. ತಾಯಿ ತನಗೆ ಸೇರಿದ ಹಾಗೇ ಮಲಗಿದ್ದಾಳೆ. ತಂದೆ ಆ ಮಂಚದ ಮೇಲೆ ಸಣ್ಣದಾಗಿ ಅಲ್ಲಿಂದ ಗೊರಕೆ. ಗೋಡೆಯ ಗಡಿಯಾರ ಢಾಣ್ ಢಾಣ್ ಎಂದು ನಾಲ್ಕು ಸಲ ಹೊಡೆದಿದೆ.

ಛೇ, ಎಂಥ ಕನಸು! ತಾನು ಹೊರಳಾಡಿ ಹೊರಳಾಡಿ ಎಷ್ಟೋ ಸಮಯ ಕಳೆದರೂ ನಿದ್ದೆ ಬಾರದೆ ಆಮೇಲೆ ನಿದ್ದೆ ಬಂದು ಮಲಗಿದರೆ ಇಂಥ ಕನಸು ತನಗೆ ಬೀಳಬೇಕೆ? ಕನಸಿನಲ್ಲಿಯೂ ದಿವಾಕರ ಬಂದು ತನ್ನ ಕೈಹಿಡಿಯಬೇಕೆ?

ಒಮ್ಮೆ ಕಾಲೇಜಿನ ಮುಂದಿರುವ ಹುಲ್ಲುಹಾಸಿನಲ್ಲಿ ಗೆಳತಿಯರೊಂದಿಗೆ ಅವಳು ಕುಳಿತು ಹರಟುತ್ತ ಇದ್ದಾಗ ವನಮಾಲ ಹೇಳಿದ್ದಳು:

"ಸಿನಿಮಾದಲ್ಲಿ ಕುಳಿತರೆ ನಿಂತರೆ ಹೊರಳಿದರೆ ಪಿಸುಗುಟ್ಟಿದರೂ ಸಾಕು. ಕನಸುಗಳು ಬೀಳುತ್ತವೆ. ಆಗ ಆ ಪ್ರೇಮಿಗಳು ಕೈಕೈಹಿಡಿದು ಡ್ಯೂಯಟ್ ಹಾಡಲು ಪ್ರಾರಂಭಿಸಿ ಬಿಡುತ್ತಾರೆ. ನಿಜ ಜೀವನದಲ್ಲಿ ಹೀಗೆಲ್ಲ ನಡೆಯುವುದು ಸಾಧ್ಯವೆ? ಎಲ್ಲ ಬೋಗಸ್."

ಆದರೆ ಈಗ ತನಗೆ ಸಿನಿಮಾದ ಥರವೇ ಆಗಿಹೋಗಿದೆಯಲ್ಲ. ಅಂಥ ಕನಸೇ ಬಿದ್ದಿದೆಯಲ್ಲ.

ಏನು ಆಶ್ಚರ್ಯ? ನಿಜ ಜೀವನದಲ್ಲೂ ಕೆಲವು ಸಲ ಸಿನಿಮಾದ ಥರವೇ ನಡೆದುಬಿಡುತ್ತದೆ.

ಆಮೇಲೂ ಅವಳು ಕಣ್ಣುಮುಚ್ಚಿದ ಮೇಲೆಯೂ ಏನೇನೂ ಎಂಥೆಂಥವೂ ಬಣ್ಣ ಆಕಾರ ಇಲ್ಲದ ಚೂರು ಪಾರು ಕನಸುಗಳು.

ಹೀಗೆಯೇ ರಾತ್ರಿ ತುಂಬಿ ಬೆಳಗಾಯಿತು.

ಶಾಲಿನಿಗೆ ಮೈಕೈ ಪೂರಾ ನೋವು. ರಾತ್ರಿ ಸರಿಯಾಗಿ ನಿದ್ದೆ ಬಾರದ ಪರಿಣಾಮ. ಒಂದು ಸಲ ಕಾಲೇಜಿಗೆ ಹೋಗುವುದೋ ಬೇಡವೋ ಎಂದು ಸಹ ಅವಳು ಯೋಚಿಸಿದಳು. ಬಳಿಕ ಊಹ್ಞೂಂ ಹೋಗೋಣ, ಬಿಸಿಬಿಸಿಯಾಗಿ ಸ್ನಾನ



ಮಾಡಿದರೆ ಆಯಾಸ ಪರಿಹಾರ ಆಗುತ್ತೆ ಎಂದು ಸ್ನಾನ ಮುಗಿಸಿದಳು.

ಸ್ನಾನ ಮುಗಿಸಿ ಅವಳು ಬಚ್ಚಲು ಮನೆಯಿಂದ ಹೊರಬಂದು ಕನ್ನಡಿಯ ಮುಂದೆ ನಿಂತಾಗ ಡ್ರಿಣ್ ಎಂದು ಕಾಲಿಂಗ್ ಬೆಲ್ಲಿನ ಶಬ್ದ.

ತಂದೆ ಹರಿಪ್ರಸಾದ್ ಪತ್ರಿಕೆ ಓದುತ್ತ ಕುಳಿತಿದ್ದವರು ಮೇಲೇಳಬೇಕು ಎನ್ನುವಾಗ, ಶಾಲಿನಿ ಲಗುಬಗೆಯಿಂದ ಹೆಜ್ಜೆಹಾಕಿ ಹೋಗಿ ಬಾಗಿಲನ್ನು ತೆರೆದಳು.

ಆಗ "ಗುಡ್‌ಮಾರ್ನಿಂಗ್" ಎನ್ನುತ್ತ ಅವಳ ಕೆಮಿಸ್ಟ್ರಿ ಲೆಕ್ಚರರ್ ಶಶಿಧರ ಬಾಗಿಲಲ್ಲಿ ಬಂದು ನಿಂತಿದ್ದರು. ಅವರ ಬಳಿ ಮತ್ತೊಬ್ಬರು. ನಿನ್ನೆ ತಾನು–ದಿವಾಕರ ಆ ಮರದ ಕೆಳಗೆ ನಿಂತಿದ್ದಾಗ ಶಶಿಧರನೊಡನೆ ಮಾತಾಡುತ್ತ ಅಲ್ಲಿ ಹೋಗುತ್ತ ಇದ್ದರಲ್ಲ. ಇವರೇನೋ?

ಸಂದೇಹವಿಲ್ಲದೆ ಅವರೇ ಇವರು.

"ಓ, ಗುಡ್ ಮಾರ್ನಿಂಗ್. ಬನ್ನಿ ಸಾರ್, ಬನ್ನಿ ಬನ್ನಿ. ಒಳಗೆ ಬನ್ನಿ" ಎಂದು ಉತ್ಸಾಹದಿಂದ ಶಾಲಿನಿ ಅವರನ್ನು ಸ್ವಾಗತಿಸಿದಳು.

● (ಖೊಕ್...)

ಕನ್ನಡ ಕಥಾಲೋಕ

ಮಾಲ್ಕೀ ಹಕ್ಕು

ಪರಿಚಯ

● 'ಆನಂದಕಂದ'

ಲಿಂಗಣ್ಣನ ಹೆಂಡತಿ ಸಾತಮ್ಮನು ಅಂದು ಹಾಗೆ ಮಾಡಿದುದು ತಪ್ಪೋ.....? ಎಂಬ ಯೋಚನೆಯು ಈಗ ಮೇಲಿಂದ ಮೇಲೆ ಬರುತ್ತದೆ. ಅವಳದೇನು ತಪ್ಪು.....? ಎಂಬ ಬಗೆಹರಿಯದ ಪ್ರಶ್ನೆಯೂ ಆಗಾಗ ಮನದ ಕಣ್ಣೆದುರು ಎದ್ದು ನಿಲ್ಲುತ್ತದೆ.

ನಮ್ಮ ಊರ ಮುಂದಣ ತೋಟವನ್ನು ಲಿಂಗಣ್ಣನೇ ಪಾಲಿನಿಂದ ಮಾಡಿದ್ದನಾಗ. ಈ ತೋಟವು ನಮ್ಮ ಮನೆತನಕ್ಕೆ ಉಂಬಳಿಯಾಗಿ ದೊರೆತ ಸನದು ನಮ್ಮ ಮನೆಯಲ್ಲಿ ಇದು ವರೆಗೂ ಇದೆ. ತಾಳಿಯ ಕೋಟೆಯ ಕಾಳಗದ ತರುವಾಯ, ನಮ್ಮ ನಾಡು ವಿಧರ್ಮಿಯರ ಅಧೀನಕ್ಕೆ ಹೋಯಿತಲ್ಲವೇ? ಆಗ ಮರಳಿ ಹಿಂದೂ ರಾಜ್ಯವನ್ನು ಸಂಸ್ಥಾಪಿಸಿ, ಕಳೆದು ಹೋದ ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂದು ಅಲ್ಲಲ್ಲಿ ಪ್ರಯತ್ನಗಳು ನಡೆದುವಂತೆ. ಇಂತಹ ಪ್ರಯತ್ನ ಮಾಡುವವರಲ್ಲಿ, ನಮ್ಮ ಪೂರ್ವಜರ ದಾಯಾದಿಯೊಬ್ಬನು ಮುಂದಾಳಾಗಿದ್ದನಂತೆ. ವಿಜಾಪುರದ ಬಾದಶಹನು ಆತನನ್ನು ಹಿಡಿದಿಡ ಬೇಕೆಂದು ಎಷ್ಟೆಷ್ಟೋ ಉಪಾಯಗಳನ್ನು ಮಾಡಿದ ನಂತೆ. ಆದರೂ ಆ ಸ್ವಾತಂತ್ರ್ಯಭಕ್ತನು ಸಿಕ್ಕಲಿಲ್ಲ ವಂತೆ. ಕೊನೆಗೆ ನಮ್ಮ ಮನೆತನದ ಮೂಲ ಪುರುಷನು ಮೋಸದಿಂದ—ಅಲ್ಲಲ್ಲ—ಯುಕ್ತಿ—ಚಾತುರ್ಯಗಳಿಂದ - ತಮ್ಮ ದಾಯಾದಿಯನ್ನು ಹಿಡಿದುಕೊಟ್ಟನಂತೆ. ಆ ಮಹತ್ಕಾರ್ಯಕ್ಕೆ ಪ್ರತಿಫಲವಾಗಿ, ಬಾದಶಹನು ಈ ತೋಟವನ್ನು

ಆಯ್ಕೆ ಮತ್ತು ವಿಮರ್ಶೆ: ಪ್ರೊ| ಎಲ್. ಎಸ್. ಶೇಷಗಿರಿ ರಾವ್



ಸಿಕ್ಕಾ–ಮೋರ್ತಬಿನೊಂದಿಗೆ ಸನದು ಹಾಕಿ ಕೊಟ್ಟನಂತೆ. ಇದೆಲ್ಲವೂ ಆ ಸನದಿನಲ್ಲಿ ನೋಡ ಲಿಕ್ಕೆ ದೊರೆಯುತ್ತದೆ. ಇತಿಹಾಸ ಸಂಶೋಧಕ ರಾರಾದರೂ ಆ ಸನದನ್ನು ನೋಡಬೇಕೆಂದು ಅಪೇಕ್ಷೆಪಟ್ಟರೆ, ಅತ್ಯಗತ್ಯವಾಗಿ ತೋರಿಸುತ್ತೇನೆ. ಅವರು ತಮ್ಮ ಸಂಶೋಧನಪತ್ರಿಕೆಯಲ್ಲಿ, ನಮ್ಮ ಮನೆತನವು ಇತಿಹಾಸಪ್ರಸಿದ್ಧವಾದುದೆಂದು ಬರೆದು ಪ್ರಕಟಿಸಿದರೆ, ಅದೊಂದು ನನಗೆ ಹೆಮ್ಮೆಯ ವಿಷಯವೇ ಅಲ್ಲವೆ?

* * * *

ಲಿಂಗಣ್ಣನು ಬಡವನೇ ಸರಿ! ಅದೇತಕ್ಕೆಂದರೆ, ಹೆಂಡತಿ-ಮಕ್ಕಳೊಂದಿಗೆ-ವರುಷವೆಲ್ಲವೂ ಮೈ ಮುರಿದು ದುಡಿದಾಗಲೇ ಆತನ ಕುಟುಂಬದ ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆ ದೊರೆಯುವುದು. ಲಿಂಗಣ್ಣನ ಆಸ್ತಿಯೆಂದರೆ ಇರುವ ಮುರುಕು ಮನೆಯೊಂದು; ಎರಡು ಎತ್ತುಗಳು; ಬೇಸಾಯಕ್ಕೆ ಬೇಕಾಗುವ ಕೆಲವು ಸಾಧನಗಳು; ಹಗ್ಗ-ಕಣ್ಣಿಗಳು. ಇವು ಎಲ್ಲವುಗಳನ್ನೂ ಮೆಟ್ಟಿ ಮೀರುವ ಆಸ್ತಿಯೆಂದರೆ–ಆತನ ಮತ್ತು ಹೆಂಡತಿ ಮಕ್ಕಳ–ಬೇಸರವಿಲ್ಲದೆ ದುಡಿಯುತ್ತಲಿರುವ ಕಷ್ಟ ಸಹಿಷ್ಣತೆಯು.

ಬೆಳವಲುನಾಡಿನ ಬೇಸಗೆಯ ತಾಪವನ್ನು ಅನುಭವಿಸಿಯೇ ಅರಿತುಕೊಳ್ಳಬೇಕು. ಮಧ್ಯಾಹ್ನದ ಬಿಸಿಲಲ್ಲಿ, ನೀರು ಅಕ್ಕಿ ಬೆರೆಸಿ ಇಟ್ಟರೆ ಐದಾರು



ನಿಮಿಷಗಳಲ್ಲಿ ಅನ್ನವಾಗಿಬಿಡಬಹುದು—ಅಷ್ಟೊಂದು ಬಿಸಿಲಿನ ಕಾವು. ಬಿಸಿನೀರಿನ ಸ್ನಾನವನ್ನು ಮಾಡಲು ಬಯಸುವವರು, ಈ ಕಾಲದಲ್ಲಿ ಉರುವಲಿನ ವೆಚ್ಚ ವನ್ನು ಉಳಿಸಿಕೊಳ್ಳಬಹುದು; ಆದರೆ ಆಗ ಬಿಸಿನೀಗನ್ನು ಬಯಸುವ ಮಹಾತ್ಮರಾದರೂ ಯಾರು?

ಇಂತಹ ಉರಿಬೇಸಗೆಯ ಬಿರುಬಿಸಿಲಲ್ಲಿ ಲಿಂಗಣ್ಣನು ಬರಿಯ ಮೈಯಿಂದಲೇ ತೋಟದಲ್ಲಿ ಉಳುವ ಕೆಲಸ ಮಾಡುತ್ತಿರುವನು. ಉಂಡ ಅನ್ನವೂ ಕುಡಿದ ನೀರೂ ಬೆವರಿನ ರೂಪದಲ್ಲಿ ಮೈಯಿಂದ ಹೊರಬೀಳುತ್ತಿರುವುದಾಗ. ನಡು ಬಾನಿಗೆ ಬಂದ ನೇಸರು ತನ್ನ ಕೆಂಡದ ಕಿರಣ ಗಳಿಂದ ಲಿಂಗಣ್ಣನ ಮೈಯನ್ನು ಚುಚ್ಚಿ ಚುಚ್ಚಿ, ಕೊನೆಗೆ ತಾನೇ ಸೋತು ಕೀಳ್‌ಮೊಗನಾಗು ವನು. ಸೂರ್ಯನು ಅಷ್ಟೊಂದು ತನಗೆ ವಿರೋಧಿಯಾಗಿ ನಡೆದುಕೊಂಡರೂ, ಲಿಂಗಣ್ಣನು ಪ್ರತಿದಿನವೂ ಬೆಳಗಿನ ಸೂರ್ಯನಿಗೆ ಭಕ್ತಿಯಿಂದ ಕೈಮುಗಿಯುವುದನ್ನು ಎಂದೂ ಬಿಡುತ್ತಿರಲಿಲ್ಲ. ನನಗೆ ಒಂದೊಂದು ಸಲ ಹೀಗೂ ಎನಿಸು ತ್ತಿದ್ದಿತು:—ಸೂರ್ಯನು ಲಿಂಗಣ್ಣನ ಕರ್ಮ ಯೋಗಕ್ಕೆ ಮೆಚ್ಚಿ, ಆತನ ಕಡೆಗೆ ತನ್ನ ಅಮೃತ ಕಿರಣಗಳನ್ನಷ್ಟೇ ಕಳುಹಿಸುತ್ತಿರಬಹುದೇನೋ— ಎಂದು.

*　　*　　*

ಒಂದು ಸಲ ಏನಾಯಿತೆಂದಿರಿ! ಪುನರ್ವಸು ನಕ್ಷತ್ರದ ಮಳೆಯು ವಿಪರೀತವಾಗಿ ಹತ್ತಿಬಿಟ್ಟಿತು. ನಮ್ಮ ಮನೆಯಲ್ಲಿ ಗೌರಿಯ ಪೂಜೆಗಾಗಿ ಹೂವು-ಪತ್ರೆ ಬೇಕಾದುವು. ಮಳೆಯಲ್ಲಿ ತೋಟಕ್ಕೆ ಯಾರು ಹೋಗಬೇಕು? ನಾನಾಗ ಚಿಕ್ಕವನು, ತಾಯಿ ನನಗೇ ಹೇಳಿದರು. ಮಳೆಯಲ್ಲಿ ನಾನು ಹೋಗಲಾರೆನೆಂದು ಹಟಮಾಡಿದೆ. ತಾಯಿ ಏನೇನನೋ ತಿಂಡಿಯ ಆಶೆಗಳನ್ನು ಹಚ್ಚಿದುದ ರಿಂದ-ಮನಸ್ಸಿಲ್ಲದಿದ್ದರೂ-ಕೊಡೆ ಹಿಡಿದು ಕೊಂಡು ತೋಟದ ಕಡೆಗೆ ಹೋದೆ.

ಲಿಂಗಣ್ಣನ ಹಿರಿಯ ಮಗನು ನನ್ನ ಸರಿವರಯ ದವನು. ನಾನು ತೋಟಕ್ಕೆ ಹೋದಾಗ, ಆತನು ಬಾಳೆಯ ತೋಟದಲ್ಲಿ ಕುಳಿತು ಕಳೆಯನ್ನು ತೆಗೆಯುತ್ತಿದ್ದನು. ಮೇಲೆ ಏಕಪ್ರಕಾರವಾಗಿ ಸುರಿಯುತ್ತಿರುವ ಜಡಿಮಳೆ; ಕೆಳಕ್ಕೆ ಕಿಚಿಕಿಚಿ ಯಾದ ಕೆಸರು; ತೊಟ್ಟಿದ್ದ ಅರೆಧೂಳಿನ ಅಂಗಿಯು

‘ಸಂತಿಗೆ ನೀನು ಬಾಳೀಗೊನಿ ಗಳನ್ನೆಷ್ಟು ಒಯ್ದಿದ್ದಿ?’ ಎಂದು ತಂದೆಯವರು ಕೇಳಿದಾಗ ಸಾತಮ್ಮಾ ಬೆದರಿದಳು. ಅವಳ ಕಣ್ಣುಗಳಲ್ಲಿ ನೀರು ಧಾರೆಧಾರೆ ಯಾಗಿ ಕೆಳಗಿಳಿಯಿತು. ಕೊರಳ ಸರಗಳು ಬಿಗಿದು ಬಂದುವು.

ತೊಯ್ದು ತಪ್ಪಡಿಯಾಗಿದ್ದಿತು. ಚಳಿಯಿಂದ ನಡುಕ ಹಿಡಿದು ಹಲ್ಲುಗಳು ಬಾರಿಸುತ್ತಿದ್ದುವು. ಆದರೂ ಅವನು ತನ್ನ ಕಳೆಯನ್ನು ತೆಗೆಯುವ ಕೆಲಸ ನಡೆಯಿಸಿದ್ದ. ನಾನು ಕೇಳಿದೆ:

“ಏನೋ ಇದು? ಮಳಿಯೊಳಗs ಕೆಲಸಾ ನಡಿಸಿದ್ದಿಯಲಾ?”

ಲಿಂಗಣ್ಣನ ಮಗನು ವಿನಯದಿಂದ ಹೇಳಿದ:

“ಮಾಡದಿದ್ದರೆ ಹ್ಯಾಂಗ ನಡದೀತು ರಾಯರ! ಮಳೀ ಒಂದs ಸವನs ಹೊಡಿಲಾಕ ಹತ್ತೆಯ್ತಿ. ಈಗ ಹಾಂಗs ಬಿಟ್ಟರ, ಯಾಡ್ಡ ದಿನದಾಗ ತ್ವಾಟದ ತುಂಬ ಕಸಾ ಬೆಳೀತಯ್ತಿ. ಅಂತs ಈಗ ಬೆಳಿಗೆದ್ದವನs ಬಂದು ಬಿಟ್ಟೇನಿ!”

ನಾನು ಯಾವ ಯೋಚನೆಯೂ ಇಲ್ಲದೆ ಹೂಗಳನ್ನು ತೆಗೆಯಲು ತೊಡಗಿದೆ. ಲಿಂಗಣ್ಣನ ಮಗನು ಮಾತನಾಡಿದ:

“ರಾಯರs! ಅವ್ವನವರಿಗೆ ಹೇಳಿ, ಉರೀಗೆ ಔಸsದಾ ಕೊಡಸರೀ!”

“ಉರಿಯ ಔಷಧ ಯಾರಿಗೋ?”

“ನನಗsನ್ರೀ! ನಾಕೈದು ದಿನಾ ಅತು; ಉರೀ ಭಳೀ ಬರಲಾಕ ಹತ್ತೆಯ್ತಿ... ...ನಿನ್ನೆ ರಾತ್ರೀ ಉರೀ ಬಂದು ಬಿದ್ದರ—ಮೈಮ್ಯಾಗ ಎಚ್ಚರ ಕೂಡಾ ಇದ್ದಿದ್ದಿಲ್ಲ ನೋಡ್ರಿ!”

ನನಗೆ ಆಶ್ಚರ್ಯವಾಯಿತು. ಒಮ್ಮೆಲೆ ಕೇಳಿ

ದೆನು:

"ನಿನ್ನೆ ರಾತ್ರಿ ಜ್ವರ ಬಂದು ಬಿಟ್ಟಾಂವ, ಈಗ ಮಳಿಯೊಳಗೆ ಕೆಲಸಕ್ಕ ಬಂದಿದ್ದೀಯಾ !"

"ಏನ್ ಮಾಡೂದsತಿ ರಾಯರs! ನಿರ್ವಾ ಇಲ್ಲದ ಮ್ಯಾಗ ಮಾಡಲಾಕs ಬೇಕಲ್ರಿ. ನಿಮ್ಹಾಂಗ ನಾವೇನು ಸಿರಿಮಂತರ ಮಕ್ಕಳs? ಉರೀ ಬರಲಿ, ಛಳೀ ಬರಲಿ; ಮೈಮುರಿ ದುಡಿದಾಗs ಒಂದು ರೊಟ್ಟಿ ತಿನ್ನಾಕ ಸಿಗತಯ್ತ್ರಿ!"

"ಪಾಪ! ತಾಯಿಯವರಿಂದ ಔಷಧ ಕೊಡಿಸ ಬೇಕು" ಎಂಬ ಮರುಕವುಂಟಾಯಿತು. ಆ ಮರುಕದ ಕ್ಷಣದಲ್ಲಿ ಔಷಧ ಕೊಡಿಸುವೆನೆಂದು ಲಿಂಗಣ್ಣನ ಮಗನಿಗೆ ಹೇಳಿಯೂ ಬಿಟ್ಟೆ. ಮನೆಗೆ ಬಂದ ಮೇಲೆ ಹಬ್ಬದ ಗಲಾಟೆಯಲ್ಲಿ ಔಷಧಿಯ ವಿಚಾರವೇ ಮರೆಯಾಗಿಬಿಟ್ಟಿತು. ಲಿಂಗಣ್ಣನ ಮಗನೂ ಮತ್ತೊಮ್ಮೆ ನೆನಪು ಮಾಡಲಿಲ್ಲ.

*   *   *

ಸಂಜೆಯ ಕಡೆಗೆ ನಾನು ಹೋದಾಗಲೆಲ್ಲ ಲಿಂಗಣ್ಣನು ಮೊಟ್ಟೆ ಹೂಡಿರುತ್ತಿದ್ದನು. ಸಾತಮ್ಮನು ತನ್ನ ಎಳಗೂಸನ್ನು ಗುಡಿಸಿಲಲ್ಲಿ ಮಲಗಿಸಿ, ಬೆಳೆಗಳಿಗೆ ನೀರು ಹಾಯಿಸುತ್ತಿರುವಳು. ಕೂಸು ನಿದ್ದೆಯಿಂದ ಎಚ್ಚತ್ತು, ಗುಡಿಸಿಲ ಕಂಡಿಗಳೊಳಗಿನ ಸಂಜೆಯ ಸೂರ್ಯನ ಚೆಂಬೆಳಕನ್ನು ನೋಡುತ್ತ, ಆಟವಾಡುತ್ತ ಬಿದ್ದುಕೊಂಡಿರುವುದು. ನಾನು ಏತದ ಮೇಲೆ ನೀರುಹರಿಯಲ್ಲಿ ಕಾಲುಗಳನ್ನು ಬಿಟ್ಟುಕೊಂಡು ಕುಳಿತು ಆಟವಾಡುತ್ತಲಿರುವೆನು. ಸಂಜೆಯ ಶಾಂತವಾದ ವೇಳೆ; ನೀರಿನ ಮೊಟ್ಟೆಯು ಮೇಲಕ್ಕೇರಿ ಬಂದು ಹರಿಯಲ್ಲಿ ಸುರಿಯುತ್ತಿರುವಾಗ, ಮೇಲೆ ಹಾರುತ್ತಿರುವ ತುಷಾರ ಮಂಡಲದ ಮೇಲೆ, ಹೊಂಬಿಸಿಲು ಅಂದವಾದ ಚಿತ್ರಗಳನ್ನು ಬರೆಯುತ್ತಿರುವುದು. ತೋಟದ ಬೆಳೆಯಿಂದ ಹೊರಡುತ್ತಿರುವ ಶ್ಯಾಮಲಚ್ಛಾಯೆಯು ಮೇಲುಮೇಲುಮೊಗವಾಗಿ ನಡೆದಿರುವುದು. ಆಗ ಲಿಂಗಣ್ಣನು, ತನ್ನ ಬಾಳಿನ ತಿರುಳು ತುಂಬಿದ ತುಂಡುಹಾಡುಗಳನ್ನು ರಾಗ ಎಳೆದೆಳೆದು ಹೇಳುತ್ತಿರುವನು. ನಾನಾಗ ಚಿಕ್ಕವನಾಗಿದ್ದರೂ ಇಂತಹ ಸಂಜೆಯ ಸುಖ ಸಮಯಗಳನ್ನು ಆಗಾಗ ಬಯಸುತ್ತಿದ್ದೆನು. ಎಂತಲೆ ದಿನದಿನವೂ ತಪ್ಪದೆ ತೋಟಕ್ಕೆ ಹೋಗುತ್ತಿದ್ದೆನು.



ಈ ಜನರನ್ನು ಸಾಕ್ಷರರನ್ನಾಗಿ ಮಾಡಿದ್ದೇ ತಪ್ಪಾಯ್ತು... ನನ್ನ ಹಗರಣಗಳನ್ನೆಲ್ಲ ಹಾಳು ಪತ್ರಿಕೆಗಳಲ್ಲಿ ಓದಿ ನನ್ನನ್ನ ಊರೊಳಕ್ಕೇ ಸೇರಿಸೋಲ್ಲ ಅಂತಿದಾರೆ...!?

ಒಂದುಸಲ ನಮ್ಮ ಮನೆಯವರೆಲ್ಲರೂ ಸೇರಿ ತೋಟವನ್ನು ನೋಡಲಿಕ್ಕೆಂದು ಹೋಗಿದ್ದೆವು. ಲಿಂಗಣ್ಣನ ಮನೆಯವರಿಗೆಲ್ಲ ಅದೆಷ್ಟು ಸಂತೋಷ! ಸಾತಮ್ಮನು ತನ್ನ ಎಳಗೂಸನ್ನು ಕೆಳಕ್ಕಿಟ್ಟು, ನಮ್ಮ ಚಿಕ್ಕ ತಂಗಿಯನ್ನು ಕಂಕುಳಲ್ಲೆತ್ತಿಕೊಂಡಳು. ಅದೆಷ್ಟೋ ಪ್ರೀತಿಯನ್ನು ತೋರಿಸುತ್ತ ತೋಟದಲ್ಲೆಲ್ಲ ತಿರುಗಾಡಿದಳು. ಬಳಿಕ ನಮ್ಮೆಲ್ಲರದೂ ತಿಂಡಿ-ತಿನಿಸಿನ ಸಂಭ್ರಮವು ಆಯಿತು. ಮನೆಗೆ ಮರಳಿ ಬಂದಾಗ ಆರು ಗಂಟೆಯಾಗಿದ್ದಿತು. ಮನೆಗೆ ಬಂದ ನಾಲ್ಕಾರು ನಿಮಿಷಗಳಲ್ಲಿಯೇ ಚಿಕ್ಕ ತಂಗಿಯ ಒಂದು ಕೈಯಲ್ಲಿಯ ಚಿನ್ನದ ಬಳೆಯು ಇಲ್ಲದಂತಾದುದು ಗೊತ್ತಾಯಿತು. ಸಾತಮ್ಮ ತಂಗಿಯನ್ನೆತ್ತಿಕೊಂಡು ಸುತ್ತಾಡಿದುದು ಎಲ್ಲರಿಗೂ ಗೊತ್ತು. ಮನೆಯವರೆಲ್ಲರೂ ಅವಳ ಮೇಲೆಯೆ ಸಂಶಯವನ್ನು ವ್ಯಕ್ತಪಡಿಸಿದರು. ತಂದೆಯವರು ಮತ್ತೊಮ್ಮೆ ತೋಟಕ್ಕೆ ಹೋಗಿ ನೋಡಿಕೊಂಡು ಬರಬೇಕೆಂಬ ವಿಚಾರದಲ್ಲಿದ್ದರು. ಅಷ್ಟರಲ್ಲಿಯೇ ಸಾತಮ್ಮನು ಆತುರದ ನಡಿಗೆಯಲ್ಲಿ ನಡೆಯುತ್ತಾ ಅಲ್ಲಿಗೆ ಬಂದಳು. ಬಂದವಳೇ ಕೈಯಲ್ಲಿದ್ದ ಚಿನ್ನದ ಬಳೆಯನ್ನು ತಾಯಿಯ ಎದುರಿಗಿಟ್ಟು ಹೇಳಿದಳು.

"ಬಾವೀಕಟ್ಟೀ ಮ್ಯಾಗ ನೀವೆಲ್ಲಾರೂ ಕುಂತಿದ್ರೆಲ್ಲಾ! ಅಲ್ಲೇ ಈ ಬಳೀ ಬಿದ್ದಿತ್ತು ಯವ್ವಾ! ನಾ ಬುತ್ತೀ ಅರವೀ ತೊಳಿಕೊಂಡು ಬರ

ಬೇಕೂ ಅಂತ ಹೋಗೂದಕs, ಇದು ನನ್ನ ಕಣ್ಣಿಗೆ ಬಿತ್ತು. 'ಲಗೂನs ಹೋಗಿ ಅವರದವರಿಗೆ ಕೊಟ್ಟು ಬಾ; ಮನ್ಯಾಗ ಹುಡಕ್ಯಾಡಲಾಕ ಹತ್ತಿದ್ರಾ ರಾದೀತು, ಅಂತ ಅಂವ ಹೇಳಿದ. ಅದಕs ನಾ ಓಡತೋಡುತs ಬಂದೆ."

ನಮ್ಮ ಮನೆಯವರೆಲ್ಲರೂ ಒಂದೊಂದು ಒಳ್ಳೆಯ ಮಾತನಾಡಿ, ಸಾತಮ್ಮನ ಮನವನ್ನು ತಣಿಸಿದರು. ಅವಳು ತಾನಾಗಿಯೇ ಚಿಕ್ಕತಂಗಿಯ ಕೈಗೆ ಆ ಬಳೆಯನ್ನಿಡಿಸಿ, ಪ್ರೀತಿಯಿಂದ ಎತ್ತಿ ಕೊಂಡು ಮುತ್ತಿಟ್ಟು ಕೆಳಕ್ಕೆ ಇಳಿಸಿದಳು. ಆಗ ಸಾತಮ್ಮನಿಗೆ ನೂರು ಯಜ್ಞ ಮಾಡಿದಂತಹ ಸಮಾಧಾನವುಂಟಾಗಿರಬಹುದು.

* * *

ತೋಟದಲ್ಲಿ ರಾಶಿರಾಶಿಯಾಗಿ ಕಾಯಿ-ಪಲ್ಲೆ ಬೆಳೆಯುತ್ತಿದ್ದಿತು! ನಮ್ಮ ಮನೆಗೆ ಅದರ ಉಪಯೋಗ ಬೇಕಾದಷ್ಟು ಆಗುತ್ತಿದ್ದಿತು. ಲಿಂಗಣ್ಣನ ಮನೆಯವರ ಊಟವನ್ನು ನಾನು ಎಷ್ಟೋ ಸಲ ನೋಡಿದ್ದೇನಲಾ: ಜೋಳದ ರೊಟ್ಟಿ, ನುಚ್ಚು, ಕಾರ, ಈರುಳ್ಳಿ ಇವಿಷ್ಟೆ! ಕಾಯಿ-ಪಲ್ಲೆಗಳ ಮಾರಾಟದಿಂದ ನಡುನಡುವೆ ದುಡ್ಡೇನಾದರೂ ಬಂದರೆ, 'ಗೊಬ್ಬರಕ್ಕೆ ಬೇಕು' 'ಬಿತ್ತುವ ಬೀಜಕ್ಕೆ ಬೇಕು' 'ಎತ್ತಿನ ಹೊಟ್ಟೆಯ ಕಾಳಿಗೆ ಬೇಕು' 'ಮೊಟ್ಟೆಯ ಚರ್ಮಕ್ಕೆ ಬೇಕು' ಎಂದು ಗಂಟು ಹಾಕಿ ಇಡುವುದರಲ್ಲಿಗೆಯೇ ಲಿಂಗಣ್ಣನಿಗೆ, ಸಾತಮ್ಮನಿಗೆ ಸಮಾಧಾನ. ಬಾದಶಹನಿಗೆ ಸಹಾಯ ಮಾಡಿ ನಮ್ಮ ಪೂರ್ವಜರು ಪಡೆದ ಭೂಮಿಗೆ ನಾವಿಂದು ಒಡೆಯರಾಗಿ, ಕೈಕೆಸರು ಮಾಡಿಕೊಳ್ಳದೆ ಕುಳಿತಲ್ಲಿಯೆ ಮೊಸರನ್ನ ವನ್ನು ಉಣ್ಣುತ್ತಿದ್ದೆವು. ಅಲ್ಲದೆ ಲಿಂಗಣ್ಣನು ನಮ್ಮ ಸೇವಕನೆಂಬ ಕೀಳ್ನೋಟಕ್ಕೆ—ನಮ್ಮೆಲ್ಲರ ಹೃದಯದಲ್ಲಿಯೂ—ಇಂಬುಗೊಟ್ಟಿದ್ದೆವು.

'ಆನಂದಕಂದ' ಅವರ ಕಥೆ—'ಮಾಲ್ಕೀ ಹಕ್ಕು'

ನವೋದಯ ಕಥಾಸಾಹಿತ್ಯದ ವಿಶಿಷ್ಟ ಕಥೆ

'ಆನಂದಕಂದ' ಎಂದು ಪ್ರಸಿದ್ಧರಾದ ಬೆಟಗೇರಿ ಕೃಷ್ಣಶರ್ಮ (1900—1982)ರು ನವೋದಯ ಯುಗದಲ್ಲಿ ಉತ್ತರ ಕರ್ನಾಟಕದಲ್ಲಿ ಕವನ, ಸಣ್ಣಕಥೆ ಮತ್ತು ಕಾದಂಬರಿಗಳನ್ನು ರಚಿಸಿದರು. ಜಾನಪದ ಕ್ಷೇತ್ರದಲ್ಲಿ ಮೌಲಿಕ ಕೆಲಸ ಮಾಡಿದರು. 'ಎನಿತು ಇನಿದು ಈ ಕನ್ನಡ ನುಡಿಯು' ಕವನ ಇವರ ರಚನೆ.

ಐವತ್ತಕ್ಕೂ ಹೆಚ್ಚು ಕಥೆಗಳನ್ನು ಬರೆದ ಆನಂದಕಂದರಲ್ಲಿ ಒಂದು ಬಗೆಯ ಮುಗ್ಧತೆ ಕಾಣುತ್ತದೆ. ಸಾಹಿತ್ಯಕ ಮುಗ್ಧತೆಯೂ ಕಾಣುತ್ತದೆ. ಪಾತ್ರಗಳು ಬಹುಮಟ್ಟಿಗೆ ಕಪ್ಪು—ಬಿಳುಪು. ಅನುಭವ ಸರಳೀಕರಣವಾಗುತ್ತದೆ. ದುಷ್ಟರ ಅಥವಾ ಹಠಮಾರಿಗಳ ಹೃದಯ ಪರಿವರ್ತನೆ ಯಲ್ಲಿ ಭರವಸೆ ಕಾಣುತ್ತದೆ. ಕಥೆಗಳು ಬಹುಮಟ್ಟಿಗೆ ಕರುಣಾಜನಕ ಸನ್ನಿವೇಶಗಳ ನಿರೂಪಣೆಯಾಚೆ ಹೋಗುವುದಿಲ್ಲ. ಭಾಷೆ ಮತ್ತೆ ಮತ್ತೆ ಭಾವುಕವಾಗುತ್ತದೆ. ಕಥೆಗಾರನ ಒಲವು ಸ್ಪಷ್ಟವಾಗಿರುತ್ತದೆ. ಆದರೆ ಕೆಲವು ಕಥೆಗಳಲ್ಲಿ 'ಆನಂದಕಂದ'ರೂ ಈ ಮಿತಿಗಳನ್ನು ಮೀರಿ ಬರೆಯುತ್ತಾರೆ. ಅವರ 'ಮಾತನಾಡುವ ಕಲ್ಲು' ಸಂಗ್ರಹದಲ್ಲಿ ಹಳ್ಳಿಯ ಕಲ್ಲುಗಳು ಕಥೆಗಳನ್ನು ಹೇಳುತ್ತವೆ. 'ನೀನು ಪುಟ್ಟನ ತಾಯಿ' ಕಥೆಯಲ್ಲಿ ಚಿಕ್ಕ ಹುಡುಗನ ಮನಸ್ಸಿನ ವ್ಯಾಪಾರವನ್ನು ವಿಶ್ಲೇಷಿಸುತ್ತಾರೆ. 'ಮಮತೆಯ ಮುಡಿಪು' ಕಥೆಯಲ್ಲಿ ಸ್ವಾತಂತ್ರ್ಯ ಕಾಣದಿದ್ದ ಭಾರತದಲ್ಲಿ, ಆಳರಸರನ್ನು ಪ್ರಸನ್ನಗೊಳಿಸಲು ಸಂಭ್ರಮದಿಂದ ಗುಂಡು ಹಾರಿಸಲು ಅಪ್ಪಣೆ ನೀಡಿದ ಅಧಿಕಾರಿ ಅಳಿಯನನ್ನು ಕಳೆದುಕೊಳ್ಳುತ್ತಾನೆ. ಸ್ವಾತಂತ್ರ್ಯ ಹೋರಾಟದ ಒಂದು ಮುಖ ಇಲ್ಲಿ ಪ್ರತಿಬಿಂಬಿತವಾಗುತ್ತದೆ.

'ಮಾಲ್ಕೀ ಹಕ್ಕು' ಒಂದು ವಿಶಿಷ್ಟವಾದ ಕಥೆ; ವೈಯಕ್ತಿಕ ಬದುಕಿನಾಚೆ ಹೋಗಿ ಆರ್ಥಿಕ ವ್ಯವಸ್ಥೆಯನ್ನು ಕುರಿತು ಚಿಂತಿಸುವ ಕಥೆ. ನವೋದಯ ಸಾಹಿತ್ಯವು ಆರ್ಥಿಕ ವ್ಯವಸ್ಥೆಯನ್ನು ಕುರಿತು ಸಾಕಷ್ಟು ಚಿಂತನೆ ಮಾಡಲಿಲ್ಲ. ಸಮಸ್ಯೆಗಳಿಗೆ ಪರಿಹಾರಗಳನ್ನು ವೈಯಕ್ತಿಕ ಬದುಕಿನ

ಪರಿಣಾಮ

ಬಾಳೆಯ ತೋಟವು ಹಳೆಯದಾದುದರಿಂದ, ಹೊಸ ನೆಲದಲ್ಲಿ ಮರಿಗಳನ್ನು ನೆಡಬೇಕೆಂಬ ವಿಚಾರವು ನಡೆಯಿತು. ಲಿಂಗಣ್ಣನೊಡನೆ ಮುಂದಿನ ಹತ್ತು ವರ್ಷಗಳ ಗೇಣಿಯ ಬಗೆಗೆ ಮಾತು-ಕತೆಯೂ ಆಗಿಬಿಟ್ಟಿತು. ಹೊಸ ನೆಲಕ್ಕೆ ಹೆಚ್ಚಾಗಿ ಗೊಬ್ಬರ ಬೇಕಾಯಿತು. ಲಿಂಗಣ್ಣನು ಕೂಡಿಸಿಟ್ಟಿದ್ದ ಹಣವು ಅರ್ಧಕ್ಕೂ ಸಾಲಲಿಲ್ಲ. ಹೆಚ್ಚಿನ ಗೊಬ್ಬರಕ್ಕಾಗಿ ಅವನು ಸಾವುಕಾರರಲ್ಲಿ ಬಡ್ಡಿಯಿಂದ ಸಾಲ ತೆಗೆಯಬೇಕಾಯಿತು. ಲಿಂಗಣ್ಣನು ಕಷ್ಟಪಟ್ಟು ಉತ್ತು, ಕುಣಿಗಳನ್ನು ಅಗಿದು, ಮರಿಗಳನ್ನು ನೆಟ್ಟು, ಹೊಸ ತೋಟವನ್ನು ಮಾಡಿದನು. ಅದರ ಭವಿಷ್ಯತ್‌ಕಾಲದ ಫಲಪ್ರಾಪ್ತಿಯನ್ನು ಎಣಿಕೆ ಹಾಕುತ್ತ ಮನಸ್ಸಿನಲ್ಲಿ ಹಿರಿಹಿರಿ ಹಿಗ್ಗುತ್ತಿದ್ದನು.

ಶ್ರಾವಣದ ಕೊನೆಯ ಸೋಮವಾರಕ್ಕೆ ನಮ್ಮೂರ ಸಂಗನಬಸವಣ್ಣನ ಜಾತ್ರೆ. ಊರಲ್ಲಿ ಎಲ್ಲೆಲ್ಲಿಯೂ ಜಾತ್ರೆಯ ಸಿದ್ಧತೆಯ ಉತ್ಸಾಹವು ಪ್ರವಹಿಸತೊಡಗಿತು. ಜಾತ್ರೆಯ ದಿನ ಹೊಸ ಬಟ್ಟೆಗಳನ್ನು ಧರಿಸಿದ ಒಕ್ಕಲಿಗರ ಮಕ್ಕಳು, ದಿಲ್ಲೀಶ್ವರನ ರಾಜವಸ್ತ್ರಗಳು ದೊರೆತಾಗಿನಷ್ಟು ತೃಪ್ತಿಪಟ್ಟುಕೊಂಡು ಇರುತ್ತಾರೆ. ಎಂತಲೇ ನಮ್ಮ ಹಳ್ಳಿಯ ಸಿಂಪಿಗನ ಮನೆಯಲ್ಲಿ, ಹೊಸ ಬಟ್ಟೆಗಳು ರಾಶಿ-ರಾಶಿಯಾಗಿ ಬಿದ್ದಿರುವವು. ರೈಲ್ವೇ ಸ್ಟೇಶನ್ನಿನಲ್ಲಿ ಟಿಕೆಟಿಗಾಗಿ ಆತುರರಾಗಿ ನಿಂತ ಪ್ರಯಾಣಿಕರ ಹಾಗೆ ಸಿಂಪಿಗನ ಮನೆಯ ಬಾಗಿಲಲ್ಲಿ 'ನನ್ನದು ಮೊದಲು, ನನ್ನದು ಮೊದಲು' ಎಂದು ಆತುರಪಡಿಸುತ್ತ—ಹುಡುಗರ ನೆರವಿ ನಿಂತಿರುವುದು.

ಲಿಂಗಣ್ಣನ ಮಕ್ಕಳೂ ಜಾತ್ರೆಯ ಹೊಸ—ಬಟ್ಟೆಗಾಗಿ ಕಾಡಲು ತೊಡಗಿದರು. ಆದರೆ

ನೆಲೆಯಲ್ಲಿಯೆ ಕಂಡುಕೊಂಡಿತು ಎನ್ನುವುದು ಬಹುಮಟ್ಟಿಗೆ ನಿಜ. ಆದರೆ 'ಮಾಲ್ಕೀ ಹಕ್ಕಿ'ನಂಥ ಕೆಲವು ಕಥೆಗಳಾದರೂ ಅಂದಿನ ಸಾಹಿತಿಗಳ ನೋಟ ಆರ್ಥಿಕ ವ್ಯವಸ್ಥೆಯತ್ತಲೂ ಹೊರಳುತ್ತಿತ್ತು ಎನ್ನುವುದನ್ನು ನೆನಪು ಕೊಡುತ್ತವೆ. ಕಥೆಯ ಪ್ರಾರಂಭ, ಮುಕ್ತಾಯ ಎರಡರಲ್ಲಿಯೂ ಒತ್ತು ಆರ್ಥಿಕ ವ್ಯವಸ್ಥೆಯ ಮೇಲೆ. ಕಥೆಯ ಪ್ರಾರಂಭದ ಭಾಗವೇ ಕಥೆಯನ್ನು ಹೇಳುವವನಿಗೆ ಈ ವ್ಯವಸ್ಥೆಯಲ್ಲಿ ಸಾಕಷ್ಟು ಅಭಿಮಾನವಿದೆ ಎನ್ನುವುದನ್ನು ತೋರಿಸುತ್ತದೆ. ("ಆ ಮಹತ್ಕಾರ್ಯಕ್ಕೆ ಪ್ರತಿಫಲವಾಗಿ ಬಾದಶಹನು ಈ ತೋಟವನ್ನು... ಕೊಟ್ಟನಂತೆ... ನಮ್ಮ ಮನೆತನವು ಇತಿಹಾಸ ಪ್ರಸಿದ್ಧವಾದುದೆಂದು ಬರೆದು ಪ್ರಕಟಿಸಿದರೆ, ಅದೊಂದು ನನಗೆ ಹೆಮ್ಮೆಯ ವಿಷಯುವೇ ಅಲ್ಲವೆ?") ಈ ವ್ಯವಸ್ಥೆಯ ಉಡಿಯಲ್ಲಿರುವ ಅನ್ಯಾಯವನ್ನು ಅದರಲ್ಲಿ ಅಭಿಮಾನ ತಳೆದವನೇ ಗುರುತಿಸುತ್ತಾನೆ ಎನ್ನುವುದರಿಂದ ಕಥೆಯ ತಿರುಳು ಹರಿತವಾಗುತ್ತದೆ. ಈ ವ್ಯವಸ್ಥೆಗೆ ಸಿಕ್ಕವನ ಮುಗ್ಧತೆಯನ್ನು ಪ್ರಾರಂಭದಲ್ಲಿ ಸೂರ್ಯ—ಲಿಂಗಣ್ಣನ ಬಾಂಧವ್ಯದ ಚಿತ್ರ ಸೂಚಿಸುತ್ತದೆ. ನವೋದಯ ಸಾಹಿತ್ಯದಲ್ಲಿ ಸೂರ್ಯನ ಹಲವು ಬಣ್ಣನೆಗಳಿವೆ; ಈ ವರ್ಣನೆ ವಿಶಿಷ್ಟವಾದದ್ದು. ಪುನರ್ವಸು ಮಳೆಯ ಪ್ರಸಂಗಕ್ಕೂ ಕಥೆಯ ವಸ್ತುವಿಗೂ ಸಂಬಂಧವಿಲ್ಲ ಎನ್ನಿಸಿದರೂ, ಈ ವ್ಯವಸ್ಥೆಯ ಲಾಭ ಪಡೆಯುವವರು ರಾಕ್ಷಸರಲ್ಲದಿದ್ದರೂ, ಉದ್ದೇಶಪೂರ್ವಕವಾಗಿ ಶೋಷಣೆ ಮಾಡುವವರಲ್ಲದಿದ್ದರೂ, ಮಾನವೀಯತೆ ಇರುವವರಾದರೂ ಅವರ ಸಂವೇದನೆ ಎಷ್ಟರ ಮಟ್ಟಿಗೆ ಸೂಕ್ಷ್ಮತೆಯನ್ನು ಅವರಿಗೇ ಅರಿವಿಲ್ಲದಂತೆ ಕಳೆದುಕೊಂಡಿರುತ್ತದೆ ಎನ್ನುವುದನ್ನು ಸೂಚಿಸುತ್ತದೆ. ಬಳೆಯ ಪ್ರಸಂಗ ಕಥೆಗಾರರು ಉದ್ದೇಶಪೂರ್ವಕವಾಗಿ ಸೇರಿಸಿದ ತುಂಡು, ಈ ಭಾಗದ ಕಡೆಯ ಪ್ಯಾರ ವಾಚ್ಯವಾಗುತ್ತದೆ. ಇಷ್ಟಾದರೂ 1939ರಲ್ಲಿ ಪ್ರಕಟವಾದ 'ನಮ್ಮ ಬದುಕು' ಸಂಗ್ರಹದಲ್ಲಿನ ಈ ಕಥೆ ನವೋದಯ ಕಥಾ ಸಾಹಿತ್ಯದಲ್ಲಿ ವಿಶಿಷ್ಟವಾದುದಾಗಿದೆ. ತನ್ನ ಮನೆತನ ಇತಿಹಾಸಪ್ರಸಿದ್ಧವೆಂದು ಹೆಮ್ಮೆ ಪಡುವ ಕಥೆ ಹೇಳುವವನಿಗೆ ಆ ಪ್ರಸಿದ್ಧಿ ಮತ್ತು ಸಂಪತ್ತು ದೊರಕಿದ್ದು ತನ್ನ ಪೂರ್ವಜರು ಸ್ವಾತಂತ್ರ್ಯ ಭಕ್ತನಿಗೆ ದ್ರೋಹ ಮಾಡಿದ್ದರಿಂದ ಎನ್ನುವ ಅರಿವಿದೆ; ಇಲ್ಲಿ ಸೂಕ್ಷ್ಮ 'ಐರನಿ' ಇದೆ.

ಕೈಯಲ್ಲಿ ಒಂದು ಕಾಸೂ ಇರಲಿಲ್ಲ, ಇಷ್ಟೇ ಅಲ್ಲ; ಲಿಂಗಣ್ಣನ ತಲೆಯ ಮೇಲೆ ಗೊಬ್ಬರಕ್ಕಾಗಿ ಮಾಡಿದ ಸಾಲದ ಹೊರೆಯಿದ್ದಿತು. ಅವನು ಮಕ್ಕಳ ಬಯಕೆಯನ್ನು ಈಡೇರಿಸಲಾರದವನಾಗಿ ಒಳಗೊಳಗೆಯೆ ಕಳವಳಪಡುತ್ತಿದ್ದನು. ಸಾತಮ್ಮನ ಮನಸ್ಸಂತೂ ಹೊಗೆಯ ಮನೆಯಲ್ಲಿ ಸಿಕ್ಕು ಉಸಿರುಗಟ್ಟಿದವನಂತಾಗಿರಬಹುದು. ವರುಷಕ್ಕೊಂದು ಸಲ ಬರುವ ಜಾತ್ರೆ. ಅಂದು ತನ್ನ ಮಕ್ಕಳಿಗೆ ಉಡುತೊಡುವುದಕ್ಕೆ ಹೊಸಬಟ್ಟೆಗಳನ್ನು ಒದಗಿಸಿಕೊಡುವ ಯೋಗ್ಯತೆ ತನಗಿಲ್ಲದುದನ್ನು ಕಂಡು ಅವಳು ಎಷ್ಟೊಂದು ವ್ಯಥೆಗೊಂಡಿರಬೇಡ?

* * *

ಜಾತ್ರೆಯ ಸಂತೆಗೆಂದು ಊರಿಗೆ ಊರೇ ನೆರೆಯೂರಿಗೆ ಹೋಯಿತು. ಸಾತಮ್ಮನೂ ಹೋಗಿರುವಳೆಂಬುದು, ನಾನು ಸಂಜೆಯ ಕಡೆಗೆ ತೋಟಕ್ಕೆ ಹೋದಾಗ ಗೊತ್ತಾಯಿತು. ತಮ್ಮ ತಾಯಿ ನಾಳೆಗೆ ಜಾತ್ರೆಗಾಗಿ ಹೊಸಬಟ್ಟೆ ತರುತ್ತಾಳೆಂದು, ಲಿಂಗಣ್ಣನ ಮಕ್ಕಳೆಲ್ಲರೂ ಉಬ್ಬಿ ಉಬ್ಬಿ ಕುಣಿದಾಡುತ್ತ ನನಗೆ ಹೇಳಿದರು.

* * *

ಮರುದಿನ ಹಗಲು ನಾಲ್ಕುಗಂಟೆಯಾಗಿರಬಹುದು. ಬಾಡಿಗೆಯ ಬಂಡಿಯ ಬಸಪ್ಪನು—ತನ್ನ ದುಡ್ಡು ಕೇಳಲಿಕ್ಕೆ ಇರಬಹುದು—ನಮ್ಮ ತಂದೆಯ ಕಡೆಗೆ ಬಂದಿದ್ದ. ಏನೋ ಮಾತಿಗೆ ಮಾತು ಹೊರಟು ಅವನು ಕೇಳಿದನು:

"ನಿನ್ನಿನ ಬಾಳಿಗೊನಿಗೆ ಎಷ್ಟು ಹಣಾ ಬಂತು ರಾಯರs?" ತಂದೆ ಆತುರಭಾವದವರಾಗಿ ಕೇಳಿದರು:

"ಎಲ್ಲೀ ಬಾಳಿಯ ಗೊನಿಗಳೋ ಬಸಪ್ಪಾ?"

"ಸಾತಮ್ಮ ನಿನ್ನೆ...ಸಂತಿಗೆ...ನಾಕು ಗೊನೀ ತಗೊಂಡು ಬಂದಿದ್ದಳಲ್ರಿ; ಅವು?"

"ಸಾತಮ್ಮ ನಿನ್ನೆ ಸಂತಿಗೆ ತೊಗೊಂಡು ಬಂದಿದ್ದಳೇ?"

"ನಿಮಗ ಗೊತ್ತs ಇಲ್ಲೇನ್ರಿ? ನನ್ನ ಬಂಡೀ ಮ್ಯಾಗs ಇಟ್ಟಿದ್ದಳಲ್ರಿ—ಹೋಗುವಾಗ!"

"ನನಗೆ ಗೊತ್ತs ಇಲ್ಲ ಬಿಡು; ಲಿಂಗ ನನಗೆ ಹೇಳದೆ ಎಂದೂ ಕಾಯಿ ಕೊಯ್ಯುತಿರೂದಿಲ್ಲೊ ಬಸಪ್ಪಾ!"

"ಏನ್ರೀ, ನಾ ಏನು ಸುಳ್ಳs ಹೇಳತೀನೇನು? ಯಿಚಾರಾಮಾಡಿ ನೋಡ್ರಿ ಬೇಕಾದರ!"

ಬಸಪ್ಪ ಇಷ್ಟು ಮಾತನಾಡಿ, ತನ್ನ ಹಣ ತೆಗೆದುಕೊಂಡು ಹೊರಟು ಹೋದ. ನಮ್ಮ ತಂದೆಯವರದು ವಿಚಿತ್ರವಾದ ಸ್ವಭಾವ: ಬಸಪ್ಪನ ಮಾತಿನಿಂದ ಅವರು ತುಂಬ ಕೋಪಗೊಂಡಿದ್ದಂತೆ ಕಂಡಿತು. ಆಳು ಮನೆಯಲ್ಲಿ ಇರಲಿಲ್ಲವಾದುದರಿಂದ, ನನ್ನನ್ನು ಕೂಗಿ ಕರೆದು ಗಡುಸಾದ ನುಡಿಯಲ್ಲಿ ಹೇಳಿದರು:

"ನೀನು ಓೀಗೆಯೇ ಹೋಗಿ ಲಿಂಗನನ್ನು ಕರೆದುಕೊಂಡು ಬಾ!"

ನಾನು ಹುಲ್ಲೆಯ ನೆಗೆತದಿಂದ ಹಾರುತ್ತ ಹೋಗಿ ಲಿಂಗಣ್ಣನನ್ನು ಕರೆದೆ; ಆತನನ್ನೊಡಗೊಂಡು ತಂದೆಯ ಬಳಿಗೆ ಬಂದೆ. ತಂದೆಯವರು ಮುಖ ಗಂಟುಹಾಕಿಕೊಂಡೇ ಕುಳಿತಿದ್ದರು. ಲಿಂಗಣ್ಣನು ಬಂದೊಡನೆಯೆ ಸಿಡಿನುಡಿಯಲ್ಲಿ ಕೇಳಿದರು:

"ಏನಪಾ ಲಿಂಗಾ! ನಿನ್ನೆ ಸಂತಿಗೆ ಬಾಳಿಗೊನಿ ಎಷ್ಟು ಕಳಿಸಿ ಕೊಟ್ಟಿದ್ದಿ?"

ಲಿಂಗಣ್ಣನು ಗಾಬರಿಯ ದನಿಯಲ್ಲಿ ಕೇಳಿದ:

"ಎಲ್ಲಿದ್ರೀಯಪ್ಪಾ! ಗೊನೀ ಕೊಯ್ಯೂದಾದ್ರ ನಿಮಗ ಹೇಳದ್ಯ ಕೊಯ್ಯುತೀನೇನ್ರಿ?"

"ನಿನ್ನೆ ನಿನ್ನ ಹೆಂಡತಿ ನಾಲ್ಕು ಗೊನಿಗಳನ್ನ ತೊಗೊಂಡು ಹೋಗಿರಲಿಲ್ಲ ಸಂತಿಗೆ?"

ಲಿಂಗಣ್ಣನು ಏನೂ ತಿಳಿಯದವನಾಗಿ ಸುಮ್ಮನೆ ಕುಳಿತ. ಮತ್ತೆ ತಂದೆ ಮಾತನಾಡಿದರು:

"ಸುಳ್ಳು ಹೇಳಬೇಡ; ನನಗೆಲ್ಲಾನೂ ಗೊತ್ತಾಗೇದ. ಸಂಭಾವಿತಾ ಅಂತ ನಿನ್ನ ಮ್ಯಾಲ ನಂಬಿಗೀ ಇಟ್ಟರ, ಒಳ್ಳೇ ಕೈತೋರಿಸಲಿಕ್ಕೆ ಹತ್ತೀದಿ..... ಹೇಳು! ನಿಜಾ ಹೇಳು......! ಕಳಿಸಿದ್ದಿಯೋ ಇಲ್ಲೋ?"

"ಸಂಗನಬಸವಣ್ಣನ ಆಣೆಂದರೂ ನನಗೆ ಗೊತ್ತಿಲ್ಲ ರಾಯರs!"

"ಗೊತ್ತಿಲ್ಲಲ್ಲs? ಹ್ಯಾಂಗs ಹ್ಯಾಂಗ ಗೊತ್ತಾದೀತು? ಬೆನ್ನ ಮೇಲೆ ಬಾರಕೋಲಿನೇಟು ಬಿದ್ದಾಗ ಗೊತ್ತಾಗತsದ... ತಿಳಿತೇನು?"

ಲಿಂಗಣ್ಣನ ಕಣ್ಣುಗಳಿಂದ ನೀರು ಹರಿದವು. ಧ್ವನಿಯು ನಡುಕವನ್ನು ಪಡೆಯಿತು. ಕುಗ್ಗಿದ ಧ್ವನಿಯಲ್ಲಿ ತಡೆಯುತ್ತಾ ಹೇಳಿದನು:

"ಸತ್ಯಾ ಸೊರಿಸಿ ಹೇಳತೀನು ನನ್ನ ಒಡ್ಯಾ!

ನನಗೇನೂ ಗೊತ್ತಿಲ್ಲ. ಬೇಕಾದರೆ ಆಕಿನ್ನ ಇಲ್ಲೆ ಕರಿಸಿ, ಸುಳ್ಳು ಖರೆ ವಿಚಾರ ಮಾಡಿಬಿಡ್ರಿ!"

ಸಾತಮ್ಮನನ್ನು ಕರೆದುತರುವಂತೆ ತಂದೆಯವರ ಆಜ್ಞೆಯಾಯಿತು. ಕೂಡಲೆ ಓಡಿದೆ; ತಂದೆಯವರು ಕರೆಯುತ್ತಾರೆಂದು ಸಾತಮ್ಮನಿಗೆ ಹೇಳಿದೆ. ಒಡನೆಯೆ ಆಕೆಯ ಮುಖವು ಕಪ್ಪಿಟ್ಟಿತು. ಎದೆಯು ದಡದಡಿಸುತ್ತಿರುವಂತೆ ತೋರಿತು. ಎಳೆದೆಳೆದು ಹೆಜ್ಜೆಗಳನ್ನು ಹಾಕುತ್ತ ನನ್ನೊಡನೆ ಮನೆಗೆ ಬಂದಳು. ಲಿಂಗಣ್ಣನ ದೈನ್ಯಭಾವದ ಮುಖವನ್ನೂ ನಮ್ಮ ತಂದೆಯವರ ಕ್ರೋಧ ಭಾವದ ಮುಖವನ್ನೂ ಕಂಡು, ಸಾತಮ್ಮನು ಗಡಗಡನೆ ನಡುಗಿರಬಹುದು. ಬಂದವಳು ಲಿಂಗಣ್ಣನ ಹಿಂಬದಿಗೆ ಮುಖ ತಗ್ಗಿಸಿ ಕುಳಿತುಕೊಂಡಳು. ತಂದೆಯವರ ಗುಡುಗೊಂದು ಕೇಳಿಸಿತು:

"ಏನವ್ವಾ! ಸಂತಿಗೆ ನೀನು ಬಾಳೀಗೊನಿಗಳನ್ನೆಷ್ಟು ಒಯ್ದಿದ್ದಿ?"

ಸಾತಮ್ಮನು ಬೆದರಿದ ಬಗೆಯವಳಾಗಿ, ಯಾವ ಮಾತನ್ನೂ ಆಡದೆ, ಸುಮ್ಮನೆ ಕುಳಿತುಕೊಂಡಳು. ಮತ್ತೆ ತಂದೆಯವರು ಕೇಳಿದರು:

"ಎಷ್ಟು ಒಯ್ದಿದ್ದಿ? ಹೇಳೂದಿಲ್ಲೇನು?"

ಹೆದರಿ ಹುಚ್ಚಾದ ದನಿಯಲ್ಲಿ ಸಾತಮ್ಮನ ಬಾಯಿಂದ ಒಂದು ಶಬ್ದವು ಹೊರಬಿದ್ದಿತು.

"ನಾ—ಕು....!"

ತಂದೆಯವರು ಮೂದಲಿಸುವ ಚುಚ್ಚು ನೋಟದಿಂದ ಲಿಂಗಣ್ಣನ ಕಡೆಗೆ ನೋಡಿದರು; ಅವನು ಸತ್ತವನಂತಾಗಿದ್ದ. ತಂದೆ ರೇಗಿದವರಾಗಿ ಕೇಳಿದರು:

"ಏನು ಲಿಂಗಪ್ಪಣ್ಣಾ! ನಿನಗೆ ಗೊತ್ತಿಲ್ಲs ಅಲ್ಲs?"

ಲಿಂಗಣ್ಣನು ಮುಖ ಕೆಳಕ್ಕೆ ಬಾಗಿಸಿ ಕಂಬನಿ ಮಿಡಿಯುತಲಿದ್ದ. ಸಾತಮ್ಮ ಕೊಂಚ ಧೈರ್ಯ ತಂದುಕೊಂಡವಳಾಗಿ ಹೇಳಿದಳು:

"ಅವನಿಗೇನೂ ಗೊತ್ತಿಲ್ಲ ರಾಯರಃ! ಎಲ್ಲಾ ತಪ್ಪೂನೂ ನಾನs ಮಾಡೀದೀನಿ."

"ಅಂದರ....?" ತಂದೆಯವರು ಕೇಳಿದರು.

ಸಾತಮ್ಮನಿಗೆ ಉತ್ತರ ಕೊಡುವುದಕ್ಕಾಗಲಿಲ್ಲ; ಕಣ್ಣಿಂದ ಧಾರೆಧಾರೆಯಾಗಿ ನೀರು ಸುರಿದುವು. ಕೊರಳ ಸಿರಗಳು ಬಿಗಿದುಬಂದುವು. ತಂದೆಯವರು ಮತ್ತೆ ಕೂಗಿದರು:



ನಮ್ಮ 7ಅಂತಸ್ತಿನ ಕಟ್ಟಡದ ಕೆಳಗಿನ ಅಂತಸ್ತಿನಲ್ಲಿ ನೀವೇ ಇರೋದಾದ್ರೆ ಮಾತ್ರ ನಿಮಗೆ ಆದರ ಕಾಂಟ್ರಾಕ್ಟ್.

"ಬರೇ ಅತುಗೋತs ಕೂತರ ಏನು ಮಾಡಿದ್ಹಾಂಗಾತು? ಏನೇನು ಆತಂಬೂದನ್ನ ಹೇಳು!"

ಸಾತಮ್ಮನು ಅಳುತ್ತಳುತ್ತಲೆ ಹೇಳಲು ತೊಡಗಿದಳು:

"ಮಕ್ಕಳು ಜಾತರಿಗೆ ಹೊಸಾ ಅಂಗೀ ಬೇಡಿದೂ. ಕೊಂಡು ತರಲಾಕ ಮನ್ಯಾಗ ಒಂದು ಕಾಸೂ ಇರಲಿಲ್ಲ. ಅಲ್ಲೆ ಇಲ್ಲೆ ಕೈಗಡ ಕೇಳಿದರೆ ಎಲ್ಲ್ಯೂ ಒಂದು ಕಾಸೂ ಹುಟ್ಟಲಿಲ್ಲ. ಏನು ಮಾಡೂದೂ ಅಂತ ಇಂವನ್ನ ಕೇಳಿದೆ. 'ಹೊಸಾ ಅಂಗೀ ತೊಟಗೊಂಡಾಗs ಜಾತ್ರಿ ಆಗತಯ್ತೇನು? ಅಂತ ಕಾಡೂ ಮಕ್ಕಳನ್ನೆಲ್ಲಾ ಬೆದರಿಸಿ ಸುಮ್ಮಗs ಕುಂಡ್ರಿಸಿ ಬಿಟ್ಟ. ನನ್ನ ಹೊಟ್ಯಾಗ ಮಾತ್ರ ನುಚ್ಚು ಕುದ್ಹಾಂಗ ಆಗಲಾಕ ಹತ್ತಿತು. ಏನೇನೋ ಯೋಚನೀ ಹಾಕೇ ಹಾಕಿದೆ. ಮಂದೀ ಮಕ್ಕಳು ಹೊಸಾ ಅರವೀ ತೊಟಗೊಂಡು ತಿರುಗಾಡುತಿರುವಾಗ, ನನ್ನ ಮಕ್ಕಳು ತಿರಕರಾಂಗ ಹರಕ ಅರವೀ ತೊಟಗೊಂಡು ತಿರಿಗ್ಯಾಡ ಬೇಕಾತಲ್ಲಾ....ಅಂತ ಕೆಟ್ಟನಿಸಿತು. ಇಂವಗ ಹೇಳಿದರ ಬ್ಯಾಡಂತಾನಂತ ತಿಳದು, ತ್ವಾಟದಾಗ ಇಂವ ಇಲ್ಲದ ಯಾಳೇ ನೋಡಿ, ನನ್ನ ಹಿರೇ ಮಗನ ಕಡಿಂದ ಹಳೇಬಾಳ್ಯಾಗ ನಾಕು ಗೊನೀ

ಕೊಯ್ಸಿಕೊಂಡು ಮುಚ್ಚಿ ಇಟ್ಟಿದ್ದೆ. ಸಂತಿಗೆ ಹೋಗುವಾಗ ತ್ವಾಟದ ಬದಿಲೇನs ತರಿಬಿಸಿ, ಬಸಪ್ಪನ ಬಂಡೀ ಒಳಗ ಇಟುಕೊಂಡು ಹೋದೆ. ಎಡ್ಡು ರೂಪಾಯಿ ಮೂರು ಪಾವಲಿ ಬಂದೂ ಅದರಿಂದs ಎಲ್ಲಾ ಹುಡುಗೋರಿಗೆ ಒಂದೊಂದು ಅಂಗೀ ಹೊಲಿಸಿಕೊಂಡು ಬಂದೇನಿ. ಇದೊಂದು ಸಾರಿಗೆ ನನ್ನ ತಪ್ಪು ಮಾಪ್ ಮಾಡ್ರಿ ಯಪ್ಪಾ! ಇನ್ನೊಮ್ಮೆ ಎಂದೂ ಹಿಂತಾ ಕೆಲಸ ಮಾಡಾಕಿಲ್ಲ....''

"ಇದೊಂದs ಸಾರೇನs? ಹಿಂದಿನ ಸಾರೆ ಮಾಡಿದ್ದೆಲ್ಲಾ ಮುಚ್ಚಿಹೋಗೇದೋ....!' ನಮ್ಮ ತಂದೆಯವರು ಕೋಪವನ್ನೇ ಕಾರಿದರು.

ಲಿಂಗಣ್ಣನಿಗೆ ಹುಚ್ಚು ಹಿಡಿದಂತೆ ಆಗಿದ್ದಿತು. ತಾನೀಗ ಏನು ಮಾಡಬೇಕು? ಹೇಗೆ ಮಾತನಾಡಬೇಕು? ಎಂಬುದೇ ತಿಳಿಯದಾಯಿತು.

ಸಾತಮ್ಮ ಕಳವು ಮಾಡಿದವಳೆಂದು ಅಂದು ನಮ್ಮ ಮನೆಯವರೆಲ್ಲರೂ ಬೇಕಾದ ಹಾಗೆ ಅವಳನ್ನು ಬೈದರು- ಸಾತಮ್ಮ ಸುಮ್ಮನೆ ಕುಳಿತು ಎಲ್ಲವನ್ನೂ ಕೇಳುತ್ತಲಿದ್ದಳು. ನನಗೂ ಆಕೆಯ ಕಳ್ಳತನದ ಬಗೆಗೆ ಅಂದು ತಿರಸ್ಕಾರವುಂಟಾಯಿತು.

ಮುಂದೆ ಏನು ನಡೆಯಿತೆಂದು ಕೇಳುವುದಿದೆಯೇ? ಪಂಚಾಯಿತಿ ಕೂಡಿತು. ಎರಡು ರೂಪಾಯಿಗಳ ಸಲುವಾಗಿ ಲಿಂಗಣ್ಣನು ಎಷ್ಟೋ ರೂಪಾಯಿಗಳ ದಂಡವನ್ನು ತೆರಬೇಕಾಯಿತು. ವರುಷದ ಕೊನೆಯಲ್ಲಿಯೆ ತೋಟವನ್ನು ಬಿಟ್ಟುಕೊಡಬೇಕಾಯಿತು. ಹೊಸತಾಗಿಯೆ ನೆಟ್ಟು ನೀರುಣಿಸಿದ ಬಾಳೆಯು ತೋಟದ ಸಲುವಾಗಿ, ಹಾರಯಿಸಿದುದೆಲ್ಲವೂ ಹಳವಂಡವಾಗಿ ಹೋಯಿತು.

ಆ ಹಿಂದಣ ಸಂಗತಿಯೆಲ್ಲವೂ ಇಂದು ನೆನಪಾದಾಗಲೆಲ್ಲ, ಲಿಂಗಣ್ಣನ ಹೆಂಡತಿಯ ಕಳವಿನ ಅಪರಾಧದ ಬಗ್ಗೆ ಗೊಂದಲದಲ್ಲಿ ಬಿದ್ದು ಬಿಡುತ್ತೇನೆ. ಹಿಂದೆ ಎಂದೋ ಒಂದು ಕಾಲದಲ್ಲಿ, ನಮ್ಮ ಪೂರ್ವಜರು ಸ್ವಾತಂತ್ರ್ಯ ಪ್ರೀತಿಯ ದಾಯಾದಿಯೊಬ್ಬನನ್ನು ಸೆರೆಹಿಡಿದುಕೊಟ್ಟರು; ಅದಕ್ಕಾಗಿ ಜಗತ್ತು ಹುಟ್ಟಿದಾಗಲೇ ಹುಟ್ಟಿದ ಈ ತೋಟದ ನೆಲವನ್ನು—ಇನ್ನಾವ ದೇಶದಿಂದಲೋ ಬಂದ—ಬಾದಶಹನು ಅವರಿಗೆ ಇನಾಮಾಗಿ ಕೊಟ್ಟ. ಆ ಪೂರ್ವಜರ ರಕ್ತ ಸಂಬಂಧಿಕರೆಂದು ಆ ನೆಲದ ಪೂರ್ಣ ಮಾಲ್ಕೀ ಹಕ್ಕು ನಮಗೆ ಬಂದಿತು. ಆದರೆ ಬಿಸಿಲೆನ್ನದೆ, ಬಿರುಗಾಳಿಯೆನ್ನದೆ, ಮಳೆಯನ್ನದೆ, ಚಳಿಯನ್ನದೆ ಹಗಲಿರುಳೂ ಕಷ್ಟಪಟ್ಟು ದುಡಿದು ಬೆಳೆಯಿಸಿದ ಲಿಂಗಣ್ಣನ ಕುಟುಂಬದವರು ಒಂದೆರಡು ಬಾಳೆಯ ಗೊನೆಗಳಿಗೂ ಹಕ್ಕುದಾರರಾಗುವಂತಿಲ್ಲವೆ? ತನ್ನ ಹೊಟ್ಟೆಯ ಕರುಳುಗಳ ಮೈಯನ್ನು ಮುಚ್ಚುವುದಕ್ಕೆ, ಸಾತಮ್ಮನು ತನ್ನ ದುಡಿತದ ಫಲವನ್ನು ಉಪಯೋಗಿಸಿದ ಮಾತ್ರಕ್ಕೆ ಅದನ್ನು ಕಳವು ಎಂದೇ ಕರೆಯಬಹುದೇ? ●

(ಕೃಪೆ: ದಿವಂಗತ 'ಆನಂದಕಂದ' ಅವರ ಕುಟುಂಬ, ಧಾರವಾಡ.)

ಕ್ರಿಕೆಟ್ ಉವಾಚ

ಎಷ್ಟು ರನ್ ಮಾಡಿದ್ಯೋ ಮರಿ ಅಂದರೆ
ಮಳೆ ಬರದಿದ್ರೆ ಬಾರಿಸ್ತಿದ್ದೆ ಸೆಂಚುರಿ ಅಂದನಂತೆ

ಯಾಕೋ ರವಿ ನಿಧಾನ ಅಂದರೆ
ಅದೇ ನನ್ನ ವಿಧಾನ ಅಂದನಂತೆ

ಏನಪ್ಪಾ ಹೀಗಾಯ್ತು ಅಜರ್ರೂ ಅಂದರೆ
ಬಿದ್ದಿರಬೇಕು ಯಾರದೋ ನಜರ್ರೂ ಅಂದನಂತೆ

ಹೋಯ್ತಲ್ಲೋ ಕಪ್ಪು ಕಪಿಲೂ ಅಂದರೆ
ಹೋಗಲಿ ಬಿಡಿ ಉಳೀತು ಶಾಲು ಅಂದನಂತೆ

ಅಭಿಮನ್ಯು ಕಣೋ ಸಚಿನ್ನು ಅಂದರೆ
ಅತಿರಥ ಕಣೋ ಇಮ್ರಾನು ಅಂದನಂತೆ

ಮನಸ್ಸು ಮಾಡಲಿಲ್ವೆ ಮನೋಜು ಅಂದರೆ
ಬಿಡ್ರೀ ಇದು ಬರೀ ಮೋಜು ಅಂದನಂತೆ


ಆಯ್ತೆ ವೆಂಕಜ್ಜಿ ತಾಲಿಪಟ್ಟು ಅಂದರೆ
ಹೊರಟೆ, ನೋಡ್ತಾ ಕೂತ್ಬಿಟ್ಟೆ ಕ್ರಿಕೆಟ್ಟು ಅಂದರಂತೆ.

● ಪ್ರತಿಭಾ ನಂದಕುಮಾರ್,
ಬೆಂಗಳೂರು

ಪತ್ತೇದಾರಿ

ಆ ಲೋಹದ ಹದ್ದು

• ದ್ವಂದ್ವಮುಖಿ



ಒಂದು ದೇಶ ತನ್ನ ನೆರೆಯ ದೇಶಗಳ ವಿರುದ್ಧ ಗೂಢಚರ್ಯೆ ನಡೆಸುವುದು ಈ ಭೂಮಿಯ ಮೇಲೆ ಅಸ್ತಿತ್ವದಲ್ಲಿರುವ ಎಲ್ಲ ರಾಷ್ಟ್ರಗಳಿಗೂ ಅನ್ವಯಿಸುವ ಸರ್ವ ಸಾಧಾರಣ ಅಂಶವಾಗಿದ್ದು ಈ ಕುರಿತ ಹಲವಾರು ರೋಚಕ ಕಥೆಗಳನ್ನು ನಾವೆಲ್ಲ ಓದಿದ್ದೇವೆ. ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ಭಾರತೀಯ ರಾಯಭಾರಿ ಕಚೇರಿಯ ಹಿರಿಯ ಅಧಿಕಾರಿಯೊಬ್ಬರನ್ನು ಪಾಕಿಸ್ತಾನದ ಬೇಹುಗಾರಿಕೆ ಇಲಾಖೆಯ ಅಧಿಕಾರಿಗಳು ಚಿತ್ರ ಹಿಂಸೆಗೆ ಗುರಿಪಡಿಸಿದ್ದು, ಆ ಸುದ್ದಿ ದೇಶದ ಎಲ್ಲ ಪತ್ರಿಕೆಗಳ ಮುಖಪುಟದಲ್ಲಿ ವರದಿಯಾದದ್ದು ಇತ್ತೀಚಿನ ಸಂಗತಿ. ಕೆಲವು ವರ್ಷಗಳ ಹಿಂದೆ ನಾನು ದೆಹಲಿಗೆ ಹೋಗಿದ್ದಾಗ ನಮ್ಮ ದೇಶದ ಗೂಢಚರ್ಯೆ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಹೇಳಿದ ಒಂದು ಕಥೆ ತುಂಬಾ ಸ್ವಾರಸ್ಯಕರವಾಗಿದ್ದು, ನಮ್ಮ ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾದಂತೆ ಕಾಣೆ. ಆದ್ದರಿಂದ ಅದನ್ನಿಲ್ಲಿ ಹೇಳುತ್ತಿದ್ದೇನೆ.

ಅಮೆರಿಕ ಮತ್ತು ರಷ್ಯಾ ಜಗತ್ತಿನ ಎರಡು ಅತ್ಯಂತ ಬಲಿಷ್ಠ ರಾಷ್ಟ್ರಗಳಾಗಿದ್ದ ಕಾಲವದು. ರಷ್ಯನ್ ಬೇಹುಗಾರಿಕೆ ಸಂಸ್ಥೆಯಾಗಿದ್ದ ಕೆ.ಜಿ.ಬಿ.ಯ ಅಧಿಕಾರಿಗಳ ಸಾಮರ್ಥ್ಯದ ಬಗ್ಗೆ ಅಮೆರಿಕನ್ ಲೇಖಕರೇ ಹಲವಾರು ಕಲ್ಪನೆಯ ಕಥೆ-ಕಾದಂಬರಿಗಳನ್ನು ಬರೆದಿದ್ದಾರೆ. ಇರ್ವಿಂಗ್ ವ್ಯಾಲೇಸ್ ಬರೆದ 'The Second Lady' ಎಂಬ ಕಾದಂಬರಿ ಅಂಥವುಗಳಲ್ಲಿ ಮೊದಲ ಸ್ಥಾನ ಪಡೆದಿದೆ ಎಂದರೆ ಉತ್ಪ್ರೇಕ್ಷೆಯಲ್ಲ.

ರಷ್ಯಾದಲ್ಲಿ ಅಮೆರಿಕ ರಾಯಭಾರ ಕಚೇರಿಯ ಹೊಸ ಕಟ್ಟಡದಲ್ಲಿ ಇಡಲು ಲೋಹದ ಸುಂದರ ಹದ್ದಿನ ವಿಗ್ರಹ ಕೊಡಲಾಯಿತು.

ಅಮೆರಿಕ, ರಷ್ಯಾದ ರಾಜಧಾನಿಯಾಗಿದ್ದ ಮಾಸ್ಕೋದಲ್ಲಿ ತನ್ನ ರಾಯಭಾರಿ ಕಚೇರಿಯನ್ನು ಕಟ್ಟಿದ್ದು ಬಹುಶಃ 1955ರಲ್ಲಿ. ಆ ಕಟ್ಟಡಕ್ಕೆ ಬೇಕಾದ ಕಲ್ಲು, ಇಟ್ಟಿಗೆ, ಮರಳು – ಇತ್ಯಾದಿ ಸಕಲ ಸಾಮಗ್ರಿಗಳನ್ನೆಲ್ಲ ಅಮೆರಿಕದಿಂದಲೇ ರವಾನಿಸಿ ತಂದು ಅದನ್ನು ಕಟ್ಟಲಾಯಿತಂತೆ! ರಷ್ಯಾದವರಿಂದ ಒಂದು ಇಟ್ಟಿಗೆಯನ್ನು ತೆಗೆದು ಕೊಳ್ಳಲೂ ಭಯ ಅಮೆರಿಕನ್ನರಿಗೆ! ಕಟ್ಟಡದ ನಿರ್ಮಾಣ ನಡೆದದ್ದು ಅಮೆರಿಕದ ಬೇಹು ಗಾರಿಕೆ ಸಂಸ್ಥೆ ಸಿ.ಐ.ಎ. ಅಧಿಕಾರಿಗಳ ಉಸ್ತುವಾರಿ ಯಲ್ಲಿ ಎನ್ನುವುದಕ್ಕಿಂತ ಸರ್ಪಗಾವಲಿನಲ್ಲಿ ಎನ್ನುವುದು ಹೆಚ್ಚು ಸೂಕ್ತ. ಇಷ್ಟೆಲ್ಲಾ ಕಟ್ಟೆಚ್ಚರಿಕೆ ಯನ್ನು ತೆಗೆದುಕೊಂಡ ಅಮೆರಿಕನ್ ಗೂಢಚರ್ಯೆ ಸಂಸ್ಥೆಗೆ ಚಳ್ಳೆಹಣ್ಣು ತಿನಿಸಿದ್ದು ಕೆ.ಜಿ.ಬಿ. ಅಧಿಕಾರಿಗಳ ಸಾಮರ್ಥ್ಯಕ್ಕೊಂದು ಸ್ಪಷ್ಟ ನಿದರ್ಶನ!

ಅಮೆರಿಕ ರಾಯಭಾರ ಕಚೇರಿಯ ಉದ್ಘಾಟ ನೆಯ ಸಂದರ್ಭದಲ್ಲಿ ರಷ್ಯಾದ ಅಧ್ಯಕ್ಷರು ಅಮೆರಿಕದ ರಾಯಭಾರಿಗೆ ಲೋಹದಲ್ಲಿ ಕಡೆದ ಸುಂದರವಾದ ಹದ್ದಿನ ಪ್ರತಿಕೃತಿಯನ್ನು ಕಾಣಿಕೆ ಯನ್ನಾಗಿ ನೀಡಿದರು – ರಾಯಭಾರಿಯವರು ಕುಳಿತುಕೊಳ್ಳುವ ಆಫೀಸ್ – ರೂಮಿನಲ್ಲಿ ಅದನ್ನಿರಿಸಬೇಕೆಂಬ ಪ್ರೀತಿಪೂರ್ವಕ ಒತ್ತಾಯ ದೊಡನೆ!

ಹದ್ದು ಅಮೆರಿಕದ ರಾಷ್ಟ್ರೀಯ ಲಾಂಛನ. ಸಿ.ಐ.ಎ. ಅಧಿಕಾರಿಗಳಿಗೆ ಉಭಯ ಸಂಕಟ. ರಷ್ಯಾ ಅಧ್ಯಕ್ಷರ ಕಾಣಿಕೆಯನ್ನು ಸ್ವೀಕರಿಸಬೇಕೋ ತಿರಸ್ಕರಿಸಬೇಕೋ? ಕೊನೆಗೆ ದೊಡ್ಡ ದೊಡ್ಡ ಅಮೆರಿಕನ್ ತಲೆಗಳೆಲ್ಲಾ ಸೇರಿ ವಿಚಾರ ವಿನಿ ಮಯ ನಡೆಸಿ ರಷ್ಯನರ ಪ್ರೀತಿಯ ಕಾಣಿಕೆಯನ್ನು ಸ್ವೀಕರಿಸತಕ್ಕದ್ದೆಂದು ನಿರ್ಧರಿಸಿದರು. ಆದರೆ ಅದನ್ನು ರಾಯಭಾರಿ ಕಚೇರಿಯಲ್ಲಿ ಸ್ಥಾಪಿಸುವ ಮುನ್ನ ಅಮೆರಿಕಕ್ಕೆ ತೆಗೆದುಕೊಂಡು ಹೋಗಿ ಉನ್ನತ ವಿಜ್ಞಾನ-ತಂತ್ರಜ್ಞರಿಂದ ಪರೀಕ್ಷೆಗೊಳ ಪಡಿಸಿ ಆ ಲೋಹದ ಹದ್ದು ನಿರಪಾಯಕಾರಿ ಯೆಂದು ಅವರೆಲ್ಲ ಘೋಷಿಸಿದ ಮೇಲೆ ಮತ್ತೆ ಸುರಕ್ಷಿತವಾಗಿ ಮಾಸ್ಕೋಗೆ ಮರಳಿಸಿದರು. ಕೆ.ಜಿ.ಬಿ.ಯವರ ಹಂಚಿಕೆಯಂತೆ ಮಹಡಿಯ ಮೇಲಿದ್ದ ರಾಯಭಾರಿ ಕಚೇರಿಯಲ್ಲಿ ರಾಯ ಭಾರಿಯ ಆಸನದ ಒಂದುಗಡೆಯ ಗೋಡೆಯ ಮೇಲೆ ಎತ್ತರದಲ್ಲಿ ಆ ಕಾಣಿಕೆಯ ಹದ್ದು ಸ್ಥಾಪನೆಗೊಂಡು ರಾರಾಜಿಸಿತು!

ಕಾಲಚಕ್ರ ಉರುಳಿತು. ಸುಮಾರು ಹದಿನೈದು ವರ್ಷಗಳು ಕಳೆದುಹೋದವು. ಎಲ್ಲ ಸರಕಾರಿ ಕಚೇರಿಗಳಲ್ಲಿ ನಡೆಯುವಂತೆ ಅಮೆರಿಕನ್ ರಾಯಭಾರಿ ಕಚೇರಿಯಲ್ಲೂ ಅಧಿಕಾರಿಗಳು ಬದಲಾದರು. ಹಾಗೆ ಹೊಸದಾಗಿ ಬಂದ ಅಧಿಕಾರಿಯೊಬ್ಬ ಒಂದು ದಿನ ಕಚೇರಿಯಲ್ಲಿ ಕೆಲಸವಿಲ್ಲದೆ ಕಿಟಕಿಯ ಬಳಿ ನಿಂತು ಹೊರಗೆ ನೋಡುತ್ತಿದ್ದಾಗ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ನಿಲ್ಲಿಸಲಾಗಿದ್ದ ಎರಡು ಕಾರುಗಳು ಅವನ ಗಮನ ಸೆಳೆದವು. ಗೂಢಚರ್ಯೆ ವಿದ್ಯಮಾನಗಳ ಅರಿವು ಸಾಕಷ್ಟಿದ್ದ ಅಧಿಕಾರಿಯ ಕುತೂಹಲ ಜಾಗೃತವಾಯಿತು. ಅಂದಿನಿಂದಲೇ ಆ ಅಧಿಕಾರಿ ಕೆಲವು ದಿನಗಳವರೆಗೆ ಆಸಕ್ತಿಯಿಂದ ಆ ಕಾರುಗಳು ಬರುವ ಮತ್ತು ಹೋಗುವ ಸಮಯವನ್ನು ಗಮನಿಸತೊಡಗಿದ. ಅವನ ಎಣಿಕೆ ಹುಸಿಯಾಗಲಿಲ್ಲ. ರಾಯಭಾರಿ ಕಚೇರಿ ಆರಂಭವಾಗುವ ಹೊತ್ತಿಗೆ ಸರಿಯಾಗಿ ಬಂದು ಅಲ್ಲಿ ನಿಲ್ಲುತ್ತಿದ್ದ ಕಾರುಗಳು ಅಲ್ಲಿಂದ ನಿರ್ಗಮಿಸು ತ್ತಿದ್ದುದು ರಾಯಭಾರ ಕಚೇರಿಗೆ ಬೀಗ ಹಾಕಿದ ಮೇಲೆಯೇ!

ಆ ಅಧಿಕಾರಿಯಿಂದ ಸುದ್ದಿ ಪಡೆದ ಸಿ.ಐ.ಎ. ಏಜೆಂಟರು ತಕ್ಷಣ ಚುರುಕಾದರು. ಆ ಎರಡೂ ಕಾರುಗಳು ಕೆ.ಜಿ.ಬಿ.ಗೆ ಸೇರಿದವೆಂಬ ಅಂಶವನ್ನು ಚಿಟಿಕೆ ಹೊಡೆಯುವಷ್ಟರಲ್ಲಿ ಪತ್ತೆ ಮಾಡಿ ಬಿಟ್ಟರು. ಮರುದಿನವೇ ರಾಯಭಾರಿ ಕಚೇರಿ ಯಲ್ಲಿದ್ದ ಆ ಲೋಹದ ಹದ್ದನ್ನು ಕೆಳಗಿಳಿಸಿ ಮತ್ತೆ ಅಮೆರಿಕಕ್ಕೆ ಒಯ್ದರು. ಈ ವೇಳೆಗಾಗಲೇ ಎಲೆಕ್ಟ್ರಾನಿಕ್ಸ್ ತಂತ್ರಜ್ಞಾನವನ್ನು ಕೈವಶಮಾಡಿ ಕೊಂಡಿದ್ದ ಅಮೆರಿಕನ್ ತಂತ್ರಜ್ಞರು ಆ ಲೋಹದ ಹದ್ದಿನ ತಲೆಯ ಭಾಗದಲ್ಲಿ ಎಲೆಕ್ಟ್ರಾನಿಕ್ಸ್ ಸಾಧನವನ್ನು ಅಳವಡಿಸಿದ್ದ ರಹಸ್ಯವನ್ನು ಪತ್ತೆ ಮಾಡಿದರು.

ಆದರೇನು? ಹದಿನೈದು ವರ್ಷಗಳ ಕಾಲ ಎಂಥೆಂಥ ರಹಸ್ಯಾತಿರಹಸ್ಯಮಯ ಮಾಹಿತಿ ಗಳನ್ನು ಕೆ.ಜಿ.ಬಿ. ಅಧಿಕಾರಿಗಳು ಆ ಹದ್ದಿನ ಮೂಲಕ ಪಡೆದಿದ್ದರೋ. ಆ ಕೆ.ಜಿ.ಬಿ.ಯವರಿಗೆ ಮಾತ್ರ ಗೊತ್ತಿರಲು ಸಾಧ್ಯ – ಆ ಸರ್ವಶಕ್ತ ನೊಬ್ಬನನ್ನುಳಿದು! ●

ಅತಂತ್ರ



ಚುಂಬನಕೂ ಮುನ್ನ
ದಂತಭಗ್ನದ ಭೀತಿಯಲಿ
ಮುದುಡಿ ಹೋಗಿದೆಯೊಂದು ಗಂಡುಜೀವ.

ಮಾಘಸ್ನಾನದ ಕೊರೆತ
ತಾಳಲಾರದೆ ಮೌನದಲೆ
ಚಪ್ಪರಿಸುತಿದೆ ಉಕ್ಕಿ
ಬರುವೆದೆಯ ನೋವ.

ಗತ್ತಿನಲಿ ನಗುನಗುತ
ಬಾಸಿಂಗ ಮೆರೆಯಿಸುವ
ಮಕಮಲ್ಲು ನೋಟವಿಂದು ಜಾರುತ್ತಲೆಲ್ಲೊ
ಅಂಕದ ಹುಂಜ ನೆಲಕಚ್ಚಿದೆ...

ಸುತ್ತಮುತ್ತೆಲ್ಲ ಸಂ
ಭ್ರಮದ ಕಂಪ ಸೂಸುತ್ತ
ಮಾಲೆಗಾರನ ಬಾಸಿಗವು ನಕ್ಕಾಗ
ಹೂವೊಂದು ನರಳುತ್ತ ಮೊಗ್ಗಾಗುತ್ತದೆ.

ಪೂರ್ವಾಪರವೊಂದನರಿಯೆನಾದರೂ ನಾ
ನೋಡಲಾರೆನು ನಿನ್ನ ಸ್ಥಿತಿ ವರಮಹಿಮ!
ವಲ್ಮೀಕದೊಳಗಿಂದ ನಿನ್ನ ನೀನೆಳೆದು
ಫಲಪುಷ್ಪಗಳನೊಮ್ಮೆ ಕಣ್ತೆರೆದು ನೋಡು.

ಮಾಲೆ ಬಾಡುವ ಮುನ್ನ
ಬೆನ್ನ ಹಿಂದಣ ಕಪ್ಪು ನುಂಗಿ
ನೊಣೆಯುವ ಮುನ್ನ ನಿನ್ನ...
ಕಲ್ಯಾಣ ರಾಗವ ಹಾಡು...!

● ಚೇತನ್ ಸೋಮೇಶ್ವರ

ಚಿತ್ರಕವನ ಸ್ಪರ್ಧೆ – 109

ಫಲಿತಾಂಶ

ಬಹುಮಾನಿತ ಚಿತ್ರಕವನ:

ಅತಂತ್ರ	● ಚೇತನ್ ಸೋಮೇಶ್ವರ

ಮೆಚ್ಚುಗೆ ಪಡೆದ ಕವನಗಳು:


ವಿರಮಿಸುವ ಮುನ್ನ	● ಪ್ರೇಮಾ ತಾಶೀಲದಾರ, ದಡ್ಡಿ
ಏನೀ ವಿಪರ್ಯಾಸ	● ಎಸ್. ವಸಂತಲಕ್ಷ್ಮಿ, ಚಿತ್ರದುರ್ಗ
ಬಂದಿ	● ಅನುಪಮಾ, ದೊಡ್ಡಬಳ್ಳಾಪುರ
ಕಲ್ಕಿಗಾಗಿ ಕಾದಿರುವ ಹೊತ್ತು	● ಆರ್. ಮೋಹನ್ ನಾಗಮ್ಮನವರ, ಹರ್ಲಾಪುರ

ಪತ್ತೇದಾರಿ ಕಥೆ

ಕರ್ನಲ್ ಮಕ್ಮಲ್‌ದಾಸನ ರಹಸ್ಯ

● ವಿ. ಜಿ. ಕೃಷ್ಣಮೂರ್ತಿ

25, 'ಕೃಷ್ಣಾಲಯ'
12ನೆ ಕ್ರಾಸ್, 16ನೆ ಮೈನ್,
ವಾಣಿವಿಲಾಸ ಮೊಹಲ್ಲಾ,
ಮೈಸೂರು – 570 002.



ಜಗತ್‌ಪ್ರತಾಪ 'ಡೈಲಿ ಎಕ್ಸ್‌ಪ್ರೆಸ್ ನ್ಯೂಸ್' ಪತ್ರಿಕೆಯ ಸಂಪಾದಕ. ಅಂದು ಸಂಜೆ ಅವನು ಪ್ರಮುಖ ರಾಜಕೀಯ ಕಾಲಂಗೆ ಒದಗಿಸಬೇಕಾಗಿದ್ದ ಲೇಖನವನ್ನು ತನ್ನ ಸೆಕ್ರೆಟರಿ ರಾಧಾಪ್ಯಾರಿಗೆ ಹೇಳಿ ಬರೆಸುತ್ತಿದ್ದ. ಅವಳು ಷಾರ್ಟ್‌ಹ್ಯಾಂಡ್ ಬರಹವನ್ನು ಟೈಪು ಮಾಡಿ ಅದನ್ನು ಕೂಡಲೆ ಉಪಸಂಪಾದಕ ರಾಜಗೋಪಾಲನಿಗೆ ಕೊಡಬೇಕಾಗಿತ್ತು. ರಾತ್ರಿಯ ಷಿಫ್ಟಿಗೆ ಬರಬೇಕಾಗಿದ್ದ ಮಿಷನ್ ಮ್ಯಾನ್ ಜೋಸೆಫ್ ಪಿಂಟೊ ಒಂಬತ್ತು ಘಂಟೆಯಾಗಿದ್ದರೂ ಬಂದಿರಲಿಲ್ಲ. ಅವನಿಗಾಗಿ ಕಾಯಬೇಕಾದ ಪ್ರಸಂಗ ಒದಗಿತೆಂದು ಜಗತ್‌ಪ್ರತಾಪ ಒಂದಷ್ಟು ಬಿಸಿಯಾಗಿದ್ದ. ಸ್ವಲ್ಪ ಹೊತ್ತಿನಲ್ಲೆ ಗೂನು ಬೆನ್ನಿನ ಜೋಸೆಫ್ ಪಿಂಟೊ ಬಾಗಿಲಲ್ಲಿ ಕಾಣಿಸಿಕೊಂಡು ಹಲ್ಲುಕಿರಿದ. ಜಗತ್‌ಪ್ರತಾಪ ಕೇಳಿದ:

"ಏಕೆ ತಡ ಪಿಂಟೊ? ಲೇಟ್ ಲತೀಫ್‌ತನವನ್ನು ಇನ್ನೂ ನೀನು ಬಿಟ್ಟಿಲ್ಲ. ಕುಡಿಯುವುದನ್ನು ಸ್ವಲ್ಪ ಕಡಿಮೆ ಮಾಡು."

"ಇಂದು ಕುಡಿದಿಲ್ಲ ಸಾರ್. ಬಹಳ ತುರುತ್ತಾದ ಕೆಲಸಕ್ಕೆ ಹೋಗಿದ್ದೆ."

"ಏನು ಅಂಥ ತುರ್ತು ಕೆಲಸ?"

"ಒಬ್ಬ ಆಫೀಸರನ ಬಂಗಲೆಯಲ್ಲಿ ಕೆಲವು ಪೆಟ್ಟಿಗೆ, ಅಲ್ಮಾರಗಳ ಬೀಗಗಳನ್ನು ಒಡೆಯಲು ನನ್ನನ್ನು ತುರುತ್ತಾಗಿ ಕರೆಸಿದ್ದರು."

ಜೋಸೆಫ್ ಪಿಂಟೊ ಪ್ರೆಸ್ಸಿನ ಮುದ್ರಣ ಯಂತ್ರವನ್ನು ನಡೆಸುವುದೇ ಅಲ್ಲದೆ ಒಬ್ಬ ಒಳ್ಳೆಯ ಮೆಕ್ಯಾನಿಕ್ ಸಹ ಆಗಿದ್ದ. ಬೀಗ ತಯಾರಿಕೆ ಮತ್ತು ಬೀಗ ಬಿಚ್ಚುವುದರಲ್ಲಿ ಪಳಗಿದವ. ಅವನ ಹೇಳಿಕೆ ಜಗತ್‌ಪ್ರತಾಪನ ಕುತೂಹಲವನ್ನು ಕೆರಳಿಸಿತು. ಅವನು ಮತ್ತೆ ಪ್ರಶ್ನಿಸಿದ:

"ಯಾರ ಬಂಗಲೆ? ಬೀಗ ಒಡೆಯಲು ಕಾರಣ?"

"ಹೇಳುತ್ತೇನೆ ಕೇಳಿ ಸಾರ್. ಅದು ಕರ್ನಲ್ ಮಕ್ಮಲ್‌ದಾಸ್ ಎಂಬ ಒಬ್ಬ ಮಿಲಿಟರಿ ಆಫೀಸರನ ಬಂಗಲೆ. ಈಗ ಅವನು ಆ ಬಂಗಲೆಯಲ್ಲಿ ಸತ್ತು ಬಿದ್ದಿದ್ದಾನೆ. ಅಲ್ಲಿ ಗುಂಪು ಸೇರಿರುವ ಮಿಲಿಟರಿ ಅಧಿಕಾರಿಗಳಲ್ಲಿ ಮುಖ್ಯನಾದವನು ಜನರಲ್ ಭಾಸ್ಕರ್ ಜೋಷಿ. ಬಂಗಲೆಯ ತಲಬಾಗಿಲ ಬೀಗವನ್ನು ಮುರಿಯುವಂತೆ ನನಗೆ ಅಪ್ಪಣೆಯಾಯಿತು, ಮುರಿದೆ. ತರುವಾಯ ಬಂಗಲೆಯ ಒಳಗಡೆಯಲ್ಲಿದ್ದ ಎಲ್ಲ ಅಲ್ಮಾರ ಹಾಗೂ ಪೆಟ್ಟಿಗೆಗಳ ಬೀಗಗಳನ್ನು ಮುರಿಯಬೇಕಾಯಿತು. ಒಟ್ಟಿನಲ್ಲಿ ಬಂಗಲೆಯಲ್ಲಿ ಯಾವ ಯಾವುದಕ್ಕೆ ಬೀಗ ಹಾಕಿತ್ತೊ ಆ ಬೀಗಗಳನ್ನು ಬಿಚ್ಚುವ ಕೆಲಸ ನನಗಾಯಿತು."

"ಕಂಡು ಬಂದದ್ದೇನು?"

"ಹಾಜರಿದ್ದ ಜನರಲ್ ಭಾಸ್ಕರ ಜೋಷಿ ಖುದ್ದು ನಿಂತು ತಲಾಷೆ ಮಾಡಿದರು. ಸಿಕ್ಕಿದ ವಸ್ತುಗಳಲ್ಲಿ ಕಾಗದ ಪತ್ರಗಳೆ ಹೆಚ್ಚು. ಅವುಗಳಲ್ಲಿ ಕೆಲವು ಉರ್ದು ಭಾಷೆಯಲ್ಲಿದ್ದವು, ಕೆಲವು ಇಂಗ್ಲಿಷ್‌ನಲ್ಲಿದ್ದವು. ಕೆಲವು ಫೋಟೋಗಳು ಮತ್ತು ನಕ್ಷೆಗಳಿದ್ದವು. ಸುದ್ದಿ ಸಮಾಚಾರಗಳನ್ನು ಕಳುಹಿಸುವ ಪ್ರಸಾರ ಯಂತ್ರವೂ ಇತ್ತು.

'ಕೋಹಿನೂರ್ ನಾಟಕ ಮಂಡಳಿ' ವಿಳಾಸದಿಂದ ಬಂದಿದ್ದ ಲಕೋಟೆಗಳಲ್ಲಿ ಭಾರೀ ಮೊಬಲಗಿನ ಹಣವಿತ್ತು. ಆದರೆ, ಪತ್ರಗಳಾಗಲಿ, ಸೂಚನೆಗಳಾಗಲಿ, ಸಂಕೇತಗಳಾಗಲಿ ಇರಲಿಲ್ಲ.



ಜೋಸೆಫ್ ಪಿಂಟೊ ತಂದ ಸುದ್ದಿ ತನ್ನ ಪತ್ರಿಕೆಗೆ ಸುಗ್ಗಿಯ ಸುದ್ದಿಯೆಂದು ಸಂಪಾದಕ ಜಗತ್‌ಪ್ರತಾಪ ಭಾವಿಸಿದ. ಆಗ 1965. ಭಾರತ–ಪಾಕಿಸ್ತಾನ ಯುದ್ಧ ನಡೆಯುತ್ತಿತ್ತು. ನಾಡಿನ ರಕ್ಷಣೆಗೆ ಹಿತವಾದ ಸುದ್ದಿಗೆ ಸೆನ್‌ಸಾರ್ ತಡೆ ಬಾರದೆಂದು ಅವನು ಸುದ್ದಿ ಸಂಗ್ರಹಕ್ಕೆ ಹೊರಟ. ಅವನಿಗೆ ದೊರೆತ ವಿಷಯ ವಿಸ್ಮಯ ಕರವಾಗಿತ್ತು.

ಮಕ್ಮಲ್‌ದಾಸ್ ಒಬ್ಬ ಚತುರ. 1939ರಲ್ಲಿ ಅವನು ಬ್ರಿಟಿಷ್ ಸೈನ್ಯಕ್ಕೆ ಸೇರಿ ರಾವಲ್‌ಪಿಂಡಿ ಯಲ್ಲಿ ಕೆಲಸಮಾಡುತ್ತಿದ್ದ. ಭಾರತ ವಿಭಜನೆ ಯಾದಾಗ ಭಾರತಕ್ಕೆ ತನ್ನ ಸೇವೆಯನ್ನು 'ಆಪ್ಟ್' ಮಾಡಿಕೊಂಡ. ಕೆಲವು ವರ್ಷಗಳ ತರುವಾಯ ಕರ್ನಲ್ ಪದವಿಗೆ ಬಡ್ತಿ ಪಡೆದ. ಅವನ ದಕ್ಷತೆ ಯನ್ನು ನೋಡಿ ಅವನನ್ನು ಮಿಲಿಟರಿ ರಹಸ್ಯಚಾರ ಪಡೆಯ ಮುಖಂಡನನ್ನಾಗಿ ನೇಮಿಸಿದರು. ವಿದೇಶಿ ಗೂಢಚಾರರನ್ನು, ವಿದೇಶಿ ರಹಸ್ಯ ಗಳನ್ನು ಕಂಡು ಹಿಡಿಯುವುದರಲ್ಲಿ ತನ್ನ ಬುದ್ಧಿ ವಂತಿಕೆಯನ್ನು ಅವನು ತೋರಿದ. ಕೊನೆಗೆ ಸೈನಿಕ ಕಚೇರಿಯ ಮುಖ್ಯಾಧಿಕಾರಿಯಾಗಿ ಸಹ ಕೆಲಸ ಮಾಡಿದ. ಆ ಅಧಿಕಾರ ಸ್ಥಾನದಲ್ಲಿ ಮುಖ್ಯ ಮಿಲಿಟರಿ ಕಾಗದ ಪತ್ರಗಳನ್ನು ನೋಡುವ ಹಾಗೂ ರವಾನೆ ಮಾಡುವ ಅಧಿಕಾರ ಅವನಿಗಿತ್ತು.

ಮಕ್ಮಲ್‌ದಾಸ ಮಿಲಿಟರಿ ಕಚೇರಿಯ ಮುಖ್ಯಾಧಿಕಾರಿಯಾಗಿ ಹೋದ ಮೇಲೆ ಅವನ ಸ್ಥಾನಕ್ಕೆ ಬಡ್ತಿ ಪಡೆದ ಕರ್ನಲ್ ಮೋಹನ್ ಕಾಮತ್, ತಾನು ಸಹ ಮಕ್ಮಲ್‌ದಾಸನಂತೆ ಹೆಸರು ಪಡೆಯಬೇಕೆಂಬ ಉತ್ಸಾಹದಿಂದ ಅವನ ಗೂಢಚಾರಿಕೆ ವಿಧಾನಗಳನ್ನು ಅನುಸರಿಸಿದ್ದ ಲ್ಲದೆ, "ಅಂಚೆ ಶೋಧನೆ" ಎಂಬ ಕಾಗದ ಪತ್ರಗಳನ್ನು ಸೆನ್‌ಸಾರ್ ಮಾಡುವ ವಿಭಾಗ ವನ್ನು ತೆರೆದ. ಈ ಸೆನ್‌ಸಾರ್ ಪದ್ಧತಿಯಲ್ಲಿ ನಾಡಿನ ಗಡಿಯೊಳಕ್ಕೆ ಬರುವ ಕಾಗದ ಪತ್ರ ಗಳನ್ನು ತೆರೆದು ನೋಡುವ ಅಧಿಕಾರ ಮಿಲಿಟರಿ ಯವರಿಗೆ ಇತ್ತು. ಸೈನಿಕರೆ ಈ ಅಂಚೆ ವಿಭಾಗದ ನೌಕರರು. ಈ ಸೆನ್‌ಸಾರ್ ಪದ್ಧತಿ ಬಂದ ಎರಡು ತಿಂಗಳೊಳಗೆ ಗಡಿಯಿಂದಾಚೆಯಿಂದ ಬಂದ ಎರಡು ಕಂದು ಬಣ್ಣದ ಲಕೋಟೆಗಳು ಮಿಲಿಟರಿ ಇಲಾಖೆಯ ಆಸಕ್ತಿಯನ್ನು ಕೆರಳಿಸಿದವು. ಆ ಲಕೋಟೆಗಳು ಲಾಹೋರ್ ಪಟ್ಟಣದ ಅಂಚೆ ಮುದ್ರೆಯನ್ನು ಪಡೆದು ರಾಜಧಾನಿಯ "ಕೋಹಿನೂರ್ ನಾಟಕ ಮಂಡಲಿ" ಎಂಬ ಸಂಸ್ಥೆಯ ವಿಳಾಸವನ್ನು ಹೊತ್ತಿತ್ತು. ಎರಡು ಲಕೋಟೆಗಳಲ್ಲೂ ಭಾರಿ ಮೊಬಲಗಿನ ಹಣವಿತ್ತು. ಆದರೆ ಪತ್ರಗಳಾಗಲಿ, ಸೂಚನೆ ಗಳಾಗಲಿ, ಸಂಕೇತಗಳಾಗಲಿ ಲಕೋಟೆಗಳಲ್ಲಿ ಇರಲಿಲ್ಲ.

ಕರ್ನಲ್ ಮೋಹನ್ ಕಾಮತ್ ಕೂಡಲೆ ಕ್ರಮ ಕೈಕೊಂಡ. ಲಕೋಟೆಗಳು ಹೊರ ದೇಶದ ಗೂಢಚಾರರಿಂದ ಆತಂಕವಾದಿಗಳಿಗೆ ಇಲ್ಲವೆ ಸ್ಥಳೀಯ ಗೂಢಚಾರರಿಗೆ ಬಂದವುಗಳಾಗಿರ ಬೇಕೆಂಬ ಶಂಕೆ ಅವನಿಗೆ. ಅಂಚೆಯ ಕಚೇರಿಗೂ ಸಮೀಪದ ಪೋಲೀಸ್ ಠಾಣೆಗೂ ಎಲೆಕ್ಟ್ರಾನಿಕ್ ಪ್ರಸಾರ ಯಂತ್ರವನ್ನು ಜೋಡಿಸಿ, ಪೋಸ್ಟಾಫೀಸಿನ ಮಿಲಿಟರಿ ನೌಕರ ಗುಂಡಿಯನ್ನು ಅದುಮಿದ ಕೂಡಲೆ ಪೋಲೀಸ್ ಠಾಣೆಯ ಪತ್ತೇದಾರರು 'ಕೋಹಿನೂರ್ ನಾಟಕ ಮಂಡಲಿ' ವಿಳಾಸಕ್ಕೆ ಬರುವ ಪತ್ರಗಳನ್ನು ಪಡೆಯಲು ಬರುವವರನ್ನು ಹಿಡಿಯಲು ಪೋಸ್ಟಾಫೀಸಿಗೆ ಕೂಡಲೆ ಧಾವಿಸು ವಂತೆ ವ್ಯವಸ್ಥೆ ಮಾಡಿದ. ಪೋಸ್ಟಾಫೀಸಿನಲ್ಲಿ ಪತ್ತೇದಾರರೆಲ್ಲ ಮಿಲಿಟರಿ ಸಮವಸ್ತ್ರ ಧರಿಸದೆ ಸಾಮಾನ್ಯ ಉಡುಪಿನಲ್ಲೆ ಕೆಲಸ ಮಾಡುವಂತೆ ನೋಡಿಕೊಳ್ಳಲಾಯಿತು.

ಮತ್ತೆ ಎರಡು ವಾರಗಳು ಕಳೆದವು. ಲಕೋಟೆ ಗಳನ್ನು ಪಡೆಯಲು ಯಾರೂ ಬರಲಿಲ್ಲ. ಲಕೋಟೆಯ ಹಣ ಪೋಸ್ಟಾಫೀಸಿನಲ್ಲೆ ಉಳಿಯಿತು. ಕೊನೆಗೆ ಜುಲೈ 26ರಂದು ಪೋಲೀಸ್ ಠಾಣೆಯಲ್ಲಿ ಎಲೆಕ್ಟ್ರಾನಿಕ್ ಗಂಟೆ ಬಡಿದುಕೊಳ್ಳಹತ್ತಿತು. ಅಲ್ಲಿದ್ದ ಸಂಜೀವ ರಾವ್ ಮತ್ತು ಸೈಯದ್ ಖಾನ್ ಎಂಬ ಇಬ್ಬರು ಪತ್ತೇದಾರರು ಅಂಚೆ ಕಚೇರಿಗೆ ಓಡಿ ಬಂದರು. ಆದರೆ ಅವರು ಬರುವುದರೊಳಗೆ ಲಕೋಟೆ ಗಳನ್ನು ಪಡೆಯಲು ಬಂದವನು ಅವುಗಳನ್ನು ಕೌಂಟರಿನಿಂದ ಪಡೆದು ಸಮೀಪದ ಟ್ಯಾಕ್ಸಿ ಸ್ಟ್ಯಾಂಡಿನತ್ತ ಸಾಗಿ ಟ್ಯಾಕ್ಸಿಯೊಂದರಲ್ಲಿ ಕುಳಿತು ಮರೆಯಾಗಿದ್ದ. ಪತ್ತೇದಾರ ಸಂಜೀವರಾವ್ ಟ್ಯಾಕ್ಸಿ ಚಲಿಸುತ್ತಿದ್ದಂತೆಯೇ ಅದರ ನಂಬರನ್ನು ಗಮನಿಸಿದ್ದ. 20 ನಿಮಿಷಗಳ ತರುವಾಯ ಅದೇ ಟ್ಯಾಕ್ಸಿ ಪೋಸ್ಟಾಫೀಸ್ ಬಳಿಯ ನಿಲ್ದಾಣಕ್ಕೆ ಬಂದು ಗಿರಾಕಿಗಳಿಗಾಗಿ ಕಾದಿರಲು, ಪತ್ತೇದಾರ

ರಿಬ್ಬರೂ ಅಲ್ಲಿಗೆ ಹೋಗಿ ಟ್ಯಾಕ್ಸಿ ಡ್ರೈವರನನ್ನು ವಿಚಾರಿಸಿದರು:

"ಈಗ ತಾನೆ ನೀನು ಒಬ್ಬ ಪ್ರಯಾಣಿಕನನ್ನು ಬಿಟ್ಟು ಬಂದಿರುವೆ. ಅವನನ್ನು ಎಲ್ಲಿ ಬಿಟ್ಟು ಬಂದೆ ಹೇಳು."

ಪತ್ತೇದಾರ ಸೈಯದ್ ಖಾನ್ ತೋರಿಸಿದ ಸಿ.ಐ.ಡಿ. ಬಿಲ್ಲೆಯನ್ನು ನೋಡಿ ಗಾಬರಿಗೊಂಡ ಡ್ರೈವರ್ ಹೇಳಿದ –

"ಹೋಟೇಲ್ ಪಿರಮಿಡ್."

"ಹಾಗಾದರೆ ನಮ್ಮನ್ನು ಈ ಹೋಟೇಲಿನಲ್ಲಿ ಬಿಡು – ತ್ವರಿತ!"

ಟ್ಯಾಕ್ಸಿ ವೇಗವಾಗಿ ಹೊರಟಿತು. ಟ್ಯಾಕ್ಸಿಯಲ್ಲಿ ಸೈಯದ್ ಖಾನನಿಗೆ ಚರ್ಮದ ಸಣ್ಣ ಚೀಲವೊಂದು ಕಂಡಿತು. ಅದು ಒಂಬತ್ತು ಅಂಗುಲದ ಚೂರಿಯನ್ನಿಡುವ ಚರ್ಮದ ಕವಚವಾಗಿತ್ತು. ಸೈಯದ್ ಖಾನ್ ಅದನ್ನು ತನ್ನ ಕಿಸೆಯಲ್ಲಿರಿಸಿಕೊಂಡ.

ಟ್ಯಾಕ್ಸಿ ಹೋಟೇಲ್ ಪಿರಿಮಿಡ್‌ನ ಮುಖ್ಯ ದ್ವಾರದ ಬಳಿ ನಿಂತಿತು. ಪತ್ತೇದಾರರಿಬ್ಬರೂ ಇಳಿದು ಹೋಟೇಲಿನ ಹೊರಗೇಟಿನಲ್ಲಿ ಸಿಗರೇಟ್ ಮಾರುತ್ತಿದ್ದ ಅಂಗಡಿಯವನನ್ನು ವಿಚಾರಿಸಿದರು. ಅವನು ತುಸು ಆಲೋಚಿಸಿ ಹೇಳಿದ:

"ಹೌದು ಸಾರ್! ಅರ್ಧ ಘಂಟೆಯ ಹಿಂದೆ ಕುಡಿದು ಮತ್ತನಾಗಿದ್ದ ಒಬ್ಬ ವ್ಯಕ್ತಿ ಇಲ್ಲಿ ನಿಂತಿದ್ದ ಟ್ಯಾಕ್ಸಿಯಲ್ಲಿ ಕುಳಿತು ಹೋದ. ಬಾಬಾ ಸಾಹೇಬ್ ರಸ್ತೆಯ ಈಸ್ಟ್ ಅ್ಯಂಡ್ ವೆಸ್ಟ್ ಫೈವ್ ಸ್ಟಾರ್ ಹೋಟೇಲಿಗೆ ಹೋಗುವಂತೆ ಆತ ಡ್ರೈವರ್‌ನಿಗೆ ಹೇಳುತ್ತಿದ್ದುದು ನನಗೆ ಕೇಳಿಸಿತು."

ಪತ್ತೇದಾರರಿಗೆ ತಮ್ಮ ಓಡಾಟ ನಿಷ್ಪ್ರಯೋಜಕವೆನಿಸಿತು. ತಮಗಿಂತಲೂ ತಾವು ಹಿಡಿಯಲು ಹೊರಟ ಅಪರಾಧಿ ಬಹಳ ಚುರುಕೆಂಬ ಅರಿವು ಅವರಿಗಾಯಿತು. ಆದರೆ ಧೈರ್ಯಗೆಡದೆ ತಮ್ಮ ತನಿಖೆಯನ್ನು ಮುಂದುವರಿಸಿದರು. ಅವರು ಈಸ್ಟ್ ಅ್ಯಂಡ್ ವೆಸ್ಟ್ ಬೃಹತ್ ಫೈವ್ ಸ್ಟಾರ್ ಹೋಟೇಲಿಗೆ ಹೋದರು. ಆ ಹೋಟೇಲಿನ ಜನಸಂದಣಿ, ಎಂಟುನೂರಕ್ಕೂ ಹೆಚ್ಚಿನ ಕೋಣೆಗಳು, ಸದಾ ಅತ್ತಿತ್ತ ಓಡಾಡುವ ಜನ – ಇವುಗಳಲ್ಲಿ ಅಪರಾಧಿಯನ್ನು ಹುಡುಕುವುದು ಹೇಗೆ? ಅವರಿಬ್ಬರೂ ಗೇಟಿನ ಬಳಿ ನಿಂತಿದ್ದ ವಾಚ್‌ಮ್ಯಾನ್ ತಂಗರಾಜನನ್ನು ಪ್ರಶ್ನಿಸಿದರು:

"ಈ ಅರ್ಧ ಘಂಟೆಯಲ್ಲಿ ಈ ಹೋಟೇಲಿನೊಳಕ್ಕೆ ಎಷ್ಟು ಮಂದಿ ಹೋಗಿರಬಹುದು?"


ವಾಚ್‌ಮ್ಯಾನ್ ತಂಗರಾಜ ತನ್ನ ದಿನನಿತ್ಯದ ಕೆಲಸದಲ್ಲಿ ಇಂಥ ಪ್ರಶ್ನೆಯನ್ನು ನಿರೀಕ್ಷಿಸಿದವನಲ್ಲ. ಸ್ವಲ್ಪ ಸ್ತಬ್ಧನಾಗಿ ಬಳಿಕ ಎಚ್ಚೆತ್ತು ಹೇಳಿದ:


"ನಾಲ್ಕು ಮಂದಿಗೆ ಹೆಚ್ಚಿಲ್ಲ ಸಾರ್. ಈಗ ಗಿರಾಕಿಗಳೆಲ್ಲ ಹೊರಡುವ ಕಾಲ."

"ಆ ನಾಲ್ಕು ಮಂದಿಯನ್ನು ಗುರುತಿಸಬಲ್ಲೆಯಾ?"

"ಅವರಲ್ಲಿ ಮೂವರು ಇಲ್ಲೆ ಒಂದು ತಿಂಗಳಿಂದ ಇದ್ದಾರೆ. ನಾಲ್ಕನೆಯ ವ್ಯಕ್ತಿ ನಿನ್ನೆಯಿಂದ 689ನೆ ನಂಬರಿನ ರೂಂನಲ್ಲಿ ತಂಗಿದ್ದಾನೆ. ಎತ್ತರದ ವ್ಯಕ್ತಿ."

ಪತ್ತೇದಾರ ಸೈಯದ್ ಖಾನ್ ತನ್ನ ಜೇಬಿನಲ್ಲಿದ್ದ ಚೂರಿಯ ಚೀಲವನ್ನು ತೆಗೆದು, "ಇದನ್ನು ತೆಗೆದುಕೋ. ಆ ನಾಲ್ವರು ವ್ಯಕ್ತಿಗಳಿಗೂ ಅವರು ಹೊರಗೆ ಹೊರಡುವಾಗ ಇದನ್ನು ತೋರಿಸು. ಇದನ್ನು ನೀವೇನಾದರೂ ಕಳೆದುಕೊಂಡಿರುವಿರಾ ಎಂದು ಕೇಳು. ಅದು ನಿನಗೆ ಗೇಟಿನ ಬಳಿ ಸಿಕ್ಕಿತೆಂದು ಹೇಳು, ನಾವು ಕೊಟ್ಟೆವೆಂದು ಮಾತ್ರ ಹೇಳಬೇಡ, ಜೋಕೆ!"





— ಹೀಗೆಂದು ಹೇಳಿ ಸೈಯದ್ ಖಾನ್ ತಾನು ಯಾರೆಂಬುದನ್ನು ತಿಳಿಸಿದ. ತಂಗರಾಜನಿಗೆ ಗಾಬರಿಯಾಗಿ ಹೇಳಿದಂತೆ ಮಾಡುವೆನೆಂದು ಭರವಸೆ ನೀಡಿದ.

ಪತ್ತೇದಾರರಿಬ್ಬರೂ ದೀಪ ಮಬ್ಬಾಗಿ ಉರಿಯುತ್ತಿದ್ದ ಹೊಟೇಲಿನ ವರಾಂಡದ ಮೂಲೆಯೊಂದರಲ್ಲಿದ್ದ ಸೋಫಾದಲ್ಲಿ ಕುಳಿತು ಮೇಜಿನ ಮೇಲಿದ್ದ ಪತ್ರಿಕೆಗಳನ್ನು ತೆಗೆದು ಓದುತ್ತಿರುವಂತೆ ನಟಿಸುತ್ತಿದ್ದರು. ಆದರೆ ಅವರ ಸೂಕ್ಷ್ಮ ನೋಟ ವರಾಂಡದಲ್ಲಿ ಚಲಿಸುವ ವ್ಯಕ್ತಿಗಳ ಮೇಲೆ ಕೇಂದ್ರೀಕರಿಸಿತ್ತು. ಅವರು ಅರ್ಧ ಗಂಟೆ ಹಾಗೆ ಕುಳಿತಿದ್ದಿರಬೇಕು. ಹೊಟೇಲಿನ ವರಾಂಡಕ್ಕೆ ಪೂರ್ವಭಾಗದಲ್ಲಿದ್ದ ಮೆಟ್ಟಿಲುಗಳಿಂದ ಸೂಟು ಧರಿಸಿದ್ದ ಒಬ್ಬ ಎತ್ತರವಾದ ವ್ಯಕ್ತಿ ಇಳಿದು ಬಂದ. ಅವನ ಮುಖ ಮೀಸೆಯಿಂದ ಅರ್ಧ ತುಂಬಿಹೋಗಿತ್ತು. ಅವನ ದಾಡಿ ನೀಳವಾಗಿ ಬೆಳೆದು ಛಾವಣಿಯಲ್ಲಿ ತಿರುಗುತ್ತಿದ್ದ ಫ್ಯಾನ್ ಗಾಳಿಯ ರಭಸಕ್ಕೆ ಹಾರುತ್ತಿತ್ತು. ಅವನು ಮೆಟ್ಟಿಲಿಂದ ಇಳಿದು ರಿಸೆಪ್ಶನ್ ಕೌಂಟರನ್ನು ಹಾದುಬಂದ ಕೂಡಲೆ ದ್ವಾರದ ಬಳಿ ನಿಂತಿದ್ದ ತಂಗರಾಜ ಅವನನ್ನು ತಡೆದು —

"ಕ್ಷಮಿಸಿ ಸಾರ್! ನಿಮ್ಮ ಜೇಬಿನಿಂದ ಆಕಸ್ಮಾತ್ ಈ ಚೂರಿಯ ಚೀಲ ಬಿದ್ದುಹೋಗಿರಬೇಕು ನೋಡಿ," ಎಂದು ಹೇಳಿದ.

ಎತ್ತರದ ವ್ಯಕ್ತಿ ಚೂರಿಯ ಚೀಲವನ್ನು ನೋಡಿದ. ಭೀತಿ ಕ್ಷಣ ಮಾತ್ರ ಅವನ ಮುಖದಲ್ಲಿ ಕಾಣಿಸಿಕೊಂಡು ಮರೆಯಾಯಿತು. ಅವನು ಉತ್ತರವಿತ್ತ:

"ಹೌದು, ಚೂರಿಯ ಚೀಲ ನನ್ನದು. ನನಗೆ ತಿಳಿಯದೆಯೇ ಅದು ಬಿದ್ದುಹೋಗಿರಬೇಕು. ಅದನ್ನು ಇತ್ತ ತಾ."

ಚೂರಿಯ ಚೀಲವನ್ನು ಪಡೆದುಕೊಂಡ ಎತ್ತರವಾದ ವ್ಯಕ್ತಿ ತಾನು ಅದನ್ನು ಎಲ್ಲಿ ಕಳೆದುಕೊಂಡಿರಬೇಕೆಂದು ಯೋಚಿಸಿದ. ಹೌದು, ಪೋಸ್ಟಾಫೀಸಿನಲ್ಲಿ ತನ್ನ ವಶವಾದ ಲಕೋಟೆಗಳನ್ನು ಟ್ಯಾಕ್ಸಿಯಲ್ಲಿ ಬಿಚ್ಚಲು ಚೂರಿಯನ್ನು ತೆಗೆದಾಗ ಅದರ ಕವಚ ಟ್ಯಾಕ್ಸಿಯಲ್ಲೆ ತನ್ನ ಆತುರ-ಅವಸರಗಳಲ್ಲಿ ಬಿದ್ದುಹೋಗಿರಬೇಕೆಂದು ಅವನು ಗ್ರಹಿಸಿದ. ಗಾಭರಿಯಿಂದ ಅವನು ಸುತ್ತಲೂ ನೋಡಿದ. ವರಾಂಡದಲ್ಲಿ ಪತ್ರಿಕೆಗಳನ್ನು ಓದುತ್ತಿದ್ದ ಇಬ್ಬರು ತನ್ನ ಮಾತುಗಳನ್ನು ಕೇಳಿಸಿಕೊಂಡಿರಲಾರರೆಂದು ಅವನು ಭಾವಿಸಿದ. ಅವನು ತ್ವರಿತವಾಗಿ ಹೊಟೇಲಿನ ಗೇಟನ್ನು ದಾಟಿ ಬೀದಿಯ ಕಡೆ ನಡೆದ.

ಅವನ ಮಾತುಗಳನ್ನು ಕೇಳಿಸಿಕೊಂಡ ಇಬ್ಬರು ಪತ್ತೇದಾರರಲ್ಲಿ ಸಂಜೀವ ರಾವ್ ತ್ವರಿತವಾಗಿ ಎದ್ದು ಹೊಟೇಲಿನ ರಿಸೆಪ್ಶನ್ ಕೌಂಟರಿನ ಟೆಲಿಫೋನ್ ಮೂಲಕ ಮಾತನಾಡಿದ:

"ಕೋಹಿನೂರ್ ನಾಟಕ ಮಂಡಲಿ ಸಾಂಕೇತಿಕ ವಿಳಾಸದವನೇ ಕರ್ನಲ್ ಮಕ್ಮಲ್‌ದಾಸ! ಅವರು ಈಸ್ಟ್ ಅ್ಯಂಡ್ ವೆಸ್ಟ್ ಹೊಟೇಲಿನಲ್ಲಿ ಕೆಲವು ಆಗಂತುಕರೊಡನೆ ವ್ಯವಹರಿಸುತ್ತಿದ್ದಾನೆ. ಈಗ ತಾನೇ ಹೊಟೇಲನ್ನು ಬಿಟ್ಟು ಹೊರಟಿದ್ದಾನೆ."

ಟೆಲಿಫೋನ್ ಮೂಲಕ ಈ ವಾರ್ತೆಯನ್ನು ಕೇಳಿದ ಕರ್ನಲ್ ಮೋಹನ ಕಾಮತ್ ವಿಸ್ಮಿತನಾದ. ತಾನು ಯಾವನನ್ನು ಆದರ್ಶ ವ್ಯಕ್ತಿಯೆಂದು ಭಾವಿಸಿ, ಅವನ ವಿಧಾನಗಳನ್ನು ಮಿಲಿಟರಿ ಕಾರ್ಯಕ್ರಮಗಳಲ್ಲಿ ರೂಢಿಗೆ ತಂದಿದ್ದನೋ ಆ ಆದರ್ಶ ವ್ಯಕ್ತಿಯೇ ದೇಶದ್ರೋಹಿ!

ಮೋಹನ ಕಾಮತ್ ತಕ್ಷಣ ಅಂಚೆ ಕಚೇರಿಗೆ ಹೋಗಿ ಸೆನ್ಸಾರ್ ಮಾಡಿದ ಪತ್ರಗಳನ್ನು ಪಡೆಯುವವರು ಭರ್ತಿ ಮಾಡಬೇಕಾಗಿದ್ದ ಅರ್ಜಿ

ನಮೂನೆಗಳನ್ನು ಪರೀಕ್ಷಿಸಿದ. ಆ ಸಂಜೆ "ಕೋಹಿನೂರ್ ನಾಟಕ ಮಂಡಲಿ" ವಿಳಾಸಕ್ಕೆ ಬಂದ ಎರಡು ಲಕೋಟೆಗಳನ್ನು ಪಡೆಯಲು ಬಂದ ವ್ಯಕ್ತಿ ಭರ್ತಿ ಮಾಡಿದ್ದ ನಮೂನೆಯನ್ನು ತನ್ನ ಆಫೀಸಿಗೆ ತೆಗೆದುಕೊಂಡು ಹೋಗಿ, ನೌಕರಿಯಲ್ಲಿ ಬಡ್ತಿ ಪಡೆದು ಹೋದಾಗ ಕರ್ನಲ್ ಮಕ್ಮಲ್‌ದಾಸ್ ಕಾಗದ ಪತ್ರಗಳ ಮೇಲೆ ಬರೆದ ಕೈಬರಹದೊಂದಿಗೆ ಹೋಲಿಸಿ ನೋಡಿದ. ಪೋಸ್ಟಾಫೀಸಿನ ನಮೂನೆಯ ಮೇಲಿದ್ದ ಕೈಬರಹಕ್ಕೂ ಮಕ್ಮಲ್‌ದಾಸ ನೌಕರಿಯಲ್ಲಿ ಬಡ್ತಿ ಪಡೆದಾಗ ಬರೆದು ಕೊಟ್ಟ ಪತ್ರಗಳ ಮೇಲಿನ ಕೈಬರಹಕ್ಕೂ ವ್ಯತ್ಯಾಸವೇ ಇರಲಿಲ್ಲ!

ಮೋಹನ ಕಾಮತ್ ಕೈಬರಹಗಳನ್ನು ಪರೀಕ್ಷಿಸುತ್ತಿರುವಲ್ಲಿ ಅವನ ಕೋಣೆಯ ಬಾಗಿಲನ್ನು ತಟ್ಟಿದ ಶಬ್ದ ಕೇಳಿಸಿತು. ಅವನು ಎದ್ದು ಬಾಗಿಲು ತೆರೆದ. ಒಳಗೆ ಬಂದ ಪತ್ತೇದಾರ ಸಂಜೀವ ರಾವ್, "ಸಾರ್, ನನ್ನಲ್ಲಿ ಮತ್ತಷ್ಟು ಸಾಕ್ಷ್ಯಗಳಿವೆ" ಎಂದು ತನ್ನ ಜೇಬಿನಿಂದ ಒಂದು ಹಿಡಿ ಕಾಗದದ ಚೂರುಗಳನ್ನು ತೆಗೆದು ಮೇಜಿನ ಮೇಲಿಟ್ಟ.

"ಏನಿದು ಸಂಜೀವ ರಾವ್?"

"ಸಾರ್, ನಾವು ಕರ್ನಲ್ ಮಕ್ಮಲ್‌ದಾಸನನ್ನು ಹಿಂಬಾಲಿಸಿದೆವು. ಈಸ್ಟ್ ಆ್ಯಂಡ್ ವೆಸ್ಟ್ ಹೊಟೇಲನ್ನು ಬಿಟ್ಟ ಆತ ದಾರಿಯಲ್ಲಿ ತನ್ನ ಜೇಬಿನಲ್ಲಿದ್ದ ಕಾಗದಗಳನ್ನು ತೆಗೆದು ಹರಿದು ಬಿಸುಟ. ಕಾಗದದ ಚೂರುಗಳನ್ನು ಆರಿಸಿ ತರುವಂತೆ ಸೈಯದ್ ಖಾನನಿಗೆ ಹೇಳಿ ನಾನು ಮಕ್ಮಲ್‌ದಾಸನ ಹಿಂದೆ ಹೊರಟೆ. ಆತ ಅತ್ತಿತ್ತ ತಿರುಗಿ, ಪಾರ್ಕಿನಲ್ಲಿ ಸ್ವಲ್ಪ ಕಾಲ ಇದ್ದು ಮತ್ತೆ ಈಸ್ಟ್ ಅಂಡ್ ವೆಸ್ಟ್ ಹೊಟೇಲಿಗೇ ಹಿಂದಿರುಗಿದ."

"ಕಾಗದದ ಚೂರುಗಳನ್ನು ಮೇಜಿನ ಮೇಲಿಡು."

ಕಾಮತರ ಆದೇಶದಂತೆ ಕಾಗದದ ಚೂರುಗಳನ್ನು ಮೇಜಿನ ಮೇಲಿಟ್ಟು ಸಂಜೀವ ರಾವ್ ಶಿಸ್ತಿನಿಂದ ಸಲಾಮು ಹಾಕಿ ಬಾಗಿಲನ್ನು ಮುಚ್ಚಿ ಹೊರಟುಹೋದ. ಕರ್ನಲ್ ಕಾಮತ್ ಕಾಗದದ ಚೂರುಗಳನ್ನು ಜೋಡಿಸಿ ನೋಡಲು ಅವು ರಾವಲ್‌ಪಿಂಡಿ ಹಾಗೂ ಕರಾಚಿ ನಗರಗಳ ಗುಪ್ತಚಾರರಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸಿದ ಪತ್ರಗಳಿಗೆ ಪಡೆದ ಅಂಚೆ ರಶೀದಿಗಳಾಗಿದ್ದವು. ಮತ್ತೊಂದು ಕಾಗದ ರಹಸ್ಯಚಾರನೊಬ್ಬ ರಹಸ್ಯ ಪತ್ರಗಳಿಗಾಗಿ ಬರೆದ ಕಾಗದವಾಗಿತ್ತು. ಕರ್ನಲ್ ಮೋಹನ ಕಾಮತ್‌ನಿಗೆ ಅತೀವ ದುಃಖವಾಯಿತು. ಮಕ್ಮಲ್ ದಾಸ ಪರರಾಷ್ಟ್ರಗಳಿಗೆ ದೇಶದ ರಹಸ್ಯಗಳನ್ನು ಮಾರಿ ಅಪಾರಹಣ ಪಡೆದುಕೊಳ್ಳುತ್ತಿದ್ದುದು ಬಹಿರಂಗವಾಯಿತು. ಕಾಮತ್ ಕೂಡಲೇ ಮೇಲಧಿಕಾರಿಗಳಿಗೆ ವಿಷಯವನ್ನು ತಿಳಿಸಿದ.

ಅಂದು ಸಂಜೆ ನಾಲ್ಕು ಗಂಟೆಯ ಸಮಯ. ಮಕ್ಮಲ್‌ದಾಸ ಮತ್ತು ಅವನ ಮಿತ್ರ ಜೀವನ ಪ್ರಸಾದ್ ಉಪಹಾರಕ್ಕಾಗಿ ಮೂನ್ ಲೈಟ್ ಹೊಟೇಲಿನಲ್ಲಿ ಕುಳಿತಿದ್ದರು. ತನ್ನ ಮಿತ್ರ ಬೇಜಾರಿನಲ್ಲಿರುವುದು ಜೀವನ ಪ್ರಸಾದನಿಗೆ ತಿಳಿಯಿತು. ಅವನು ಮಿತ್ರನ ಉದಾಸೀನತೆಗೆ ಕಾರಣವನ್ನು ಕೇಳಿದ. ಮಕ್ಮಲ್‌ದಾಸ ನಿಟ್ಟುಸಿರು ಬಿಟ್ಟು ಉತ್ತರವಿತ್ತ:

"ಏನು ಹೇಳಲಿ. ಈ ನಡುವೆ ನನಗೆ ಆರೋಗ್ಯ ಕೆಟ್ಟಿದೆ. ಕರಾಚಿಗೆ ಹೋದರೆ ಗಲ್ಫ್ ಸಮುದ್ರದ ಗಾಳಿ ನನಗೆ ಹಿತವೆನಿಸೀತು. ನೀನು ಸಹಾಯ ಮಾಡಬಲ್ಲೆಯಾ?"

"ಏನು ಸಹಾಯ?"

"ನಾನು ನಮ್ಮ ಗಡಿಯನ್ನು ರಹಸ್ಯವಾಗಿ ದಾಟಿಹೋಗುವಂತೆ ನೆರವು ನೀಡಬೇಕು. ನಿನಗೆ ಇದು ಸಾಧ್ಯವೆ?"

"ಏಕೆ ಸಾಧ್ಯವಿಲ್ಲ. ನಾಳೆ ಸಂಜೆಯ ಹೊತ್ತಿಗೆ ನಿನ್ನ ಪಾಸ್‌ಪೋರ್ಟ್ ಸಿದ್ಧಗೊಳಿಸುತ್ತೇನೆ, ಚಿಂತಿಸಬೇಡ."

ಹೀಗೆಂದು ಹೇಳಿ ಜೀವನ ಪ್ರಸಾದ ಹೊಟೇಲಿನ ಕೌಂಟರಿಗೆ ಹೋಗಿ ಟೆಲಿಫೋನ್ ತೆಗೆದು ಡಯಲ್ ಮಾಡಿದ. ಅವನು ಡಯಲ್ ಮಾಡಿದ ನಂಬರು ಪೊಲೀಸು ಕಮಿಷನರರ ಬಂಗಲೆಯ ಟೆಲಿಫೋನ್ ನಂಬರಾಗಿತ್ತು! ಪತ್ತೇದಾರಿ ಇಲಾಖೆಯಲ್ಲಿ ಯಾರು ಯಾರು ಹೇಗೆ ಕರ್ತವ್ಯ ನಿರತರಾಗಿರುತ್ತಾರೆ ಎಂಬುದನ್ನು ತಿಳಿಯಲು ಮಕ್ಮಲ್‌ದಾಸ ಸಮರ್ಥರಾಗಲಿಲ್ಲ.

ಇಬ್ಬರು ಮಿತ್ರರೂ ಉಪಹಾರ ಮುಗಿಸಿ ಹೊರಟರು. ಕರ್ನಲ್ ಮಕ್ಮಲ್‌ದಾಸ ಈಸ್ಟ್ ಆ್ಯಂಡ್ ವೆಸ್ಟ್ ಹೊಟೇಲಿಗೆ ಹೋಗದೆ ನಗರದ ತೈಮೂರ್ ರಸ್ತೆಯಲ್ಲಿ ವಿಶಾಲವಾದ ತೋಟದ

ನಡುವೆ ಇದ್ದ ತನ್ನ ಬಂಗಲೆಯನ್ನು ಸೇರಿದ. ಆಗ ಏಳು ಗಂಟೆಯ ಸಮಯ. ಅವನು ತನ್ನ ಕೋಣೆಯನ್ನು ಸೇರಿ ಬರೆಯುವುದರಲ್ಲಿ ನಿರತನಾಗಿದ್ದ. ಬಂಗಲೆಯಲ್ಲಿ ಮೌನವಡಗಿತ್ತು. ಅವನ ಮೇಜಿನ ಮೇಲಿದ್ದ ಗಡಿಯಾರದ ಟಿಕ್-ಟಿಕ್ ಶಬ್ದದ ವಿನಹ ಎಲ್ಲೆಡೆಯೂ ಮೌನ. ಹಠಾತ್ತನೆ ಅವನ ಕೊಠಡಿಯ ಬಾಗಿಲನ್ನು ಬಡಿದಂತೆ ಶಬ್ದ ಕೇಳಿಸಿತು. ಅವನು ಬರೆಯುವುದನ್ನು ಬಿಟ್ಟು ಬಾಗಿಲನ್ನು ತೆರೆದು, ಹೊರಗೆ ಉರಿಯುತ್ತಿದ್ದ ವಿದ್ಯುತ್ ಬೆಳಕಿನಲ್ಲಿ, ಬಂದ ನಾಲ್ವರನ್ನು ಗುರುತಿಸಿ ಯಾವ ಉದ್ವೇಗಕ್ಕೂ ಒಳಗಾಗದೆ ನಿಧಾನವಾಗಿ ಹೇಳಿದ:

"ನಿಮ್ಮನ್ನು ನಿಮಿಷ ನಿಮಿಷಕ್ಕೂ ನಿರೀಕ್ಷಿಸುತ್ತಿದ್ದೆ ಸ್ನೇಹಿತರೆ. ನೀವು ಏಕೆ ಬರುವಿರೆಂದು ಸಹ ನನಗೆ ಚೆನ್ನಾಗಿ ತಿಳಿದಿತ್ತು."

ಬಂದ ನಾಲ್ವರು ಅಧಿಕಾರಿಗಳು ಸಮವಸ್ತ್ರದಲ್ಲಿದ್ದರು. ಅವರಲ್ಲಿ ಜನರಲ್ ಭಾಸ್ಕರ ಜೋಷಿ ಮಕ್ಮಲ್‌ದಾಸನನ್ನು ವಿಸ್ಮಯದಿಂದ ಎವೆಯಿಕ್ಕದೆ ನೋಡಿ ಪ್ರಶ್ನಿಸಿದ:

"ಈ ಕೋಹಿನೂರ್ ನಾಟಕ ಮಂಡಲಿಯಲ್ಲಿ ನೀವು ಒಬ್ಬರೇ ಸದಸ್ಯರೊ ಅಥವಾ ನಿಮ್ಮೊಡನೆ ಸಹಕರಿಸುತ್ತಿರುವ ಬೇರೆ ಜನ ಇದ್ದಾರೆಯೋ ?"

"ಯಾರನ್ನೂ ನಾನು ಪಾಲುದಾರನನ್ನಾಗಿ ಮಾಡಿಕೊಂಡಿಲ್ಲ ಸಾರ್. ನಾನೊಬ್ಬನೆ ಜವಾಬ್ದಾರ. ನಿಮಗೆ ಬೇಕಾದ ಸಾಕ್ಷ್ಯಗಳೆಲ್ಲ ಈ ನನ್ನ ಬಂಗಲೆಯಲ್ಲೆ ಇದೆ. ಕಾಗದಗಳೆಲ್ಲ ಈಗ ನಿಮ್ಮ ವಶ."

"ನೀವು ಪ್ರತಿಭಟಿಸದೆಯೇ ತಪ್ಪನ್ನು ಒಪ್ಪಿಕೊಂಡಿರಿ. ಮತ್ತೇನನ್ನಾದರೂ ಹೇಳಬಯಸುವಿರಾ ?"

"ಕೆಲವು ಕಾಗದಗಳನ್ನು ಆಪ್ತರಿಗೆ ಬರೆಯಬೇಕಾಗಿದೆ. ಅದಕ್ಕೆ ಅವಕಾಶ ಕೊಡಿ. ಮತ್ತೆ ನೀವು ಒಂದು ಗಂಟೆಯ ತರುವಾಯ—ಎಂಟು ಗಂಟೆಗೆ ಬನ್ನಿ. ನಿಮ್ಮ ವಶವಾಗುತ್ತೇನೆ. ಆಗ ನನ್ನನ್ನು ನೀವು ಅರೆಸ್ಟ್ ಮಾಡಬಹುದು."


ನಾಲ್ವರು ಅಧಿಕಾರಿಗಳೂ ಆತನ ಕೋರಿಕೆಯನ್ನು ಒಪ್ಪಿ ಬಂದಿದ್ದ ಕೆಲವು ಸಿಪಾಯಿಗಳನ್ನು ಬಂಗಲೆಯ ಸುತ್ತ ನಿಲ್ಲಿಸಿ ಹೊರಟುಹೋದರು. ಅವರು ಹೋದಮೇಲೆ ಕರ್ನಲ್ ಮಕ್ಮಲ್‌ದಾಸ ಮೇಜಿನ ಮುಂದೆ ಕುಳಿತು ಬರೆಯತೊಡಗಿದ. ಗಡಿಯಾರದ ಕ್ಲಿಕ್ ಕ್ಲಿಕ್ ಶಬ್ದ ಕೇಳಿಸುತ್ತಿತ್ತು.

ಅಧಿಕಾರಿಗಳು ಮತ್ತೆ ಬಂಗಲೆಗೆ ಬಂದಾಗ ಎಂಟು ಗಂಟೆ. ಬಂದವರು ಬಂಗಲೆಯ ಮೆಟ್ಟಿಲುಗಳನ್ನು ಹತ್ತಿ ಮಕ್ಮಲ್‌ದಾಸನ ಕೋಣೆಯ ಬಾಗಿಲಿಗೆ ಬಂದರು. ಕರ್ನಲ್ ಮೋಹನ ಕಾಮತ್ ಭಾಗಿಲು ಬಡಿದು ನಿಂತ. ನೀರವ! ಮತ್ತೆ ಮತ್ತೆ ಬಾಗಿಲು ಬಡಿದ. ಬಡಿತಗಳ ಶಬ್ದ ನಿಂತಾಗ ಮತ್ತೆ ನೀರವ! ಒಳಗಿನಿಂದ ಉತ್ತರ ಬರಲಿಲ್ಲ. ಬಾಗಿಲ ಪ್ಯಾಡ್ ಲಾಕ್ ಬಲವಾಗಿದ್ದುದರಿಂದ ಬೀಗ ಬಿಚ್ಚಲು ಜೋಸೆಫ್ ಪಿಂಟೋವನ್ನು ಕರೆಸಿದರು.

ಜೋಸೆಫ್ ಪಿಂಟೋ ಕರ್ನಲ್ ಮಕ್ಮಲ್‌ದಾಸನ ಬಾಗಿಲು, ಅಲ್ಮಾರ ಹಾಗೂ ಪೆಟ್ಟಿಗೆಗಳ ಬೀಗಗಳನ್ನು ಬಿಚ್ಚಿ ತನ್ನ ಕೆಲಸಕ್ಕೆ ಹಾಜರಾಗಲು ತಡವಾಗಿತ್ತು. ಈ ತಡ 'ಡೈಲಿ ಎಕ್ಸ್‌ಪ್ರೆಸ್ ನ್ಯೂಸ್' ಪತ್ರಿಕೆಯ ಸಂಪಾದಕ ಜಗತ್‌ಪ್ರತಾಪನಿಗೆ ಸ್ವಾರಸ್ಯವಾದ ಹಾಗೂ ವಾಚಕರ ಕುತೂಹಲವನ್ನು ಕೆರಳಿಸುವ ದೇಶದ್ರೋಹಿಯೊಬ್ಬನ ಗೂಢಚಾರಿಕೆ ಪ್ರಸಂಗವನ್ನು ಪ್ರಕಟಿಸಲು ಅವಕಾಶ ನೀಡಿತು. ●

*** ಈ ಕಥೆಯ ಪಾತ್ರಗಳು, ಸನ್ನಿವೇಶಗಳು ಕೇವಲ ಕಾಲ್ಪನಿಕ; ಯಾರನ್ನಾಗಲಿ, ಯಾವುದನ್ನಾಗಲಿ ಉದ್ದೇಶಿಸಿ ರಚಿತವಾಗಿಲ್ಲ.**

— ವಿ.ಜಿ.ಕೆ.



ವ್ಯಕ್ತಿತ್ವದಲ್ಲಿ ಸೊಗಸಿರಬೇಕು – 4

ಹದಿಹರೆಯದವರು

● ರಾಧಾ

ಈ ಭಾಗದಲ್ಲಿ ಈ ವಿಷಯವನ್ನು ಕೊನೆಮುಟ್ಟಿಸಿಬಿಡಬೇಕು ಎಂದುಕೊಂಡಿದ್ದೆ. ಆದರೆ ಆಸಕ್ತ ಓದುಗರ ಕಾಗದಗಳನ್ನು ನೋಡಿ, ಅವರಿಗೆ ಉತ್ತರಿಸಿ, ಮುಂದಿನ ತಿಂಗಳು ಮುಗಿಸುತ್ತೇನೆ.

ಯೋಗಾದ ಬಗ್ಗೆ ಎಲ್ಲರೂ ಆಸಕ್ತಿಯಿಂದ ಕೇಳಿದ್ದಾರೆ. ಯೋಗಾಭ್ಯಾಸ ತೂಕ ಹೆಚ್ಚಿದವರು, ಅನಾರೋಗ್ಯದವರು ಮಾತ್ರವಲ್ಲ, ಆರೋಗ್ಯವಂತರೂ ಮಾಡಬಹುದು. ಮೈಮನಸ್ಸನ್ನು ಹಿಡಿತದಲ್ಲಿ ಇಡುತ್ತದೆ. ಯೋಗಾಸನಗಳ ಜೊತೆಗೆ ಪ್ರಾಣಾಯಾಮವನ್ನೂ ಖಂಡಿತ ಮಾಡಬೇಕು. ಆಸನಗಳು ದೇಹಕ್ಕಾದರೆ, ಪ್ರಾಣಾಯಾಮ ಮನಸ್ಸಿನ ಹತೋಟಿಗಾಗಿ. 'ಕ್ರಿಯಾಸ್' ಎನ್ನುವುದು ದೇಹದ ಶುದ್ಧೀಕರಣ. ಇವೆಲ್ಲವನ್ನೂ ಗುರುಗಳೊಬ್ಬರ ಮೂಲಕ ಸರಿಯಾಗಿ ಕಲಿತು ಮಾಡಬೇಕು. ಬೆಂಗಳೂರಿನ ಡಾ। ನಾಗರತ್ನ ಅವರ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಹೇಳಿದ್ದೆನಲ್ಲ – ಅವರು ನಡೆಸುವ ವಿವೇಕಾನಂದ ಕೇಂದ್ರ ಭಾರತದ ಎಲ್ಲ ಕಡೆ ಇದೆ. ಇಲ್ಲಿ ಕಲಿತವರು ಅವರವರ ಊರುಗಳಲ್ಲಿ ಕಲಿಸುತ್ತಿದ್ದಾರೆ. ದೂರದರ್ಶನದಲ್ಲಿ ಯೋಗಾ ಬಗ್ಗೆ ಅನೇಕ ಕಾರ್ಯಕ್ರಮಗಳು ಬರುತ್ತಿವೆಯಲ್ಲ.

ಹದಿಹರೆಯದ ಪ್ರಾಯದವರಿಗೆ ಮುಖದ ಮೇಲೆ ಮೊಡವೆಗಳೇಳುತ್ತವೆ, ಏನು ಮಾಡಬೇಕು? ಎಂದೊಬ್ಬರು ಕೇಳಿದ್ದಾರೆ. ದಯವಿಟ್ಟು ನಿಮ್ಮ ಹತ್ತಿರದ ವೈದ್ಯರನ್ನು ನೋಡಿರಿ.

'ನಮ್ಮಲ್ಲಿ ಅನೇಕ ತರಹದ ವ್ಯಕ್ತಿಗಳಿದ್ದಾರೆ. ಕುಳ್ಳಗೆ, ಎತ್ತರಕ್ಕೆ, ಕಪ್ಪಗೆ, ದಪ್ಪಗೆ, ಬೆಳ್ಳಗೆ – ತಾವೇ ಚೆನ್ನಾಗಿದ್ದೇವೆ ಅಂದುಕೊಂಡಿರುವವರು ಕುಳ್ಳಗೆ, ಕಪ್ಪಗಿರುವವರ ಬಗ್ಗೆ ಹೀನಾಯವಾಗಿ ಕಾಣುತ್ತಾರೆ. ಜೀವನಪರ್ಯಂತ ಅಡ್ಡ ಹೆಸರು ಹಾಕುತ್ತಾರೆ. ಕುಳ್ಳು – ಕಪ್ಪು ನ್ಯೂನತೆಯೇ? ಇಂಥವರು ಬದುಕುವುದಾದರೂ ಹೇಗೆ?'

– ಹೀಗೊಬ್ಬರು ಕಳಕಳಿಯಿಂದ ಕೇಳಿದ್ದಾರೆ. ನಾವು ಹೇಗೇ ಇದ್ದರೂ ಅದು ನಮ್ಮ ಹುಟ್ಟಿನಿಂದ ಬಂದದ್ದು. ಆದರೆ, ಬೆಳೆಯುತ್ತ ನಾವು ನಮ್ಮತನವನ್ನು ವಿಶೇಷವಾಗಿಸಿಕೊಳ್ಳಬೇಕು. ನಮ್ಮ ವ್ಯಕ್ತಿತ್ವದಲ್ಲಿ ಕೊರತೆ ಇದೆ ಎಂದು ನಮ್ಮ ಮನಸ್ಸಿಗನ್ನಿಸಬಾರದು. ನಮ್ಮ ವ್ಯಕ್ತಿತ್ವ – ಬದುಕು ಆತ್ಮವಿಶ್ವಾಸ ತುಂಬಿದ್ದಾಗಿರಬೇಕು. ನಿಮಗೆ ಗೊತ್ತೆ? ನಮ್ಮಲ್ಲೆ ಬೇಕಾದಷ್ಟು ಮಂದಿ ಕುಳ್ಳರು – ಕಪ್ಪಗಿರುವವರು, ಸುಪ್ರಸಿದ್ಧ

ಲೇಖಕರು, ಕಲಾವಿದರು, ಪ್ರಾಧ್ಯಾಪಕರು ಇದ್ದಾರೆ. ಸುಂದರವಾಗಿರುವವರು ಗೌರವದಿಂದ ಇವರೊಂದಿಗೆ ಕಲಿಯುತ್ತಿದ್ದಾರೆ. ನಾವು ವಿದ್ಯಾಭ್ಯಾಸ, ಆರೋಗ್ಯ ಗಟ್ಟಿಯಾಗಿಸಿಕೊಳ್ಳಬೇಕು. ಇದರಿಂದ ದುಡಿಯಲು – ಗಳಿಸಲು ದಾರಿಗಳು ಆಗುತ್ತವೆ. ಬದುಕು ಸುಂದರವಾಗಿ ಕಂಡಾಗ ಕೊರತೆಗಳು ಎದ್ದು ಕಾಣುವುದೇ ಇಲ್ಲ. ಬೇರೆಯವರ ಹೀಯಾಳಿಸುವಿಕೆ – ಕ್ರೂರ ಕಣ್ಣುಗಳಿಗೆ ಬೆದರಿ ನಿಮ್ಮನ್ನು ನೀವು ಇನ್ನೂ ಕುಗ್ಗಿಸಿಕೊಳ್ಳಬೇಡಿ.

ಈ ಸಲ ಕೆಲ ಕಿರಿಯ (ಹದಿಹರೆಯದ ವಯಸ್ಸಿನ) ಸೋದರಿಯರು ಬರೆದಿದ್ದಾರೆ. ಎಲ್ಲ ಹದಿಹರೆಯದವರ ಸಮಸ್ಯೆ – ಆಲೋಚನೆಗಳನ್ನೆ ನನ್ನ ಮುಂದಿಟ್ಟಿದ್ದಾರೆ.

'ಹತ್ತು – ಹದಿನೈದು ವರ್ಷ ಪ್ರಾಯದ ಹೆಣ್ಣು ಮಕ್ಕಳು ಮನೆಯಲ್ಲೂ, ಮನೆಯಿಂದ ಹೊರಗೂ ಯಾವ ರೀತಿ ನಡೆದುಕೊಳ್ಳಬೇಕು?'

– ಇದು ತುಂಬಾ ಮುಖ್ಯವಾದ ವಿಷಯ. ಕೆಲ ಚಿಕ್ಕ ಚಿಕ್ಕ ಹುಡುಗಿಯರನ್ನು ನೋಡಿದ್ದೇನೆ. ಪ್ರಪಂಚದ ತಿಳಿವಳಿಕೆಯೇ ಇಲ್ಲದವರ ಹಾಗೆ. ಏನು ಮಾಡಿದರೆ ಏನಾಗಬಹುದು, ತಾನೇನು ಮಾಡುತ್ತಿದ್ದೇನೆ ಎಂದು ತಿಳಿದುಕೊಳ್ಳದೆಯೇ ಬೆಳೆದುಬಿಡುತ್ತಾರೆ. ಹೆಣ್ಣು ಮಕ್ಕಳು ಹತ್ತು, ಹನ್ನೆರಡು ವಯಸ್ಸಿಗೆ ಬರುತ್ತಿದ್ದ ಹಾಗೆಯೇ ತಮ್ಮ ವ್ಯಕ್ತಿತ್ವ, ದೇಹದ ಆರೋಗ್ಯ ಮತ್ತು ನಡವಳಿಕೆ ಬಗ್ಗೆ ತುಂಬಾ ಗಮನ ಕೊಡಬೇಕು. ಮೊದಲನೆಯದಾಗಿ – ಓದುವುದು, ಅದರಲ್ಲಿ ಮುಂದೆ ಬಂದು ದೊಡ್ಡ ಪದವಿ ಪಡೆಯುವುದು ಮುಖ್ಯ ಗುರಿಯಾಗಬೇಕು. ತರಗತಿಗಳಲ್ಲಿ ಮುಂದಿರಬೇಕು. ಆಟಗಳಲ್ಲೂ ಸೇರಿಕೊಳ್ಳಬೇಕು, ಬರೆಯುವ ಸ್ಪರ್ಧೆ, ಭಾಷಣ – ಚರ್ಚೆ ಸ್ಪರ್ಧೆಗಳಿಗೆ ಸೇರಬೇಕು. ನಾಟಕ, ನೃತ್ಯ, ಪೈಂಟಿಂಗ್ ಆಸಕ್ತಿ ಇದ್ದರೆ ಹಿರಿಯರ ಅನುಮತಿ ಪಡೆದು ಕಲಿಯಬಹುದು.

ಈ ವಯಸ್ಸಿನ ಹುಡುಗಿಯರು ಆರೋಗ್ಯವಂತರಾಗಿ ಚುರುಕಾಗಿರಬೇಕು. 'ನಮ್ಮ ನಮ್ಮಲ್ಲಿ ಏನೇನು ಕೊರತೆ ಇದೆ' ಎಂದು ಯೋಚಿಸಬೇಕು. ಇತರರನ್ನು ಗಮನಿಸಬೇಕು. ತರಗತಿ – ಶಾಲೆಯಲ್ಲಿ ಎಲ್ಲರೂ ಮೆಚ್ಚುವ ಹುಡುಗಿಯರು ಹೇಗಿದ್ದಾರೆ, ಯಾಕೆ ಜನಪ್ರಿಯ ರಾಗಿದ್ದಾರೆ ಎಂದು ಅರ್ಥಮಾಡಿಕೊಳ್ಳಬೇಕು. ಪ್ರತಿಯೊಬ್ಬ ಹುಡುಗಿಯೂ ವಿಶೇಷ ವ್ಯಕ್ತಿಯಾಗಿ ಬೆಳೆಯಬೇಕು.

ಪ್ರತಿ ದಿನದ ಕೆಲಸ ಕಾರ್ಯಗಳನ್ನು ಕಾಲಕ್ಕೆ ಸರಿಯಾಗಿ ಮಾಡಿ. ಓದುವ ಸಮಯ, ಆಟದ ಸಮಯ, ಟಿವಿ ನೋಡುವ ಸಮಯ – ಹರಟೆ ಎಲ್ಲದಕ್ಕೂ ಸರಿಯಾಗಿ ಕಾಲ ಒದಗಿಸಿ. ಸಮಯ ಸಾಲದು ಎಂದು ಚಡಪಡಿಸಬೇಡಿ.

ಉಡುಪನ್ನು ಶಿಸ್ತಾಗಿ ಧರಿಸಿ. ಅಸ್ತವ್ಯಸ್ತಗೊಳಿಸಬೇಡಿ. ನಿಮ್ಮ ವಯಸ್ಸಿನಲ್ಲಿ ನೀವು ಜಾಗರೂಕತೆಯಿಂದ ಇರಬೇಕಾದ ಘಟ್ಟ ಪ್ರಾರಂಭವಾಗುತ್ತದೆ. ಮನೆಯಲ್ಲಿ, ಹೊರಗೆ ನೀವು ಮಾಡುವ ಪ್ರತಿ ಕೆಲಸದ ಮೇಲೂ ನಿಮಗೆ ಜ್ಞಾನವಿರಲಿ. ಸ್ವಲ್ಪ ಅಜಾಗರೂಕತೆಯಾದರೆ ತೊಂದರೆ – ಏರುಪೇರು ಆಗುವ ಸಾಧ್ಯತೆ ಇದೆ.


ಈ ವಯಸ್ಸಿನಲ್ಲಿ ಮನೆಯಲ್ಲಿ ತಂದೆ, ಅಣ್ಣತಮ್ಮಂದಿರೊಂದಿಗೆ ಆಟವಾಡಿದಂತೆ, ಲಲ್ಲೆಗರೆದಂತೆ, ತಮಾಷೆ ಮಾಡಿದಂತೆ – ಬೇರೆಯ ಯುವಕರೊಂದಿಗೆ, ಗಂಡಸರೊಂದಿಗೆ ಮಾಡಬಾರದು. 'ಕಸಿನ್' ಆಗಲಿ ಯಾರೇ ಆಗಲಿ ನಿಮ್ಮ ಮೈಮನಸ್ಸು ಜಾಗರೂಕತೆಯಿಂದ ಇರಬೇಕು. ಯೋಚಿಸಿ ಮುಂದಿನ ಹೆಜ್ಜೆ ಇಡಬೇಕು. ನಿಮ್ಮ ಬಗ್ಗೆ ಎಲ್ಲವೂ ಎಲ್ಲರಿಗೂ ತಿಳಿದುಹೋಗುವಂತೆ ಆಗಿಬಿಡಬಾರದು. ನಿಮ್ಮನ್ನು ನೀವು ಯಾವಾಗಲೂ ಕಾಪಾಡಿಕೊಳ್ಳಬೇಕು. ಯಾವಾಗಲೂ ನಿಮ್ಮ ತಂದೆ-ತಾಯಿಯರ ಸಲಹೆ ಪಡೆಯಿರಿ. ಯಾವುದನ್ನೂ ಅವರಲ್ಲಿ ಮುಚ್ಚಿಡಬೇಡಿ.

ನಿಮ್ಮಂಥ ಚಿಕ್ಕ ಹುಡುಗಿಯರು, ಹದಿನೆಂಟು – ಇಪ್ಪತ್ತರ ಯುವತಿಯರ ಬಗ್ಗೆ ಮುಂದಿನ ಸಂಚಿಕೆಯಲ್ಲಿ ಇನ್ನೂ ಹೆಚ್ಚು ಹೇಳುತ್ತೇನೆ.

(ಇನ್ನೂ ಇದೆ)

ಬಾಲಪ್ರಪಂಚ

ಬಹುಮಾನಿತ ಬರಹಗಳು



ಬಲಮುರಿ

ಮೈಸೂರಿನಿಂದ ಸುಮಾರು 8ಕಿ. ಮೀ ದೂರದಲ್ಲಿರುವ ಪ್ರವಾಸಿ ಸ್ಥಳವೆಂದರೆ ಬಲಮುರಿ. ಇಲ್ಲಿ ಕಾವೇರಿ ನದಿಯು ಕೃಷ್ಣರಾಜಸಾಗರದಿಂದ ಶ್ರೀರಂಗಪಟ್ಟಣಕ್ಕೆ ಹೋಗುವಾಗ ಬಲಗಡೆಗೆ ತಿರುಗುತ್ತಾಳೆ. ಆದ್ದರಿಂದ ಅದಕ್ಕೆ ಬಲಮುರಿ ಎಂಬ ಹೆಸರು ಬಂದಿದೆ. ಇಲ್ಲಿ ನೀರು 5 ಅಡಿಗಳ ಮೇಲಿನಿಂದ ಧುಮುಕುತ್ತದೆ. ಇದನ್ನು ನೋಡಲು ತುಂಬಾ ಚೆನ್ನಾಗಿರುತ್ತದೆ. ಇಲ್ಲಿ ಶಿವನ ದೇವಸ್ಥಾನವೂ ಸಹ ಇದೆ. ಅದು ನೋಡಲು ತುಂಬಾ ಚೆನ್ನಾಗಿದೆ. ಜೊತೆಗೆ ಗಣಪತಿಯ ದೇವಸ್ಥಾನವೂ ಇದೆ. ಅದೂ ಸಹ ತುಂಬಾ ಚೆನ್ನಾಗಿದೆ. ನಾನು ಒಂದು ಭಾನುವಾರ ನನ್ನ ತಂದೆ, ತಾಯಿ, ತಮ್ಮನ ಜೊತೆ ಜೊತೆ ಅಲ್ಲಿಗೆ ಹೋಗಿದ್ದೆ. ಅಲ್ಲಿ ಈಜಲೂಬಹುದು. ನಾನು ಅಲ್ಲಿ ಈಜನ್ನೂ ಸಹ ಕಲಿತೆ. ನನ್ನ ತಮ್ಮನೂ ಸಹ ಈಜನ್ನು ಕಲಿತ. ಇಲ್ಲಿ ಒಂದು ಕಟ್ಟೆಯನ್ನು ಇಳಿಜಾರಾಗಿ ಕಟ್ಟಿದ್ದಾರೆ. ಅದರ ಮೇಲೆ ನೀರು ರಭಸವಾಗಿ ಹರಿಯುತ್ತದೆ. ಅದರ ಮೇಲೆ ನಡೆಯುವಾಗ ಜೋಪಾನವಾಗಿ ನಡೆಯಬೇಕು.

ತುಷಾರಣ್ಣನ ಪತ್ರ

ಪ್ರಿಯ ಪುಟಾಣಿಗಳೇ, ಹೋದ ತಿಂಗಳು ಸೊಗಸಾದ ಚಿತ್ರಗಳನ್ನು ಕಳುಹಿಸಿದ ನೀವೆಲ್ಲ ಈ ತಿಂಗಳು ನಿಮ್ಮೂರಿನ ವಿಶೇಷ ಸ್ಥಳಗಳ ಬಗ್ಗೆ ಚೆನ್ನಾಗಿ ಬರೆದಿದ್ದೀರಿ. ಖಂಡಿತ ತುಂಬಾ ಚೆನ್ನಾಗಿ ಬರೆದಿದ್ದೀರಿ. ಏನು ಮಾಡುವುದು 'ಬಾಲ ಪ್ರಪಂಚ'ದಲ್ಲಿ ಜಾಗ ಸಾಲದು. ಹೀಗಾಗಿ ಕೆಲವನ್ನು ಮಾತ್ರ ಆಯ್ಕೆ ಮಾಡಿ ಪ್ರಕಟಿಸುತ್ತಿದ್ದೇನೆ.

ಹೋದ ತಿಂಗಳ ಚಿತ್ರಗಳೂ ಕೆಲವು ಈಗ ಪ್ರಕಟವಾಗಿವೆ. ಹಾಗೆಯೇ 'ನನ್ನೂರು ಚೆಂದದೂರು' ಬರೆಹಗಳು ಮುಂದಿನ ತಿಂಗಳಲ್ಲೂ ಒಂದಿಷ್ಟು ಪ್ರಕಟವಾಗುತ್ತವೆ.

ಈ ಸಂಚಿಕೆಯಲ್ಲಿ 'ಪಂಚತಂತ್ರದ ಕಥೆಗಳು' ಏಕೆ ಕಾಣಿಸುತ್ತಿಲ್ಲ ಎಂದು ನಿಮಗೆ ಅನ್ನಿಸಿರಬಹುದು. ಹೌದು: ಹಾಕಿಲ್ಲ. ಕಾರಣ: ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯ ತಾತಾ 'ಫಾರಿನ್'ಗೆ ಹೋಗಿದ್ದಾರೆ. ಅಲ್ಲಿಂದ ಇಷ್ಟರಲ್ಲೆ ಬರುತ್ತಾರೆ. ಅವರು ಅಲ್ಲೇನು ನೋಡಿದರು, ಅಲ್ಲಿನ ಮಕ್ಕಳು ಹೇಗಿದ್ದಾರೆ, ಏನು ಮಾಡುತ್ತಾರೆ ಎಂದು ನಿಮಗೆ ತಿಳಿಸಲು ಅವರಿಗೆ ಹೇಳಲೇ? ಜೊತೆಗೆ ನಿಮ್ಮ ಮೆಚ್ಚಿನ 'ಪಂಚತಂತ್ರದ ಕಥೆ'ಗಳೂ ಪ್ರಕಟವಾಗುತ್ತದೆ.

ಹಿಂದೆ – ನೀವು ಬರೆದು ಕಳುಹಿಸಿದ ಕಥೆ – ಕವನ ಎಲ್ಲರಿಗೂ ತುಂಬಾ ಇಷ್ಟವಾಗಿತ್ತು. ಈಗ ಮತ್ತೊಮ್ಮೆ ಚಿಕ್ಕದಾಗಿ – ಸ್ವಾರಸ್ಯವಾಗಿ ಕಥೆ – ಕವನ ಬರೆದು ಕಳುಹಿಸಿ. ಅರ್ಧ – ಮುಕ್ಕಾಲು ಪುಟ ಕಥೆಗಳಿಗೆ ಮತ್ತು ಎಂಟು ಸಾಲಿನೊಳಗೆ ಇರುವ ಕವನಗಳಿಗೆ ಮಾತ್ರ ಅವಕಾಶ. ಅಕ್ಷರ ಗುಂಡಗೆ, ಕಾಗದದ ಒಂದೇ ಬದಿಯಲ್ಲಿ, ತಪ್ಪಿಲ್ಲದೆ ಬರೆದು ಕಳುಹಿಸಿ. ಚೆನ್ನಾಗಿದ್ದರೆ ಬೊಂಬೆ ಪುಸ್ತಕ ಬರುತ್ತದೆ. ನಿಮ್ಮ ವಯಸ್ಸು, ಓದುವ ಶಾಲೆ – ತರಗತಿ, ವಿಳಾಸ ಖಂಡಿತ ಬರೆಯಿರಿ.

ನಿಮಗೆಲ್ಲಾ ಒಳ್ಳೆಯದಾಗಲಿ. ಮುಂದಿನ ತಿಂಗಳು ಭೇಟಿಯಾಗೋಣ–ನಿಮ್ಮೆಲ್ಲರ ಪ್ರೀತಿಯ ತುಷಾರಣ್ಣ.

ಇಲ್ಲವಾದರೆ ಅದು ನಮ್ಮನ್ನು ಕೆಳಕ್ಕೆ ತಳ್ಳುತ್ತದೆ. ನನಗೆ ಮಳೆಯಲ್ಲಿ ಆಟವಾಡಲು ತುಂಬಾ ಆಸೆ. ಆದರೆ ನಮ್ಮಮ್ಮ ನನಗೆ ಮಳೆಯಲ್ಲಿ ಆಟವಾಡಲು ಬಿಡುವುದೇ ಇಲ್ಲ. ಆದ್ದರಿಂದ ನನಗೆ ಬಲ ಮುರಿಗೆ ಹೋಗುವುದೆಂದರೆ ತುಂಬಾ ಖುಷಿ.

● ಎಸ್. ನಮಿತ ಶಂಕರ್, ಮೈಸೂರು

* * *

ಕಲ್ಹತ್ತಿಗಿರಿ ಜಲಪಾತ

ಕೆಮ್ಮಣ್ಣುಗುಂಡಿಗೆ ಹೋಗುವ ಮಾರ್ಗದಲ್ಲಿ ಕಲ್ಹತ್ತಿಗಿರಿ ಜಲಪಾತ ಸಿಗುವುದು. ಈ ಜಲಪಾತವುಳ್ಳ ಬೆಟ್ಟವನ್ನು ಚಂದ್ರದ್ರೋಣ ಪರ್ವತವೆಂತಲು ಕರೆಯುತ್ತಾರೆ.

ಈ ಪರ್ವತದ ಮೇಲಿನಿಂದ ಬೀಳುವ ನೀರು ಸುಮಾರು 800 ಅಡಿಗಳು ಧುಮುಕಿ ಅಲ್ಲಿಂದ 10 ಅಡಿಗಳಷ್ಟು ಹಾದು ಪುನಃ 300 ಅಡಿ ಆಳಕ್ಕೆ ಬೀಳುವುದು.

ಬಿದ್ದ ನೀರು ಸುಮಾರು 5 ಮೈಲಿಗಳ ದೂರದವರೆಗೆ ಅಲ್ಲಲ್ಲಿ ಕಲ್ಲು ಬಂಡೆಗಳನ್ನು ಧುಮುಕಿ ಹರಿದು ನಂತರ ದೇವಾಲಯದ ಬಳಿ ಶಾಂತವಾಗಿ ಹರಿಯುವುದು.

ಅಲ್ಲಲ್ಲಿ ಧುಮುಕುವ ನೀರಿನಲ್ಲಿ ಸ್ನಾನ ಮಾಡುವಾಗ ಮೈ ಕೈಗಳ ನೋವು ಎಲ್ಲ ಹೋಗುವುದು. ಎಲ್ಲ ರೀತಿಯ ಚರ್ಮ ಕಾಯಿಲೆಗಳು ವಾಸಿಯಾಗುವುದು. ಏಕೆಂದರೆ ಈ ನೀರು ಹರಿಯುವಾಗ ಹಲವಾರು ಗಿಡಮೂಲಿಕೆಗಳ ಮೇಲೆ ಹಾದು ಬರುವಾಗ ನೀರಿನೊಡನೆ ಔಷಧಿಯ ಗುಣವನ್ನು ತರುವುದು.

ಇಲ್ಲಿ ಒಂದೇ ಬಂಡೆಯಲ್ಲಿ ಶ್ರೀ ವೀರಭದ್ರ ಸ್ವಾಮಿಯ ವಿಗ್ರಹ ಮತ್ತು ಗರ್ಭಗುಡಿಯನ್ನು ಕೆತ್ತಲಾಗಿದೆ.

ಆನೆಬಂಡೆ, ಹಸುವಿನ ಮುಖ ಮತ್ತು ದತ್ತಾತ್ರೇಯ ವಿಗ್ರಹದ ಮೇಲೆ ನೀರು ಬೀಳುವುದರಿಂದ ಈ ತೀರ್ಥಗಳಿಗೆ ಆನೆತೀರ್ಥ, ಬಸವ



ತೀರ್ಥ, ದತ್ತಾತ್ರೇಯ ತೀರ್ಥ ಎಂದು ಕರೆಯುತ್ತಾರೆ.

ಇಲ್ಲಿ ವರ್ಷದ 12 ತಿಂಗಳು ಜನ ಬರುತ್ತಾರೆ. ಇಲ್ಲಿ ಉಳಿದುಕೊಳ್ಳಲು ರೂಮುಗಳು ಇವೆ. ಬೇಸಿಗೆಯಲ್ಲಿ ಜನಗಳು ಸಾವಿರ ಸಂಖ್ಯೆಯಲ್ಲಿ ಬರುತ್ತಾರೆ.

ಈ ಸುತ್ತಮುತ್ತಲ ಹಳ್ಳಿಯ ಎಲ್ಲ ದೇವರುಗಳನ್ನು ವರ್ಷಕ್ಕೊಮ್ಮೆ ಇಲ್ಲಿಗೆ ತರುತ್ತಾರೆ. ಇಲ್ಲಿ ಭೂತ ಚೌಡಿ ಬಿಡಿಸುವುದರಲ್ಲಿ ಹೆಸರು ಪಡೆದಿದೆ.

ಲಿಂಗದಹಳ್ಳಿಯಿಂದ ಕೆಮ್ಮಣ್ಣುಗುಂಡಿಗೆ ಹೋಗುವ ರಸ್ತೆಯಲ್ಲಿ 8 ಮೈಲಿ ಹೋಗಿ ಅಲ್ಲಿಂದ 2 ಮೈಲಿ ಕಾಫಿ ತೋಟಗಳನ್ನು ಹಾದು ಕಲ್ಹತ್ತಿಗಿರಿಗೆ ಹೋಗಬೇಕು.

● ಕೆ. ಶ್ರೀದೇವಿ, ಲಿಂಗದಹಳ್ಳಿ

* * *

ನನ್ನೂರು ಕೊಡೆಕಲ್ಲು

ನನ್ನೂರು ಒಂದು ಐತಿಹಾಸಿಕ ಸ್ಥಳವಾಗಿದೆ. ಇಲ್ಲಿ ಬಸವೇಶ್ವರರ ಪವಿತ್ರವಾದಂತಹ ಎರಡು ದೇವಾಲಯಗಳಿವೆ. ನನ್ನೂರಿನ ಜನ ಹೇಳುತ್ತಾರೆ: ಬಸವೇಶ್ವರರಿಗೆ ಕೆಲ ಜನ ದುಷ್ಟರು ಕೊಲ್ಲಲು ಕೊಡೆಕಲ್ಲಿಗೆ ಬಂದಿದ್ದರಂತೆ. ನನ್ನೂರಲ್ಲಿ ಪ್ರತಿ ವರ್ಷ ಎರಡು ಬಾರಿ ಜಾತ್ರೆ ಆಗುತ್ತೆ. ಗೌರಿ ಹುಣ್ಣಿಮೆ ಜಾತ್ರೆಗೆ ನನ್ನೂರಲ್ಲಿ ಸರ್ವಧರ್ಮ ಸಮ್ಮೇಳನ ಜರಗುತ್ತದೆ. ದವನದ ಹುಣ್ಣಿಮೆ ಜಾತ್ರೆಗೆ ದನಗಳು ಸೇರಿ ದನದ ಜಾತ್ರೆ ಆಗುತ್ತದೆ. ತುಷಾರಣ್ಣ, ನೀನು ನನ್ನೂರಿಗೆ ಬಾ. ನನ್ನೂರಲ್ಲಿ ಪದವಿಪೂರ್ವ ಕಾಲೇಜಿದೆ. ನನ್ನೂರಿನ ಜನ ಬಹಳ ಒಳ್ಳೆಯವರು. ನನ್ನೂರ ಜಾತ್ರೆಗೆ ಎಲ್ಲಿಂದೆಲೊ ಜನ ಬಂದು ಸೇರುತ್ತಾರೆ. ಆದ ಕಾರಣ ನೀನು ಸಹ ಬಾ. ನನ್ನೂರು ಒಂದು ಐತಿಹಾಸಿಕ ಸ್ಥಳವಾಗಿದೆ. ತುಷಾರಣ್ಣ, ಮರೆಯದೆ ನನ್ನೂರಿಗೆ ಬಾ.

● ಪ್ರೀತಿ ದೇಶಪಾಂಡೆ, ಕೊಡೆಕಲ್ಲು

* * *

ನಮ್ಮ ಊರಿನ ಮುಕ್ತಿಧಾಮ

ಎಲ್ಲರೂ ನಮ್ಮ ಊರಿನಲ್ಲಿ ಅದು ಇದು ನೋಡುವಂತಹ ಸ್ಥಳಗಳಿವೆ ಎಂದು ಹೇಳಿಕೊಳ್ಳುತ್ತಾರೆ. ಆದರೆ ಮುಕ್ತಿಧಾಮ ನೋಡಬೇಕು ಎಂದು ಯಾರಾದರೂ ಹೇಳಿಕೊಳ್ಳುತ್ತಾ

ರೆಯೆ? ಆದರೆ ನಮ್ಮ ಊರಿನಲ್ಲಿರುವ ಮುಕ್ತಿ ಧಾಮವನ್ನು ನೋಡಬೇಕು ಎಂದು ನಾನು ಹೇಳುತ್ತಿದ್ದೇನೆ! ಪ್ರಖ್ಯಾತ ಸಾಹಿತಿಗಾರ ಡಾ। ಹಾ. ಮಾ. ನಾಯಕ್‌ರವರು, "ನನಗೆ ಈ ಮುಕ್ತಿಧಾಮವನ್ನು ನೋಡಿ ಸಾಯುವ ಭಯವೆಲ್ಲವೂ ಹೊರಟುಹೋಯಿತು! ನನಗೆ ಇಲ್ಲೇ ಈಗಲೇ ಸಾಯುವ ಇಷ್ಟ" ಎಂದು ಹೇಳಿದರು. ಇನ್ನೊಬ್ಬರು ಪ್ರಖ್ಯಾತ ಸಾಹಿತಿಗಾರರಾದ ಚದುರಂಗ ಅವರೂ ಹೀಗೆ ಹೇಳಿದರು. ಅವರು ಸದ್ಯಕ್ಕೆ ಸಾಯುವ ಇಷ್ಟಪಡಲಿಲ್ಲ. ಈ ಮುಕ್ತಿಧಾಮ ಸುಂದರ ಉದ್ಯಾನವನದಂತಿದೆ. ಇಲ್ಲಿ ಪ್ರಖ್ಯಾತ ಸಾಹಿತಿಗಳ ಪ್ರಸಿದ್ಧ ವಾಕ್ಯಗಳನ್ನು ಮನಃಶ್ಯಾಂತಿ ಸಿಕ್ಕುವ ಹಾಗೆ ಬರೆಯಲಾಗಿದೆ. ಇಲ್ಲಿ ಶವ ಸಂಸ್ಕಾರಕ್ಕೆ ಎಲ್ಲಾ ಅನುಕೂಲಗಳಿವೆ. ಇಲ್ಲಿ ಶವಸಂಸ್ಕಾರಕ್ಕೆ ಕಡಿಮೆ ಸೌದೆ ಖರ್ಚಾಗುತ್ತದೆ. ಇದರಿಂದ ಪರಿಸರ ಸಂರಕ್ಷಣೆಯು ಆಗುತ್ತದೆ. ಈ ಮಾದರಿ ಮುಕ್ತಿಧಾಮವನ್ನು ನಮ್ಮ ಊರಿನ ದಾನಿಗಳ ನೆರವಿನಿಂದ ಶ್ರೀ ಕೋದಂಡರಾಮ ಶೆಟ್ಟರು ನಿರ್ಮಿಸಿದ್ದಾರೆ.

● ಎಂ. ಸ್ಮಿತಾ, ಚಿಕ್ಕಮಗಳೂರು

* * *

ಗೂಳೂರು ಗಣಪತಿ

ನಮ್ಮ ಊರು ತುಮಕೂರು. ಇಲ್ಲಿಗೆ ಸುಮಾರು 6 ಕಿ.ಮೀ ದೂರದಲ್ಲಿ ಗೂಳೂರು ಹಾಗೂ ಕೈದಾಳ ಇವೆ. ಗೂಳೂರಿನ ಗಣಪತಿ ಇಡೀ ರಾಜ್ಯಕ್ಕೆ ಪ್ರಸಿದ್ಧವಾಗಿದೆ. ಗೂಳೂರಿನಲ್ಲಿ ಪ್ರತಿವರ್ಷ ಸುಮಾರು 10 ಅಡಿ ಎತ್ತರದ ಸುಂದರವಾದ ಮಣ್ಣಿನ ಗಣಪತಿಯನ್ನು ಕೂರಿಸುತ್ತಾರೆ. ಗಣೇಶ ಚತುರ್ಥಿಯ ದಿನ ವಿಗ್ರಹದ ರಚನೆ ಪ್ರಾರಂಭಿಸುತ್ತಾರೆ. ದೀಪಾವಳಿಯ ದಿನದಿಂದ ಪೂಜೆ ಪ್ರಾರಂಭವಾಗುತ್ತದೆ. ಗಣಪತಿಯ ಹಾರ, ಕಿರೀಟ, ಕೈಯಲ್ಲಿರುವ ಹಣ್ಣುಗಳು ನಿಜವಾದುವೇನೋ ಎಂಬಂತಿರುತ್ತವೆ. ದೂರದ ಊರಿನಿಂದ ಜನರು ಗಣಪತಿಯನ್ನು ನೋಡಲು ಬರುತ್ತಾರೆ. ಒಂದು ತಿಂಗಳ ನಂತರ ದೊಡ್ಡ ಜಾತ್ರೆಯಾಗುತ್ತದೆ. ದೇವರಿಗೆ ಪೂಜೆ, ಉತ್ಸವಗಳಾಗಿ ಅಲ್ಲಿನ ಕೆರೆಯಲ್ಲಿ ವಿಸರ್ಜಿಸುತ್ತಾರೆ. ಗೂಳೂರಿಗೆ 2 ಕಿ.ಮೀ. ದೂರದಲ್ಲಿ ಕೈದಾಳ ಇದೆ. ಇಲ್ಲಿ ಚೆನ್ನಕೇಶವನ ಸುಂದರವಾದ ಮೂರ್ತಿ ಇದೆ. ಇದನ್ನು ಅಮರಶಿಲ್ಪಿ ಜಕಣಾಚಾರಿ ಕೆತ್ತಿದ್ದಾನೆ. ಇವೆರಡೂ ಸ್ಥಳಗಳನ್ನು ನೋಡಲು ಅನೇಕ ಜನ ಬರುತ್ತಾರೆ.

● ಎನ್. ಯಶಸ್ವಿ ಮಂಜುನಾಥ,

ತುಮಕೂರು

* * *

ಬೆಂಗಳೂರಿನ ಮಹಾಲಕ್ಷ್ಮಿ

ಬೆಂಗಳೂರು ಮಹಾಲಕ್ಷ್ಮಿ ಬಡಾವಣೆಯಲ್ಲಿ 22 ಅಡಿ ಎತ್ತರ ಹಾಗೂ 16 ಅಡಿ ಅಗಲವಿರುವ ಪ್ರಸನ್ನ ವೀರಾಂಜನೇಯ ಸ್ವಾಮಿ ತುಂಬಾ ಪ್ರಸಿದ್ಧಿ ಪಡೆದಿದೆ. ಗುಡ್ಡದ ಮೇಲಿರುವ 77 ಅಡಿಯ ಈ ದೇವಸ್ಥಾನ ತುಂಬಾ ಸುಂದರವಾಗಿದೆ. ಆಂಜನೇಯ ಸ್ವಾಮಿಗೆ ಕ್ರೇನ್ ಸಹಾಯದಿಂದ ಅಭಿಷೇಕ ಅಲಂಕಾರ ಮಾಡುತ್ತಾರೆ. ಆಂಜನೇಯ ದೇವರ ಹಿಂಭಾಗದಲ್ಲಿ ಬಿಳಿ ಅಮೃತ ಶಿಲೆಯ ಗಣಪತಿ, ಕೋದಂಡರಾಮ, ಸೀತೆ, ಲಕ್ಷ್ಮಣ, ಹನುಮಂತ ಹಾಗೂ ಮಹಾಲಕ್ಷ್ಮಿಯ ಮೂರ್ತಿಗಳು ಮನಸೆಳೆಯುತ್ತವೆ. ದೇವಸ್ಥಾನದ ಆವರಣದಲ್ಲೇ ಅಷ್ಟಲಕ್ಷ್ಮಿ ಮತ್ತು ಅಷ್ಟ ಗಣಪತಿಯ ಸುಂದರ ಬೃಂದಾವನಗಳಿವೆ. ಇದರ ಪಕ್ಕದಲ್ಲೇ ಪ್ರಶಾಂತವಾದ ಧ್ಯಾನ ಮಂದಿರವೂ ಇದೆ. ಈ ದೇವಸ್ಥಾನಕ್ಕೆ ಹೊಂದಿಕೊಂಡಂತೆ ವಿಶಾಲವಾದ ಉದ್ಯಾನವನ ವಿಧವಿಧವಾದ ಮರಗಳಿಂದ ಕೂಡಿ ತುಂಬಾ ಚೆನ್ನಾಗಿದೆ. ಈ ದೇವಸ್ಥಾನವನ್ನು ಹಿಂದೂ ಸ್ವರ್ಣ ಮಂದಿರವನ್ನಾಗಿ ಮಾಡಲು ನಿರ್ಮಾಣ ಕಾರ್ಯ ನಡೆಯುತ್ತಿದೆ. ಇದಕ್ಕೆ 5 ಕೋಟಿ ರೂ. ವೆಚ್ಚ ಅಂದಾಜು ಮಾಡಲಾಗಿದೆ. ಬೆಂಗಳೂರಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಇದೂ ಒಂದಾಗಿ ಹೆಚ್ಚು ಜನರನ್ನು ಆಕರ್ಷಿಸುತ್ತಿದೆ ಎಂದು ಹೇಳಲು ನನಗೆ ತುಂಬಾ ಹೆಮ್ಮೆ ಎನಿಸುತ್ತಿದೆ.


● ವಿ. ರಮ್ಯ, ಬೆಂಗಳೂರು




ಬಹುಮಾನಿತ ಚಿತ್ರಗಳು




ಪ್ರಶಾಂತ ಎನ್, ಭದ್ರಾವತಿ



ಸುಷ್ಮಾ ಬಾಲು, ಬೆಂಗಳೂರು



ಜ್ಯೋತಿ ಮಾಧವ ರೇಲಿಗಾರ್, ದಾಂಡೇಲಿ



ಭರತ್ ಭೂಷಣ್, ಬೆಂಗಳೂರು



ಎಸ್. ರಶ್ಮಿ, ಬೆಂಗಳೂರು


ವಿಚಾರ ಪ್ರಪಂಚ (ಸೇಡಿಯಾಪು ಕೃಷ್ಣ ಭಟ್ಟರ ಸಾಹಿತ್ಯ ಲೇಖನಗಳು) 'ಸಂಪಾದಕರು: ಪಾದೇಕಲ್ಲು ವಿಷ್ಣು ಭಟ್ಟ; ಪ್ರಕಾಶಕರು: ಕರ್ನಾಟಕ ಸಂಘ, ಪುತ್ತೂರು–574 201 (ದ.ಕ.): 580 ಪುಟಗಳು. ಬೆಲೆ: ರೂ. 105/-.



ಹಿರಿಯ ವಿದ್ವಾಂಸರೂ – ಬರೆಹಗಾರರೂ ಆದ ಸೇಡಿಯಾಪು ಕೃಷ್ಣ ಭಟ್ಟ ಅವರ ತೊಂಬತ್ತೊಂಬತ್ತನೇಯ ಹುಟ್ಟುಹಬ್ಬದ ಸಂದರ್ಭಕ್ಕಾಗಿ ಪ್ರಕಟವಾಗಿರುವ ಗ್ರಂಥ. ಸೇಡಿಯಾಪು ಅವರು ಎಪ್ಪತ್ತು ವರ್ಷಗಳಲ್ಲಿ ಬರೆದ ಅಪೂರ್ವ – ಮೌಲಿಕ ಲೇಖನಗಳ ಸಂಕಲನ. ಎಪ್ಪತ್ತು ವರ್ಷಗಳಲ್ಲಿ ಈ ಹಿರಿಯರು ಕಂಡ ಕನ್ನಡ ಸಾಹಿತ್ಯ ಕಲೆ, ಸಂಸ್ಕೃತಿ ಮತ್ತು ವ್ಯಕ್ತಿ – ಸಂಸ್ಥೆಗಳ ಬಗ್ಗೆ ಸೊಗಸಾದ ಲೇಖನಗಳಿವೆ. ಕನ್ನಡ ಭಾಷಾಭ್ಯಾಸಿಗಳಿಗೆ ಅತ್ಯಗತ್ಯ ಗ್ರಂಥ. ಇದನ್ನು ಸಂಪಾದಿಸಿದವರೂ, ಪ್ರಕಟಣೆಗೆ ಕಾರಣರಾದವರೂ ಕನ್ನಡಿಗರ ಕೃತಜ್ಞತೆಗೆ ಅರ್ಹರು.


ಶ್ರೀ ಕನಕದಾಸರು (ಜೀವನ ಚರಿತ್ರೆ) ಲೇ: ಕೊರಟಿ ಶ್ರೀನಿವಾಸ ರಾವ್; ಭಾಗ್ಯಲಕ್ಷ್ಮಿ ಪ್ರಕಾಶನ, 87, 3ನೆಯ ಕ್ರಾಸ್, 4ನೆಯ ಬ್ಲಾಕ್, ಬನಶಂಕರಿ 3ನೆಯ ಸ್ಟೇಜ್, 3ನೆಯ ಫೇಸ್, ಬೆಂಗಳೂರು–560 085: 552 ಪುಟಗಳು. ಬೆಲೆ: ರೂ. 80/-.

ಕನ್ನಡ ಸಾಹಿತ್ಯದಲ್ಲಿ ಉತ್ತಮ ಕೃಷಿ ಮಾಡಿದ್ದ ಕೊರಟಿ ಶ್ರೀನಿವಾಸ ರಾವ್ ಅವರು ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದರ ಜೊತೆಗೆ ಆಧ್ಯಾತ್ಮ ಮತ್ತು ಭಕ್ತಿ ಪಂಥದ ಅನೇಕ ಗ್ರಂಥಗಳನ್ನೂ ರಚಿಸಿದವರು. ಮಧ್ವಾಚಾರ್ಯರು, ಜಯತೀರ್ಥರು, ವ್ಯಾಸರಾಜರು,



ಶ್ರೀಪಾದರಾಜರು, ವಾದಿರಾಜರು, ರಾಘವೇಂದ್ರರು, ಪುರಂದರದಾಸರು – ಹೀಗೆ ಈ ಮಾಲೆಯಲ್ಲಿ ಅವರು ಬರೆದು ಪ್ರಕಟವಾದ ಮಾಲೆಗೆ ಈ ಪುಸ್ತಕ ಉತ್ತಮ ಸೇರ್ಪಡೆ. ಕನಕದಾಸರು ಬದುಕು ಬಾಳಿ ದಾಸರಾಗಿ ಬೆಳೆದ ಚರಿತ್ರೆಯನ್ನು ಆಧಾರಗಳೊಂದಿಗೆ ರಚಿಸಿದ್ದಾರೆ. ಎಲ್ಲರೂ ಓದಬೇಕಾದ ಉತ್ತಮ ಕೃತಿ.

ಪಯಣ (ಕಥೆಗಳು) ಲೇ: ಸಾರಾ ಅಬೂಬಕ್ಕರ್; ಪುಸ್ತಕ



ಪ್ರಕಾಶನ, 91, 9ನೆಯ ಮೇನ್ ರಸ್ತೆ, ಸರಸ್ವತೀಪುರಂ, ಮೈಸೂರು – 570 009. 116 ಪುಟಗಳ. ಬೆಲೆ: ರೂ. 35/-.

ಕನ್ನಡದಲ್ಲಿ ಮುಸ್ಲಿಂ ಜನಾಂಗದ ಸಂವೇದನೆಗಳನ್ನು ಅಭಿವ್ಯಕ್ತಿಸಿದ ಸಾರಾ ಅಬೂಬಕ್ಕರ್ ಅವರ ಒಂಬತ್ತು ಕಥೆಗಳ ಸಂಕಲನ. ಮುಸ್ಲಿಂ

ಬದುಕಿನ ಒಳನೋಟವಲ್ಲದೆ, ಎರಡು ಹಿಂದೂ ಸಂಸಾರದ ಕಥೆಗಳೂ ಇವೆ. ಆಳ ನೋಟದ ಸಾರ್ಥಕ ಕಥೆಗಳು.

ಶಿಷ್ಟ ಪರಿಶಿಷ್ಟ (ವಿಮರ್ಶಾ ಲೇಖನಗಳು) ಲೇ: ಡಾ। ಪುರುಷೋತ್ತಮ ಬಿಳಿಮಲೆ; ಮದಿವು ಪ್ರಕಾಶನ, ಮಂಗಳ ಗಂಗೋತ್ರಿ, ಮಂಗಳೂರು. 216 ಪುಟಗಳು. ಬೆಲೆ: ರೂ. 45/- ಮತ್ತು ಉತ್ತಮ ಪ್ರತಿಗೆ ರೂ. 75/-.

ಕನ್ನಡ ಸಾಹಿತ್ಯದ ಉತ್ತಮ ವಿಮರ್ಶಕರಲ್ಲೊಬ್ಬರಾದ – ಅಧ್ಯಾಪಕ ಡಾ। ಬಿಳಿಮಲೆ, ಬಂಡಾಯ – ದಲಿತ ಸಾಹಿತ್ಯ ಮತ್ತು ಜಾನಪದ ಕ್ಷೇತ್ರದಲ್ಲಿ ಅಧಿಕಾರವಾಣಿಯಿಂದ ಬರೆದಿರುವವರು. ಈ ಪುಸ್ತಕದಲ್ಲಿ ಡಾ। ಬಿಳಿಮಲೆ ಅವರು, ಕನ್ನಡ ಸಾಹಿತ್ಯ ಕೃತಿಕಾರರ – ಕೃತಿಗಳ ವಿಮರ್ಶಾತ್ಮಕ ಅವಲೋಕನವನ್ನು ನೀಡಿದ್ದಾರೆ. ಬೇರೆ ಬೇರೆ ನೋಟದ ಲೇಖಕರ ಕೃತಿಗಳನ್ನು ಒಳಹೊಕ್ಕು ಬರೆದಿದ್ದಾರೆ.

ಬೇಕು ನನಗೀ ಜೀವನ (ಕವನಗಳು) ಲೇ: ಮಟ್ಟಿ ರಾಧಾಕೃಷ್ಣ ರಾವ್; ಗೀತಾ ಪ್ರಕಾಶನ, ಶ್ರೀರಾಮ ಪೇಟೆ, ಕಾಸರಗೋಡು, ದ. ಭಾರತ. 40 ಪುಟಗಳು. ಬೆಲೆ:




ರೂ. 10/-.

ಬರವಣಿಗೆಯಲ್ಲಿ ಪಳಗಿದ, ಜೀವನಾನುಭವವಿರುವ ಕವಿಯ ಇಪ್ಪತ್ತಾರು ಕವಿತೆಗಳ ಸಂಕಲನ, ಕಾವ್ಯಲೋಕದಲ್ಲಿ ಹೆಚ್ಚು ಪ್ರಚಾರಕ್ಕೆ ಬರದ ಮಟ್ಟಿ ರಾಧಾಕೃಷ್ಣ ರಾವ್ ಅವರ ಸೊಗಸಾದ ಕವಿತೆಗಳು.

ಮಾತೆಲ್ಲ ಜ್ಯೋತಿ – ದ. ರಾ. ಬೇಂದ್ರೆ ಅವರ ಹತ್ತು ಉಪನ್ಯಾಸಗಳು: 103 ಪುಟಗಳು. ಬೆಲೆ: ರೂ. 15/-.

ನಿವೇದನೆ – ಸಾಹಿತ್ಯಕಾರನ ಇತಿವೃತ್ತ – ಕು. ಶಿ. ಹರಿದಾಸ ಭಟ್ಟ: 166 ಪುಟಗಳು. ಬೆಲೆ: ರೂ. 20/-.

'ಕನ್ನಡದಲ್ಲಿ ಅಲಭ್ಯ ಕೃತಿಗಳನ್ನು, ಅಲಕ್ಷಿತ ಕೃತಿಗಳನ್ನು, ಹೊಸ ಕೃತಿಗಳನ್ನು ಕನ್ನಡ ಓದುಗರಿಗೆ ತಲುಪಿಸಬೇಕೆಂಬ ಸದಿಚ್ಛೆಯಿಂದ' ಮಣಿಪಾಲ ಮುದ್ರಣ – ಪ್ರಕಾಶನ ಸಂಸ್ಥೆ ಪ್ರಕಟಿಸಿರುವ ಎರಡು ಉತ್ತಮ ಕೃತಿಗಳು.



ದ.ರಾ ಬೇಂದ್ರೆ ದಕ್ಷಿಣ ಕನ್ನಡ ಜಿಲ್ಲೆಯ ಹತ್ತು ದಿನಗಳ ಪ್ರವಾಸದಲ್ಲಿ ಮಾಡಿದ ಉಪನ್ಯಾಸಗಳ –ಕವನಗಳ ಸಂಕಲನ. ಬೇಂದ್ರೆ ಮಾತಿನ ಜ್ಯೋತಿ ಎಲ್ಲರನ್ನೂ ಸೆಳೆಯುವಂಥದು. ಅವರ ಮಾತಿನ ಪುಸ್ತಕರೂಪ ಉತ್ತಮ ಕೊಡುಗೆ.




ಹಿರಿಯ ಲೇಖಕ – ಸಂಶೋಧಕ ಪ್ರೊ। ಕು. ಶಿ. ಹರಿದಾಸ ಭಟ್ಟ ಅವರ ಬದುಕು – ಬರೆಹದ 'ನಿವೇದನೆ'. ಹನ್ನೆರಡು ಅಧ್ಯಾಯಗಳಲ್ಲಿ ತಮ್ಮ ಬದುಕಿನ ಐವತ್ತು – ಅರುವತ್ತು ವರ್ಷಗಳ ಕಥೆ ಹೇಳಿದ್ದಾರೆ. ಅರ್ಧ ಶತಮಾನದ ಬದುಕಿನ, ಜನನಡವಳಿಕೆಯ ನೋಟ ಇದರಲ್ಲಿದೆ.


ಈ ವರ್ಷದಲ್ಲೆ ಕಡಮೆ ಬೆಲೆ – ಸುಂದರ ಮುದ್ರಣದ, ಇನ್ನೂ ಆರು ಪುಸ್ತಕಗಳ ಕಾರ್ಯಕ್ರಮವನ್ನು ಮಣಿಪಾಲ ಪ್ರಕಟನ ಸಂಸ್ಥೆ ಹಾಕಿಕೊಂಡಿದೆ.

(ಪ್ರಸರಣಾಧಿಕಾರಿ, ಮಣಿಪಾಲ ಮುದ್ರಣ – ಪ್ರಕಾಶನ ಲಿ., ಪ್ರೆಸ್ ಕಾರ್ನರ್, ಮಣಿಪಾಲ – 576 119 ಇವರಿಗೆ ಪ್ರತಿಗಾಗಿ ಹಣ ಕಳುಹಿಸಬಹುದು).

ಸಾಹಿತ್ಯ ಕ್ವಿಜ್ ಸಾಹಿತ್ಯ



ಚಿತ್ರ: 10



ಚಿತ್ರ: 5

1. 'ಕರುನಾಟ್ ಕುರುನಾಡಗನ್' ಎಂದು ಕರ್ನಾಟಕದ ಪ್ರಸ್ತಾಪವಿರುವ ಪ್ರಾಚೀನ ತಮಿಳು ಕಾವ್ಯ ಯಾವುದು?
2. ಕುಮಾರವ್ಯಾಸ ಭಾಮಿನಿ ಷಟ್ಪದಿಯಲ್ಲಿ ರಚಿಸಿದ ಕಾವ್ಯ.
3. ಜಿ. ಪಿ. ರಾಜರತ್ನಂ ಅವರ ತುತ್ತೂರಿ, ಕಡಲೆಪುರಿ, ಕೆನೆಹಾಲು ಮೊದಲಾದ ಕೃತಿಗಳಿಗೆ ಚಿತ್ರಗಳನ್ನು ಬಿಡಿಸಿದವರು.
4. 'ಹಿಮಾಚಲದಿಂ . ರಾಮೇಶ್ವರ' ಇದು ಕೇಂದ್ರದ ಮಂತ್ರಿಯಾಗಿದ್ದವರೊಬ್ಬರ ಕವನ ಸಂಗ್ರಹ – ಆ ರಾಜಕಾರಣಿ ಯಾರು?
5. ಈ ಚಿತ್ರ ಕನ್ನಡ ಸಾಹಿತ್ಯ ಸಮ್ಮೇಳನ ವೊಂದರ ಉದ್ಘಾಟನಾ ಸಮಾರಂಭದಲ್ಲಿ ತೆಗೆದದ್ದು. ಆ ಸಮ್ಮೇಳನ ಯಾವುದು? ಸಮ್ಮೇಳನಾಧ್ಯಕ್ಷರ್ಯಾರು?
6. ಜೈಮಿನಿ ಭಾರತ ಬರೆದ ಲಕ್ಷ್ಮೀಶ ಕವಿಯ ಹುಟ್ಟಿದೂರು.
7. 1955ರಲ್ಲಿ ಕನ್ನಡ ಭಾಷೆಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ತಂದು ಕೊಟ್ಟ ಕೃತಿ – ಕೃತಿಕಾರರು.
8. ರಾಮಚಂದ್ರ ಭೀಮರಾವ್ ಕುಲಕರ್ಣಿ – ಇದು ಕನ್ನಡದ ಹೆಸರಾಂತ ಕಾದಂಬರಿ ಕಾರರ ನಿಜವಾದ ಹೆಸರು, ಅವರ ಕಾವ್ಯ ನಾಮವೇನು?
9. ದೇವುಡು ನರಸಿಂಹ ಶಾಸ್ತ್ರಿಗಳು ಮಕ್ಕಳಿ ಗಾಗಿ ರಚಿಸಿದ ಏಕೈಕ ನಾಟಕ?
10. ಕನ್ನಡದ ಪ್ರತಿಷ್ಠಿತ ಪ್ರಶಸ್ತಿಯೊಂದಿಗೆ ನೀಡುವ ಶಿಲ್ಪ ಇದು, ಪ್ರಶಸ್ತಿ ಯಾವುದು? ಶಿಲ್ಪ ಯಾವುದು?
11. 'ಪ್ರಬುದ್ಧ ಕರ್ನಾಟಕ' ತ್ರೈಮಾಸಿಕದ ಪ್ರಾರಂಭಿಕ ಸಂಪಾದಕರ್ಯಾರು?
12. ಕನ್ನಡದ ಪುರಾತನ ಗ್ರಂಥ ಯಾವುದು?
13. ಒರಿಯಾದ ಗೋಪಿನಾಥ್ ಮೊಹಂತಿ ಅವರೊಡನೆ ಜ್ಞಾನಪೀಠ ಪ್ರಶಸ್ತಿಯನ್ನು ಹಂಚಿಕೊಂಡವರು.
14. ಮೋಹನ ತರಂಗಿಣಿ ಕಾವ್ಯದ ಕರ್ತೃ.
15. ಕೇಂದ್ರ ಸಾಹಿತ್ಯ ಅಕಾಡಮಿ ಅಧ್ಯಕ್ಷ ರಾಗಿದ್ದು, ಕನ್ನಡದ ಕೀರ್ತಿ ಪತಾಕೆ ಹಾರಿ ಸಿದ ಸಾಹಿತಿಗಳು ತಮ್ಮ ಪತ್ನಿಯೊಡನೆ ಚಿತ್ರದಲ್ಲಿದ್ದಾರೆ ಯಾರವರು?



ಚಿತ್ರ: 15

● ನಾ.ಜ.ಪ್ರ.

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಕ್ವಿಜ್‌ನ ಉತ್ತರ

1) ನಂದಳಿಕೆ ಲಕ್ಷ್ಮೀನಾರಾಯಣಪ್ಪ
2) ಹದಿಬದೆಯ ಧರ್ಮ
3) ಹುಯಿಲುಗೋಳ ನಾರಾಯಣರಾಯರು.
4) ಕುವೆಂಪು ಅವರಿಗೆ ವಿದ್ಯೆ ಕಲಿಸಿದ ಶ್ರೀ ಮೋಸೆಸ್
5) ಆಂಡಯ್ಯ
6) 9ನೇ ಶತಮಾನ, 19 ಕಥೆಗಳು.
7) ನೃಪತುಂಗ.
8) ಆರ್ಯಾಂಭ ಪಟ್ಟಾಭಿ.
9) ಬಂಗಾಲದ ರಜನೀಕಾಂತ ಗುಪ್ತ ಅವರ "ರಾಜಪುತ್ರಿ ಮಹಿಮೆ"
10) ವಿಶ್ವ ಕನ್ನಡ ಸಮ್ಮೇಳನದ ಗೋಷ್ಠಿಯೊಂದರಲ್ಲಿ ಎ. ಎನ್. ಮೂರ್ತಿ ರಾವ್ ಮಾತನಾಡುತ್ತಿರುವುದು. ಹಾ. ಮಾ. ನಾಯಕ, ಸಿದ್ದಯ್ಯ ಪುರಾಣಿಕರೂ ಚಿತ್ರದಲ್ಲಿದ್ದಾರೆ.
11) ನಿರಂಜನ.
12) ರಾಷ್ಟ್ರ ಜೀವನ ಗ್ರಂಥ ಮಾಲೆ.
13) ಶಿವರಾಮ ಕಾರಂತರು.
14) ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಪ್ರೊ। ಜಿ. ಎಸ್. ಸಿದ್ದಲಿಂಗಯ್ಯನವರು ಅಧಿಕಾರ ಸ್ವೀಕರಿಸಿದಾಗ ತೆಗೆದ ಚಿತ್ರ. ಇನ್ನೊಬ್ಬರು ಆಗಿನ ಕನ್ನಡ ಹಾಗೂ ಸಂಸ್ಕೃತಿ ಇಲಾಖೆ ನಿರ್ದೇಶಕ ಐ. ಎಂ. ವಿಠಲಮೂರ್ತಿ.
15) ಡಾ। ಪ್ರಭುಶಂಕರ.



● ಟ್ರೈನಿ

ಮಾರ್ಚ್ 22ರಿಂದ ಏಪ್ರಿಲ್ 20:

ವೈವಿಧ್ಯಮಯ ಶುಭ ಸಮಾಚಾರಗಳು ಮನಸ್ಸಿಗೆ ಹೆಚ್ಚಿನ ಖುಶಿ ಕೊಡಬಹುದು. ಜೀವನಗತಿಯಲ್ಲೂ ಯಶಸ್ವೀ ಮುನ್ನಡೆ ಸಾಧಿಸುವಿರಿ. ಇತರ ಆರ್ಥಿಕ ಮೂಲದ ಸಾಧ್ಯತೆಯೂ ಇದೆ. ಕೌಟುಂಬಿಕ ಬದುಕಿನಲ್ಲೂ ನಿರಾಳ ಮುನ್ನಡೆ ನಿಮ್ಮದಾಗಬಹುದು. ಕಿರಿಯರ ಬದುಕಿನ ನಿಷ್ಕರ್ಷೆಯೂ ಈ ಅವಧಿಯಲ್ಲಿ ನಡೆಯಬಹುದು. ಸಾಮಾಜಿಕ ಬದುಕಿನಲ್ಲೂ ಹಿಂದೆಂದಿಗಿಂತ ಹೆಚ್ಚಿನ ಜನಪ್ರಿಯತೆ ಗಳಿಸುವಿರಿ. ಮನೆಮಂದಿಯ ಆರೋಗ್ಯದಲ್ಲಿ ಸ್ವಲ್ಪ ಏರುಪೇರಾಗಬಹುದು.

ಏಪ್ರಿಲ್ 21ರಿಂದ ಮೇ 21:

ಉದ್ಯೋಗ ಮತ್ತು ವ್ಯಾವಹಾರಿಕರಂಗಗಳಲ್ಲಿ ಒಂದು ಬಗೆಯ ಹೊಸತನ, ಚೇತರಿಕೆ ಕಂಡು ಬರಬಹುದು. ಕೊಡು-ಕೊಳ್ಳುವಿಕೆಗೆ ಇದು ಯೋಗ್ಯ ಸಮಯ. ಕೌಟುಂಬಿಕವಾಗಿಯೂ ನೆಮ್ಮದಿಯ ದಿನಗಳು. ಸಂತಸದ, ಲಾಭದಾಯಕ ಸಮಾರಂಭಗಳ ಸಾಧ್ಯತೆಯೂ ಇದೆ. ದೂರ ಪ್ರವಾಸ ಮತ್ತು ಸಂತಸದ ರಜಾದಿನಗಳು. ದೂರದಲ್ಲಿರುವವರಿಂದ ಸಕಾಲಿಕ ನೆರವು ಬರಬಹುದು. ಸಟ್ಟಾ – ಕೋರ್ಟ್ ವ್ಯವಹಾರಗಳಲ್ಲಿ ಯಶ ನಿಮ್ಮ ಪಾಲಿಗಾಗಬಹುದು.

ಮೇ 22ರಿಂದ ಜೂನ್ 21:

ಅದೃಷ್ಟದಾಯಕ ಒಳ್ಳೆಯ ಬೆಳವಣಿಗೆಗಳು. ಜೀವನಗತಿಯಲ್ಲಾಗಲಿ, ವ್ಯಾವಹಾರಿಕರಂಗದಲ್ಲಾಗಲಿ ನಿಮ್ಮೆಲ್ಲ ತೊಡಗುವಿಕೆಗಳಿಗೆ ಇಂದು ಯಶಸ್ಸಾಗಬಹುದು. ಆದರೆ ಮನೆಯ ಬೆಳವಣಿಗೆ ದಿಸೆಯಲ್ಲಿ ಕೊನೆಯ ಕ್ಷಣದಲ್ಲಿ ಸ್ವಲ್ಪ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ. ಹಲವರಿಗೆ ಆರ್ಥಿಕವಾಗಿ ಸ್ವಲ್ಪ ತಾಪತ್ರಯವಾಗಬಹುದು. ಆದರೆ ಮಾಸದ ಕೊನೆ ವೇಳೆಗೆ ನಿರಾಳರಾಗಬಹುದು. ಸಾಮಾಜಿಕರಂಗದಲ್ಲಿ ಎಂದಿನ ಜನಪ್ರಿಯತೆ ಉಳಿಸಿಕೊಳ್ಳುವಿರಿ. ಒಬ್ಬಂಟಿಗರಾಗಿದ್ದು, ಯೋಗ್ಯ ವಯಸ್ಕರಿಗೆ ಈ ಮಾಸ ವಿವಾಹಯೋಗವಿದೆ.

ಜೂನ್ 22ರಿಂದ ಜುಲೈ 23:

ಹೇಳಿಕೊಳ್ಳುವಷ್ಟು ಈ ಮಾಸ ಚೆನ್ನಾಗಿಲ್ಲ. ಒಂದು ಬಗೆಯ ಅತಂತ್ರ, ಒರಟು ದಿನಗಳಂತೆ ಭಾಸವಾಗಬಹುದು. ನಿರೀಕ್ಷಿಸಿದ ಹಣವೂ ಸರಿಯಾದ ಸಮಯಕ್ಕೆ ಸಿಗದೆ ಕಂಗೆಡುವಿರಿ. 18ರ ತನಕ ಜೀವನಗತಿಯಲ್ಲೂ ನಿಧಾನ ನಡೆ. ಆದರೆ 18ರ ಬಳಿಕ ಎಲ್ಲ ರಂಗಗಳಲ್ಲೂ ನಿಧಾನವಾಗಿ ಚೇತರಿಸುವಿರಿ. ಆ ಕ್ಷಣಗಳಲ್ಲೆ ಸಹಾಯಹಸ್ತವೊಂದು ದೊರಕಿ, ಹೆಚ್ಚಿನ ಭರವಸೆಯಾಗಬಹುದು. ಕೌಟುಂಬಿಕ ಬದುಕಿನಲ್ಲೂ ಅನಿವಾರ್ಯವಾಗಿ ನಿರ್ಲಿಪ್ತ ನಡೆ ನಿಮ್ಮದಾಗಬಹುದು. ಪ್ರಣಯ ಬದುಕಿನಿಂದ ಇಂದು ಸಾಧ್ಯವಾದಷ್ಟು ದೂರವಿರಿ.

ಜುಲೈ 24ರಿಂದ ಆಗಸ್ಟ್ 21:

ನಿರೀಕ್ಷೆಯ, ಸಾಧನೆಯ ದಿನಗಳತ್ತ ಮುನ್ನಡೆಯುತ್ತಿದ್ದೀರಿ. ನೌಕರಿರಂಗದ ತೊಡಗುವಿಕೆಗಳೆಲ್ಲ ಯಶಸ್ವಿಯಾಗಬಹುದು. ಕೌಟುಂಬಿಕ ಸಮಸ್ಯೆಗಳ ಪರಿಹಾರದ ಕ್ಷಣಕ್ಕೆ ಸಿದ್ಧರಾಗಿರಿ. ಸಾಮಾಜಿಕರಂಗದಲ್ಲೂ ಚೇತರಿಸುವಿರಿ. ಆರ್ಥಿಕವಾಗಿ ಯಾವುದೇ ತಾಪತ್ರಯ ಕಾಡದು. ಕೋರ್ಟ್, ಸಟ್ಟಾ ವ್ಯವಹಾರಗಳಲ್ಲಿ ಯಶಸ್ಸು ನಿಮ್ಮದಾಗಬಹುದು. ಬಾಕಿಯಿರಿಸಿದ್ದ ಕೆಲಸ – ಕಾರ್ಯಗಳನ್ನು ಮರಳಿ ಕೈಗೆತ್ತಿಕೊಳ್ಳುವಿರಿ. ಮನೆಮಂದಿಯ ಆರೋಗ್ಯದ ಬಗ್ಗೆ ಸ್ವಲ್ಪ ಜಾಗ್ರತೆಯಿಂದಿರಿ.

ಆಗಸ್ಟ್ 22ರಿಂದ ಸೆಪ್ಟಂಬರ್ 21:

ಪ್ರತಿಯೊಂದು ವಿಷಯಗಳೂ ನಿರಾಳವಾಗಿ ಮುನ್ನಡೆಯುತ್ತಿರುವಂತೆ ಭಾಸವಾಗಬಹುದು. ಜೀವನಗತಿಯ ಬೆಳವಣಿಗೆಗಳೂ ಮೋಡಿಯಾಟದಂತೆನಿಸಬಹುದು. ಮನೆಯಲ್ಲಿನ ಸಮಸ್ಯೆಯನ್ನು ತೀರ ಲಘುವಾಗಿ ನಿಭಾಯಿಸಿ, ಇಲ್ಲದಿದ್ದಲ್ಲಿ

ನಿಮ್ಮ ಆರೋಗ್ಯಕ್ಕೆ ಧಕ್ಕೆಯಾಗಬಹುದು. ಬದುಕಿನಲ್ಲಿ ಎದುರಾಗುವುದನ್ನು ದೃಢತೆಯಿಂದ ಎದುರಿಸಿ, ಮುನ್ನಡೆಯಲು ಯತ್ನಿಸಿ; ಫಲಾಫಲಗಳನ್ನು ದೈವಚಿತ್ತಕ್ಕೇ ಬಿಡಿ. ಕೋರ್ಟ್ ವ್ಯವಹಾರ, ಆರ್ಥಿಕ ವಿಷಯಗಳಲ್ಲಿ ಯಶಸ್ಸು ಸಾಧಿಸುವಿರಿ.

ಸೆಪ್ಟಂಬರ್ 22ರಿಂದ ಅಕ್ಟೋಬರ್ 23:

ಸಮಯಾವಕಾಶ ಹೆಚ್ಚಿರುವುದರಿಂದ ಪ್ರತಿಯೊಂದನ್ನೂ ನಿಧಾನವಾಗಿ ಯೋಚಿಸಿ, ಮುಂದಡಿಯಿಡಿ. ಆರ್ಥಿಕವಾಗಿಯೂ ಯಾವುದೇ ತಾಪತ್ರಯ ಕಾಡದು. ಉದ್ಯೋಗರಂಗ ಮತ್ತು ವ್ಯಾವಹಾರಿಕ ಬದುಕಿನಲ್ಲಿ ನಿರಾಳ ಮುನ್ನಡೆ. ಮನೆಯಲ್ಲಿ ಖುಶಿ ಕೊಡುವ ಅನಿರೀಕ್ಷಿತ ಬೆಳವಣಿಗೆಗಳು, ಶುಭ ಸಮಾರಂಭದ ಸಾಧ್ಯತೆಯೂ ಇದೆ. ಕುಟುಂಬಕ್ಕೆ ಹೊಸಬರ ಸೇರ್ಪಡೆಯಾಗಬಹುದು. ದೂರದ ಊರಿನಿಂದ ಶುಭ ಸುದ್ದಿ ಅಥವಾ ದೂರ ಪ್ರವಾಸದ ಯೋಗ ಇದೆ.

ಅಕ್ಟೋಬರ್ 24ರಿಂದ ನವೆಂಬರ್ 21:

ಹಲವಾರು ಬಗೆಗಳಿಂದ ಅದೃಷ್ಟದಾಯಕ ದಿನಗಳಿವು. ತೊಡಗುವಿಕೆಯಲ್ಲಿನ ನಿಧಾನಗತಿ ಕಣ್ಮರೆಯಾಗಿ, ಯಶಸ್ವಿಯಾಗಿ ಮುನ್ನಡೆಯಬಹುದು. ಜೀವನಗತಿಯಲ್ಲಿ ಮತ್ತು ವ್ಯಾವಹಾರಿಕ ಬದುಕಿನಲ್ಲಿ ಚೇತರಿಕೆ ಕಂಡುಬರಬಹುದು, ಆರ್ಥಿಕವಾಗಿಯೂ ಬಲಗೊಳ್ಳಬಹುದು. ಒಳ್ಳೆಯ ಆರೋಗ್ಯ ಭಾಗ್ಯವೂ ನಿಮ್ಮದಾಗಬಹುದು. ಮನೆಯಲ್ಲಿ ಖುಶಿ ಕೊಡುವ ವಾತಾವರಣ, ಶುಭ ಸಮಾರಂಭಗಳು. ಯೋಗ್ಯ ವಯಸ್ಕರಿಗೆ ಈ ವರ್ಷ ವಿವಾಹಯೋಗ ಇದೆ.

ನವೆಂಬರ್ 22ರಿಂದ ಡಿಸೆಂಬರ್ 21:

ನಿರಾತಂಕ, ನಿರಾಳದ ದಿನಗಳಿವು. ಹಿಂದಿನ ಆರ್ಥಿಕ ತಾಪತ್ರಯವೂ ಇಂದು ಇಲ್ಲವಾಗಬಹುದು. ಹೊಸದರ ಆರಂಭ ಅಥವಾ ದೀರ್ಘ ಕಾಲದ ನಿಮ್ಮ ಯೋಜನೆ ಕಾರ್ಯರೂಪಕ್ಕೆ ಇಂದು ಬರಬಹುದು. ಜೀವನಗತಿಯಲ್ಲೂ ಯಶಸ್ವಿಯಾಗಿ ಮುನ್ನಡೆಯುವಿರಿ. ಕೌಟುಂಬಿಕ ಬದುಕಿನಲ್ಲೂ ಒಂದು ಬಗೆಯ ಹೊಸ ವಾತಾವರಣ. ಕೈಹಾಕುವ ಹೆಚ್ಚಿನ ಕಾರ್ಯಗಳಲ್ಲಿ ಅದೃಷ್ಟದಾಟದ ಪರಿಚಯ ಇಂದು ನಿಮಗಾಗಬಹುದು.

ಡಿಸೆಂಬರ್ 22ರಿಂದ ಜನವರಿ 20:

ನಿಮಗೆ ವಿಶೇಷ ಶಕ್ತಿ, ಭರವಸೆ ಮತ್ತು ಸಂತಸ ತರುವ ದಿನಗಳಿವು. ಜೀವನಗತಿಯಲ್ಲೂ ವಿಶೇಷವಾದ್ದನ್ನು ದಾಖಲಿಸಿ, ಇತರರ ಹೊಗಳಿಕೆಗೆ ಪಾತ್ರರಾಗುವಿರಿ. ನಿಮ್ಮ ಪ್ರಾಮಾಣಿಕತೆಯ ಜೊತೆಗೆ ಒಬ್ಬರ ವಿಶೇಷ ಒಲವು ನೌಕರಿ ರಂಗದಲ್ಲಿ ವಿಶೇಷ ಸ್ಥಾನ ಒದಗಿಸಬಹುದು. ಆರ್ಥಿಕವಾಗಿಯೂ ಹಿಂದಿನ ವೆಚ್ಚಗಳಿಗೆ ಸೂಕ್ತ ಪ್ರತಿಫಲ ಇಂದು ದೊರೆಯಬಹುದು. ಯೋಗ್ಯ ವಯಸ್ಕರಿಗೆ ಈ ಮಾಸ ವಿವಾಹಯೋಗ ಕೂಡಿಬರಬಹುದು. ಸಾಮಾಜಿಕವಾಗಿಯೂ ನೆನಪಿನಲ್ಲುಳಿಯುವ ದಿನಗಳಿವು. ಮನೆಯಲ್ಲಿ ಹಿರಿಯರೊಬ್ಬರ ಆರೋಗ್ಯದ ಬಗ್ಗೆ ಸ್ವಲ್ಪ ಎಚ್ಚರದಿಂದಿರಿ.

ಜನವರಿ 21ರಿಂದ ಫೆಬ್ರವರಿ 19:

ಯೋಜಿತ ದಾರಿಯಲ್ಲಿ ನಿರಾತಂಕವಾಗಿ ಮುನ್ನಡೆಯಲು ಯತ್ನಿಸಿ, ಹೆಚ್ಚಿನ ಬೆಳವಣಿಗೆಗಳು ಮೋಡಿಯಾಟದಂತೆ ನಿಮಗೆ ಭಾಸವಾಗಬಹುದು. ವ್ಯಾವಹಾರಿಕ ಮತ್ತು ಜೀವನಗತಿಯಲ್ಲಿ ಒಳ್ಳೆಯ ಸ್ಥಿತಿಯಲ್ಲಿರುವುದನ್ನು ಗಮನಿಸುವಿರಿ. ಮನೆ ಮತ್ತು ಕೌಟುಂಬಿಕ ವಿಷಯಗಳತ್ತ ನಿಮ್ಮ ಹೆಚ್ಚಿನ ಸಮಯ ವಿನಿಯೋಗಿಸಬೇಕಾಗಬಹುದು, ಅನಾರೋಗ್ಯ ಅಥವಾ ಅನಿರೀಕ್ಷಿತ ಆಘಾತದ ಸಾಧ್ಯತೆಯೂ ಇದೆ. ಇಂದು ನೇರವಾಗಿ ಮುಂದೊತ್ತಿ ಹೋಗದಿರಿ, ಜನರ ಮುಖ ಕಂಡು ಮಾರುಹೋಗದಿರಿ, ಜಾಗರೂಕರಾಗಿ.

ಫೆಬ್ರವರಿ 20ರಿಂದ ಮಾರ್ಚ್ 21:

ಹೊಸ ಪರಿಸರ ನಿಮ್ಮನ್ನು ಸ್ವಾಗತಿಸಬಹುದು. ಬದುಕಿನ ಗತಿಯಲ್ಲಿ, ವ್ಯಾವಹಾರಿಕರಂಗದಲ್ಲಿ ಸಂತಸದ ಬದಲಾವಣೆಯಾಗಬಹುದು. ಕೌಟುಂಬಿಕವಾಗಿ ನೆಮ್ಮದಿಯ ಬದುಕು, ಹಬ್ಬದ ಸಡಗರ. ಬದಲಿ ಆರ್ಥಿಕ ಮೂಲದ ಸಾಧ್ಯತೆ ಇದೆ. ಸಟ್ಟಾ, ಕೋರ್ಟ್ ವ್ಯವಹಾರಗಳಲ್ಲಿ ಗೆಲುವು ಸಾಧಿಸುವಿರಿ. ದೂರದೂರಿನಿಂದ ಶುಭ ಸುದ್ದಿ ಬರಬಹುದು, ಹೊಸ ಗೆಳೆಯರ ಲಾಭವಾಗಬಹುದು. ಸಾಮಾಜಿಕವಾಗಿ ಹಿಂದೆಂದಿಗಿಂತ ಹೆಚ್ಚಿನ ಜನಪ್ರಿಯತೆ ಗಳಿಸುವಿರಿ. ಮನೆಮಂದಿಯ ಆರೋಗ್ಯದ ಬಗ್ಗೆ ಮುಂಜಾಗ್ರತೆ ವಹಿಸಿ. ●

ಪತ್ತೇದಾರಿ ಕಾದಂಬರಿ

ವಿಷಮಂಥನ

● ಸುದರ್ಶನ ದೇಸಾಯಿ
'ಹಳದಿ ಚೇಳು',
ಸಾರಸ್ವತಪುರ ಕೊನೆ,
(ರೈಲ್ವೆಹಳಿ ಬಳಿ),
ಧಾರವಾಡ – 580 002.

ದಕ್ಷಿಣ ಭಾರತದ ಕಾಶಿ ಎಂದೇ ಪ್ರಖ್ಯಾತವಾಗಿರುವ ಗೋಕರ್ಣಕ್ಕೆ ಬಂದು ನಾಲ್ಕು ದಿನಗಳಾಗಿದ್ದವು. ಎರಡು ದಿನವಿದ್ದು ಮುಂದೆ ಕಾರವಾರಕ್ಕೆ ಹೋಗಬೇಕೆಂದುಕೊಂಡಿದ್ದ ನನ್ನನ್ನು ತಡೆದು ನಾಲ್ಕು ದಿನ ಅಲ್ಲೇ ತಳವೂರುವಂತೆ ಮಾಡಿದ್ದು ಸುಂದರವಾದ ಸಮುದ್ರದಂಡೆ, ಅದರೊಂದಿಗೆ ಜೊತೆಜೊತೆಯಾಗಿರುವ ಬೆಟ್ಟಗುಡ್ಡಗಳ ಸಾಲು. ಒಂದು ದೃಷ್ಟಿಯಿಂದ ನಾನು ಪ್ರಕೃತಿಯ ಆರಾಧಕ. ಪ್ರಕೃತಿಯ ಮಡಿಲಲ್ಲಿರುವಾಗ ನನಗೆ ಹಸಿವು ನಿದ್ದೆ ನೀರಡಿಕೆ ಯಾವುವೂ ಬಾಧಿಸಲಾರವು. ಸೂರ್ಯೋದಯ ನೋಡುತ್ತ ಕುಳಿತೆನೆಂದರೆ ಸೂರ್ಯ ನಡು ನೆತ್ತಿಯ ಮೇಲೆ ಬಂದು ಬಿಸಿಲಿನ ಚುರುಕು ಮುಟ್ಟಿಸಿದಾಗಲೇ ಮೇಲೇಳುವುದು. ಸೂರ್ಯಾಸ್ತದ ಸವಿ ಸವಿಯಲು ಬಂದೆನೆಂದರೆ ನಡು ರಾತ್ರಿ ಸರಿದದ್ದೇ ಗೊತ್ತಾಗುತ್ತಿರಲಿಲ್ಲ. ಹೀಗೆ ಕಾಲ-ಸಮಯಗಳ ಪರಿವೆಯಿಲ್ಲದೇ ಮಗ್ನನಾಗಿರುವುದಕ್ಕೆ ಇನ್ನೊಂದು ಪ್ರಬಲ ಕಾರಣ ನಾನಿನ್ನೂ ಬ್ರಹ್ಮಚಾರಿಯಾಗಿ ಉಳಿದಿರುವುದು. ನನ್ನ ಈ ಹುಚ್ಚಿನ ವಾಸನೆ ಬಡಿದಿದ್ದರಿಂದಲೋ ಏನೋ ಯಾವ ಹೆಣ್ಣೂ ನನ್ನನ್ನು ವರಿಸುವ ಧೈರ್ಯ ಇನ್ನೂ ಏಕೋ ಮಾಡಿರಲಿಲ್ಲ.

ಲೇಖಕನಾಗಿ ವಸ್ತುವೊಂದನ್ನು ಹುಡುಕ ಹೊರಟ ನನಗೆ ಆ ಅಪ್ಸರೆ ಆಕರ್ಷಣೆಯಾಗಿ ಅಂಟಿ ನನಗೊಂದು ಸಮಸ್ಯೆಯೂ ಆಗಿಬಿಡುತ್ತಾಳೆ ಎಂದು ನಾನು ಭಾವಿಸಿರಲಿಲ್ಲ.

ಹಾಗೆ ನೋಡಿದರೆ ನಾನು ಮೆಚ್ಚಿದ್ದು ಹತ್ತಾರು ಹುಡುಗೆಯರಾದರೆ ನನ್ನನ್ನೇ ಮೆಚ್ಚಿದ ಹುಡುಗಿಯರು ಇದಕ್ಕೂ ಹೆಚ್ಚು. ಬಹಳಷ್ಟು ಜನ ನನ್ನ ಹೆಸರಿಗೆ ಮರುಳಾಗಿ ವರಿಸಲು ಬಂದವರೇ ಹೆಚ್ಚು. ನನ್ನನ್ನು ನೋಡಿದ ಮೇಲೆ ಸ್ವಲ್ಪ ನಿರಾಶೆಯಾಗುತ್ತಿತ್ತು. ನಂತರ ನಾನು ನನ್ನ ಹುಚ್ಚು ಹವ್ಯಾಸಗಳ ಬಗ್ಗೆ ಹೇಳಿ ಇದನ್ನೆಲ್ಲ ಸಹಿಸಿಕೊಳ್ಳಬಲ್ಲೆಯಾ? ಎಂದು ಕೇಳುತ್ತಲೂ ಅವರೆಲ್ಲ ಅಂತರ್ಧಾನರಾಗಿ ಬಿಡುತ್ತಿದ್ದರು. ಹೀಗಾಗಿ ನಾನು ಇನ್ನೂವರೆಗೂ ಯಾವ ಬಂಧನಕ್ಕೂ ಒಳಗಾಗದೆ ನನ್ನ ಸ್ವಾತಂತ್ರ್ಯ ಹರಣವಾಗದಂತೆ, ಅದನ್ನೂ ಭದ್ರವಾಗಿ ಕಾಯ್ದಿಟ್ಟುಕೊಂಡು ಬಂದಿದ್ದೇನೆ.

ಫಿಲ್ಮ್ ಹೀರೋಗಳಂತೆ ನಾನು ಸುಂದರನಲ್ಲ... ಆಕರ್ಷಕ ಮೈಕಟ್ಟು ನನಗಿಲ್ಲ. ಎತ್ತರ ಸುಮಾರು ಐದೂಕಾಲು ಫೂಟು. ಐವತ್ತೆಂಟು ಕಿಲೋ ಭಾರ... ಧರಿಸುವುದು ಸುಮಾರಾಗಿರುವ ಪ್ಯಾಂಟು, ಬುಶ್‌ಶರ್ಟು, ಕಾಲಲ್ಲಿ ಯಾವಾಗಲೂ ಧರಿಸುತ್ತ ಬಂದಿದ್ದು ಕೆಂಪು ಬಣ್ಣದ ಸ್ಯಾಂಡಲ್ಸ್. ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನುವ ಆಕರ್ಷಕ ರೂಪವೂ ಸಹ ನನಗಿಲ್ಲ... ಹಾಂ... ಹೆಣ್ಣುಮಕ್ಕಳು ಮಾತ್ರ ತಿರುಗಿ ತಿರುಗಿ, ನನ್ನನ್ನು ನೋಡುವುದುಂಟು. ಅದಕ್ಕೆ ಕಾರಣ ನನ್ನ ರೂಪವಂತೂ ಖಂಡಿತ ಅಲ್ಲ... ನಾನು ನನ್ನ ಕಣ್ಣುಗಳಿಗೆ ಹಚ್ಚುವ ಕಪ್ಪೇ ಅದಕ್ಕೆ ಕಾರಣ. ಇದರಿಂದಾಗಿಯೇ ನಾನು

ನೂರು ಜನರಲ್ಲಿ ಒಂದಾಗದೇ ನೂರರಲ್ಲಿ ಒಬ್ಬನಾಗಿದ್ದೇನೆ. ಸ್ವಲ್ಪ ದೊಡ್ಡದೆನಿಸುವ ಕಣ್ಣುಗಳಿಗೆ ನಾನು ಚಿಕ್ಕಂದಿನಿಂದಲೇ ಕಪ್ಪು ಹಚ್ಚುತ್ತ ಬಂದಿರುವುದರಿಂದ ಸುಮಾರಾಗಿರುವ ನನ್ನ ಮುಖ ಸೌಂದರ್ಯಕ್ಕೆ ಮತ್ತೊಂದು ಬಗೆಯ ಆಕರ್ಷಣೆ ಒದಗಿದೆ ಎಂದರೆ ತಪ್ಪಾಗದು.

ದಯವಿಟ್ಟು ಕ್ಷಮಿಸಿ...

ನಾನು ಏನನ್ನೋ ಹೇಳುತ್ತ ಎತ್ತಲೋ ಹೊರಟಿರುವೆ.

ಈಗ ನೇರವಾಗಿ ವಿಷಯಕ್ಕೆ ಬರುತ್ತೇನೆ. ನಾನೊಬ್ಬ ಲೇಖಕ. ಕಾದಂಬರಿಕಾರ. ನನ್ನ ಕೃತಿಗಳು ಜನರ ಮೆಚ್ಚುಗೆ ಗಳಿಸಿದ್ದರಿಂದಾಗಿ ಅವುಗಳಲ್ಲಿ ಬಹಳಷ್ಟು ರಜತಪರದೆಯ ಮೇಲೂ ಬಂದಿರುವದರಿಂದಾಗಿ ನನ್ನ ಬಗ್ಗೆ ಜನರಿಗೆ ಅಪಾರ ಪ್ರೀತಿ, ಅಭಿಮಾನ. ಹರಯದ ಹುಡುಗರು ತಮಗೂ ಚಲನಚಿತ್ರದಲ್ಲಿ ಪಾತ್ರಕೊಡಿಸುವಂತೆ ಕೇಳಲು ಬಂದರೆ, ಹುಡುಗಿಯರು ನನ್ನನ್ನು ನೋಡಿ ಮಾತನಾಡಿಸುವ, ನನ್ನ ಮದುವೆಯಾಗಿರದಿದ್ದರೆ ಮದುವೆಯಾಗಬೇಕೆಂಬ ಆಶೆಯಿಂದ ನನ್ನೆಡೆ ಬರುತ್ತಿರುತ್ತಾರೆ... ಅವರಲ್ಲಿ ನಾನು ನಾಲ್ಕಾರು ಜನರನ್ನು ಮೆಚ್ಚಿದ್ದರೂ ಅವರೊಂದಿಗೆ ಮದುವೆಯಾಗುವ ಯೋಗ ಮಾತ್ರ ಕೂಡಿಬಂದಿಲ್ಲ.

ನಾಲ್ಕು ತಿಂಗಳು ಒಂದೇ ಸವನೆ ಬರಹದಲ್ಲಿ ತೊಡಗಿದ್ದರಿಂದ ಸ್ವಲ್ಪ ಕಾಲ ವಿಶ್ರಾಂತಿ ಪಡೆದ ರಾಯಿತೆಂಬ ಉದ್ದೇಶದಿಂದ ನಾನು ದಕ್ಷಿಣ ಭಾರತದ ಪ್ರವಾಸಕ್ಕೆ ಬಂದೆ. ಅದರೊಂದಿಗೆ ಮುಂದಿನ ತಿಂಗಳು ಪ್ರಸಿದ್ಧ ಪತ್ರಿಕೆಯೊಂದಕ್ಕೆ ಧಾರಾವಾಹಿಯಾಗಿ ಕಾದಂಬರಿ ಕೊಡಲು ಒಪ್ಪಿಕೊಂಡಿದ್ದರಿಂದ ಅದಕ್ಕೊಂದು 'ಪ್ಲಾಟ್' ಹುಡುಕುವ ಉದ್ದೇಶವೂ ನನ್ನದಾಗಿತ್ತು. ಗೋಕರ್ಣ, ಕೋಟಿತೀರ್ಥ, ಜಟಾಯುತೀರ್ಥ, ರಾಮಲಿಂಗ ದೇವಸ್ಥಾನ ಇವೆಲ್ಲ ನನಗೆ ತುಂಬಾ ಹಿಡಿಸಿದವು. ಗಂಟೆಗಟ್ಟಲೆ ಓಡಾಡಿ ಇವನ್ನೆಲ್ಲ ಪುನಃ ಪುನಃ ನೋಡಿದೆ...

ಇಂದು ಕೊನೆಯ ದಿನ ನೋಡಿಕೊಂಡು ನಾಳೆ ಇಲ್ಲಿಂದ ಹೊರಡುವುದು ಎಂದು ನಿರ್ಧರಿಸಿ ಸಂಜೆಗೆ ಮುನ್ನ ಬಂದು ಜಟಾಯುತೀರ್ಥ ಬೆಟ್ಟವನ್ನೇರಿ ಸಮುದ್ರ ನಿರೀಕ್ಷಿಸುತ್ತ ಕುಳಿತಿರುವೆ. ಪಶ್ಚಿಮದಂಚಿನಲ್ಲಿ ಸೂರ್ಯ ತಂಗುವ ಸನ್ನಾಹದಲ್ಲಿದ್ದಾನೆ. ಬಾನೆಲ್ಲ ಕೆಂಪಾಗಿದೆ. ಅದರ ಛಾಯೆ ಸಮುದ್ರದ ಮೇಲೆಲ್ಲ ಹರಡಿ ಒಂದು ಬಗೆಯ ರುದ್ರಸೌಂದರ್ಯಕ್ಕೆಡೆಮಾಡಿ ಕೊಟ್ಟಿದೆ. ಕೆಂಬಣ್ಣದ ಛಾಯೆಯ ಮಧ್ಯೆ ತೇಲುತ್ತಿರುವ ನಾಲ್ಕಾರು ಮೀನುಗಾರರ ದೋಣಿಗಳು ವಿಚಿತ್ರ ಸೌಂದರ್ಯ ಹೊರಸೂಸುತ್ತಿವೆ. ನನ್ನ ಕಣ್ಣುಗಳು ಸೂರ್ಯಾಸ್ತದ ಸೌಂದರ್ಯ ಸವಿಯುತ್ತಿದ್ದರೂ ಮನಸ್ಸು ಮಾತ್ರ ರಾಮಾಯಣದ ಬಗ್ಗೆ ಆಲೋಚಿಸುತ್ತಿದೆ.

ಪ್ರಶಾಂತವಾಗಿದ್ದ ವಾತಾವರಣ ಒಮ್ಮೆಲೆ ಕಲಕಿದಂತಾಯಿತು. ಹತ್ತಾರು ಕಂಠಗಳು, ಚೀರಾಟ, ನಗೆ, ಹಾಸ್ಯ, ಕೇಕೆ, ಸಂಭ್ರಮ ಎಲ್ಲಾ ಒಟ್ಟುಗೂಡಿ ಗಾಳಿಯಲ್ಲಿ ತೇಲುತ್ತ ಬಂದು ನನ್ನ ಕಿವಿಗಳಿಗೆ ತಾಕಿದಾಗ ಸೂರ್ಯನಿಂದ ಕಣ್ಣು ಕಿತ್ತು ದಂಡೆ ಕಡೆ ನೋಡಿದೆ. ಅದೇ ಬಂದು ನಿಂತ ಸೂಪರ್ ಡಿಲಕ್ಸ್ ಬಸ್ಸಿನಿಂದ ಪ್ರವಾಸಿಗರು ಇನ್ನೂ ಇಳಿಯುತ್ತಿದ್ದರು. ಈಗಾಗಲೇ ಇಳಿದಿದ್ದ ಹತ್ತಿಪ್ಪತ್ತು ಪ್ರವಾಸಿಕರು ಹರ್ಷದಿಂದ ಕೇಕೆ ಹಾಕುತ್ತ ಸಮುದ್ರದೆಡೆ ಓಡಿಬರುತ್ತಿದ್ದರು.

ನಾನು ಕುಳಿತಲ್ಲಿಂದ ಸಮುದ್ರ ದಂಡೆ ಸುಮಾರು ದೂರ. ದಂಡೆ ಮೇಲಿದ್ದವರ ಕಣ್ಣು, ಮೂಗು ನನಗೆ ಸರಿಯಾಗಿ ಕಾಣದಿದ್ದರೂ ವ್ಯಕ್ತಿಗಳು ನಿಚ್ಚಳವಾಗಿ ಕಾಣುತ್ತಿದ್ದರು. ಇಳಿದವರಲ್ಲಿ ಪುರುಷರೇ ಹೆಚ್ಚು. ಹತ್ತು ಹನ್ನೆರಡು ಜನ ಮಾತ್ರ ಸ್ತ್ರೀಯರಿರಬಹುದು...

ಅವರೆಡೆ ನೋಡುತ್ತಿದ್ದ ನಾನು ಒಮ್ಮೆಲೆ ಚಕಿತನಾದೆ. ಅಲ್ಲಿಯವರೆಗೂ ಸುಪ್ತವಾಗಿದ್ದ ನನ್ನ ಇಂದ್ರಿಯಗಳು ಜಾಗೃತವಾದವು. ಎಲ್ಲರಿಗಿಂತ ಮುಂದೆ ಇರುವ ತರುಣಿ ಓಂದೆ ಮುಂದೆ ನೋಡುತ್ತ ನಾನು ಕುಳಿತೆಡೆಗೆ ಧಾವಿಸುತ್ತಿದ್ದಳು. ಅವಳ ನಡಿಗೆಯಲ್ಲಿ ಏನೋ ಒಂದು ಬಗೆಯ ಆಕರ್ಷಣೆ. ಕೆಂಪು ಶರ್ಟ್ ತೊಟ್ಟು, ಕೆಳಗಡೆ ಕಡುನೀಲಿ ಬಣ್ಣದ ಸ್ಕರ್ಟ್ ತೊಟ್ಟ, ಆಕೆ ರೂಪಸಿಯಾಗಿರಲೇಬೇಕೆಂದು ನನ್ನ ಮನಸ್ಸು ಹೇಳಿತು. ನನಗರಿಯದಂತೆಯೇ ನಾನು ಮೇಲಕ್ಕೆದ್ದು ಕೆಳಗೆ ಇಳಿಯತೊಡಗಿದೆ. ಏನೋ ಒಂದು ಬಗೆಯ ಕಾತುರ, ಆ ತರುಣಿಯನ್ನು ಬೇಗ ನೋಡಬೇಕೆಂಬ ಆತುರ ಎರಡೂ ಸೇರಿ ನಾನು ವೇಗವಾಗಿ ಬಂಡೆಗಳಿಂದ ಇಳಿಯತೊಡಗಿದೆ. ಇನ್ನೊಂದು ಚಿಕ್ಕ ಬಂಡೆ ಎದುರಿಗಿದ್ದದ್ದು,



ಅದನ್ನು ದಾಟಿದರೆ ಆಯ್ತು. ನಾನು ಸಮುದ್ರ ದಂಡೆಯ ಕೊನೆ ತುದಿಗೆ ಪದಾರ್ಪಣ ಮಾಡುತ್ತೇನೆ. ಅಲ್ಲಿಂದ ನೇರವಾಗಿ ನಡೆಯುತ್ತ ಹೋದರೆ ಎರಡು ಮೂರು ನಿಮಿಷಗಳಲ್ಲಿ ನಾನವರನ್ನು ತಲುಪಬಹುದು.

ಚಿಕ್ಕ ಬಂಡೆಯ ಬಳಿ ಬಂದಾಗ ನನಗೆ ತುಂಬಾ ನಿರಾಶೆಯಾಯಿತು. ನಾನು ಯಾರಿಗಾಗಿ ಹಿಮಾಲಯ ಪರ್ವತದಿಂದ ಕೆಳಗಿಳಿದು ಬಂದಿದ್ದೇನೋ ಆ ರೂಪಸಿ ನನಗೆಲ್ಲೂ ಕಂಡು ಬರಲಿಲ್ಲ... ಸಮುದ್ರದ ನೀರಲ್ಲಿ ಎಲ್ಲಿಯಾದರೂ ಇರಬಹುದೆಂದು ಅತ್ತಿತ್ತ ಕಣ್ಣಾಡಿಸಿದೆ. ಗೋಚರಿಸಲಿಲ್ಲ... ಒಮ್ಮಿಂದೊಮ್ಮೆಲೆ ಗಾಳಿ ಬಿಟ್ಟ ಬಲೂನಿನಂತಾಯಿತು ನನ್ನ ಸ್ಥಿತಿ... ಚಿಕ್ಕ ಬಂಡೆಯಿಂದ ಇಳಿಯುತ್ತ ಉಸುಕಿನಲ್ಲಿ ಕಾಲಿಡುವುದಕ್ಕೂ ಬಂಡೆ ಎಡಭಾಗದಿಂದ ಗಾಳಿಯಂತೆ ಬಂದ ಆಕೆ ನನಗೆ ಢಿಕ್ಕೊಟ್ಟಳು. ಆಯತಪ್ಪಿ ನಾನು ಕೆಳಗೆ ಬೀಳುತ್ತಿದ್ದಂತೆ ನನಗೆ ತೀರ ಹತ್ತಿರದಲ್ಲಿದ್ದ ಅವಳನ್ನು ಎಳೆದುಕೊಂಡೆ. ಇದರಿಂದಾಗಿ ಇಬ್ಬರು ಮರಳಿನಲ್ಲಿ ಬಿದ್ದು ಎರಡು ಮೂರು ಬಾರಿ ಉರುಳಾಡಿದೆವು. ಆಕೆ ಸಂಪೂರ್ಣವಾಗಿ ನನ್ನನ್ನು ಆವರಿಸಿದ್ದಳು. ಅವಳ ದೇಹ ನನ್ನ ದೇಹದೊಂದಿಗೆ ಬೆಸೆದುಕೊಂಡಿತ್ತು, ಅವಳೆರಡೂ ಕೈಗಳು ನನ್ನನ್ನು ಬಲವಾಗಿ ತಬ್ಬಿಕೊಂಡಿದ್ದವು. ಕ್ಷಣಕಾಲ ರೋಮಾಂಚನ ಉಂಟಾದರೂ ಮನಕ್ಕೆ ಹಿತವೆನಿಸಿದರೂ ಮರುಕ್ಷಣ ಭೀತಿಯಿಂದ ತತ್ತರಿಸಿ ಬಿಡಿಸಿಕೊಂಡು ಮೇಲೇಳಲು ಪ್ರಯತ್ನಿಸಿದೆ. ಅವಳ ಹಿಡಿತ ಬಲವಾಯಿತು. ಆಕೆ ಮತ್ತೆದ್ದು ನನಗೆ ಅಂಟಿಕೊಂಡಳು. ಅವಳ ಶರೀರದಲ್ಲಿದ್ದ ಲಘುವಾದ ಕಂಪನದ ಕಲ್ಪನೆ ನನಗೆ ಸ್ಪಷ್ಟವಾಗಿ ಆಯಿತು. ಬೆದರಿದ್ದ ಹರಿಣಿಯಂತೆ ಆಕೆ ನನ್ನನ್ನು ಆಶ್ರಯಿಸಿದ್ದಳು. ನನ್ನ ಮುಖ ಸಮುದ್ರದೆಡೆಯಿದ್ದರೆ, ಆಕೆ ಸಮುದ್ರದೆಡೆ ಬೆನ್ನು ಮಾಡಿದ್ದಳು. ನಾನು ಅವಳ ಆಲಿಂಗನದಲ್ಲಿದ್ದಂತೆಯೇ ಯಾರಾದರೂ ನಮ್ಮನ್ನು ಗಮನಿಸುತ್ತಿದ್ದಾರೆಯೇ? ಎಂದು ಸಮುದ್ರದತ್ತ ದೃಷ್ಟಿ ಹರಿಸಿದೆ... ನೂರಡಿ ದೂರದಲ್ಲಿರುವ ನಾಲ್ಕೈದು ರೌಡಿಯಂತಿರುವವರ ಕಣ್ಣುಗಳು ನಮ್ಮ ಮೇಲೆ ನಾಟಿದ್ದು ತಿಳಿದು ನಾನು ಭೂಮಿಗಿಳಿದು ಹೋದೆ.

ಇವಳನ್ನು ಹಿಂಬಾಲಿಸಿಕೊಂಡೇ ಬಂದಿರುವ ಅವರು ಈಗೋ ಇನ್ನೊಂದು ಕ್ಷಣಕ್ಕೊ ನನ್ನ ಮೇಲೆ ಬಿದ್ದು ಹಣ್ಣುಗಾಯಿ ನೀರುಗಾಯಿ ಮಾಡುತ್ತಾರೆಂದು ಕಲ್ಪಿಸಿ ಮನದಲ್ಲೇ ನನ್ನನ್ನು ಕಾಪಾಡುವಂತೆ ದೇವರಲ್ಲಿ ಮೊರೆ ಇಟ್ಟೆ.

ಆಕೆ ನನ್ನ ಕಿವಿಯಲ್ಲಿ ಪಿಸುಗುಟ್ಟಿದಳು.

"ಅವರು ಹೋದರಾ ?"

"ಯಾರು ?" ನಾನೂ ಅಷ್ಟೇ ಮೆಲುವಾಗಿ ಕೇಳಿದೆ.

"ನನ್ನ ಒಂದಿದ್ದಾರಲ್ಲ... ಧಾಂಡಿಗರು... ಅವರೇ"

"ಆಂ ? ಅವರು ನಿನ್ನ ಸಂಗಡಿಗರಲ್ಲವೆ ?"

"ಅಲ್ಲ"

"ಹಾಗಾದರೆ ?"

"ಅದೆಲ್ಲಾ ಆಮೇಲೆ... ಮೊದಲು ಹೇಳು... ಅವರು ಹೋದರಾ ?"

"ಇಲ್ಲ... ನಮ್ಮ ಕಡೆಗೇ ನೋಡುತ್ತಿದ್ದಾರೆ."

ಮತ್ತಷ್ಟು ಜೋರಾಗಿ ನನ್ನನ್ನಾಕೆ ತಬ್ಬಿಕೊಂಡಳು. ಅದರೊಂದಿಗೆ ಅವಳ ಎರಡೂ ಕೈಗಳು ನನ್ನ ದೇಹದ ಮೇಲೆಲ್ಲಾ ಓಡಾಡ ತೊಡಗಿ ಅವ್ಯಕ್ತ ಆನಂದ ಅನುಭವಿಸುತ್ತ ನಾನು ಕಣ್ಣುಮುಚ್ಚಿದೆ... ಒಂದೆರಡು ನಿಮಿಷಗಳ ನಂತರ ಕಣ್ತೆರೆದಾಗ ಅವರಿರಲಿಲ್ಲ. ಸಮಾಧಾನವಾಯಿತು.

"ಅವರಿಲ್ಲ... ಹೊರಟುಹೋದರು."

ನನ್ನನ್ನು ನಿರ್ದಾಕ್ಷಿಣ್ಯವಾಗಿ ಒಂದಕ್ಕೆ ತಳ್ಳಿದ ಆಕೆ ಎದ್ದುನಿಂತು ಪಟ ಪಟ ಮರಳು ಜಾಡಿಸಿಕೊಂಡು ಸಮುದ್ರಕ್ಕೆ ಬೆನ್ನುಮಾಡಿ ಊರಿನೆಡೆ ಓಡಿದಳು...

ಒಂದೈದು ನಿಮಿಷ ಮಂಕಾಗಿ ನಿಂತ ನಾನು ಅವಳು ಹೋದ ದಿಕ್ಕಿನತ್ತಲೇ ಹೆಜ್ಜೆಹಾಕಿದೆ. ಅರ್ಧಗಂಟೆ ಊರೆಲ್ಲಾ ಜಾಲಾಡಿಸಿದೆ. ಆಕೆಯ ದರ್ಶನವಾಗಲೇ ಇಲ್ಲ. ತುಂಬಾ ನಿರಾಶೆಯಾಯಿತು... ದೇವಸ್ಥಾನದೊಳಗೆ ಸುತ್ತಿದೆ ಅಲ್ಲಿಯೂ ಇಲ್ಲ... ಎಲ್ಲಿ ಹಾಳಾಗಿ ಹೋದಳೋ ಎಂದು ಶಪಿಸಿ, ಭಟ್ಟರ ಮನೆಕಡೆ ನಡೆದೆ.

ವಿಘ್ನೇಶ್ವರ ಭಟ್ಟ, ಗಜಾನನ ಭಟ್ ಕಡಪಾ ಅವರ ಅತಿಥಿಯಾಗಿ ನಾನು ಉಳಿದುಕೊಂಡಿದ್ದೆ. ಊಟ ತಿಂಡಿ ಎಲ್ಲಾ ಅವರ ಮನೆಯಲ್ಲಿ. ಹಿತ್ತಲಲ್ಲಿಯ ತೆಂಗಿನತೋಟದ ಮಧ್ಯಭಾಗದಲ್ಲೊಂದು ಚಿಕ್ಕ ಕೋಣೆ. ಅದರಲ್ಲೇ ನಾನು ನಾಲ್ಕು ದಿನಗಳಿಂದ ವಾಸವಾಗಿದ್ದೆ... ಬೆಳಗ್ಗೆ ನಾನು ಊರಿಗೆ ಹೊರಡುವುದಾಗಿ ತಿಳಿಸಿ ಜೇಬಿನಿಂದ ಒಂದಿಷ್ಟು ಹಣವನ್ನು ತೆಗೆದು ಭಟ್ಟರ ಕೈಗೆ ಹಾಕಿದೆ. ಅದು ಎಷ್ಟಿದೆ ಎಂದೂ ಸಹ ಅವರು ನೋಡದೇ ಜೇಬಿಗೆ ಹಾಕಿಕೊಂಡು "ಮತ್ತೆ ಈ ಕಡೆಗೆ ಬಂದಾಗ ನಮ್ಮಲ್ಲಿಗೇ ಬನ್ನಿ" ಎಂದು



... ಎಂ.ಆರ್.ಎಫ್‌ನಲ್ಲಿ ಕೆಲ್ಸ ಸಿಕ್ತಂತೆ... ಎಲ್ಲರಿಗೂ ಗೊತ್ತಾಗ್ಲೀಂತ ಹೀಗೆ ಹೋಗ್ತಿದಾನೆ...!

ಆತ್ಮೀಯತೆಯಿಂದ ನುಡಿದರು. ನಾನು ತಲೆಯಾಡಿಸಿ ಮೇಲೆದ್ದೆ... ರೂಮಿಗೆ ಬಂದೆ...

ಒಂಭತ್ತು ಗಂಟೆ ಸುಮಾರಿಗೆ ಭಟ್ಟರ ಮೊಮ್ಮಗ ಸುನೀಲ ಊಟ ತಂದು ಇಟ್ಟ... ಹಸಿವೆಯಾಗಿದ್ದರೂ ಊಟ ಬೇಡವೆನಿಸಿತು. ಉಂಡ ಶಾಸ್ತ್ರಮಾಡಿ ಕೈತೊಳೆದುಕೊಂಡೆ. ಹಾಸಿಗೆ ಮೇಲೆ ಉರುಳಿ ಆ ಅಪ್ಸರೆ ಬಗ್ಗೆ ಯೋಚಿಸತೊಡಗಿದೆ.

ಹೌದು, ನಿಜವಾಗಿಯೂ ಅವಳು ಅಪ್ಸರೆಯೇ.

ಇವಳಂಥ ಸುಂದರಿಯನ್ನು ನಾನು ಇನ್ನೂ ವರೆಗೂ ಕಂಡಿರಲಿಲ್ಲ. ಅವಳ ಮುಖ, ಭಯ ತುಂಬಿದ ವಿಶಾಲಾಕ್ಷಿಗಳು, ಕಂಪಿಸುವ ದೇಹ, ಆ ಬಿಸಿಯಪ್ಪುಗೆ ಎಲ್ಲಾ ನೆನಪಾಗಿ ವೇದನೆಯಿಂದ ನರಳಿದೆ. ಹಾಸಿಗೆಯಲ್ಲಿ ಹಾಗೇ ಉರುಳಾಡಿದೆ. ಅಯ್ಯೋ... ದೇವರೇನಾದರೂ ಇದ್ದಿದ್ದು ನಿಜವೇ ಆಗಿದ್ದು ಆತ ನನ್ನೆದುರು ಪ್ರತ್ಯಕ್ಷನಾಗಿ ಏನು ಬೇಕು ಕಂದಾ? ಏಕೀ ವ್ಯಥೆ? ಎಂದು ಕೇಳ ಬಾರದೆ? ಎಂದೆಲ್ಲಾ ಹುಚ್ಚು ಹುಚ್ಚಾಗಿ ಯೋಚಿಸಿ ಜೋರಾಗಿ ನಕ್ಕೆ... ಎಲ್ಲಾ ಬದಿಗೆ ತೆಗೆದಿಟ್ಟು ನಿದ್ದೆಗೆ ಶರಣಾದರೆ ಸಾಕು ಎಂದು ಕೊಂಡು ಭದ್ರವಾಗಿ ಕಣ್ಣುಮುಚ್ಚಿದರೆ ಆ ರೂಪಸಿ ಮುಚ್ಚಿದ ಕಣ್ಣುಗಳ ಗೋಡೆ ಒಡೆದು ಕೊಂಡು ಮನದಾಳದ ಮನೆಗೆ ಲಗ್ಗೆ ಹಾಕುವುದೆ? ಥೂ... ಈ ಹೆಣ್ಣೆಂದರೆ ಎಂಥ ಮಾಯೆ... ಎಂಥಾ ಹಿಂಸೆ ಎಂದು ಹಳಿದೆ... ಏನೇ ಮಾಡಿದರೂ ನೆಮ್ಮದಿ ಸಿಗದಾಗಲು ಎದ್ದು ಕಿಟಕಿ ಬಳಿ ನಿಂತು ತೆಂಗಿನ ತೋಟಗಳಲ್ಲಿ ಕಣ್ಣಾಡಿಸಿದೆ. ಯಾರೋ ನಾನು ಕಿಟಕಿಗೆ ಬರುತ್ತಲೂ ಪಕ್ಕಕ್ಕೆ ಸರಿದಂತಾಯಿತು. ಒಂದೇ ಒಂದು ಕ್ಷಣವಷ್ಟೇ ಕಣ್ಣಿಗೆ ಬಿದ್ದ ದೃಶ್ಯವದು. ಯಾರಿರಬಹುದು?... ಅಥವಾ ನನ್ನ ಭ್ರಮೆಯೋ...

ಮರುಕ್ಷಣವೇ ದೇವರೆ ಆ ಆಕೃತಿ ಅಪ್ಸರೆ ಯದೇ ಆಗಿರಲಿ. ಮೆಲ್ಲನೆ ಅಡಿಯಿಡುತ್ತ ಆಕೆ ನನ್ನ ಕೋಣೆಗೆ ಬರುವಂತಾಗಲಿ ಎಂದು ಬೇಡಿ ಕೊಂಡು ನಕ್ಕೆ. ಮುಂದೆ ನಾಲ್ಕೈದು ನಿಮಿಷಗಳು ಕಳೆದಿರಬಹುದು. ಬಾಗಿಲ ಮೇಲೆ ಬೆರಳಿನಿಂದ ಟಕ್‌ಟಕ್ ಎಂದು ಮೆಲುವಾಗಿ ಬಾರಿಸಿದ ಸದ್ದು ಕೇಳಿಸಿತು. ನಯವಾಗಿ ಬಾರಿಸಿದ್ದು ಕೇಳಿದರೆ ಖಂಡಿತ ಅದು ಮಹಿಳೆಯ ಹಸ್ತವಿರಬೇಕು ಎಂದುಕೊಂಡೆ. ಮನದಲ್ಲಿ ಅಡಗಿದ್ದ ಜಾಡ್ಯ ಓಡಿಹೋಗಿ ಲವಲವಿಕೆ ಮೂಡಿತು. ಒಬ್ಬರ ನ್ನೊಬ್ಬರು ಅಪ್ಪಿಕೊಂಡು ಮರಳಲ್ಲಿ ಉರುಳಾ ಡಿದ್ದು ನೆನಪಾಗಿ ಮೈಬಿಸಿಯಾಯಿತು.

ಭರಕ್‌ನೆ ಬಾಗಿಲು ತೆರೆದೆ. ಮುಖದ ಮೇಲೊಂದು ಬಲವಾದ ಗುದ್ದು ಬಿತ್ತು. 'ಅಯ್ಯಪ್ಪೋ ಸತ್ತೆ' ಎಂದು ಕಿರುಚಿ ಹಿಂದೆಸರಿದೆ. ಎರಡೂ ಕೈ ಬಾಯಿಯನ್ನು ಒತ್ತಿ ಹಿಡಿದಿದ್ದವು. ನೋವು ತಡೆಯಲಾರದೇ ಕಣ್ಣುಮುಚ್ಚಿ ನಿಂತೆ... ಮೈ ಥರಥರ ನಡುಗುತ್ತಿತ್ತು. ಸ್ವಲ್ಪ ಸಮಯ ಬಿಟ್ಟು ಕೈತೆಗೆದೆ. ಕಣ್ಣುಬಿಟ್ಟು ನೋಡಿದೆ... ಕೈಎಲ್ಲಾ ರಕ್ತಮಯ... ನನ್ನ ಅವತಾರ ಮುಗಿಯಿತು ಎಂದುಕೊಂಡು ಬಾಗಿಲತ್ತ ನೋಡಿದೆ. ತೆರೆದ ಬಾಗಿಲು ಅಲ್ಲಿ ಯಾರೂ ಇಲ್ಲ... ಆಂ? ಹಾಗಾದರೆ ನನ್ನ ಮುಖಕ್ಕೆ ಗುದ್ದಿದವರಾರು?... ಮರುಕ್ಷಣ ನೋವು ಮಾಯವಾಗಿ ಭಯ ಮೂಡಿತು. ದೆವ್ವ... ಭೂತವೇನಾದರೂ ಇರಬಹುದೆ?... ಬಾಗಿಲು ಮುಚ್ಚಲು ಧೈರ್ಯ ಸಾಲಲಿಲ್ಲ... ಚೊಂಬಿನಲ್ಲಿದ್ದ ನೀರನ್ನು ತಲೆ ಮೇಲೆ ಸುರಿದುಕೊಂಡೆ. ಹಾಗೆ ಬಾಯಿ ಸಹ ತೊಳೆದುಕೊಂಡೆ. ಕೆಂಪು ಬಣ್ಣದ ಪನ್ನೀರು ಕೋಣೆಯ ಗೋಡೆಗಳಿಗೆ ಚಿತ್ತಾರ ಹಾಕಿತು. ಸ್ವಲ್ಪ ಹಾಯೆನಿಸಿತು. ಬಾಗಿಲೆಡೆ ಮುಖ ಮಾಡಿ ನಿಂತು "ಯಾರು? ಯಾರು ಹೊರಗೆ?" ಎಂದು ಕೇಳಿದೆ. ಉತ್ತರವಿಲ್ಲ. ಜೋರಾಗಿ "ಯಾಕೆ ಮಾತಾಡೋದಿಲ್ಲ... ಯಾರಿದ್ದೀರಿ ಹೊರಗೆ?" ಕೂಗಿದೆ. "ನಾವು... ನಾವು..." ಎಂಬ ಉತ್ತರದೊಂದಿಗೆ ನಾಲ್ಕೈದು ಜನ ಒಳಗೆ ನುಗ್ಗಿದರು. ಒಬ್ಬಾತ ಬಾಗಿಲು ಮುಚ್ಚಿ ಬೋಲ್ಟ್ ಹಾಕಿದಾಗ... ನನ್ನ ಚಡ್ಡಿ ಒದ್ದೆಯಾಗಿತ್ತು.

ಅವರನ್ನು ಎಲ್ಲೋ ನೋಡಿರುವೆ ಎಂದು ಕೊಂಡೆ. ತಟಕ್‌ನೆ ನೆನಪಾಯಿತು. ಸಂಜೆ ಪ್ರವಾಸಿಗರ ಬಸ್ಸಿನಿಂದ ಕೆಳಗೆ ಇಳಿದಿದ್ದರು. ಆ ಅಪ್ಸರೆಯ ಹಿಂದೆ ಬಂದಿದ್ದರು. ಇವರನ್ನೇ ಕುರಿತು ಆಕೆ ಅವರು ಹೋದರಾ? ಎಂದು ಕೇಳಿದ್ದು... ಇವರೇಕೆ ನನ್ನ ಬಳಿ ಬಂದರು... ನನಗೇಕೆ ಗುದ್ದು ಕೊಟ್ಟರು.

"ಎಲ್ಲಿ ಆಕೆ?" ಗೊಗ್ಗರು ಕಂಠದಲ್ಲಿ ಕುರುಚಲು ಗಡ್ಡದ ವ್ಯಕ್ತಿ ಕೇಳಿದ.

"ಯಾರು?..." ಗೊತ್ತಾಗದೆ ಸಹಜವಾಗಿ ಕೇಳಿದೆ.

ಪರಪರ ಗಡ್ಡ ಕೆರೆದುಕೊಂಡು ಕಹಿ ಮುಖ ಮಾಡಿದ ಆತ ಮಿಂಚಿನ ವೇಗದಲ್ಲಿ 'ಫಟೀರ್' ಎಂದು ನನ್ನ ಕೆನ್ನೆ ಮೇಲೆ ಬಾರಿಸಿದ. ಹರಿತವಾದ ಬ್ಲೇಡು ಸರಕ್ ಎಂದು ಕೆನ್ನೆ ಸವರಿ ಹೋದಂತಾಯಿತು. 'ಹಾ' ಎಂದು ನರಳುತ್ತ ಕೆನ್ನೆ ಹಿಡಿದುಕೊಂಡೆ. ಎಡಕ್ಕೆ ನಿಂತವ ಸರಿದು ಹೊಟ್ಟೆಗೆ ಜಾಡಿಸಿ ಒದ್ದ. ಉಸಿರು ಸಿಕ್ಕಿದಂತಾಗಿ ಬಿಕ್ಕುತ್ತ ಕೆಳಕ್ಕೆ ಬಗ್ಗಿದೆ. ಬಲಗಡೆ ಇದ್ದವ ಸರಿದಂತೆ ಕಂಡಿತು. ಮುಂದಿನ ಕ್ಷಣ ಬೆನ್ನ ಮೇಲೆ ಬೊಕ್ ಎಂದು ಸದ್ದಿನೊಂದಿಗೆ ಏಟು ಬಿದ್ದಾಗ ನೆಲಕಚ್ಚಿದ್ದೆ. ಮುಂದೆ... ಮುಂದೆ ನನಗೆ ಎಚ್ಚರ ತಪ್ಪಿತ್ತು.

ವಿಪರೀತ ಚಳಿ ಎನಿಸಿತು. ಹಿಮಪರ್ವತದ ಮೇಲೆ ನಾನು ಬೆತ್ತಲೆಯಾಗಿ ಬಿದ್ದುಕೊಂಡಿರಬೇಕು ಎಂದುಕೊಂಡು ಕಣ್ತೆರೆದೆ. ಭರ್‍ರ ಎಂದು ಬೀಸಿಬಂದ ಗಾಳಿಗೆ ಕಟಕಟ ಹಲ್ಲುಕಡಿದೆ. ನನ್ನ ಮೈಮೇಲೆ ಚಡ್ಡಿಯೊಂದನ್ನು ಬಿಟ್ಟು ಬೇರೆ ಬಟ್ಟೆಗಳೇ ಇರಲಿಲ್ಲ. ಅದೂ ಪೂರ್ತಿ ಒದ್ದೆಯಾಗಿ ಹೋಗಿತ್ತು. ರೂಮಿನಲ್ಲಿದ್ದ ನನ್ನೆಲ್ಲ ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಎದುರಿಗೇ ಕುಳಿತಿದ್ದರು ಆ ಯಮದೂತರು. ಗಡ್ಡದಲ್ಲಿ ಬೆರಳು ಹಾಕಿ ಪರಪರ ಕೆರೆದುಕೊಂಡ ಆತ ಕೇಳಿದ...

"ಖರೆ ಹೇಳು... ಎಲ್ಲಿ ಆ ಅಪ್ಸರೆ?"

ಪ್ರಯಾಸದಲ್ಲಿ ಎಲ್ಲಾ ನೋವು ಹತ್ತಿಕ್ಕಿಕೊಂಡು ಹೇಳಿದೆ.

"ಖರೇ ಹೇಳ್ತೀನಿ. ಆಕೆ ಯಾರು ಅಂತ ಗೊತ್ತಿಲ್ಲ. ಸಂಜಿಮುಂದ ಅವಳು ಅಪ್ಪಿಕೊಂಡು ಬಿದ್ಲು... ಅಷ್ಟೆ ನಂಗೊತ್ತು..."

ಐದೂ ಮಂದಿ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

ಕುರುಚಲು ಗಡ್ಡದವ ಎದ್ದು ಹೊರಗೆ ಹೋದ. ಅವನ ಹಿಂದೆ ಒಬ್ಬೊಬ್ಬರಾಗಿ ನಾಲ್ಕು ಜನ ಹೊರಬಿದ್ದರು. ಒಂದೆರಡು ನಿಮಿಷ ಹಾಗೇ ಬಿದ್ದುಕೊಂಡಿದ್ದು ಕಷ್ಟಪಟ್ಟು ಎದ್ದೆ... ಕಾಲೆಳೆಯುತ್ತ ಬಂದು ಬಾಗಿಲು ಮುಚ್ಚಿ ಚಿಲಕ ಹಾಕಿ ಹಾಸಿಗೆ ಮೇಲೆ ಉರುಳಿದೆ. ಜೋರಾಗಿ ಉಸಿರು ಎಳೆದುಕೊಂಡೆ... ಹೊಟ್ಟೆಯೊಳಗೆ ಬೆಂಕಿಯುಂಡಿ ಉರುಳಿದಂತಾಗಿ "ಯಪ್ಪಾ... ಸತ್ತೆ... ಅಯ್ಯೋsss..." ಎಂದು ನರಳತೊಡಗಿದೆ. ಕಿಬ್ಬೊಟ್ಟೆ ಮೇಲೆ ಸಾವಕಾಶವಾಗಿ ಕೈಯಾಡಿಸಿಕೊಂಡೆ. ಅರ್ಧಗಂಟೆ – ಒಂದು ಗಂಟೆ ನಂತರ ಎಷ್ಟೋ ಹಗುರೆನಿಸಿತು. ನಾನು ಬಂದದ್ದೇಕೆ? ಇದು ಆದದ್ದೇನು? ಒಂದು ಹೆಣ್ಣಿನ ಬಗ್ಗೆ ಕೇವಲ ಕಲ್ಪನೆ ಮಾಡಿಕೊಂಡ ಮಾತ್ರಕ್ಕೇ ಈ ಗತಿಯಾದರೆ ಆ ಹೆಣ್ಣನ್ನೇ ಮದುವೆಯಾದರೆ ಏನಾಗಬಹುದು? ಎಂದು ಯೋಚಿಸಿ ಇಂಥ ಸ್ಥಿತಿಯಲ್ಲೂ ನಕ್ಕೆ. ಅದರೊಂದಿಗೆ ಒಳಮನಸ್ಸು ಹೇಳಿತು, 'ಆ ಅಪ್ಸರೆ ದೊರೆಯುವದಾದರೆ ಇಂಥ ಶಿಕ್ಷೆ ದಿನವೂ...' ಮತ್ತೆ ನಕ್ಕೆ.

'ದಪ್... ದಪ್... ಕಟ್... ಕಟ್' ಜೋರಾಗಿ ಬಾಗಿಲನ್ನು ಬಾರಿಸತೊಡಗಿದರು ಯಾರೋ. ಮತ್ತೆ ಅವರೇ ಎಲ್ಲಿ ಬಂದರೋ ಎಂದು ಅನಿಸಿ, ಹೊಡೆತ, ನೋವು, ಎಲ್ಲಾ ಮರುಕಳಿಸಿ ನನ್ನ ಮುಖ ಪೆಚ್ಚೆಯಾಯಿತು. ಬಾಗಿಲು ತೆರೆಯುವ ಧೈರ್ಯವಾಗಲಿಲ್ಲ ಹಾಗೇ ಬಿದ್ದುಕೊಂಡಿದ್ದೆ. ಮತ್ತೆ ಮತ್ತೆ ಬಾಗಿಲ ಮೇಲೆ ಏಟು. ಈ ಬಾರಿ ಇನ್ನೂ ಜೋರಾಗಿ. ನಾನು ಬಾಗಿಲು ತೆರೆಯದಿದ್ರೆ ಬಾಗಿಲು ಮುರಿದು ಒಳಗೆ ಬರುವ ಸನ್ನಾಹದಲ್ಲಿ ಇದ್ದಂತಿತ್ತು... ಹಾಗೇನಾದರೂ ಆದರೆ ನನ್ನ ಚಟ್ಟ ಕಟ್ಟಿಯೇ ತೀರುವಾಸೆ ಗ್ಯಾರಂಟಿ. ಹೆದರಿ ಮೇಲೆದ್ದೆ... "ಹಾ... ತಡೀರಿ... ಬಂದೆ" ಎಂದು ಉತ್ತರಿಸಿದೆ, ಕ್ಷೀಣ ದನಿಯಲ್ಲಿ. ನನ್ನ ದನಿ ಹೊರಗೆ ಕೇಳಿತೋ ಇಲ್ಲವೋ ತಿಳಿಯದು. ಬಾಗಿಲು ಬಾರಿಸುವುದು ಮಾತ್ರ ನಿಂತಿತು. ನಾನು ಬಾಗಿಲು ತೆರೆದೆ. ಸರಕ್ ಎಂದು ನುಗ್ಗಿದ ವ್ಯಕ್ತಿ ನನಗೆ ಢಿಕೊಟ್ಟಿತು. ಮರುಕ್ಷಣ ನಾನು ಆ ವ್ಯಕ್ತಿಯನ್ನು ತಬ್ಬಿಕೊಂಡು ನೆಲಕ್ಕೆ ಬಿದ್ದೆ. ನೆಗ್ಗಿ ನುಗ್ಗಿಕಾಯಿಯಂತಾಗಿದ್ದ ಮೈ ನೋವಿನಿಂದ ನರಳಿದೆ... ಅರೆ... ಅರೆ... ನೋವು ಮಾಯವಾದಂತಾಗಿ... ಕಾತುರ... ಭಯಗಳಿಂದ ನನ್ನಪ್ಪಿಕೊಂಡ ವ್ಯಕ್ತಿಕಡೆ ನೋಡಿದೆ...

ಅಪ್ಸರಾ....

ಮೇಲೇಳಲು ಹೋದೆ... ಬೇಡವೆನ್ನುವಂತೆ ತಡೆದ ಆಕೆ ತಾನೇ ಎದ್ದು ಬಾಗಿಲು ಮುಚ್ಚಿ ನನ್ನ ಬಳಿ ಬಂದು ಮುಂಚಿನಂತೆ ಹಾಗೇ ತಬ್ಬಿಕೊಂಡು ಮಲಗಿದಳು. ಈಗ ಹಿತವೆಲ್ಲ ಮಾಯವಾಗಿತ್ತು.

ಅದರೊಂದಿಗೆ ನೋವು ಕೂಡ. ಅದರ ಜಾಗೆಯಲ್ಲಿ ರೋಷ ಮನೆಮಾಡಿತ್ತು... ಎಲ್ಲಾ ಆದದ್ದು ಅಪ್ಸರೆಯಿಂದಲೇ ಅಲ್ಲವೆ? ಈಕೆ ಯಾರು? ಎಲ್ಲಿದ್ದಾಳೆ ಎಂಬುದೇ ತಿಳಿಯದು ಎಂದು ಹೇಳಿದ್ದೆ. ಈಗ ನೋಡಿದರೆ ನನ್ನ ತೆಕ್ಕೆಯಲ್ಲಿದ್ದಾಳೆ. ಪುನಃ ಅವರೇನಾದರೂ ಬಂದು ನೋಡಿದರೆ ನನ್ನ "ಕೀಮಾ" ರೆಡಿ. ಜೋರಾಗಿ ಬಿಡಿಸಿಕೊಂಡು ಮೇಲೇಳಲು ಯತ್ನಿಸಿದೆ. ಅವಳ ಹಿಡಿತ... ಅಪ್ಪುಗೆ ಅಷ್ಟೇ ಬಲವಾಯಿತು. ಯೌವನ ಹೊರಸೂಸುವ ಅವಳ ಅಂಗಾಂಗಗಳು ನನ್ನ ದೇಹದಲ್ಲಿ ಇಳಿದು ಅಲ್ಲೇ ಇಂಗಿಹೋದವು. ಥೂ... ಈ ದೇವರು ಹೆಣ್ಣನ್ನು ಯಾಕಾದರೂ ಸೃಷ್ಟಿಸಿದನೋ... ಅವಳ ಮೇಲಿದ್ದ ಕೋಪ-ತಾಪ-ರೋಷ ಎಲ್ಲಾ ಅವಳ ಬಿಸಿಯಪ್ಪುಗೆಯಿಂದಾಗಿ ಕರಗುತ್ತ ಬಂದು ನಾನು ಸಾಮಾನ್ಯ ಮನುಷ್ಯನಂತೆ ಹಿತ ಅನುಭವಿಸತೊಡಗಿದೆ. ಆಕೆ ನನ್ನ ಕ್ರಾಪಿನಲ್ಲಿ ಬೆರಳಾಡಿಸುತ್ತ ನುಡಿದಳು ಸವಿಜೇನಿನ ಕಂಠದಲ್ಲಿ... "ದಯವಿಟ್ಟು ನನ್ನ ಕ್ಷಮಿಸಿ... ಇದರಲ್ಲಿ ನನ್ನದೇನೂ ತಪ್ಪಿಲ್ಲ. ಈಗ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ... ಆಮೇಲೆ ನಾನೇ ಎಲ್ಲವನ್ನು ಹೇಳ್ತೇನೆ...


ಸುಕೋಮಲ ಹಸ್ತಗಳು ನನ್ನ ಮೈ ತೀಡುತ್ತಿದ್ದಂತೆ ನಾನು ನಿದ್ದೆಹೋಗಿದ್ದೆ.

2

ಮುಂಜಾನೆ ಎದ್ದಾಗ ಅರ್ಧಕ್ಕರ್ಧ ನೋವು ಕಡಿಮೆಯಾಗಿತ್ತು. ಅಪ್ಸರೆ ಎಲ್ಲಿ ಎಂದು ಕಣ್ಣಾಡಿಸಿದೆ. ಆಕೆ ಇರಲಿಲ್ಲ. ಆಕೆಯ ನೀಲಿಸ್ಕರ್ಟ್, ಕೆಂಪು ಬುಶ್‌ಶರ್ಟ್ ಹಾಸಿಗೆ ಮೇಲೆ ಮುದ್ದೆಯಾಗಿ ಬಿದ್ದಿದ್ದವು. ಬಾತ್‌ರೂಮಿನಲ್ಲಿ ನೀರಿನ ಸಪ್ಪಳ. ಆಕೆ ಸ್ನಾನ ಮಾಡುತ್ತಿದ್ದಾಳೆನಿಸಿತು. ಒಂದೆರಡು ನಿಮಿಷಗಳ ನಂತರ 'ಕಿರ್ರರ್' ಎಂಬ ಸಪ್ಪಳದೊಂದಿಗೆ ಬಾತ್‌ರೂಮಿನ ಬಾಗಿಲು ತೆರೆಯಿತು. ಪೂರ್ತಿ ನಗ್ನಳಾಗೇ ಇದ್ದ ಆಕೆ ಹೊರಗೆ ಬಂದವಳು ನಾನು ಎದ್ದುದನ್ನು, ಅವಳತ್ತಲೇ ನೋಡುತ್ತಿರುವುದನ್ನೂ ಗಮನಿಸಿ. ಒಂದು ಕ್ಷಣ ವಿಚಲಿತಳಾದಂತೆ ಕಂಡರೂ ಮರುಕ್ಷಣ "ಓ...ಎದ್ದಿರಾ?" ಎಂದು ಕೋಗಿಲೆಯಂತೆ ಉಲಿದು ನನ್ನೆದುರೇ ಬಟ್ಟೆ ತೊಟ್ಟುಕೊಂಡಳು. ನನ್ನ ಸಂಪೂರ್ಣ ದೇಹಕ್ಕೆ ಪಾರ್ಶ್ವವಾಯು ಹೊಡೆದಂತಾಗಿತ್ತು. ನನ್ನ ಕಣ್ಣುಗುಡ್ಡೆಗಳಷ್ಟೇ ಅತ್ತಿತ್ತ ಚಲಿಸುತ್ತಿದ್ದವು. ವಿಕ್ರಮಾವಳಿಯಲ್ಲಿ ಓದಿದ ಊರ್ವಶಿ ನನ್ನೆದುರು ಬಂದು ನಿಂತಿದ್ದಳು ಸಜೀವವಾಗಿ. ಓ ದೇವರೆ... ಇವಳೆಷ್ಟು ಸುಂದರಿ?... ನಿಜವಾಗಿಯೂ ಅಪ್ಸರೆ ಎಂದು ಉದ್ಗರಿಸಿದೆ ಮನದ ಅಂತರಾಳದಲ್ಲಿ. ತಾನು ಸಂಪೂರ್ಣ ಬೆತ್ತಲೆಯಾಗಿದ್ದರೂ ಕಿಂಚಿತ್ತೂ ಅದರ ಬಗ್ಗೆ ವ್ಯಥೆಪಡದೆ ಸಾಮಾನ್ಯ ರೀತಿಯಲ್ಲಿ ಬಟ್ಟೆತೊಟ್ಟುಕೊಂಡ ಅವಳ ರೀತಿ ನನಗೆ ಬಹಳ ಹಿಡಿಸಿತು...ಅವಳ ಮುಖದ ಮೇಲೆ ಯಾವ ಭಾವನೆಯೂ ಮೂಡಿರಲಿಲ್ಲ, ಒಂದು ಬಗೆಯ ನಿರ್ಲಿಪ್ತತೆ...ಮತ್ತೊಂದು ಅರ್ಥದಲ್ಲಿ ಹೇಳಬೇಕೆಂದರೆ ತನ್ನೆದುರು ಯಾರೂ ಇಲ್ಲ. ತಾನು ಒಂಟಿಯಾಗಿದ್ದೇನೆ ಎಂಬ ಭಾವನೆ ಅವಳಲ್ಲಿ ಮೂಡಿತ್ತು.

"ಏಳಿ ಮುಖ ತೊಳೆದುಕೊಳ್ಳಿ"

ಕೈಹಿಡಿದು ಮೇಲೆಬ್ಬಿಸಿ ಪ್ರೀತಿಯಿಂದ ತಳ್ಳಿ



ಕೊಂಡು ಬಾತ್‌ರೂಮಿಗೆ ದಬ್ಬಿದಳು. ತಾನು ಬಾಗಿಲು ಕೊಂಡಿ ತೆಗೆದು ಬಾಗಿಲಿಗೆ ನಿಂತಳು. ನಾನು ಹಲ್ಲುಜ್ಜಿ ಪ್ರಾತಃವಿಧಿ ತೀರಿಸಿಕೊಂಡು ಹೊರಗೆಬಂದೆ. ಬಾಗಿಲು ಮುಂದೆ ಮಾಡಿ ಕೊಂಡು ಅವಳೂ ನನ್ನ ಹಿಂದೆ ಬಂದಳು. ನಾನು ಮಂಚದ ಮೇಲೆ ಕುಳಿತೆ. ನನ್ನ ಮುಂದೆ ಅವಳು ಕುಳಿತಳು. ನನಗಿಂತ ಮುಂಚೆಯೇ ಮಾತಾಡಿದಳು.

"ನನಗೆ ಗೊತ್ತು... ನೀವೇನು ಯೋಚಿಸು ತ್ತಿದ್ದೀರಿ... ಏನು ಕೇಳುತ್ತೀರಿ ಅಂತ."

"ಹಾಗಿದ್ದರೆ ಎಲ್ಲಾ ನೀನೇ ಹೇಳಿಬಿಡು."

"ಸದ್ಯ ನಾನು ಏನೂ ಹೇಳುವ ಸ್ಥಿತಿಯಲ್ಲಿಲ್ಲ. ನಾನು ಭಯಂಕರ ಆಪತ್ತಿನಲ್ಲಿ ಸಿಲುಕಿಕೊಂಡಿದ್ದೇನೆ. ನನ್ನ ಜೀವ ಗಂಡಾಂತರದಲ್ಲಿದೆ."

"ಪೊಲೀಸರ ಸಹಾಯ ಪಡೆಯಬಾರದೇಕೆ?"

"ಅದೂ ಸಾಧ್ಯವಿಲ್ಲ."

"ಏಕೆ...?" "ಅವರಿಂದಲೂ ನಾನು ಸಹಾಯ ಬಯಸಲಾರೆ" ಆಕೆ ಉತ್ತರಿಸಿದಳು.

"ನನಗಾದರೂ ಹೇಳು ವಿಷಯ ಏನೆಂದು..."

"ಹೇಳ್ತೇನೆ ಈಗಲ್ಲ."

"ಮತ್ತೆ ಯಾವಾಗ?"

"ನಿಮ್ಮ ಮೇಲೆ ಸಂಪೂರ್ಣ ವಿಶ್ವಾಸ ಉಂಟಾದಾಗ..."

ಜೋರಾಗಿ ಕೆನ್ನೆಮೇಲೆ ಬಾರಿಸಿದಂತಾಯಿತು. ಇದೆಂಥ ಅವಮಾನ... ಅದರೊಂದಿಗೆ ಅವಳ ಸ್ಪಷ್ಟ ಮಾತಿಗೆ ಸಂತೋಷವೆನಿಸಿತು.

"ನನಗೆ ನಿನ್ನ ಮೇಲೆ ಸಂಪೂರ್ಣ ವಿಶ್ವಾಸ ವಿದೆ."

"ಥ್ಯಾಂಕ್ಸ್"


ಐದಾರು ನಿಮಿಷ ಇಬ್ಬರಲ್ಲಿ ಯಾರೊಬ್ಬರೂ ಮಾತನಾಡಲಿಲ್ಲ. ಆಕೆ ನನ್ನನ್ನು ನೋಡುತ್ತಿದ್ದಳು. ನಾನು ಆಕೆಯನ್ನು. ಆಕೆಯ ಕೈ ಬೆರಳುಗಳು ನನ್ನ ಕೈಬೆರಳುಗಳೊಂದಿಗೆ ಆಟವಾಡುತ್ತಿದ್ದವು. ಒಂದು ಬಗೆಯ ರೋಮಾಂಚನ. ಒಂದು ಬಗೆಯ ಹಿತ... ನನಗುಂಟಾಗುತ್ತಿತ್ತು.

"ಮಾಮಾ–ಟಿಫಿನ್ ರೆಡಿ..." ಕೂಗುತ್ತ ಬಾಗಿಲು ತೆರೆದುಕೊಂಡು ಒಳಗೆ ಬಂದ ಸವಿತಾ ಅಪ್ಸರೆಯನ್ನು ನೋಡಿ ಅಚ್ಚರಿಯಿಂದ ನಿಂತು ಬಿಟ್ಟಳು. ಸವಿತಾ ಭಟ್ಟರ ಮೊಮ್ಮಗಳು. ಸುನೀಲನ ತಂಗಿ. ಅವಳ ಕೈಯಲ್ಲಿ ಅವಲಕ್ಕಿ ತುಂಬಿದ ಪ್ಲೇಟು ಹಾಗೂ ಕಾಫಿ ಇದ್ದುವು. "ಬಾ ಸವಿತಾ... ಇಲ್ಲಿಡು." ಅಂದೆ. ಆಕೆ ಟೀಪಾಯ್ ಮೇಲೆ ಟಿಫಿನ್ ಇಟ್ಟು ಕೇಳಿದಳು.

"ಮಾಮಾ... ಇವರು ಯಾರು?... ಯಾವಾಗ ಬಂದಾರ?"

"ಇವ್ರು... ಇವ್ರು..." ನಾನು ತೊದಲತೊಡಗಿದೆ. ಸವಿತಾನೇ ನುಡಿದಳು,

"ಗೊತ್ತಾತ ಬಿಡು... ಈಕಿ ಮಾಮಿ... ಹೌದಲ್ಲೋ."



ನಾನು ಬೆದರಿ ಅಪ್ಸರೆಯತ್ತ ನೋಡಿದೆ. ಅವಳ ಮುಖ ಸಪಾಟಾಗಿತ್ತು. ಯಾವ ಭಾವನೆಯೂ ಇರಲಿಲ್ಲ. ಸಾಮಾನ್ಯವಾಗಿ ಹೆಣ್ಣು ಗಂಡಿನ ಸಂಬಂಧದ ಬಗ್ಗೆ ಮಾತು ಬಂದಾಗ ಹೆಣ್ಣು ಲಜ್ಜೆಯಿಂದ ನಾಚುತ್ತದೆ. ಮುಖ ಕೆಂದಾವರೆಯಾಗುತ್ತದೆ ಎಂಬ ಸಾಮಾನ್ಯ ವಾದ. ಇದನ್ನೇ ನಾನು ನನ್ನ ಹಲವಾರು ಕಾದಂಬರಿಗಳಲ್ಲಿ ಬರೆದದ್ದೂ ಇದೆ. ಆದರೆ... ಇಲ್ಲಿ?... ಅಪ್ಸರೆ...ನಿರ್ವಿಕಾರ... ನಿರ್ಲಿಪ್ತಳಾಗಿ ನಿಂತಾಗ ಆಕೆ ಹೆಣ್ಣಾದರೂ ಹೌದೋ ಅಲ್ಲವೋ ಎಂದು ಯೋಚಿಸಿ, ಒಮ್ಮೆಲೆ ನನ್ನ ಕಣ್ಣೆದುರು ಆಕೆ ಸ್ನಾನ ಮಾಡಿ ಬಂದಾಗಿನ ದೃಶ್ಯ ಮೂಡಿಬಂದು ನನ್ನ ವಿಚಾರವನ್ನು ಬದಲಿಸಬೇಕಾಯಿತು.

"ಮಾಮಾ... ಇನ್ನೊಂದು ಪ್ಲೇಟ್ ಟಿಫಿನ್ ತರತೀನಿ."

ಸವಿತಾಳನ್ನು ತಡೆದ ನಾನು ಬೇಡವೆಂದು ಹೇಳಿದೆ. ಅಪ್ಸರೆಯ ವಿಷಯ ಬಹಿರಂಗವಾಗುವುದು ನನಗೆ ಬೇಡವಾಗಿತ್ತು.

"ಇಬ್ರೂ ಒಂದ್ರಾಗ ತಿಂತೀರೇನು?"

ಅವಳ ಪ್ರಶ್ನೆಗೆ ನಾನು ಹುಚ್ಚು ಹುಚ್ಚಾಗಿ ನಕ್ಕೆ. ಉತ್ತರಿಸಲಿಲ್ಲ.

"ಹಾಂ, ಗೊತ್ತಾತ ಬಿಡು" ಚಪ್ಪಾಳೆ ತಟ್ಟಿ ಹೇಳಿದಳು ಸವಿತಾ.

"ಏನು"

"ನಿಮ್ದು ಹೊಸದಾಗಿ ಮದಿವಿ ಆಗೇದ... ನೀವು ಹನಿಮೂನಿಗೆ ಬಂದೀರಿ...ಮತ್ತೆ..." ನಾನು ಸವಿತಾಳ ಬಾಯಿಮೇಲೆ ಕೈಇಟ್ಟು ಅಲ್ಲಿಗೇ ತಡೆದೆ. ಮೇಲೆದ್ದು ಪಾಕೆಟ್‌ನಿಂದ ಹತ್ತು ರೂಪಾಯಿ ತೆಗೆದು ಅವಳತ್ತ ಚಾಚಿ ಹೇಳಿದೆ.

"ತಗೋ ಈ ಹತ್ತ ರೂಪಾಯಿ... ಇಲ್ಲಿ ವಿಷಯ ಯಾರ ಮುಂದೂ ಹೇಳಬ್ಯಾಡ."

"ನಂಗೆ ಲಂಚಾ ಕೊಡತೀರೇನು?... ನಾ ಒಲ್ಲೆ" ಆಕೆ ಮುಖ ಸಿಂಡರಿಸಿದಳು.

"ಇಲ್ಲಮ್ಮಾ... ಇವತ್ತ ನಾ ಹೋಗ್ತೀನಿ. ಅದ್ಕ ಈ ರೂಪಾಯಿ ನಿನ್ನ ಬಳೀಗೆ."

"ಹಂಗಾರ ತಗೋತೀನಿ."

.ರೂಪಾಯಿ ಇಸಿದುಕೊಂಡ ಆಕೆ ಬಾಗಿಲ ವರೆಗೂ ಹೋಗಿ ಹೊರಳಿ ನಿಂತಳು.

"ಮಾಮಾ... ಎಂಥಾ ಕೆಟ್ಟ ಇದ್ದೀಯಲ್ಲ ನೀನು...ನಂಗ ಮಾಮೀ ಹೆಸರೇ ಹೇಳಲಿಲ್ಲ."

ನಾನು ಅಪ್ಸರಾನ ಕಡೆನೋಡಿದೆ. ಆಕೆ ಉಗುರು ಕಡಿಯುತ್ತ ಮೌನವಾಗಿದ್ದಳು.

"ಅಪ್ಸರಾ"... ನಾನೆಂದೆ.

"ಹೋಗೇಹೋಗು... ಇಕೀ ಹೆಸರು ಅಪ್ಸರಾ ಅಲ್ಲ... ಬ್ಯಾರೇ ಅದ."

"ಅರೆ?... ನಿಂಗ ಹೆಂಗ ಗೊತ್ತು?"

"ಹೆಂಗ ಅಂದ್ರ ಇಕೀ ಖರೇ ಹೆಸರು ಏನು ಅಂತ ನಂಗ ಗೊತ್ತದ"

ಅಪ್ಸರಾ ಬೆಚ್ಚಿಬಿದ್ದಳು. ಇಷ್ಟು ಸಮಯದಲ್ಲಿ ಮೊದಲ ಬಾರಿ ಆಕೆ ಸ್ಪಂದಿಸಿದ್ದನ್ನು ಅಥವಾ ಪ್ರತಿಕ್ರಿಯಿಸಿದ್ದನ್ನು ನಾನು ಗುರುತಿಸಿದೆ. ಅಪ್ಸರಾ ಎದ್ದು ಸವಿತಾಳ ಬಳಿ ಸಾರುತ್ತಿದ್ದಂತೆ ಅವಳೆಡೆ ತನ್ನ ಹೆಬ್ಬೆಟ್ಟು ತೋರಿಸಿದ ಆಕೆ "ಡೇಂಗಾ" ಎಂದು ಕೂಗುತ್ತ ಓಡಿಹೋದಳು.

"ನಾನಿನ್ನು ಹೋಗ್ತೇನೆ" ಆಕೆ ಅವಸರ ಮಾಡಿದಳು.

"ಏಕೆ ತಿಂಡಿ ತಿನ್ನೋದಿಲ್ವೇ..."

ಒಂದಿಷ್ಟು ಅವಲಕ್ಕಿ ಬಾಯಿಗೆ ಹಾಕಿಕೊಂಡು. ಕಪ್ಪಿನ ಕಾಫಿ ಬಗ್ಗಿಸಿಕೊಂಡ ಆಕೆ ಎರಡೇ ನಿಮಿಷದಲ್ಲಿ ಕೈಜಾಡಿಸಿಕೊಂಡು ಮೇಲೆದ್ದಳು.

"ಮತ್ತೆ ಯಾವಾಗ ಸಿಗುತ್ತಿ?" ನಾ ಕೇಳಿದೆ.

"ಜೀವಂತ ಇದ್ರ ಎಂದಾದ್ರೊಮ್ಮೆ ಖಂಡಿತ ಭೆಟ್ಟಿ ಆಗತೀನಿ."

ಒಗಟಿನಲ್ಲಿ ಉತ್ತರಿಸಿದ ಆಕೆ ಸರಸರನೇ ಹೊರಟುಹೋದಳು... ಅವಳು ಹೋಗುತ್ತಲೇ ನನ್ನಲ್ಲಿರುವ ಚೇತನವೇ ಹೊರಟುಹೋದಂತಾಗಿ ನಾನು ಹಾಗೇ ಕುಸಿದೆ ಮಂಚದ ಮೇಲೆ.

3

ರಾವಣನಿಗೇ ಉಪ್ಪು ನೀರು ಕುಡಿಸಿದ ಗೋಕರ್ಣದ ಸಹವಾಸ ಸಾಕೆನಿಸಿತು. ವಜ್ರದೇಹಿಯಾದ ರಾವಣ ಚೇತರಿಸಿಕೊಂಡ, ಕುಬ್ಜನಾಗಿರುವ ನಾನೆಂತು ಸಹಿಸಿಕೊಂಡೇನು? ಅಪ್ಸರೆ ಹೋದ ಅರ್ಧಗಂಟೆಗೇ ನಾನೂ ನನ್ನ ಸಲಕರಣೆಗಳೊಂದಿಗೆ ಹೊರಬಂದು ರೂಮಿನ ಚಿಲುಕ ಹಾಕಿದೆ. ಹೆಗಲಿಗೊಂದು ಕೈಚೀಲ. ಬಲಗೈಲಿ ಚಿಕ್ಕ ಸೂಟುಕೇಸು. ಇವಿಷ್ಟು ನನ್ನ ಲಗೇಜು. ಸವಿತಾ ಮನೆಗೆ ಹೋಗಿ ನನ್ನ ಹಾಗೂ ಅಪ್ಸರೆ ಬಗ್ಗೆ ಏನು ಹೇಳಿದ್ದಾಳೋ ಎಂಬ ಭಯ, ದುಗುಡ. ಹೆದರುತ್ತ ಒಳಗೆಹೋದೆ. ಭಟ್ಟರು ಸ್ವಾಗತಿಸಿದರು.

"ಬರ್ರಿ... ಬರ್ರಿ... ಎಲ್ಲಾ ತಯಾರಾಗೇ ಬಂದಿರೇನು ?"

ಹೌದೆನ್ನುವಂತೆ ತಲೆಯಾಡಿಸಿದೆ. ಕೃತಜ್ಞತೆಯ ನಾಲ್ಕು ಮಾತು ಹೇಳಿ ಹೊರಗೆ ಬರುವುದರೊಳಗೆ ಬೆವರು ಇಳಿದಿತ್ತು. "ಮಾಮಾ" ರಸ್ತೆಗಿಳಿದಿದ್ದ ನನ್ನನ್ನು ಕರೆ ತಡೆಯಿತು. ಹಲಸಿನ ಮರದ ಪಕ್ಕದಲ್ಲಿ ಗೋಡೆಗೊರಗಿ ನಿಂತಿದ್ದ ಸವಿತಾ ಕುಚೇಷ್ಟೆಯಿಂದ ಹೇಳಿದಳು "ಗಾಬರಿ ಆಗಬ್ಯಾಡ... ಮನ್ಯಾಗ ನಾ ಏನೂ ಹೇಳಿಲ್ಲ."

ಮಹಾಘಾಟಿ ಈ ಹುಡುಗಿ ಎನಿಸದಿರಲಿಲ್ಲ... ಮರುಕ್ಷಣ ಇವಳಿಗೆ ಅಪ್ಸರೆ ಬಗ್ಗೆ ಅವಳ ನಿಜ ಹೆಸರು ಬಗ್ಗೆ ತಿಳಿದಿದೆ... ಕೇಳಬಾರದೇಕೆ.

"ಸವಿತಾ—ಬಾ ಇಲ್ಲೆ" ಕರೆದೆ.

"ಇಲ್ಲೆ ಇರತೀನಿ ಹೇಳು..." ಅವಳ ಕೆನ್ನೆ ಮೇಲೆ ಬಾರಿಸಬೇಕು ಅನ್ನೋ ಅಷ್ಟು ಕೋಪ.

"ಅಪ್ಸರೆಯ ನಿಜವಾದ ಹೆಸರೇನು ?"

"ಯಾರದು ?..." ಕೋಪ ಉಕ್ಕಿ ಬಂದರೂ ತಡೆದುಕೊಂಡೆ.

"ಅದೇ... ಅಪ್ಸರೆಯದು ನೀನು ಟಿಫಿನ್ ತಂದಾಗ..."

"ಹಾಂ... ನಿಂಜೊತಿ ರಾತ್ರಿ ಎಲ್ಲಾ ಇದ್ದಳಲ್ಲ... ಅವಳದss..."

"ಹಾ... ಹಾ... ಅವರೇ..."

"ನಂಗೊತ್ತಿಲ್ಲ..." ಚಿಗರಿಮರಿಯಂತೆ ಹಾರಿ ಅವಳು ಕಣ್ಮರೆಯಾದಾಗ, "ಓ ದೇವರೆ ಇವಳನ್ನು ಮದುವೆಯಾಗುವ ಪುಣ್ಯಾತ್ಮನ ಮೇಲೆ ನಿನ್ನ ಕರುಣೆ ಇರಲಿ" ಎಂದು ಪ್ರಾರ್ಥಿಸಿ ಬಸ್ ಸ್ಟ್ಯಾಂಡಿಗೆ ಬಂದೆ. ಅದೃಷ್ಟ ಬಸ್ಸು ನನಗಾಗಿ ಕಾಯುತ್ತಿತ್ತು ಅಂತ ಕಾಣಿಸುತ್ತದೆ. ನಾನು ಕೂಡುತ್ತಲೇ ಕೀರಲು ಕಂಠದಲ್ಲಿ ಕಂಡಕ್ಟರ ಕಿರುಚಿದ "ರೈಟ್". ಬಸ್ಸು ಹೊರಟಿತು... ಬಸ್‌ಸ್ಟ್ಯಾಂಡಿನಿಂದ ಹೊರಗೆ ಬರುತ್ತಿದ್ದಂತೆ ಅನಾಯಾಸವಾಗಿ ನನ್ನ ದೃಷ್ಟಿ ವೆಂಕಟೇಶ್ವರ ದೇವಸ್ಥಾನದ ಕಡೆ ಹೊರಳಿತು. ನಮಸ್ಕಾರ ಮಾಡಲು ಕೈ ಎತ್ತಿದ ನಾನು ಅಲ್ಲೇ ಪಕ್ಕದಲ್ಲಿ ನಿಂತಿದ್ದ ಕುರುಚಲು ಗಡ್ಡದ ವ್ಯಕ್ತಿ ಹಾಗೂ ಅವನ ಸಂಗಡಿಗರನ್ನು ಕಂಡು ಕೈಗಳಿಗೆ ಮೊಳೆ ಹೊಡೆದಂತಾಗಿ ಗಪ್‌ನೆ ಕುಳಿತೆ...

ಇದರರ್ಥ ತಿಳಿಯದಷ್ಟು ನಾನು ಮೂರ್ಖನಾಗಿರಲಿಲ್ಲ.

ಅವರು ನನ್ನ ಹಿಂದೇ ಬಿದ್ದಿದ್ದರು. ನನ್ನ ಚಲನವಲನದ ಮೇಲೆ ಕಣ್ಣಿಟ್ಟಿದ್ದರು. ಊರಿಗೆ ನಾನೊಬ್ಬನೇ ಹೋಗುತ್ತೇನೋ ಅಥವಾ ನನ್ನೊಂದಿಗೆ ಅಪ್ಸರೆಯೂ ಬರುತ್ತಾಳೋ ಎಂಬುದನ್ನವರು ನಿರೀಕ್ಷಿಸುತ್ತಿದ್ದರು...

ಅಂತೂ ಅವರಿಂದ... ಅಪ್ಸರೆಯ ರೇಶಿಮೆ ಬಲೆಯಿಂದ ಪಾರಾಗಿದ್ದೆ... ಮನೆ ಸೇರಿದಾಗ ಪುನರ್ಜನ್ಮ ಪಡೆದ ಅನುಭವವಾಯಿತು.

"ಯಾಕೋ ಎಷ್ಟ ಲಗೂ ಬಂದೆಲ್ಲ... ಹದಿನೈದು ದಿವಸ ಬರೂದಿಲ್ಲ ಅಂದಿದ್ದಿ" ತಾಯಿಯ ಮಾತಿಗೆ ನನಗೆ ಸಿಟ್ಟು ಬರಲಿಲ್ಲ... ಮೋಜೆನಿಸಿತು. ಒಂದು ಸಾರೆ ನಾನು ಮನೆಬಿಟ್ಟು ನಾಲ್ಕು ದಿನಕ್ಕೆ ಬರುತ್ತೇನೆಂದು ಹೇಳಿದ್ದರೆ ಮರಳುವದು ಹದಿನಾಲ್ಕು ದಿನಕ್ಕೇ. ಈ ಬಾರಿ ಹದಿನೈದು ಎಂದು ಹೇಳಿದ್ದೆ. ಅದರರ್ಥ ಕನಿಷ್ಠ ತಿಂಗಳು... ಆದರೆ ನಾನು ಮರಳಿದ್ದು ಕೇವಲ ಒಂಬತ್ತನೇ ದಿನಕ್ಕೆ. ಊರಿಗೆ ಮರಳುತ್ತಿರುವಾಗ ಬಸ್ಸಿನಲ್ಲಿ ನಾನೊಂದು ನಿರ್ಧಾರಕ್ಕೆ ಬಂದೆ. ಗೋಕರ್ಣದಲ್ಲಿ ನಡೆದಂತಾ ಘಟನೆ ಮುಂದೆ ಎಂದಾದರೂ ಪುನಃ ಘಟಿಸಿದರೆ ನಾನು ಬೊಂಬೆಯಂತೆ ಎಲ್ಲವನ್ನೂ ಸಹಿಸಿಕೊಂಡಿರಕೂಡದು ಎಂದು. ಸ್ವಲ್ಪಾದರೂ ನನ್ನ ಪ್ರತಿರೋಧ ಬೇಡವೇ? ಅದಕ್ಕಾಗಿ ಊರಿಗೆ ಮರಳುತ್ತಲೆ ಬ್ಲ್ಯಾಕ್‌ಬೆಲ್ಟ ಖತೀಬ ಅವರನ್ನು ಕಂಡು ಅವರಿಂದ ತರಬೇತಿ ಪಡೆಯುವದು.

ಖತೀಬ ನನಗೆ ತೀರ ಪರಿಚಿತರು. ಸರಕಾರಿ ಉರ್ದು ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದುಕೊಂಡೇ ತಾವು ಕರಾಟೆ ಕಲಿತು ಬ್ಲ್ಯಾಕ್ ಬೆಲ್ಟ್ ಪಡೆದು ಉಚಿತವಾಗಿ ಕರಾಟೆ ವರ್ಗ ನಡೆಸುತ್ತಿದ್ದರು. ಈಗಾಗಲೇ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಸ್ವರಕ್ಷಣೆ ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಬೋಧಿಸಿದ್ದರು. ನಾನೂ ಅವರ ವಿದ್ಯಾರ್ಥಿಯಾಗಲು ನಿರ್ಧರಿಸಿದೆ.

ನನ್ನನ್ನು ವಿಶ್ವಾಸದಿಂದ ಸ್ವಾಗತಿಸಿದ ಖತೀಬ ಸಂತೋಷದಿಂದ ಕಲಿಸಿಕೊಡಲು ಮುಂದಾದರು. ನಾನು ಗೋಕರ್ಣದಲ್ಲಿ ನಡೆದ ಘಟನೆ ಅವರಿಗೆ ಮುಚ್ಚುಮರೆ ಇಲ್ಲದೆ ತಿಳಿಸಿ, ಅಂಥ ಸಂದರ್ಭದಲ್ಲಿ ನಾನು ನನ್ನನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂಬುದನ್ನು ಕಲಿಸಿಕೊಡಿ ಎಂದೆ. ಅದಕ್ಕವರು ನಗುತ್ತಾ ಸರಿ, ನಾನು ನಿಮಗೆ

ಶಾಸ್ತ್ರೋಕ್ತವಾಗಿ ಕರಾಟೆ ಕಲಿಸುವದರ ಜೊತೆ ಜೊತೆಗೆ ಕೆಲವೊಂದು ಟ್ರಿಕ್ಸ್ ಹೇಳಿಕೊಡುತ್ತಾ ಹೋಗುತ್ತೇನೆ. ನೀವು ಚೆನ್ನಾಗಿ ರೂಢಿಮಾಡಿ... ಪ್ರಸಂಗ ಕುತ್ತಿಗೆಗೆ ಬಂದಾಗ ಅವು ನಿಮ್ಮ ಸಹಾಯಕ್ಕೆ ಬರುತ್ತವೆ. ಅದರೊಂದಿಗೆ ನೀವು ಇನ್ನೂ ಒಂದು ಕೆಲಸ ಮಾಡಬೇಕು. ದಿನನಿತ್ಯ ಮುಂಜಾನೆ ಕನಿಷ್ಠ ನಾಲ್ಕಾರು ಕಿಲೋಮೀಟರ್ ಓಡುವ ರೂಢಿ ಇಟ್ಟುಕೊಳ್ಳಬೇಕು. ಗುಡ್ಡ ಏರುವ, ಇಳಿಯುವ, ಜಿಗಿಯುವ ಮುಂತಾದ ಕಷ್ಟದ ರೂಢಿ ಸಹ ಮಾಡಿದರೆ ತುಂಬಾ ಅನುಕೂಲ.

ನಾನು ಅವರ ಮಾತನ್ನು ಪೂರ್ತಿಯಾಗಿ ಪಾಲಿಸಿದೆ. ಬೆಳಗ್ಗೆ ಐದಕ್ಕೆ ಮನೆಯಿಂದ ಹೊರ ಬಿದ್ದು ಕಲಘಟಗಿ ರೋಡ್ ಹಿಡಿದು ನುಗ್ಗಿಕೆರೆ ಕಡೆ ವಾಕ್ ಹೊರಡುತ್ತಿದ್ದೆ. ನುಗ್ಗಿಕೆರೆ ವರೆಗೆ ಬಂದು ಅಲ್ಲಿಂದಲೇ ಕಾಣದ ಪ್ರಾಣದೇವರಿಗೆ ವಂದಿಸಿ ಇಲ್ಲಿಂದ ಮನೆಗೆ ಹೊರಡುತ್ತಿದ್ದೆ. ಬರುವಾಗ ವೇಗವಾಗಿ ಓಡುತ್ತಾ ಸೋಮೇಶ್ವರದ ವರೆಗೂ ಬರುತ್ತಿದ್ದೆ. ಅಲ್ಲಿಂದ ಮುಖ್ಯರಸ್ತೆಗೆ ಬಂದು ಎಡಬದಿಗೆ ತಿರುಗಿ ಎದುರಿದ್ದ ಚಿಕ್ಕ ಚಿಕ್ಕ ಗುಡ್ಡಗಳನ್ನು ಹತ್ತಿ ಇಳಿದು, ಜಿಗಿಯುತ್ತ ತೇಜಸ್ವಿನಗರ ಸೇರುತ್ತಿದ್ದೆ. ಅಲ್ಲಿಂದ ಗುಡ್ಡ ಇಳಿದು ರೈಲುಹಳಿಗೆ ಕೂಡುತ್ತಿದ್ದೆ. ಸುಮಾರು ಎರಡು ಫರ್ಲಾಂಗ್ ದೂರವನ್ನು ರೈಲುಕಂಬಿಯ ಮೇಲೆ ನಡೆಯುತ್ತ ಕ್ರಮಿಸಿ, ಬಲಕ್ಕೆ ಚಿಕ್ಕ ದಿನ್ನೆ ಮೇಲಿರುವ ನನ್ನ ಮನೆ ಸೇರುತ್ತಿದ್ದೆ. ಆಗ ಸುಮಾರು ಸರಿಯಾಗಿ ಏಳೂ ಕಾಲು. ಸ್ನಾನ ಮಾಡಿ ತಿಂಡಿ ತಿಂದು ಕರಾಟೆ ಕ್ಲಾಸಿಗೆ ಹೋಗುತ್ತಿದ್ದೆ. ಹನ್ನೆರಡು ಗಂಟೆಗೆ ಮನೆಗೆ ಬಂದು ಊಟ ಮಾಡಿ ಸ್ವಲ್ಪ ಹೊತ್ತು ಓದುತ್ತಿದ್ದು, ಎರಡು ಗಂಟೆಗೆ ಮಲಗಿದವನು ನಾಲ್ಕುವರೆಗೆ ಎದ್ದು ಚಹ ಕುಡಿದು ಐದು ಗಂಟೆಯಿಂದ ಬರಹದ ಕೆಲಸದಲ್ಲಿ ತೊಡಗುತ್ತಿದ್ದೆ. ಎಂಟು ಗಂಟೆಗೆ ಟಿ.ವಿ. ವಾರ್ತೆ, ಒಂಬತ್ತುವರೆಗೆ ಊಟ ಮಾಡಿ ಮನಸ್ಸು ಬಂದರೆ ಓದುತ್ತಿದ್ದೆ. ಇಲ್ಲವೆ ವಿ.ಸಿ.ಪಿ.ಯಲ್ಲಿ ಕ್ಯಾಸೆಟ್ ಹಾಕಿ ಇಂಗ್ಲಿಷ್ ಚಿತ್ರ ನೋಡುತ್ತಿದ್ದೆ. ಮಲಗುವಾಗ ಹನ್ನೆರಡು ಗಂಟೆ ರಾತ್ರಿ.

ನನ್ನ ದೈನಂದಿನ ಕೆಲಸ ಎಂದೂ ತಪ್ಪದೆ ಇಪ್ಪತ್ತು ಇಪ್ಪತ್ತೈದು ದಿನ ನಡೆದಾಗ ನನ್ನಲ್ಲಿ ಎಷ್ಟೋ ಬದಲಾವಣೆ ಆಗಿತ್ತು. ನಿರ್ಬಲ, ನಿಃಶಕ್ತ ವ್ಯಕ್ತಿಯಾಗಿದ್ದ ನಾನು ಸಹಜವಾಗಿ ಇಬ್ಬರು ಮೂವರನ್ನು ಸತತವಾಗಿ ಎದುರಿಸುವ ಮಾನಸಿಕ ಧೈರ್ಯ ಸಂಪಾದಿಸಿದ್ದೆ... ನನ್ನ ಈ ಶಿಕ್ಷಣ ಪ್ರಗತಿ ಕಂಡ ಖತೀಬ ಬೆನ್ನು ಚಪ್ಪರಿಸಿ ಪ್ರೋತ್ಸಾಹ ನೀಡಿದರು. ಕೇವಲ ಒಂದು ತಿಂಗಳಲ್ಲಿ ನಾನು ಆರು ತಿಂಗಳಲ್ಲಿ ಕಲಿಯಬಹುದಾದ ವಿದ್ಯೆ



ಅವರಿಂದ ಪಡೆದಿದ್ದೆ...

ಅವ್ಯಾಹತವಾಗಿ ಒಂದು ತಿಂಗಳು ಸಾಗಿದ ನನ್ನ ಅಭ್ಯಾಸಕ್ಕೆ ದೃಷ್ಟಿ ತಾಗಿತು ಎಂದು ಕಾಣುತ್ತದೆ. ಬಿಜಿನೆಸ್ ಮ್ಯಾನೇಜ್‌ಮೆಂಟಿನಲ್ಲಿ ಪದವಿ ಪಡೆದು ಸರಿಯಾದ ಕೆಲಸ ಸಿಗದ್ದರಿಂದ ನಿರುದ್ಯೋಗಿಯಾಗಿ ಕೂಡದೇ ಮನೆಯ ಮುಂದೆಯೇ ಕಿರಾಣಿ ಅಂಗಡಿ ಮಾಡಿಕೊಂಡು ಭರ್ಜರಿ ವ್ಯಾಪಾರ ಮಾಡುತ್ತ ಬಂದಿದ್ದ ನನ್ನ ತಮ್ಮ ಅತುಲನಿಗೆ ಮುಂಬಯಿಯಿಂದ ಸಂದರ್ಶನಕ್ಕೆ ಕರೆಬರಬೇಕೆ? ಮುಂಬೈ ಎಂದರೆ ಒಂದು ಆಕರ್ಷಣೆ... ತಾಜಮಹಲ ಹೊಟೇಲ್ ಅಂದರಂತೂ ಮುಗಿದೇಹೋಯಿತು. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದ ಪಂಚತಾರಾ ಹೊಟೇಲುಗಳಲ್ಲಿ ಅದೊಂದು. ಅಲ್ಲಿಂದಲೇ ಅಸಿಸ್ಟೆಂಟ್ ಮ್ಯಾನೇಜರ ಜಾಗೆಗೆ ಸಂದರ್ಶನ. ಅತುಲನಂತೂ ತುದಿಗಾಲ ಮೇಲೆ ಕುಣಿಯತೊಡಗಿದ. ಆತ ಹೋಗಿ ಬರಲು ಕನಿಷ್ಠ ನಾಲ್ಕಾರು ದಿನಗಳಾದರೂ ಬೇಕು. ಅಪರೂಪಕ್ಕೆ ಹೊರಬಿದ್ದ ಆತ ಮತ್ತೂ ನಾಲ್ಕು ದಿನ ಅಲ್ಲಲ್ಲಿ ಸುತ್ತಾಡಿ ಬರುತ್ತೇನೆ ಅಂದ. ಒಟ್ಟಾರೆ ಹದಿನೈದು ದಿನ. ಅಷ್ಟು ದೀರ್ಘಾವಧಿವರೆಗೆ ಅಂಗಡಿ ಬಾಗಿಲು ಮುಚ್ಚುವಂತಿಲ್ಲ. ಮುಚ್ಚಿದರೆ ವ್ಯಾಪಾರ ಸತ್ಯನಾಶ. ಹತ್ತಾರು ಸಾವಿರ ರೂಪಾಯಿ ಉದ್ರಿ ಬೇರೆ. ಹೀಗಾಗಿ ಬೇಡಬೇಡವೆಂದರೂ ಕಿರಾಣಿ ಅಂಗಡಿ ವ್ಯವಹಾರ ನನ್ನ ತಲೆಗೇ ಬಂದಿತು. ಇದರ ಬಗ್ಗೆ ನನಗೇನೂ ತಿಳಿಯದು ಎಂದು ವಾದಿಸಿದ್ದು ಉಪಯೋಗವಾಗಲಿಲ್ಲ. "ನಾನೆಲ್ಲಾ ವ್ಯವಹಾರ ನೋಡಿಕೊಳ್ತೇನೆ. ನೀನು ಕೇವಲ ಕ್ಯಾಶ್ ಸಂಭಾಳಿಸು" ಎಂದರು ತಂದೆ. ಮುಂದೆ ನಾನು ಮಾತೇ ಆಡಲಿಲ್ಲ. ತಾಯಿ ಮುಂದೆ ಗೊಣಗಿದೆ. "ದಿನದ ಮುಕ್ಕಾಲು ಭಾಗ ಓದುತ್ತ ಬರೆಯುತ್ತ ಕಳೆಯುತ್ತಿ. ಹೀಗೆ ಆದರೆ ಹುಚ್ಚು ಹಿಡಿದೀತು. ಸ್ವಲ್ಪಕಾಲ ಬೇರೆಡೆ ತಲೆಹಾಕು" ಎಂದು ಅವರು ಬುದ್ಧಿ ಹೇಳಿದಾಗ ಅವರ ಮಾತೂ ಸರಿ ಎನಿಸಿತು. ಲೈಫಿನಲ್ಲಿ ಸ್ವಲ್ಪಾದರೂ ಚೇಂಜ್ ಬೇಡವೆ? ಒಪ್ಪಿಕೊಂಡೆ. ಒಂದು ಶರ್ತಿನ ಮೇಲೆ. ಕೈಯಲ್ಲೊಂದು ಆಳು ಬೇಕು ಎಂದು. ತಾಯಿ ಮುಸಿಮುಸಿ ನಗುತ್ತ, "ಒಂದು ಕೆಲಸ ಮಾಡು... ಕಾಯಂ ಆಗಿರುವ ಹಾಗೆ ಒಂದು ಹೆಣ್ಣಾಳನ್ನೇ ತೆಗೆದುಕೊಂಡು ಬಾ... ನನ್ನ ಸೇವೆಯೂ ಆಗುತ್ತದೆ. ನಿನ್ನ ಸೇವೆಯೂ ನಡೆಯುತ್ತಿದೆ. ಅಂಗಡಿ ಕೆಲಸವೂ ಸಾಗುತ್ತದೆ..." ಅವರ ಮಾತಿನ ಅರ್ಥ ಅರಿತ ನಾನು ಹೆಣ್ಣಿನಂತೆ ನಾಚಿ ಮುದ್ದೆ ಆದೆ. ನಾನು ನಾಚಿದ್ದು ಕಂಡು ಅವರು ಪ್ರೀತಿಯಿಂದ ಗದರಿದರು. "ಹಿಂಗ್ಯಾಕ ನಾಚಿಕಿ... ಥೂ... ನಿನ್ನ ಮುಖಕ್ಕೆ ಮೀಸೆ ಕೇಡು..."

ಮರುದಿನ ಅತುಲ ಮುಂಬಯಿಗೆ ಪ್ರಯಾಣ ಬೆಳೆಸಿದ. ರೈಲು ಹತ್ತಿಸಿ, ಅದು ಹೊರಡುತ್ತಿರಲು ನಾನು ಕೇಳಿದೆ.

"ಆದಷ್ಟು ಬೇಗನೇ ಬಂದುಬಿಡು... ಹೆಚ್ಚು ದಿನ ನಿಂತರೆ ಇಲ್ಲಿ ವ್ಯಾಪಾರ ಲಾಸ್ ಆಗುತ್ತದೆ."

"ಆದರೆ ಆಗಲಿಬಿಡು. ಅದರ ಚಿಂತೆ ನನಗಿಲ್ಲ... ಅಪ್ಪ ಇದಾನೆ... ನೀನಿದಿಯಾ... ನನಗೇನು?"

ಥೂ... ಕರ್ಪುರದಂಥ ಬಾಯಿ ಕತ್ತೆಗೆ ತೆಗೆದಂಥಾಯ್ತು ಎಂದು ನನ್ನ ನಾನು ಶಪಿಸಿಕೊಂಡು ಮನೆಕಡೆ ಬಂದೆ... ನನ್ನ ನೋಡುತ್ತಲೂ ಅಂಗಡಿಯಿಂದಲೇ ತಂದೆ ಕೂಗಿದರು.

"ಎಷ್ಟು ಹೊತ್ತೋ ಅದು... ಬೇಗ ಬಾ... ನನಗೊಬ್ಬನಿಗೆ ಆಗ್ತಾ ಇಲ್ಲ!" ಹಾಗೇ ಅಂಗಡಿಯೊಳಗೆ ಕಾಲಿಟ್ಟೆ. ಸರಿ, ಶುರುವಾಯಿತು ವ್ಯವಹಾರ. ಸಾಮಾನುಗಳನ್ನು ತೂಕಮಾಡಿ ಪ್ಯಾಕ್ ಮಾಡಿ ಇಡಲಾಗಿತ್ತು. ತಂದೆಯವರು ಗಿರಾಕಿಗೆ ಕೊಟ್ಟು ದುಡ್ಡು ಹೇಳುತ್ತಿದ್ದರು. ನಾನು ದುಡ್ಡು ಪಡೆದು ಗಲ್ಲೆಗೆ ಸೇರಿಸುತ್ತಿದ್ದೆ... ಸುಮಾರು ಎರಡು ಗಂಟೆ ಕಾಲ ಸರಿದದ್ದೇ ನಂಗೆ ತಿಳಿಯಲಿಲ್ಲ... ಮಧ್ಯೆ ಮಧ್ಯೆ ತಂದೆಯವರು ತೋರಿಸಿದ ವಸ್ತುಗಳನ್ನು ಎತ್ತಿ ಕೊಡುತ್ತಿದ್ದೆ. ಇಷ್ಟಕ್ಕೆ ಸಾಕು ಸಾಕಾಯ್ತು...

ಮಧ್ಯಾಹ್ನದ ಊಟ ಮುಗಿಸಿ ಕೈತೊಳೆಯುತ್ತಾ ಚಿಕ್ಕ ಮಕ್ಕಳು ಚಂಡಿ ಹಿಡಿಯುವಂತೆ ಅಮ್ಮನಿಗೆ ಹೇಳಿದೆ. "ನನಗೆ ಈ ಕೆಲಸ ಆಗೋದಿಲ್ಲ. ಬೇಗನೇ ಒಂದು ಆಳಿನ ವ್ಯವಸ್ಥೆ ಮಾಡು. ನೀ ಮಾಡದಿದ್ರೆ ನಾನೇ ನೋಡಿಕೊಳ್ಳಬೇಕಾಗುತ್ತದೆ..." ಅವಳ ಉತ್ತರಕ್ಕೂ ಕಾಯದೇ ಮಹಡಿ ಮೇಲಿದ್ದ ನನ್ನ ರೂಮು ಸೇರಿದೆ.

ಹಾಂ— ಅಂದ ಹಾಗೆ ಒಂದು ವಿಷಯ ಹೇಳುವುದನ್ನು ಮರೆತೆ. ಅದೇ ನಮ್ಮ ಮನೆಯ ವಿಷಯ. ಕಟ್ಟಡ—ಕಟ್ಟಡದ ವಿನ್ಯಾಸದ ಬಗ್ಗೆ. ಸಧ್ಯ, ನಾವು ಇರುವ ಮನೆ ನಮ್ಮ ತಾತನದು.

ಹಳೆಯ ಮನೆಯನ್ನೇ ಒಡೆಸಿ ಅದಕ್ಕೆ ಆಧುನಿಕ ರೂಪ ಕೊಟ್ಟವರು ನಮ್ಮ ತಂದೆ. ನಮ್ಮ ತಂದೆ ವಾಣಿಜ್ಯ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮೀಶನರ ಆಗಿ ನಿವೃತ್ತರಾದವರು. ಹೀಗಾಗಿ ತಮ್ಮ ಸೇವಾ ಅವಧಿಯಲ್ಲಿ ಸಾಕಷ್ಟು ಗಳಿಸಿದ್ದರು ಎಂದು ಹೇಳಲು ನನಗೇನೂ ಸಂಕೋಚವಾಗುವದಿಲ್ಲ... ಮನೆಯ ಎದುರಿಗಿರುವ ಖಾಲಿ ಜಾಗೆಯಲ್ಲಿ ಕಟ್ಟಡಗಳ ಸಂಕೀರ್ಣ ಕಟ್ಟಿಸಿ ಮೇಲೆ ಎಂಟು ಹತ್ತು ಕೊಠಡಿ ಮಾಡಿ ಕಾಲೇಜು ಹುಡುಗರಿಗೆ, ನೌಕರದಾರರಿಗೆ ಬಾಡಿಗೆ ನೀಡಿದ್ದಾರೆ. ಕಟ್ಟಡದ ಬಾಡಿಗೆಯೊಂದೇ ತಿಂಗಳಿಗೆ ಘೂವತ್ತು ಮೂವತ್ತೈದು ಸಾವಿರ ರೂಪಾಯಿ ಬರುತ್ತಿರುವದರಿಂದ ನನಗೆ ನೌಕರಿ ಮಾಡಿ ಅನ್ನಕ್ಕೆ ಮಾರ್ಗ ಹುಡುಕಿಕೊಳ್ಳುವ ಆವಶ್ಯಕತೆ ಬೀಳಲಿಲ್ಲ. ಹಿರಿಯ ಮಗನಾದ ನನ್ನ ಮೇಲೆ ತಂದೆತಾಯಿಗಳ ವಿಶೇಷ ಮಮತೆ ಬೇರೆ ಇದ್ದುದರಿಂದ ನನ್ನನ್ನು ದೂರ ನೌಕರಿ ಮೇಲೆ ಕಳಿಸಲು ಅವರು ಒಪ್ಪಲಿಲ್ಲ. ಹೀಗಾಗಿ ನನ್ನ ಒಲವು ಸಾಹಿತ್ಯದ ಕಡೆಗೆ ಹರಿದು ಮೊದಲು ಹವ್ಯಾಸವಾಗಿದ್ದ ಅದು ಈಗ ವ್ಯಾಪಾರವೃತ್ತಿಯಾಗಿದೆ. ನನ್ನ ತಮ್ಮ ಅತುಲ ಸಹ ನೌಕರಿ ಮಾಡುವದು ಅವರಿಗೆ ಹಿಡಿಸದು. ಅದಕ್ಕಾಗಿ ಕಿರಾಣಿ ಅಂಗಡಿ ನಡೆಸುವಂತೆ ಅವನನ್ನು ಪ್ರೇರೇಪಿಸಿದ್ದರು. ವಿಧಿ ಇಲ್ಲದೇ ಆತ ಒಪ್ಪಿಕೊಂಡು ಒಂದು ವರ್ಷದಿಂದ ನಡೆಸಿಕೊಂಡು ಬಂದಿದ್ದ.

ನಮ್ಮ ಮನೆಯ ಮಹಡಿ ಮೇಲೆ ಪ್ರತ್ಯೇಕವಾಗಿ ಮೂರು ಕೋಣೆಗಳಿವೆ. ಎರಡರಲ್ಲಿ ನಾನು ಮತ್ತು ಅತುಲ ಇದ್ದರೆ ಇನ್ನೊಂದರಲ್ಲಿ ಜಯಚಂದ್ರ ಬಾಡಿಗೆಯಿಂದಿದ್ದಾನೆ. ಜಯಚಂದ್ರ ನಗರದ ಬ್ಯಾಂಕೊಂದರಲ್ಲಿ ಉದ್ಯೋಗಿ...

ನಾವಿರುವ ಮನೆಯನ್ನು ನಮ್ಮ ತಂದೆ ತಾಯಿಯವರ ಹೆಸರಿಗೆ ಮಾಡಿದ್ದು ಎದುರಿಗಿರುವ ಕಟ್ಟಡಗಳ ಸಂಕೀರ್ಣವನ್ನು ನನ್ನ ಹಾಗೂ ಅತುಲ ಹೆಸರಿಗೆ ಮಾಡಿದ್ದಾರೆ. ನಮ್ಮಿಬ್ಬರ ಬೇರೆ ಬೇರೆ ಖಾತೆಗಳೂ ಸಹ ಬ್ಯಾಂಕಿನಲ್ಲಿ ಇದ್ದು ಪ್ರತಿ ತಿಂಗಳು ಹತ್ತನೇ ತಾರೀಖಿಗೆ ತಲಾ ಹದಿನೈದು, ಹದಿನಾರು ಸಾವಿರ ರೂಪಾಯಿಗಳು ನಮ್ಮ ನಮ್ಮ ಖಾತೆಗೆ ಜಮೆ ಆಗುತ್ತವೆ. ಇದರಿಂದಾಗಿ ಆರ್ಥಿಕ ಸ್ಥಿತಿಯಲ್ಲಿ ನಾನು ಗಟ್ಟಿಮುಟ್ಟಾಗಿದ್ದೆ...

ಆಸೆ

ನೆಲವ ಬಿಟ್ಟು ಏಳುವಾಸೆ
ಹಕ್ಕಿಯಾಗಿ ಹಾರುವಾಸೆ
ದಡವ ಬಿಟ್ಟು ನೀರಿನಾಚೆ
ಕಡಲ ಸೇರಿ ಈಜುವಾಸೆ॥

ಬಾನಿನಲ್ಲಿ ಮುಗಿಲಿನಾಗೆ
ಮಾತಬಿಟ್ಟು ಮೌನವಾಗಿ
ಗಾಳಿಯಲ್ಲಿ ಹಾರುವಾಸೆ
ಗಿರಿಬನಗಳ ಸುತ್ತುವಾಸೆ॥

ಝರಿ ತೊರೆಯಲಿ ಮೀಯುವಾಸೆ
ಪುಟ್ಟ ಮಗುವ ಗೊಂಬೆಯಾಗಿ
ಅವರ ಸೇರಿ ನಲಿಯುವಾಸೆ!
ಮುತ್ತು ಕೊಟ್ಟು ಸವಿಯುವಾಸೆ॥

ನರಕ ಬಿಟ್ಟು ಸ್ವರ್ಗದಾಸೆ
ನಿನ್ನ ಕೂಡಿ ಆಡುವಾಸೆ
ಸದಾ ಪಯಣ ಮಾಡುವಾಸೆ
ಜ್ಞಾನವನ್ನು ಪಡೆಯುವಾಸೆ॥

ಬರುವೆಯಾ.....ನನ್ನ ಜೊತೆ!
ಇರುವೆಯಾ.....ನನ್ನ ಜೊತೆ
ತೇಲಿ ತೇಲಿ ಸಾಗುವಾ....
ನಾವು ಸೇರಿ ನಲಿಯುವಾ॥

● ಸುಮಾ, ಚಿಕ್ಕಮಗಳೂರು

ಕಟಕಟ ಬಾರಿಸಿದ ಸದ್ದಿಗೆ ಸುಖಕರವಾಗಿ ನಿದ್ರಿಸುತ್ತಿದ್ದ ನನಗೆ ಎಚ್ಚರವಾಯಿತು. ವಾಚು ನೋಡಿದೆ ಮೂರು ಮುಕ್ಕಾಲು. ನಾಲ್ಕು ಗಂಟೆಗೆ ಅಂಗಡಿ ತೆರೆಯಬೇಕು. ಅದಕ್ಕಾಗಿ ತಾಯಿ ಎಬ್ಬಿಸಲು ಬಂದಿರಬೇಕೆಂದುಕೊಂಡೆ. ಏಳಲು ಬೇಜಾರು. ಆದರೂ ಎದ್ದು ಬಾಗಿಲು ತೆರೆದೆ. ಮುಗುಳುನಗೆ ನಗುತ್ತಾ ನಿಂತಿದ್ದಳು ತಾಯಿ.

"ಎಂಥಾ ಬೆರಿಕಿ ಇದ್ದೀಯಪ್ಪಾ ನೀನು... ಇಷ್ಟ ಬೇಗ ಆಳು ಗೊತ್ತ ಮಾಡಿಬಿಟ್ಟೆಯಲ್ಲ..." ನನಗೊಂದೂ ಅರ್ಥವಾಗಲಿಲ್ಲ.

"ಆಳ? ಎಲ್ಲೆದ? ನನಗೊಂದೂ ಗೊತ್ತಿಲ್ಲ."

"ನನ್ನ ಮುಂದ ನಾಟಕ ಮಾಡಬ್ಯಾಡ. ನಿನ್ನ

ಕೇಳಿಕೊಂಡು, ನೀ ಹೇಳಿ ಕಳಿಸೀದಿ ಅಂತ ಬಂದಾರ... ತಗೋ ನಿನ್ನ ಅಡ್ರಸ್ಸಿನ ಕಾರ್ಡು."

ಹೌದು—ಅದು ನನ್ನದೇ... ಅದನ್ನು ಕೊಟ್ಟು ಭೇಟಿಯಾಗಿ ಎಂದು ಹೇಳಿದ್ದ ನೆನಪು ನನಗಿರಲಿಲ್ಲ. ನಾನು ಪೆಚ್ಚಾಗಿದ್ದನ್ನು ಕಂಡು ಅಮ್ಮನೇ ಹೇಳಿದಳು.

"ನೀ ಗಾಬರಿ ಆಗಬ್ಯಾಡ... ಆಳು ನನಗೆ ಪಸಂದ ಅದ... ಖಾಯಂ ಆಗಿ ಇಟ್ಕೊ." ಎಲ್ಲಾ ಒಗಟಿನಂಥ ಮಾತು.

"ಅವ್ವಾ... ಓಂಗ್ಯಾಕ ಮಾತಾಡ್ಲಿಕ್ಕೆ ಹತ್ತಿ."

"ಹುಚ್ಚಪ್ಪಾ... ನಿನ್ನ ಹುಡಿಕ್ಕೊಂಡು ಬಂದೇತಿ ಹುಡುಗಿ. ಭಾಳ ಛಂದ ಇದ್ದಾಳ. ನನಗಂತೂ ಪಸಂದಾಗೇದ. ನೀ ಒಪ್ಪಿದೇ ತಡಾ ಮದ್ವಿ ಮಾಡಿಬಿಡ್ತೀನಿ."

"ಅವ್ವ, ನೀ ಯಾರ ಬಗ್ಗೆ ಹೇಳ್ಲಿಕ್ಕೆ ಹತ್ತಿ... ಯಾರಾಕೆ? ಆಕೀ ಹೆಸರು ಏನಂತ?"

"ನನಗೊಂದೂ ಗೊತ್ತಿಲ್ಲ... ಅದ್ರ ಅಪ್ಸರಾ ಇದ್ದ್ಹಂಗ ಇದ್ದಾಳಪಾ"

"ಅಂ? ಅಪ್ಸರನ?.... ಎಲ್ಲಿದಾಳ?" ನಾನು



ಹೌಹಾರಿ ಕೇಳಿದಾಗ ಕಿಲಿಕಿಲಿ ನಕ್ಕಳು ಅವ್ವ.

"ತುಡುಗು ಸಿಕ್ತಿಲ್ಲ... ಖೋಡೀ... ಹಳೀ ಖೋಡಿ... ನಿನ್ನ ಅವ್ವನ ಹತ್ರಾನೂ ಮುಚ್ಚಿಡೋದೆ... ಇರು ಮ್ಯಾಲೇ ಕಳಿಸ್ತೀನಿ."

ಅವ್ವ ಹೊರಟುಹೋದಳು. ಬೃಹದಾಕಾರದ ಸಮಸ್ಯೆ ನನ್ನೆದುರಿಗೆ ಇತ್ತು. ಈ ಕಾರ್ಡು ತಂದವಳು ಯಾರು? ಅಪ್ಸರೆಯಂತೆ... ನಾನಂತೂ ಅಪ್ಸರೆಗೆ ಕಾರ್ಡು ಕೊಟ್ಟ ನೆನಪಿಲ್ಲ... ಹಾಗಾದರೆ...

ಬಾಗಿಲ ಬಳಿ ಸದ್ದಾಯಿತು. ತಲೆಯೆತ್ತಿ ನೋಡಿದೆ... ವಿದ್ಯುತ್ ತಂತಿ ಸ್ಪರ್ಶಿಸಿದಂತಾಯಿತು.

ಬಾಗಿಲಿಗೆ ಅಪ್ಸರಾ ನಗುತ್ತ ನಿಂತಿದ್ದಳು.

4

"ಬಾಗಿಲು ಮುಚ್ಚಲೋ ಹಾಗೆ ಇರಲ್ಲೋ..." ತುಂಟ ನಗೆ ಹೊರಚೆಲ್ಲಿ ಕೇಳಿದಳಾಕೆ... ಮೈ ಎಲ್ಲಾ ಉರಿಯಿತು. ಬಾಗಿಲು ಮುಚ್ಚಿ ಆಕೆ ಗೋಕರ್ಣದಲ್ಲಿ ಅಪ್ಪಿಕೊಂಡು ಉರುಳಾಡಿದಂತೆ ಉರುಳಾಡಿ, ತಂದೆತಾಯಿ ನೆರೆಹೊರೆಯ ಮುಂದೆ ಮೈಹಣ್ಣಾಗುವಂತೆ ಹೊಡೆಸುವ ಸನ್ನಾಹದಲ್ಲಿ ಬಂದಿರುವಳೋ ಏನೋ ಎಂಬ ಸಂಶಯವೂ ಕಾಡದಿರಲಿಲ್ಲ.

"ಬೇಡ, ಬೇಡ" ಎಂದು ಕೂಗಿಕ್ಕೊಂಡೆ.

"ಓಹ್, ಭಯವಾ?... ಅದೂ ಸರಿ... ತಾಯಿ ಇದ್ದಾರಲ್ಲ?"

ಹಂಸದ ನಡಿಗೆಯಲ್ಲಿ ನನ್ನನ್ನು ಸಮೀಪಿಸಿ ಹತ್ತಿರದಲ್ಲೇ ಮಂಚದ ಮೇಲೆ ಕುಳಿತಾಗ ನಾನು ಆಕ್ಷೇಪಿಸಿದೆ.

"ಇಲ್ಲಿ ಬೇಡ... ಅಲ್ಲಿ ಕೂಡು ಕುರ್ಚಿ ಮೇಲೆ."

"ಯಾಕೆ? ಮಂಚದ ಮೇಲೆ ನಾನು ಕೂಡಬಾರದಾ?" ನಾನು ಉತ್ತರಿಸುವದಕ್ಕಿಂತ ಮೊದಲು ಚಹದೊಂದಿಗೆ ಬಂದ ತಾಯಿ ಉತ್ತರಿಸಿದಳು.

"ಧಾರಾಳವಾಗಿ ಕೂಡಮ್ಮ... ನಿನ್ನ ತಡೆಯುವವರಾರು?"

ಹೆಮ್ಮೆಯಿಂದ ಬೀಗುತ್ತ ನನಗೆ ತೀರ ಹತ್ತಿರದಲ್ಲೇ ಕುಳಿತ ಆಕೆ ತಾಯಿಯಿಂದ ಚಹಾದ ಕಪ್ ಕಸಿದುಕೊಂಡು ಮೊದಲು ನನಗೊಂದು ಕಪ್ ಕೊಟ್ಟು ಆಮೇಲೆ ತಾನು ತೆಗೆದುಕೊಂಡಾಗ

ಅಮ್ಮನಿಗೆ ಖುಶಿಯಾದಂತೆ ಕಂಡಿತು. ಚಹ ಕುಡಿಯುತ್ತ ಅಪ್ಸರೆ ನನ್ನನ್ನೇ ನೋಡುತ್ತಿದ್ದರೆ ಅಮ್ಮ ಅವಳನ್ನು ನೋಡುತ್ತಿದ್ದಳು.

ಖಾಲಿಯಾಗಿಟ್ಟ ಕಪ್ ಎಲ್ಲಾ ಟ್ರೇಯಲ್ಲಿಟ್ಟ ಅಪ್ಸರಾ ನೇರವಾಗಿ ತಾಯಿಯನ್ನು ಕೇಳಿದಳು... ಅವಳ ದನಿಯಲ್ಲಿ ವಿಧೇಯತೆ ಜೊತೆ ಆತ್ಮೀಯತೆಯೂ ಬೆರೆತಿತ್ತು.

"ಅಮ್ಮಾ... ತಾನೊಂದು ಮಾತು ಕೇಳಲಾ?"

"ಕೇಳು ತಾಯಿ... ಅದಕ್ಕೇನು?"

"ನನ್ನ ಕಾಲೇಜಿಗೆ ರಜೆ ಇದೆ. ಮನೆಯಲ್ಲಿದ್ದು ಬೇಸರ. ನಾಲ್ಕಾರು ದಿನ ನಿಮ್ಮಲ್ಲಿರಬೇಕೆಂದು ಬಂದೆ... ಇಟ್ಟುಕೊಳ್ತೀರಾ..."

"ಧಾರಾಳವಾಗಿ ಇರಮ್ಮ... ಇವನಿಗೂ ಒಂದು ಆಳು ಬೇಕಾಗಿತ್ತು... ಬಂದೇ ಬಿಟ್ಟೆಯಲ್ಲ."

"ಆಂ?... ಏನೆಂದಿರಿ?... ಆಳಾ?" ಅಪ್ಸರೆ ಗಾಬರಿಯಾದಳು.

ಅಮ್ಮ ಹೊಟ್ಟೆ ಹುಣ್ಣಾಗುವಂತೆ ನಕ್ಕು, ಎರಡು ದಿನಗಳ ಹಿಂದೆ ನಡೆದ ಮಾತು, ಇಂದು ಮಧ್ಯಾಹ್ನ ಆತ ಮಾಡಿದ ಮೊಂಡತನ ಎಲ್ಲ ಬಣ್ಣಿಸಿ ಹೇಳಿದರು.

"ಇನ್ನು ಚಿಂತೆ ಇಲ್ಲ. ಇಬ್ಬರೂ ಕೂಡಿ ಅಂಗಡಿ ನೋಡಿಕೊಳ್ಳಿ..."

ಅಮ್ಮ ಮೇಲೇಳುತ್ತಾ ಟ್ರೇ ಕೈಗೆತ್ತಿಕೊಂಡು ಸೂಚನೆ ನೀಡಿದರು. "ಇವಳಿಗೆ ಕೆಳಗಡೆ ರೂಮು ಕೊಡ್ತೇನೆ... ಸ್ವಲ್ಪ ಹೊತ್ತು ಬಿಟ್ಟು ಇಬ್ಬರೂ ಕೆಳಗೆ ಬನ್ನಿ."

ಚಿಕ್ಕದರಲ್ಲೇ ಏನು ಹೇಳಬೇಕೋ ಎಲ್ಲವನ್ನೂ ಅವರು ಹೇಳಿದ್ದರು. ಈಕೆಗೆ ನಿನ್ನ ಕೋಣೆ ಬೇಡ... ನನ್ನ ಜೊತೆಯೇ ಇರಲಿ. ಈಗ ಬಹಳ ಸಮಯ ಕೊಡಬೇಡ... ಕೂಡಿ ಇದ್ದರೆ ಅನಾಹುತವಾದೀತು... ಬೆಂಕಿ... ಬೆಣ್ಣೆ ಒಂದೇ ಸ್ಥಾನದಲ್ಲಿರುವದು ಸೂಕ್ತವೇ? ಎಷ್ಟೆಂದರೂ ಅನುಭವದಲ್ಲೇ ಮುಪ್ಪಾದವರು...

"ಇಲ್ಲಿಗೇಕೆ ಬಂದೆ? ಇಲ್ಲೇನು ಕೆಲಸ?"

"ಅರೆರೆ... ಇದೇನು ಸಭ್ಯತೆ? ಈ ರೀತಿ ಪೊಲೀಸ್ ಭಾಷೆಯೆ?"

"ತಮಾಷೆ ಬೇಡ... ಏಕೆ ಎಂದು ಹೇಳು. ಗೋಕರ್ಣದಲ್ಲಾದ ಘಟನೆ ಇಲ್ಲಿ ಮರುಕಳಿಸಬಾರದು" ಅದ್ಕೇ...

"ಭಯ ಬೇಡ... ಆಶಂಕೆಯೂ ಬೇಡ... ಕೆಲವು ದಿವಸ ನಾನು ತಲೆಮರೆಸಿಕೊಂಡು ಇರಬೇಕಾಗಿತ್ತು. ಅದಕ್ಕಾಗಿ ಬಂದೆ. ಕೆಲವೇ ದಿವಸ ಅಷ್ಟೇ."

"ನನ್ನ ವಿಳಾಸ ನಿನಗೆಲ್ಲಿ ಸಿಕ್ಕಿತು?"

"ಉತ್ತರ ತೀರಾ ಸುಲಭ... ಗೋಕರ್ಣದಲ್ಲಿ ಇದ್ದಾಗ ನಿನ್ನ ರೂಮಿನಲ್ಲಿದ್ದುದನ್ನು ತೆಗೆದೆ. ಅದರೊಂದಿಗೆ ಇನ್ನೂ ಒಂದು ವಿಷಯ."

"ನಿನ್ನ ಬಳಿಯೂ ನನ್ನದೊಂದು ವಸ್ತುವನ್ನಿಟ್ಟಿದ್ದೇನೆ."

"ನಿನ್ನ ವಸ್ತುವೆ?"

"ಹೌದು."

"ಏನದು? ಎಲ್ಲಿದೆ?"

"ಅದೂ ಸಸ್ಪೆನ್ಸ್. ಸಮಯ ಬಂದಾಗ ಹೇಳುವೆ."

"ಈಗಲಾದರೂ ನೀನು ಯಾರು? ನಿನ್ನ ಹೆಸರೇನು? ನೀನೇಕೆ ರಹಸ್ಯಮಯ ರಮಣಿಯಾಗಿ ಅಲೆಯುತ್ತಿರುವೆ ಎಂಬುದನ್ನು ಹೇಳು..."

"ಸಾರಿ... ಸಮಯವಿನ್ನೂ ಬಂದಿಲ್ಲ."

"ಅದು ಯಾವಾಗ...?"

ಬಾಯಿಗೆ ಅವಳ ತುಟಿಗಳು ಬೀಗ ಜಡಿದಿದ್ದವು... ಅದೆಂಥ ರೋಮಾಂಚನ... ಚುಂಬನ ನೀಡಿ ಹಿಂದೆ ಸರಿದಳು ಆಕೆ.

"ಇನ್ನು ಏನೂ ಕೇಳಬೇಡ... ನಡೆ ಹೋಗೋಣ... ತಾಯಿ ಕಾಯ್ತಿದಾರೆ... ನಾವು ಕೆಳಗೆ ಹೋಗುವದು ತಡವಾದರೆ 'ಏನೋ' ನಡೆದಿದೆ ಎಂದು ಶಂಕೆಪಟ್ಟಾರು..." ಆಕೆ ಮುಸಿ ಮುಸಿ ನಕ್ಕಳು.

ಎಂಥ ಬದಲಾವಣೆ!

ಗೋಕರ್ಣದಲ್ಲಾಕೆ ಸಂಪೂರ್ಣ ಗಂಭೀರವಾಗಿದ್ದಳು.

ಇಲ್ಲಿ ಎಷ್ಟು ಚೆಲ್ಲುಚೆಲ್ಲಾಗಿದ್ದಾಳೆ.

ಏನು ಕಾರಣವಿರಬಹುದು?

ಲುಂಗಿಯ ಮೇಲೆ ಶರ್ಟು ಧರಿಸಿ ಹೊರ ಬಂದೆ... ಆಕೆ ನನ್ನನ್ನು ಅನುಸರಿಸಿದಳು. ಅಪ್ಪನಿಗೆ ಎಲ್ಲಾ ವಿಷಯ ಅಮ್ಮ ತಿಳಿಸಿದ್ದರಿಂದಾಗಿ ನಮ್ಮಿಬ್ಬರನ್ನು ಅವರು ತುಂಟ ನಗೆಯಿಂದ ಸ್ವಾಗತಿಸಿದರು.

"ಬಾರಮ್ಮ... ನನಗೂ ಹಗುರಾಯಿತು... ಇಂದಿನಿಂದ ಈ ಅಂಗಡಿಯಷ್ಟೇ ಅಲ್ಲ. ಈ

ಮನೆಯ ಜವಾಬ್ದಾರಿ ಎಲ್ಲಾ ನಿನ್ನದೇ." ಅಪ್ಸರೆ ನಾಚಿ ತಲೆತಗ್ಗಿಸಿದಳು.

ನಾಲ್ಕಾರು ದಿನಗಳು ಹೇಗೆ ಕಳೆದವೋ ಗೊತ್ತಾಗಲೇ ಇಲ್ಲ... ಅಪ್ಸರೆ ಈಗ ನಮ್ಮ ಮನೆಯ ಮುದ್ದಿನ ಸೊಸೆ. ನನಗಂತೂ ಆಕೆ ಒಪ್ಪಿಗೆಯಾಗಿದ್ದಳು... ಆದರೆ ಅವಳು?... ಎಷ್ಟು ದಿನ ನಮ್ಮ ಮನೆಯಲ್ಲಿರುತ್ತಾಳೋ– ಯಾವಾಗ ಅಪ್ಪ ಅಮ್ಮನ ಹೃದಯ ಒಡೆದು ಅವರ ಕನಸುಗಳನ್ನು ಛಿದ್ರ ಛಿದ್ರ ಮಾಡಿ ಗಾಳಿಗೆ ತೂರಿ ಮಾಯವಾಗುತ್ತಾಳೋ ಅರಿಯೆ... ಆಗ ಅವರ ಮನಸ್ಸಿನ ಮೇಲೆ ಯಾವ ಪರಿಣಾಮ ವಾಗಬಹುದು ಎಂಬುದನ್ನು ಯೋಚಿಸಿ ಧರೆ ಗಿಳಿದು ಹೋಗುತ್ತಿದ್ದೆ... ದೇವರೇ ಅಂಥ ದಿನ ಬರದಿರಲಿ ಎಂದು ಬೇಡಿಕೊಳ್ಳುತ್ತಿದ್ದೆ.

ನಿನ್ನೆಯಿಂದ ಅಪ್ಪನಿಗೆ ಮೈ ಹುಷಾರಿಲ್ಲ... ಮನೆಯೊಳಗೇ ಮಲಗಿದ್ದಾರೆ. ನಾನು ಮತ್ತು ಅಪ್ಸರೆ ಇಬ್ಬರೇ ಅಂಗಡಿ ನೋಡಿಕೊಳ್ಳುತ್ತಿದ್ದೇವೆ. ಯಾವ ತೊಂದರೆಯೂ ಅನಿಸುತ್ತಿಲ್ಲ. ಅಪ್ಸರೆ ಬಂದ ಮೇಲೆ ವ್ಯಾಪಾರ ಹೆಚ್ಚಿದೆ ಎಂದು ಅನಿಸುತ್ತಾ ಇದೆ. ಅದು ನಿಜವಾಗದಿದ್ದರೂ ಅಂಗಡಿಗೆ ಬರುವ ಗಿರಾಕಿಗಳು ಹೆಚ್ಚಾಗುತ್ತಿವೆ ಎಂಬುದನ್ನು ಒಪ್ಪಬಹುದು. ಅವರು ಬರುವಾಗ ಒಂದೇ ಸಿಗರೇಟಿಗೋ ಅಥವಾ ಒಂದು ಬೆಂಕಿ ಪೊಟ್ಟಣಕ್ಕೋ ಅಲ್ಲ... ಕ್ಷೌರ ಮಾಡಿಕೊಳ್ಳುವ ಬ್ಲೇಡಿಗೋ... ಯಾವುದಕ್ಕೋ ಒಂದು. ಬರುವಾಗ ವ್ಯಾಪಾರಕ್ಕಾದರೂ ಮುಖ್ಯ ಉದ್ದೇಶ ನನಗೆ ಗೊತ್ತು ಅಪ್ಸರೆಯ ದರ್ಶನ ಪಡೆಯಲು.

ನನಗೂ ಸ್ವಲ್ಪ ಸುಸ್ತು ಅನಿಸಿದ್ದರಿಂದ ಅರ್ಧ ಗಂಟೆ ಮೊದಲೇ ಅಂಗಡಿ ಬಂದು ಮಾಡಿದೆ. ಅಪ್ಸರೆ ಅಮ್ಮನ ಗೂಡು ಸೇರಿದಳು. ನಾನು ರೂಮಿಗೆ ಬಂದೆ. ಜಯಚಂದ್ರನ ಕೋಣೆ ಬಾಗಿಲು ತೆರೆದಿತ್ತು... ಏಕೋ ಇಂದಾತ ಬ್ಯಾಂಕಿಗೆ ಹೋಗಿರಲಿಲ್ಲ. ಒಳಗೆ ಇಣುಕಿದೆ. ಪುಸ್ತಕ ಓದುತ್ತಿದ್ದ ಆತ ನನ್ನೆಡೆ ನೋಡಿ "ಓಹ್ ನೀವಾ ಬನ್ನಿ" ಎಂದ.

"ಇಂದು ಬ್ಯಾಂಕಿಗೆ ರಜವೇ?"

"ಇಲ್ಲ... ಸ್ಟ್ರೈಕ್"...

"ಸರಿ... ನೀವು ಓದಿಕೊಳ್ಳಿ... ಏಕೋ ಸುಸ್ತಾಗಿದೆ... ಬರುತ್ತೇನೆ."

"ಇದೇನು ಸುಂದರ ಹಕ್ಕಿಯನ್ನು ಪಕ್ಕದಲ್ಲಿಟ್ಟುಕೊಂಡು ಸುಸ್ತಾಗುವದೆ?"

"ಅಂದ್ರೆ?... ಏನು ನಿಮ್ಮ ಮಾತಿನ ಅರ್ಥ?..."

"ಅಯ್ಯೋ ಕೋಪವೇಕೆ? ನಿಮ್ಮ ಕೆಲಸ ಮಾಡುತ್ತಿರುವ ಹುಡುಗಿ ಬಗ್ಗೆ ನಾ ಹೇಳಿದ್ದು"

"ಮಿತ್ರ ಜಯಚಂದ್ರ... ಬೇರೆ ಒಂದು ಹೆಣ್ಣಿನ ಬಗ್ಗೆ ಈ ರೀತಿ ಮಾತಾಡೋದು ಅಂದ್ರೆ..."

"ನಿಮಗೆ ಇಂಥವರ ಬಗ್ಗೆ ಗೊತ್ತಿಲ್ಲ. ಅದ್ಕೆ ಈ ರೀತಿ ಹೇಳ್ತಾ ಇದೀರಿ. ಬೆಂಗಳೂರಲ್ಲಿ ನಾನು ಇಂಥವರನ್ನು ನೂರಾರು ನೋಡಿದೇನೆ. ಮೇಲೆ ತೋರಿಸೋಕೆ ತುಂಬಾ ಸ್ಟ್ರಿಕ್ಟ್. ಸಾಯಂಕಾಲ ಆಯ್ತು ಅಂದ್ರೆ–ಸ್ಕೂಟರ ನಿಲ್ಲಿಸಿ ನೂರರ ನೋಟು ತೋರ್ಸಿ... ಸಾಕು. ಬಂದು ಹಿಂದೆ ಕೂತು ಬಿಡ್ತಾರೆ. ನಿಮ್ಮ ಹುಡುಗಿಯೂ ಅಷ್ಟೆ."

"ಜಯಚಂದ್ರ..." ಸಿಟ್ಟಿನ ಭರದಲ್ಲಿ ನಾನು ಕಿರುಚಿದೆ. "ಅಪ್ಸರೆ ಬಗ್ಗೆ ನೀನು ಈ ರೀತಿ ಮಾತಾಡಿದ್ರೆ ನಾನು ಸಹಿಸೋದಿಲ್ಲ."

"ಅಪ್ಸರೆ... ಅಪ್ಸರೆನಾ?..." ಹೋಹೋ ಎಂದು ನಕ್ಕ ಆತ. "ಇಲ್ಲೇ ನೀವು ಮೋಸ ಹೋದದ್ದು, ಅವಳ ಹೆಸರು ಅಪ್ಸರೆ ಅಲ್ಲವೇ ಅಲ್ಲ."

ಒಂದು ಕ್ಷಣ ನಾನು ಚಕಿತನಾದೆ. ಇದೇ ಮಾತನ್ನು ಗೋಕರ್ಣದಲ್ಲಿ ಆ ಪುಟ್ಟ ಬಾಲೆ ಸವಿತಾ ಸಹ ಹೇಳಿದ್ದಳು... ಈಗ ಜಯಚಂದ್ರ.

"ಹಾಗಾದರೆ ಅವಳ ನಿಜ ಹೆಸರೇನು?"

"ಹೆಸರಾ?..." ಹೇಳಲು ಹೋದವ ತಕ್ಷಣವೆ ನಿಲ್ಲಿಸಿ ಕೇಳಿದ "ನಿಮಗಾಕೆ ಹೇಳಿಲ್ವಾ?"

"ನಾ ನಿಮಗೆ ಕೇಳ್ತಾ ಇರೋದು... ನೀವು ಹೇಳಿ"

"ಅದು ಮರೆತು ಹೋಗಿದೆ... ನೆನಪಾದಾಗ ಹೇಳ್ತೇನೆ..."

ಅವನ ಮೇಲೆ ಬಿದ್ದು ಚೆನ್ನಾಗಿ ಒದೆಯ ಬೇಕೆನಿಸಿತು. ಪ್ರಯಾಸ ಪಟ್ಟು ತಡೆದುಕೊಂಡು ರೂಮಿಗೆ ಬಂದೆ...

ಸಾಯಂಕಾಲ ಅಂಗಡೀಲಿ ನಾನು ಅಪ್ಸರೆಗೆ ಎಲ್ಲಾ ವಿಷಯ ತಿಳಿಸಿ "ಆ ಜಯಚಂದ್ರ ನನಗಿಂತ ವಾಸಿ. ನಿನ್ನ ಬಗ್ಗೆ ಎಷ್ಟೋ ತಿಳಿದುಕ್ಕೊಂಡಿದಾನೆ" ಎಂದೆ.

ಅಪ್ಸರೆ ಚಿಂತಿತಳಾಗುವದರೊಂದಿಗೆ ಗಂಭೀರಳಾದದ್ದು ನನ್ನ ಗಮನಕ್ಕೆ ಬಾರದಿರಲಿಲ್ಲ.

5

ಮರುದಿನ ಮುಂಜಾನೆ ಅತುಲ ಫೋನು ಮಾಡಿದ. ಸಂದರ್ಶನ ಬಹಳ ಚೆನ್ನಾಗಿ ಆಗಿದೆ. ಜಾಬ್ ಸಿಗೋದು ಗ್ಯಾರಂಟಿ ಎಂದ. ಮುಂಬೈಯಿಂದ ಅಜಂತಾ ನೋಡಿಕೊಂಡು ಸಾಧ್ಯವಾದರೆ ದಿಲ್ಲಿಯವರೆಗೆ ಹೋಗಿ ಬರತೇನೆ ಎಂದ. ಇದರಿಂದಾಗಿ ಈ ಅಂಗಡಿ ಕಾಯಂ ಆಗಿ ನನ್ನ ಕೊರಳಿಗೆ ಎಲ್ಲಿ ಬೀಳುತ್ತದೋ ಎಂದು ಹೆದರಿದೆ. ನನ್ನ ಭಯ ಅಪ್ಪಾಜಿಗೆ ಅರ್ಥವಾಗಿರಬೇಕು. ಧೈರ್ಯ ಹೇಳಿದರು.

"ನೀ ಏನೂ ಹೆದರುವ ಆವಶ್ಯಕತೆ ಇಲ್ಲಪ್ಪಾ... ಮುಂದಿನ ವಾರ ಇಬ್ಬರು ಹುಡುಗರನ್ನು ಇಟ್ಟುಕೊಂಡು ಅಂಗಡಿ ನಾನೇ ನೋಡಿಕೊಳ್ತೇನೆ. ನೀನು ನಿನ್ನ ಕೆಲಸದಲ್ಲಿ ತೊಡಗಬಹುದು... ತಿಳೀತಾ..."

ಸರಿ ಎಂದ ಗೋಣು ಹಾಕಿ ಅಂಗಡಿಗೆ ಬಂದೆ.... ಅಪ್ಸರೆಯೊಂದಿಗೆ ಮಾತನಾಡುವ ಮನಸ್ಸಾಗಲಿಲ್ಲ... ಮೋಸಗಾತಿ, ಸುಳ್ಳುಗಾತಿ... ಅವಳೊಂದಿಗೇನು ಮಾತು... ಇಂದೋ ನಾಳೆಯೋ ಅಮ್ಮನಿಗೆ ಎಲ್ಲಾ ವಿಷಯ ತಿಳಿಸಿ ಇವಳಿಗೆ ಟಿಕೆಟ್ ಕೊಡಿಸಬೇಕು ಎಂದು ಮನದಲ್ಲಿ ಯೋಚಿಸಿದೆ.

"ಏನು ಸಾಹೇಬರು... ಭಯಂಕರ ಗಂಭೀರವಾಗಿದೀರಿ..." ಅಪ್ಸರೆ ಚೇಷ್ಟೆ ಮಾಡಿದಳು.

"ನನ್ನ ವಿಷಯ ನಿನಗ್ಯಾಕೆ?... ನಿನ್ನ ಕೆಲಸ ನೋಡಿಕೊ" ನಾನು ಸಿಡುಕಿದೆ.

"ಅಬ್ಬಾ... ಬ್ಯಾಡಗಿ ಮೆಣಸಿನ ಕಾಯಿಯಂತೆ ನಿಮ್ಮ ಕೋಪವೂ ಶಾರ್ಪೇ..."

ಸಿಟ್ಟಿನಿಂದಾಗಿ ನನ್ನ ಬಾಯಿಯಿಂದ ಯಾವ ಮಾತು ಸಿಡಿಯುತ್ತಿತ್ತೋ ಏನೋ ಅಂಗಡಿ ಮುಂದೆ ಬಂದು ನಿಂತ ಅಟೋರಿಕ್ಷಾದಿಂದಾಗಿ ಬ್ರೆಕ್ ಬಿತ್ತು. ಸುಮಾರು ಇಪ್ಪತ್ತೆಂಟು ಮೂವತ್ತು ವರ್ಷಗಳ ಗಟ್ಟಿ ಶರೀರದ ವ್ಯಕ್ತಿಯೊಂದು ಸೂಟಕೇಸಿನೊಂದಿಗೆ ಕೆಳಗಿಳಿಯಿತು. ಬಾಡಿಗೆ ಕೊಟ್ಟು ಜೇಬಿನಿಂದ ಚೀಟಿಯೊಂದನ್ನು ತೆಗೆದು ನೋಡಿ

ಆಸ್ಪತ್ರೆಯ ಕವಿ ಟಿ. ಎಂ. ಷಡಕ್ಷರಿ

ತಿಂಗಳಿಗೆ ಒಂದು ಜಿಲ್ಲೆ ಕಾಣಿಸುವ 'ನನ್ನೂರು-ನನ್ನ ಜನ'ದೊಂದಿಗೆ ಬರುತ್ತಿರುವ 'ತುಷಾರ' ತುಮಕೂರು ಜಿಲ್ಲೆಗೆ ಬಂದಾಗ ವಾಣಿಜ್ಯ ನಗರ ತಿಪಟೂರು ಜನರಲ್ ಅಸ್ಪತ್ರೆಗೆ ಹೋಗಿ ಬರುವ ಅವಶ್ಯವಿದೆ. ಕಾರಣ ಅಲ್ಲಿ ಹತ್ತು ಹನ್ನೆರಡು ವರ್ಷಗಳಿಂದ ಶಾಶ್ವತ ನೆಲೆಯನ್ನಾಗಿಸಿಕೊಂಡ ಕವಿಯೊಬ್ಬರಿದ್ದಾರೆ. ತನ್ನ ಚಿಕ್ಕ ವಯಸ್ಸಿನಲ್ಲಿಯೇ ಪೋಲಿಯೋಗೆ ತುತ್ತಾಗಿ ತನ್ನೆರಡು ಕಾಲು ಕಳೆದುಕೊಂಡಿರುವ ಕವಿ ಟಿ. ಎಂ. ಷಡಕ್ಷರಿ ನೋವಿನ ಉಗ್ರಾಣವಾದ ಅಸ್ಪತ್ರೆಯ ನಾಲ್ಕು ಗೋಡೆಗಳ ಮಧ್ಯೆ ನೋವಿನಲ್ಲಿ ಬದುಕಿ ಪ್ರಪಂಚವನ್ನು ಇಣುಕಿ ನೋಡುವ ಪ್ರಯತ್ನ ಮಾಡುತ್ತಿದ್ದಾರೆ. ಆ ಪ್ರಯತ್ನವೇ 'ಮೌನಗೀತೆ' ಮತ್ತು 'ಮೌನಸ್ಪಂದನ' ಕೃತಿಗಳು, ಕವನ ಸಂಕಲನವಾದ ಈ ಕೃತಿಗಳು ಮೌನಗೀತೆ ಮುದ್ರಣ ಕಂಡ ಒಂದು ವರ್ಷದಲ್ಲಿಯೇ ಮರುಮುದ್ರಣ ಕಂಡಿತ್ತು. ಕಳೆದ ವರ್ಷ ಮೊದಲ ತಿಂಗಳಲ್ಲಿ ಪ್ರಕಟವಾದ 'ಮೌನಸ್ಪಂದನ' ದ್ವಿಮುದ್ರಣ ಕಾಣಬೇಕಿದೆ. ಎರಡು ಕೃತಿಗಳೂ ವಿಮರ್ಶಕರಿಂದ ಪ್ರಶಂಸಿಸಲ್ಪಟ್ಟು, ಮುಂದೆ ಉತ್ತಮ ಕೃತಿಗಳನ್ನು ನಿರೀಕ್ಷಿಸುವಂತೆ ಮಾಡಿವೆ.

ಖ್ಯಾತ ಸಾಹಿತಿಗಳ ಜೊತೆ-ಪತ್ರವ್ಯವಹಾರ ಇಟ್ಟುಕೊಂಡಿರುವ ಇವರನ್ನು ಮಾರ್ಗ ಮಧ್ಯೆ ಹೋಗುವಾಗ ಕೆಲ ಕವಿಗಳು ಭೇಟಿಯಾಗಿದ್ದಾರೆ. ಅವರಲ್ಲಿ ಜಿ. ಎಸ್. ಶಿವರುದ್ರಪ್ಪ, ಜಿ. ಎಸ್. ಸಿದ್ದಲಿಂಗಯ್ಯ, ಕರೀಂಖಾನ್‌ರಂತಹ ಪ್ರಮುಖರಿದ್ದಾರೆ. ಆಗಿಂದಾಗ್ಗೆ ಪತ್ರ ಬರೆಯುತ್ತ, ಸಹಾಯಧನ ಕಳುಹಿಸಿರುವ ಡಾ। ಕೆ. ಶಿವರಾಮ ಕಾರಂತರು "ಆ ಕಡೆ ಬಂದಾಗ ಒಮ್ಮೆ ಭೇಟಿಯಾಗುತ್ತೇನೆ" ಎಂದು ತಿಳಿಸಿದ್ದಾರೆ.

ನೀವು ಕೂಡ ತಿಪಟೂರಿನ ಮೂಲಕ ಪಯಣಿಸುವಾಗ ಒಮ್ಮೆ ಭೇಟಿ ನೀಡಿ ಆ ಕವಿ ಜೀವಕ್ಕೆ ಮಾನಸಿಕ ಸ್ಥೈರ್ಯವೇಕೆ ನೀಡಬಾರದು?

● ಪಿ. ಮಂಜುನಾಥ್, ತಿಪಟೂರು

ಪ್ರತಿಕ್ರಿಯೆ



ಹೊಡೆದದ್ದು
ಕಣ್ಣು
ಉದುರಿದ್ದು
ಹಲ್ಲು

ಅಚ್ಚರಿ

ಅಪ್ಪಟ ಬ್ರಹ್ಮಚಾರಿ
ಮುರಾರಿ–
ಯ
Bed Room ನಲ್ಲೂ
ತಿಂಗಳಿಗೊಬ್ಬಳು
ಸುಂದರಿ!
ಕ್ಯಾಲೆಂಡರಿನಲ್ಲಿ!!

● **ಎಚ್. ಎಸ್. ಸೋಮಶೇಖರ,**
ಶಿವಮೊಗ್ಗ

ನನ್ನ ಕಡೆ ಹೆಜ್ಜೆ ಹಾಕಿತು.

ಅವನೊಬ್ಬ ಆಕರ್ಷಕ ತರುಣ.

"ಸರ್... ಈ ವಿಳಾಸ ನಿಮ್ಮದೇ ತಾನೇ?"

ನಾನು ಚೀಟಿ ಇಸಿದುಕೊಂಡೆ. ನಮ್ಮದೇ ವಿಳಾಸ. ಜಯಚಂದ್ರನ ಹೆಸರು.

"ಹೌದು. ಒಳಗೆ ಹೋಗಿ ಮಹಡಿ ಮೇಲಿದೆ ಕೋಣೆ."

"ಥ್ಯಾಂಕ್ಸ್..." ಆತ ಚೀಟಿ ಜೇಬಿಗಿಡುತ್ತಿದ್ದಂತೆ ಅವನ ದೃಷ್ಟಿ ಅಪ್ಸರೆಯತ್ತ ಹರಿಯಿತು. ಆತ ಬೆಚ್ಚಿಬಿದ್ದ... ಅವರ ನಡತೆ ನನ್ನ ಗಮನಕ್ಕೆ ಬಂದಿದ್ದರಿಂದ ನಾನು ಕೂಡಲೇ ಅಪ್ಸರೆಯತ್ತ ನೋಡಿದೆ. ಆಕೆ ಮುಖ ಬಿಳಿಚಿಕೊಂಡಿತ್ತು. ಯಾವ ಮಾತೂ ಆಡದೆ ಆ ತರುಣ ಅಲ್ಲಿಂದ ಸರಿದು ಹೋದ...

ನನಗೆ ಅಪ್ಸರೆ ಬಗ್ಗೆ ಚಿಂತೆಯುಂಟಾಯಿತು.

ಯಾರೀಕೆ?

ನನ್ನ ಬಿಟ್ಟು ಉಳಿದೆಲ್ಲರಿಗೂ ಇವಳ ಬಗ್ಗೆ ತಿಳಿದಿದೆ.

ಆದರೆ ಯಾರೂ ಬಹಿರಂಗ ಪಡಿಸುತ್ತಿಲ್ಲ.

ಈಕೆಯೋ... ನನ್ನ ನೆರಳಲ್ಲೇ ಇದ್ದು ನನ್ನ ಆಶ್ರಯವನ್ನೇ ಬಯಸಿ ಬಂದು... ನನಗೆ ಚಳ್ಳೇ ಹಣ್ಣು ತಿನ್ನಿಸುತ್ತಿದ್ದಾಳೆ...

ಸುಮಾರು ಒಂದು ಒಂದೂವರೆ ಗಂಟೆ ನಂತರ ಜಯಚಂದ್ರ ತನ್ನ ಹೊಸ ಸ್ನೇಹಿತನೊಂದಿಗೆ ಕೆಳಗೆ ಬಂದ. ರಿಕ್ಷಾ ಒಂದನ್ನು ನಿಲ್ಲಿಸಿದ. ಊರಿನಿಂದ ಬಂದಾತ ನನ್ನ ಬಳಿ ಬಂದು ವಿನಂತಿಸಿಕೊಂಡ.

"ನಾನು ಸಂಜೆ ಟ್ರೇನಿಗೆ ಹೋಗ್ತಾ ಇದ್ದೇನೆ. ಜಯಚಂದ್ರ ಇರೋದಿಲ್ಲ... ಅದಕ್ಕಾಗಿ ದಯವಿಟ್ಟು ಈ ಸೂಟಕೇಸು ಇಲ್ಲಿಯೇ ಇಟ್ಟುಕೊಂಡರೆ ನಾನು ಆಮೇಲೆ ಬಂದು ಒಯ್ಯುತ್ತೇನೆ."

"ಸರಿ ಆಗಬಹುದು ಕೊಡಿ" ಎಂದೆ. ಆತ ಸೂಟಕೇಸು ಇಟ್ಟು ಥ್ಯಾಂಕ್ಸ್ ಹೇಳಿ ಜಯಚಂದ್ರನೊಂದಿಗೆ ಅಟೋ ಹತ್ತಿದ... ನಾನು ಸೂಟಕೇಸನ್ನು ಮೇಲೆ ಇಟ್ಟು ಅಪ್ಸರೆ ಕಡೆ ನೋಡಿದೆ. ಆಶ್ಚರ್ಯ ಅಪ್ಸರೆ ಮಾಯವಾಗಿದ್ದಳು... ಹತ್ತು ನಿಮಿಷ ಬಿಟ್ಟು ಅಮ್ಮ ಒಳಗೆ ಬಂದಳು. ನಾನವರತ್ತ ನೋಡಿದೆ.

"ಅಪ್ಸರೆಗೆ ಮೈ ಹುಷಾರಿಲ್ಲ... ವಾಂತಿ ಮಾಡಿಕೊಳ್ತಾ ಇದ್ದಳು... ಮಲಗಿಕೊಮ್ಮ ಸ್ವಲ್ಪ ವಿಶ್ರಾಂತಿ ತಗೋ ಎಂದು ಹೇಳಿ ಮಲಗಿಸಿ ನಾನು ಬಂದೆ"

ನಾನು ಏನು ಕೇಳಬೇಕೆಂದಿದ್ದೆನೋ ಅದನ್ನು ಕೇಳುವದಕ್ಕೆ ಮೊದಲೇ ಅದಕ್ಕೆ ಉತ್ತರ ನೀಡಿ ನನ್ನತ್ತ ತೀಕ್ಷ್ಣವಾಗಿ ನೋಡುತ್ತಾ ಕೇಳಿದಳು. "ನಿಜ ಹೇಳು... ನನ್ನ ಮೇಲೆ ಆಣೆ... ಏನೂ ಹೆಚ್ಚೂ ಕಡಿಮೆ ಆಗಿಲ್ಲವಷ್ಟೇ"

"ಯಾವುದಮ್ಮಾ".

"ಮಳ್ಳನಂತೆ ಆಡಬೇಡ. ಅಪ್ಸರೆ ವಾಂತಿ ಮಾಡಿಕೊಳ್ತಿದಾಳೆ..."

ಅಮ್ಮನ ಮನದಲ್ಲಿದ್ದ ಶಂಕೆ ಅರ್ಥವಾಯಿತು. ಜೋರಾಗಿ ನಕ್ಕೆ.

"ಅಮ್ಮ... ನೀನೊಂದು ಮೊದ್ದು... ಏನೇನೋ ಯೋಚಿಸ್ತೀಯಾ... ನೀನು ತಿಳಿದಂತೆ ಏನೂ ಆಗಿಲ್ಲ. ಅಪ್ಸರೆಯ ಪರಿಚಯ ಇತ್ತೀಚೆಗೆ ಆಗಿದೆ. ನಾನವಳ ಮೈ ಸಹ ಮುಟ್ಟಿಲ್ಲ... ಆಯ್ತಾ."

ಅಮ್ಮನಿಗೆ ಧೈರ್ಯ ಬಂತು. ನಿಟ್ಟುಸಿರು ಬಿಟ್ಟಳು.

"ಈಗ ನನಗೆ ಸಮಾಧಾನವಾಯಿತಪ್ಪಾ. ಇನ್ನು

ನಿನ್ನ ಮದುವೇಗೆ ತಡ ಮಾಡುವದಿಲ್ಲ..."

ನಾನು ಮಾತು ಬೆಳೆಸಲಿಲ್ಲ...

ಸರಿಯಾಗಿ ಒಂದೂವರೇಗೆ ಅಂಗಡಿ ಬಂದು ಮಾಡಿ ಅಮ್ಮನಿಗೆ ಹೇಳಿದೆ "ಅಮ್ಮ ಊಟ ಮೇಲೆ ತಂದ್ಬಿಡು..."

ಕೈಕಾಲು ತೊಳೆದು ಅಡ್ಡಾದೆ. ಎಂಟು ದಿನಗಳಿಂದ ವಾಕಿಂಗ್ ತಪ್ಪಿತ್ತು. ಕರಾಟೆ ತಪ್ಪಿತ್ತು. ಹೀಗಾಗಿ ಜಾಡ್ಯವುಂಟಾಗಿತ್ತು. ಮೈ ಎಲ್ಲಾ ಭಾರ, ಸುಸ್ತು.

ಊಟ ಮಾಡಿ ಹಾಸಿಗೆ ಮೇಲೆ ಉರುಳಿದಾಗ ನೆನಪಾಯ್ತು... ಅಪ್ಸರೆ ಬಗ್ಗೆ ಅಮ್ಮನನ್ನು ಕೇಳಲಿಲ್ಲವಲ್ಲ ಎಂದು... ಹಾಗೇ ನಿದ್ದೆ ಹೋದೆ. ಎಚ್ಚರ ಅದಾಗ ಗಪ್ ಎಂಬ ಕತ್ತಲೆ ಕಣ್ಣಿಗೆ ರಾಚಿತು. ಎದ್ದು ದೀಪ ಉರಿಸಿ, ವೇಳೆ ನೋಡಿದೆ... ಏಳೂ ಮುಕ್ಕಾಲು... ನಾನು ಐದುಗಂಟೆ ಕಾಲ ನಿದ್ರಿಸಿದ್ದೆ... ನನ್ನನ್ನು ಅಮ್ಮ ಸಹ ಎಚ್ಚರಿಸಿರಲಿಲ್ಲ.

ಬಾತ್‌ರೂಮಿಗೆ ನುಗ್ಗಿ ಸರಸರ ಮುಖ ತೊಳೆದು ಬಟ್ಟೆ ಧರಿಸಿ ಕೆಳಗಿಳಿದೆ. ಮನೆಯಲ್ಲಿ ಅಪ್ಪ ಟಿವಿ ನೋಡುತ್ತಾ ಕುಳಿತಿದ್ದರು. ಇಂದು ಸ್ವಲ್ಪ ಅವರಿಗೆ ಗುಣವಾಗಿತ್ತು. ಫ್ಲಾಸ್ಕಿನಿಂದ ಟೀ ಕಪ್ಪಿಗೆ ಹಾಕಿಕೊಂಡು ಅಪ್ಪನ ಬಳಿ ಬಂದೆ. ಅವರಿಗೆ ಅರ್ಧ ಕಪ್ ಕೊಟ್ಟು, ನಾನು ಫುಲ್ ಡೋಜ ಕುಡಿದು ಅಂಗಡಿಗೆ ಬಂದೆ. ಅಮ್ಮ... ಅಪ್ಸರೆ ಇಬ್ಬರೂ ಕೆಲಸದಲ್ಲಿದ್ದರು. ನಾನು ಅಪ್ಸರೆಗೆ ಕೇಳಿದೆ "ಈಗ ಹೇಗಿದೆ?"

"ಪರವಾಯಿಲ್ಲ."

ಅಮ್ಮ ತನ್ನ ಜಾಗೆ ನನಗೆ ಬಿಟ್ಟು ಕೊಟ್ಟಳು.

ಸಮಯ ಕಳೆಯುತೊಡಗಿತು. ಒಂಬತ್ತು ಗಂಟೆ ಸಮೀಪಿಸಿತು. ಇನ್ನೇನು ಅಂಗಡಿ ಬಾಗಿಲು ಮುಚ್ಚಬೇಕು. ಪೊಲೀಸ್ ಜೀಪು ಬಂದು ಅಂಗಡಿ ಮುಂದೆ ನಿಂತಾಗ ಎದೆಗುಂಡಿಗೆ ಮೆಲುವಾಗಿ ನಡುಗಿತು. ಅಪ್ಸರೆ ಕಡೆ ನೋಡಿದೆ. ಆಕೆ ಮೆಲ್ಲನೆ ಹಿಂದೆ ಸರಿದು ಬಾಗಿಲು ದಾಟಿ ಮರೆಯಾದಳು.

"ಬನ್ನಿ" ಡವಗುಡುತ್ತಿರುವ ಮನಸ್ಸನ್ನು ನಿಯಂತ್ರಣಕ್ಕೆ ತಂದುಕೊಳ್ಳುತ್ತ ನಾನು ಪೊಲೀಸ್ ಆಫೀಸರರನ್ನು ಸ್ವಾಗತಿಸಿದೆ. ಅವರೂ ಸಭ್ಯರೆಂದೆನಿಸಿತು.

"ದಯವಿಟ್ಟು ಕ್ಷಮಿಸಿ... ನಿಮಗೆ ತೊಂದ್ರೆ ಕೊಡ್ತಾ ಇದೇವೆ."

"ತೊಂದ್ರೆ ಏನು ಸಾರ್... ಹೇಳಿ ಏನಾಗಬೇಕು"

ಜೇಬಿನಿಂದ ಕೆಬಿನೆಟ್ ಸೈಜಿನ ಫೋಟೋ ಹೊರತೆಗೆದು ನನ್ಮುಂದೆ ಹಿಡಿದರು..

"ಇವರು ನಿಮಗೆ ಗೊತ್ತಾ?"

ಫೋಟೋ ನೋಡಿದೆ. ಬೆಚ್ಚಿದೆ. ಬೆಳಿಗ್ಗೆ ಜಯಚಂದ್ರನ ರೂಮಿಗೆ ಬಂದವ.

"ಇವರು ನಿಮ್ಮಲ್ಲಿಗೆ ಬರುವವರಿದ್ದರೆಂದು ನಮಗೆ ತಿಳಿದು ಬಂದಿದೆ."

"ಹೌದು... ಇಂದು ಬೆಳಿಗ್ಗೆ ಬಂದಿದ್ದರು. ಮೇಲ್ಗಡೆ ಜಯಚಂದ್ರ ಅಂತ ಬಾಡಿಗೆಗಿದ್ದಾರೆ. ಅವರ ಜೊತೆ ಹೊರಗೆ ಹೋದರು. ಅರೆ ಇಂದು ಸಂಜೆ ಅವರು ಊರಿಗೆ ಹೋಗುವವರಿದ್ದರು."

"ಎಲ್ಲಿಗೆ? ಯಾವ ಊರಿಗೆ?..." ಹೌಹಾರಿದರು ಅವರು. "ನಂಗೊತ್ತಿಲ್ಲ" ನನ್ನ ದೃಷ್ಟಿ ಸೂಟಕೇಸ್ ಕಡೆ ಹರಿಯಿತು. ಸೂಟಕೇಸ್ ಅಲ್ಲೆ ಇತ್ತು.

"ಇಲ್ಲ ... ಅವರಿನ್ನೂ ಹೋದಂತಿಲ್ಲ. ಸೂಟಕೇಸ್ ಇನ್ನೂ ಇಲ್ಲೆ ಇದೆ."

"ಹೌದಾ... ಗುಡ್... ನಮಗೆ ಜಯಚಂದ್ರರ ರೂಮು ತೋರಿಸಿ..."

ಅಂಗಡಿ ಮುಂದೆ ಆಗಲೇ ಜನ ನೆರೆದಿದ್ದರು. ವಿಷಯ ತಿಳಿದು ಅಪ್ಪ... ಅಮ್ಮ ಇಬ್ಬರೂ ಓಡಿ ಬಂದಿದ್ದರು. ಅಪ್ಸರೆಯ ಸುಳಿವಿಲ್ಲ, ಬಹುಶಃ ಆಕೆ ಒಳಗೆ ಅವಿತುಕೊಂಡಿರಬೇಕು.

"ಏನೋ ಇದೆಲ್ಲ... ಪೊಲೀಸರೇಕೆ ಬಂದಿದಾರೆ" ಅಪ್ಪ ಹೆದರಿಕೆಯಿಂದ ಕೇಳಿದರು.

"ಅಪ್ಪಾ. ನೀವೇನೂ ಹೆದರಬೇಡಿ... ಜಯಚಂದ್ರನ ಸ್ನೇಹಿತರ ಬಗ್ಗೆ ಕೇಳಲು ಬಂದಿದಾರೆ... ನೀವಿಲ್ಲೇ ಇರಿ. ಬಂದೆ..."

ಮೆಟ್ಟಲು ಹತ್ತಿ ಜಯಚಂದ್ರನ ರೂಮಿಗೆ ಬಂದೆವು. ಬೀಗ ಹಾಕಿತ್ತು. "ಅವರು ರಾತ್ರಿ ಬರೋದಿಲ್ಲ... ಊರಿಗೆ ಹೋಗಬೇಕು ಅಂದಿದ್ರು... ಅವರ ಸ್ನೇಹಿತರು ನನ್ನ ಬಳಿ ಸೂಟಕೇಸು ಬಿಟ್ಟು, ಸಂಜೆ ಬರತೇನೆ ಅಂತ ಹೇಳಿ ಹೋದವರು ಇನ್ನೂ ಬಂದಿಲ್ಲ, ಸೂಟಕೇಸ್ ಇಲ್ಲೇ ಇದೆ."

ಪುನಃ ಕೆಳಗೆ ಬಂದೆವು.

"ಸ್ವಲ್ಪ ಸೂಟಕೇಸ್ ಇಲ್ಲಿ ಕೊಡಿ" ಪೊಲೀಸ್ ಆಫೀಸರ ಆಜ್ಞೆ... ಅಮಾನ್ಯ ಮಾಡಲಾದೀತೆ?

ಮೇಲಿಟ್ಟ ಸೂಟಕೇಸ್‌ಗೆ ಕೈ ಹಾಕಿದೆ. ಓಡಿ

ಓಡಿದು ಮುಂದೆ ಎಳೆದುಕೊಂಡು ಕೊಕ್ಕೆ ಜಗ್ಗಿದೆ... ಬೀಗ ಹಾಕಿರಲಿಲ್ಲ ಎಂದು ಕಾಣುತ್ತದೆ. ಒಮ್ಮೆಲೆ ಬಾಯಿತೆರೆದು ಸೂಟಕೇಸು ಕೈಯಿಂದ ಜಾರಿ ಕೆಳಗೆ ಬಿತ್ತು. ನಾನು ಚೀರಿಕೊಂಡು ಸೂಟ ಕೇಸಿನತ್ತ ನೋಡಿದೆ.

ಎದೆಯೊಡೆಯಿತು.

ಅಪ್ಪ "ಅಯ್ಯೊ ಇದೇನು" ಅಂದರು.

ಅಮ್ಮ ಲಬೋ ಲಬೋ ಎಂದು ಬಡಿದು ಕೊಂಡು ಒಳಗಡೆ ಓಡಿದರು. ಪೊಲೀಸ್ ಅಧಿಕಾರಿ ಒಳಗೆ ಧಾವಿಸಿದ.

ಕೈಕಾಲು ಕತ್ತರಿಸಿ, ರುಂಡ—ಮುಂಡ ಬೇರ್ಪ ಡಿಸಿ ಹೊಂದಿಸಿಟ್ಟ ಜಯಚಂದ್ರನ ಶವ ಎಲ್ಲ ರನ್ನೂ ಸ್ವಾಗತಿಸಿತ್ತು...

6

ನಂಬಲಾಗದ ಸತ್ಯ.

ಯಾವ ಮನುಷ್ಯ ಬಂದು ನನ್ನ ಕೈಗೆ ಸೂಟ ಕೇಸು ನೀಡಿ ಸಂಜೆ ಬಂದು ಒಯ್ಯುತ್ತೇನೆ ಎಂದು ಹೇಳಿದ್ದನೋ ... ಅವನದೇ ತುಂಡು ತುಂಡಾದ ಶವ, ಅವನೇ ಕೊಟ್ಟ ಅವನದೇ ಸೂಟಕೇಸಿ ನಲ್ಲಿ...

ಅದೆಂತು ಸಾಧ್ಯ?

ತಾನು ಜೀವಂತವಾಗಿರುವಾಗಲೇ ತನ್ನ ಶರೀರ ತಾನೇ ಕತ್ತರಿಸಿ ಸೂಟಕೇಸಿನಲ್ಲಿ ತುಂಬಿ ಕೊಟ್ಟು ಹೋಗಲು ಸಾಧ್ಯವೇ?...

ತಲೆ ಗಿರ್ರ ಎಂದಿತು...

ಯಾವದು ಅಸಾಧ್ಯವೋ ಅದು ಸಾಧ್ಯವಾಗಿ ಪರಿಣಮಿಸಿತ್ತು.

ನಾನು ಪೊಲೀಸರ ಬಂದಿಯಾದೆ...

ಅಪ್ಪ ವಕೀಲರ ಬಳಿ ಓಡಿದರು. ಅಮ್ಮ ಹಾಸಿಗೆ ಹಿಡಿದಳು.

ಅಪ್ಸರೆ ಮಾಯವಾಗಿದ್ದಳು... ಜಯಚಂದ್ರನ ಸುಳಿವಿರಲಿಲ್ಲ...

ಅಂಗಡಿ ಎದುರು ನೂರಾರು ಜನ ಸೇರಿ ತಮಾಷೆ ನೋಡುತ್ತಿದ್ದರು. ಇಬ್ಬರು ಮೂವರು ಪೊಲೀಸರು ಜನರನ್ನು ಚದುರಿಸುವ ವ್ಯರ್ಥ ಪ್ರಯತ್ನದಲ್ಲಿ ತೊಡಗಿದ್ದರು. ಇನ್‌ಸ್ಪೆಕ್ಟರ ಕೇಳಿ ದರು.

"ನಾನು ಕೊನೆಯ ಬಾರಿ ಕೇಳುತ್ತೇನೆ..."

"ನೀವೆಷ್ಟು ಬಾರಿ ಕೇಳಿದರೂ ಉತ್ತರ ಒಂದೇ ಆಫೀಸರ್. ಸತ್ಯವಾಗಿ ನನಗೆ ಏನೂ ತಿಳಿಯದು. ಆತ ಸೂಟಕೇಸು ಕೊಟ್ಟು ಜಯಚಂದ್ರನ ಜೊತೆ ಹೊರಟು ಹೋದ. ಆಗ ಸೂಟಕೇಸು ಎತ್ತಿ ಮೇಲಿಟ್ಟಿದ್ದೆ. ಈಗಲೇ ಅದು ನೀವು ಕೇಳಿದಾಗಲೇ ನಾನು ತೆಗೆದುಕೊಟ್ಟದ್ದು."

"ನಾನ್ಸೆನ್ಸ್... ತನ್ನ ಹೆಣ ಪ್ಯಾಕ್ ಮಾಡಿ ತಾನೇ ಕೊಟ್ಟು ಹೋಗುತ್ತಾನೆಯೆ?"

"ವಾದ ಮಾಡಲಾರೆ... ನಿಜವಾದ ವಿಷಯ ತಿಳಿಸಿರುವೆ."

"ಮಿಸ್ಟರ್ ಸುಳ್ಳು ಹೇಳುವದರಿಂದ ನಿಮಗೆ ಒಳ್ಳೆಯದಾಗುವುದಿಲ್ಲ."

"ನಾನು ಹೇಳಿದ್ದು ಸತ್ಯ... ಒಂದು ವೇಳೆ ನಿಮ್ಮ ವಾದ ಸತ್ಯ ಎಂದೇ ಇಟ್ಟುಕೊಳ್ಳಿ. ನಾ ಸೂಟಕೇಸಿನಲ್ಲಿ ಶವ ಇದ್ದ ವಿಷಯ ನನಗೆ ಮೊದಲೇ ಗೊತ್ತಿದ್ದಿದ್ದರೆ... ನಾನೇಕೆ ಸೂಟಕೇಸಿದೆ ಎಂದು ಹೇಳುತ್ತಿದ್ದೆ. ನಾನೇ ಏಕೆ ಎತ್ತಿ ಕೊಡಲು ಹೋಗುತ್ತಿದ್ದೆ?... ಅದಕ್ಕೆ ಬೀಗ ಹಾಕದೇ ತಾನೇ ಏಕೆ ಇಡುತ್ತಿದ್ದೆ... ಹೇಳಿ."

ನನ್ನ ಮಾತಿನಲ್ಲಿ ಸತ್ಯಾಂಶವಿತ್ತು. ಆತ ಯೋಚನಾ ಮಗ್ನನಾದ. ಒಂದೆರಡು ನಿಮಿಷ ಬಿಟ್ಟು "ಸ್ವಲ್ಪ ಜಯಚಂದ್ರನ ರೂಮು ಚೆಕ್ ಮಾಡಬೇಕು" ಎಂದ. "ನನ್ನ ಬಳಿ ಬೀಗದಕ್ಕೆ ಇಲ್ಲ" ಎಂದೆ. "ನೋ ಪ್ರಾಬ್ಲಂ... ನೀವು ಒಪ್ಪಿಗೆ ಕೊಟ್ಟರೆ ಬೀಗ ಮುರಿಯುತ್ತೇನೆ." "ನಿಮಗೆ ಸರಿ ಕಂಡಂತೆ ಮಾಡಿ."

ನಾಲ್ಕಾರು ಜನ ಪಂಚರೊಂದಿಗೆ ನಾನು ಪುನಃ ಜಯಚಂದ್ರನ ರೂಮಿಗೆ ಬಂದೆ. ಎರಡೇ ನಿಮಿಷಗಳಲ್ಲಿ ಬೀಗ ಮುರಿದು ಕೆಳಗೆ ಬಿತ್ತು. ಮೊದಲು ಇನಸ್ಪೆಕ್ಟರ ಒಳಗೆ ಹೋಗಿ ದೀಪ ಹುಡುಕಿ ಹೊತ್ತಿಸಿದ. ಆಮೇಲೆ ನಾನು ಒಳಗೆ ಕಾಲಿಟ್ಟೆ... ತಬ್ಬಿಬ್ಬಾಗಿ ನಿಂತೆ.

ರೂಮಿನ ಮಧ್ಯಭಾಗದಲ್ಲಿ ರಕ್ತದ ಕಲೆಗಳು... ಮೂರು ನಾಲ್ಕು ಪ್ಲಾಸ್ಟಿಕ್ ಚೀಲಗಳು ಅವೂ ಸಹ ರಕ್ತರಂಜಿತವಾಗಿದ್ದವು...

"ಈಗ ಹೇಳಿ... ಏನಿದರ ಅರ್ಥ?" ಸಿಟ್ಟಿ ನಿಂದ ಕೇಳಿದ ಇನ್‌ಸ್ಪೆಕ್ಟರ್... ಉತ್ತರಿಸಲು ನನಗೆ ಸಮಯ ಹಿಡಿಯಿತು.

"ನನಗೂ ಅರ್ಥವಾಗ್ತಾ ಇಲ್ಲ" ಉಗುಳು ನುಂಗುತ್ತ ನುಡಿದೆ.

"ಅಷ್ಟು ಮೂರ್ಖರು ಅಂತ ನನಗನಿಸೋ

ದಿಲ್ಲ ಮಿಸ್ಟರ್... ಎಲ್ಲಾ ಚಿತ್ರ ಸ್ಪಷ್ಟವಾಗಿದೆ... ಇಲ್ಲೇ ಕೊಲೆಮಾಡಿ ಸೂಟಕೇಸನಲ್ಲಿ ತುಂಬಿ ಕೆಳಗಡೆ ತಂದಿದ್ದೀರಿ."

"ಸುಳ್ಳು... ಸುಳ್ಳು... ಹಾಗಿದ್ದರೆ ಸೂಟಕೇಸು ಅಲ್ಲೆ ಇಡಲು ಏನು ಹುಚ್ಚು?"

"ಹುಚ್ಚಲ್ಲ... ನಿಶ್ಚಿಂತೆ... ಯಾರಿಗೂ ಸಂಶಯವಿಲ್ಲ... ಯಾರೂ ಬರಲಾರರು, ರಾತ್ರಿ ಎಲ್ಲಾದರೂ ಸಾಗಿಸಿದರಾಯ್ತೆಂದು ಅಲ್ಲೇ ಇಟ್ಟಿದ್ದೀರಿ... ಇನ್ನು ನಾನು ಮೂರ್ಖನಾಗಲಾರೆ... ನಾಗರಾಜನ ಕೊಲೆ ಮಾಡಿದ ಆಪಾದನೆ ಮೇಲೆ ನಾನು ನಿಮ್ಮನ್ನು ಬಂಧಿಸುತ್ತೇನೆ"

"ನಾಗರಾಜ... ಯಾರು ಈತ?"

ಬೆಂಗಳೂರಿನಲ್ಲಿರುವ ಪೊಲೀಸ್ ಕಾನ್ಸ್ಟೇಬಲ್ ಈತ. ನಾಲ್ಕು ದಿನಗಳಿಂದ ಕಾಣೆಯಾಗಿದ್ದ. ಇವನ ಮನೆ ಶೋಧಿಸಿದಾಗ ನಮಗೆ ನಿಮ್ಮ ವಿಳಾಸ ದೊರೆಯಿತು. ಹುಡುಕುತ್ತಾ ಬಂದೆವು. ಈಗಾದರೂ ಅರ್ಥ ಆಯ್ತಾ?"

ಮುಂದೆ ನನ್ನಿಂದ ಮಾತು ಹೊರಡಲಿಲ್ಲ.

ನಯವಾದ ರೇಶಿಮೆ ಬಲೆಯಲ್ಲಿ ನಾನು ಬಂಧಿತನಾಗಿದ್ದೆ.

ಬಲೆ ಹೆಣೆದವರಾರು?

ಅಪ್ಸರೆಯೆ?... ಜಯಚಂದ್ರನೆ?...

ಅವರಿಗೂ ನನಗೂ ಏನು ಸಂಬಂಧ?

ಅವರೇಕೆ ನನ್ನನ್ನೂ ಕೊಲೆಯ ಬಲೆಯಲ್ಲಿ ಸಿಕ್ಕಿಸಿದರು?

ಅವರಿಗೆ ನಾನೇನು ಅನ್ಯಾಯ ಮಾಡಿರುವೆ?...

ಉತ್ತರ... ಒಂದು ಪ್ರಶ್ನೆಗೂ ಹೊಳೆಯಲಿಲ್ಲ.

ಮುಂದೆ ಅರ್ಧಗಂಟೆಯಲ್ಲಿ ಎಲ್ಲಾ ಕೆಲಸಗಳೂ ಮುಗಿದವು. ಜಯಚಂದ್ರನ ಕೋಣೆ, ಅಂಗಡಿ ಎಲ್ಲಾ ಸೀಲ್ ಮಾಡಿದರು. ಅದಕ್ಕೂ ಪೂರ್ವದಲ್ಲಿ ಐದು ಜನ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಸಹಿ ಪಡೆದರು. ಫೋಟೋಗ್ರಾಫರ ಹತ್ತಾರು ಫೋಟೋ ತೆಗೆದ. ಬೆರಳು ಅಚ್ಚಿನ ತಜ್ಞರು ಪೌಡರ ಉದುರಿಸಿ ಸಾಕಷ್ಟು ಫೋಟೋ ಮುದ್ರಿಸಿಕೊಂಡರು.

ಅನಂತರ ಪೊಲೀಸ್ ಜೀಪಿನಲ್ಲಿ ನನ್ನ ಮೆರವಣಿಗೆ ಹೊರಟಿತು.


ಹತ್ತು ನಿಮಿಷಗಳಲ್ಲಿ ನಾನು ಸರಳುಗಳ ಹಿಂದೆ ಇದ್ದೆ.

7

ನಿರಪರಾಧಿಯನ್ನು ಪೊಲೀಸರು ಬಂಧಿಸಿ ಬಂದೀಖಾನೆಗೆ ನೂಕಿ ಅವನಿಗೆ ಚಿತ್ರಹಿಂಸೆ ಕೊಟ್ಟಿದ್ದು, ಹಿಂಸೆ ತಾಳಲಾರದೆ ಅಪರಾಧ ಮಾಡಿರದಿದ್ದರೂ ಮಾಡಿದ್ದೇನೆಂದು ಒಪ್ಪಿಕೊಂಡ ಅಮಾಯಕ ಜನರ ಬಗ್ಗೆ ನಾನು ಹಲವಾರು ಕಾದಂಬರಿಗಳನ್ನು ಬರೆದಿದ್ದೆ. ಅವೆಲ್ಲ ಓದುಗರ ಮೆಚ್ಚುಗೆ ಪಡೆದವು ಅಷ್ಟೆ ಅಲ್ಲ ಎರಡು ಮೂರು ಕಾದಂಬರಿಗಳು ಚಲನಚಿತ್ರಗಳಾಗಿ ಪ್ರದರ್ಶನಗೊಂಡು ಲಕ್ಷಾವಧಿ ಜನರಿಂದ ಪ್ರಶಂಸಿಸಲ್ಪಟ್ಟವು...

ಎಂಥ ವಿಚಿತ್ರ...

ಯಾವುದನ್ನು ಕಲ್ಪನೆ ಮಾಡಿಕೊಂಡು ಸತ್ಯದ ತಲೆ ಮೇಲೆ ಹೊಡೆದಂತೆ ಬರೆದಿದ್ದೆನೊ ಅದೇ ಸತ್ಯದ ಮುಂದೆ ನಾನು ನಿಂತಿದ್ದೇನೆ...



ಒಂದು ಮಾತು ಮಾತ್ರ ಸತ್ಯ,

ದೈಹಿಕವಾಗಿ ನನ್ನನ್ನು ಯಾರೂ ಹಿಂಸಿಸಲಿಲ್ಲ. ಮಾನಸಿಕವಾಗಿ ವಿಚಿತ್ರ ರೀತಿಯಲ್ಲಿ ಹಿಂಸಿಸಿದರು. ಅವರ ಹಿಂಸೆಯನ್ನು ನಾನು ಕಲ್ಪನೆ ಮಾಡಲೂ ಸಹ ಸಾಧ್ಯವಿರಲಿಲ್ಲ. ಮೊದಲು ಒಬ್ಬ ಪ್ರಶ್ನಿಸಿದ. ನಿಜಹೇಳಲು ಒತ್ತಾಯ ಮಾಡಿದ. ಶಿಕ್ಷೆ ಕಡಿಮೆಯಾಗುವಂತೆ ನೋಡಿಕೊಳ್ಳುವ ಹಾಗೆ ಭರವಸೆ ನೀಡಿದ... ನಾನೆಲ್ಲ ನಿರಾಕರಿಸಿದೆ. ಆಮೇಲೆ ಕೋಣೆಯಲ್ಲಿ ಕೂಡಿಸಿ ಪ್ರಕಾಶಮಾನವಾದ ದೀಪ ಬಿಟ್ಟು ಪ್ರಕಾಶಕಿರಣಗಳಿಂದ ಘಾಸಿಗೊಳಿಸಿ ಅಪರಾಧ ಒಪ್ಪಿಕೊಳ್ಳುವಂತೆ ಒತ್ತಾಯಮಾಡಿದರು. ನಾನು ಒಪ್ಪಿಕೊಳ್ಳಲಿಲ್ಲ... ಊಟದಲ್ಲಿ... ಉಪಹಾರದಲ್ಲಿ ಉಪ್ಪು... ಖಾರ ಪ್ರಮಾಣ ಮೀರಿ ಬೆರೆಸಿ ನಾನು ಬಾಧೆಯಿಂದ ನರಳುತ್ತ ಕಣ್ಣು ಮೂಗುಗಳಿಂದ ನೀರು ಸುರಿಸುತ್ತಿರಲು. "ನೀರು... ನೀರು" ಎಂದು ಅರಚಿಕೊಂಡಾಗ ನಿಜ ಹೇಳು ನೀರು ಕೊಡುತ್ತೇವೆ.. ಬೀರೂ ಕೊಡುತ್ತೇವೆ... ಇಲ್ಲದಿದ್ದರೆ ಹಾಗೇ ಸಾಯಲು ಬಿಡುತ್ತೇವೆ ಎಂದು ಹೆದರಿಸಿ ಆಯಿತು. ಅದಕ್ಕೂ ನಾನು ಜಗ್ಗಲಿಲ್ಲ... ಸ್ನಾನದ ನೀರಿನಲ್ಲಿ ಏನೋ ಸೇರಿಸಿದ್ದರಿಂದ ಮೈಮೇಲೆ ನಾಲ್ಕುಚೊಂಬು ನೀರು ಹಾಕಿಕೊಳ್ಳುತ್ತಲೇ ಮೈಗೆಲ್ಲ ಬೆಂಕಿ ಇಟ್ಟಂತಾಗಿ ನಾನು ವಿಲಿವಿಲಿ ಒದ್ದಾಡಿದಾಗ... ಹೇಳು... ನಡೆದದ್ದೇನು?... ಏಕೆ ಕೊಲೆಮಾಡಿದೆ?... ನಿನಗೆ ಸಹಾಯಕರಾರು?... ಕೊಲೆಗೆ ಕಾರಣವೇನು? ಎಂದು ಮುಂತಾಗಿ ಪ್ರಶ್ನಿಸಿದರು.

ಎಲ್ಲವೂ ವ್ಯರ್ಥವಾಯಿತು.

ನನಗೆ ಗೊತ್ತಿದ್ದರೆ ತಾನೇ ನಾನು ಹೇಳುವದು?

ಅವರು ಎಷ್ಟು ಬಗೆಯಿಂದ ನನ್ನನ್ನು ಹಿಂಸಿಸುತ್ತಾರೋ ಅಷ್ಟು ಬಗೆಯಿಂದ ನಾನು ಮಾನಸಿಕವಾಗಿ ಗಟ್ಟಿಯಾದೆ. ನನ್ನ ಕಾದಂಬರಿಯ ಪಾತ್ರವಾಗದಿರಲು ನಿರ್ಧರಿಸಿದೆ.

ಪರಿಣಾಮವಾಗಿ ಹೆಜ್ಜೆ ಹೆಜ್ಜೆಗೂ ಅವರಿಗೆ ಸೋಲಾಯಿತು.

ಆರನೇದಿನ ನನ್ನನ್ನು ವಿಚಾರಿಸುತ್ತಿದ್ದ ಅಧಿಕಾರಿ ಬದಲಾದ—ಅವನ ಜಾಗೆಗೆ ಬೆಂಗಳೂರಿನಿಂದ ಹೊಸ ಅಧಿಕಾರಿಯನ್ನು ಕಳಿಸಿಕೊಟ್ಟರು. ಆತ ತುಂಬಾ ಅಪಾಯಕಾರಿ... ಕಟುಕ... ನಿಷ್ಕರುಣಿ ಮುಂತಾದವು ನನ್ನ ಕಿವಿಗೆ ಬಿದ್ದವು... ಮತ್ತೆ

ನಮ್ಮೂರು ನಮ್ಮ ಜನ

ನಮ್ಮೂರ ಗಣೇಶೋತ್ಸವ

ನಮ್ಮೂರು ಜಿಲ್ಲಾ ಕೇಂದ್ರವಾದ ತುಮಕೂರಿನಿಂದ ಸುಮಾರು 80 ಕಿ.ಮೀ. ದೂರವಿರುವ ತಿಪಟೂರು. "ತಿಪಟೂರು" ಎಂದೊಡನೆ ನೆನಪಾಗುವುದು ತೆಂಗಿನಕಾಯಿ. ಅಂದಹಾಗೆ ತಿಪಟೂರಿನ ತೆಂಗಿನಕಾಯಿ ತುಂಬಾ ಪ್ರಸಿದ್ಧಿ ಹೊಂದಿದೆ. ಅರಸೀಕೆರೆ, ಹಾಸನ, ಹುಳಿಯಾರು, ಚಿಕ್ಕನಾಯಕನಹಳ್ಳಿ ಇತ್ಯಾದಿ ಹಲವೆಡೆ ತೆಂಗನ್ನು ಬೆಳೆದರೂ ಸಹ ತಿಪಟೂರಿನ ತೆಂಗಿನಷ್ಟು ರುಚಿಯಾದ ತೆಂಗು ಎಲ್ಲೂ ಸಿಗುವುದಿಲ್ಲ.

ನಮ್ಮೂರು ತಾಲ್ಲೂಕು ಕೇಂದ್ರವೂ ಆಗಿದ್ದು, ತೆಂಗು ಪ್ರಧಾನ ವಾಣಿಜ್ಯ ಬೆಳೆಯಾದ್ದರಿಂದ ತೆಂಗಿನ, ನಾರಿನ ಕಾರ್ಖಾನೆಗಳು ಯಥೇಚ್ಛವಾಗಿದ್ದು ಅನೇಕ ನಿರುದ್ಯೋಗಿಗಳಿಗೆ ಬಾಳ ಬೆಳಕಾಗಿದೆ.

ಇದಲ್ಲದೆ ಗಣೇಶೋತ್ಸವ ನಮ್ಮೂರಿನ ಮೆರುಗನ್ನು ಹೆಚ್ಚಿಸುತ್ತದೆ. ಅರಸೀಕೆರೆ ಬಿಟ್ಟರೆ ಇಲ್ಲಿನ ಉತ್ಸವವೇ ಪ್ರಸಿದ್ಧವಾದುದು. ಗಣೇಶ ಚತುರ್ಥಿಯಿಂದ 41 ದಿನಗಳವರೆಗೆ ನಾನಾ ಕಡೆಗಳಿಂದ ಪ್ರಸಿದ್ಧ ಕಲಾವಿದರನ್ನು ಆಹ್ವಾನಿಸಿ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸಿರುತ್ತಾರೆ. ಅಲ್ಲದೆ ಗಣೇಶ ವಿಸರ್ಜನೆಯ ಹಿಂದಿನ ರಾತ್ರಿ ಕಣ್ಣಿಗೆ ಹಬ್ಬವನ್ನು ಉಂಟುಮಾಡುವ ಮದ್ದು ಸುಡುವ ಕಾರ್ಯಕ್ರಮವಂತೂ ವರ್ಣಿಸಲಸದಳ. ಬಣ್ಣ ಬಣ್ಣದ ಹೂಗಳಂತೆ ಅರಳುವ, ರಾಕೆಟ್‌ನಂತೆ ಮೇಲೆ ಹೋಗಿ ಹೂಮಳೆ ಸುರಿಸುವ ಇತ್ಯಾದಿ ಇತ್ಯಾದಿ, ಹೇಳಲು ಬಾರದಂತಹ ಅನೇಕ ರೀತಿಯ ವರ್ಣರಂಜಿತ ಮದ್ದುಗಳ ಸೊಬಗನ್ನು ನೋಡಿಯೇ ಅನುಭವಿಸಬೇಕು. ಬನ್ನಿ ಒಂದ್ಸಲ, ನೋಡಿ ನಮ್ಮೂರಿನ ಗಣೇಶೋತ್ಸವದ ಸಂಭ್ರಮ ಹಂಚಿಕೊಳ್ಳಿ.

● ಟಿ. ಎಲ್. ಮಂಗಳಾ, ತಿಪಟೂರು

ನನಗೇನು ಕಾದಿದೆಯೋ ಎಂದು ಭಯಪಟ್ಟೆ... ಅದರ ಜೊತೆಗೆ ಬಂದದ್ದೆಲ್ಲ ಬರಲಿ ಎಂದು ಗಟ್ಟಿಯಾದೆ.

ನಿರೀಕ್ಷಿಸಿದ ಸಮಯ ಬಂದೇಬಿಟ್ಟಿತು. ಹೊಸ ಪೊಲೀಸ್ ಅಧಿಕಾರಿಯಿಂದ ಬುಲಾವ್. ಮಾನಸಿಕವಾಗಿ ಗಟ್ಟಿಯಾಗಿದ್ದ ನಾನು ಯಾವುದೇ ರೀತಿಯ ಭಯಕ್ಕಾಗಲೀ ದುಗುಡಕ್ಕಾಗಲೀ ಬಲಿಯಾಗದೇ ನಿರ್ಲಿಪ್ತನಾಗಿ ಕರೆಯಲು ಬಂದ ಕಾನ್‌ಸ್ಟೇಬಲ್ ಜೊತೆ ನಡೆದೆ. ಮತ್ತೆ ಅದೇ ಕೋಣೆ. ವಿಚಾರಣಾ ಕೋಣೆ ಕಂ ಮಂತ್ರಣಾ ವಿಭಾಗ ಅಥವಾ ಆಧುನಿಕ ಯಮಾಗಾರ.

"ಕಥೆ, ಕಾದಂಬರಿ ಬರಿಯುತ್ತಾನಂತೆ... ಒಂದಿಷ್ಟು ಸಿನೇಮಾಕ್ಕೂ ಸಹ ಕಥೆ ಬರೆದಿದ್ದಾನೆ ಅಂತ ಹೇಳ್ತಾರೆ. ಇದನ್ನೆಲ್ಲ ನೋಡಿದರೆ ಈತ ಪಕ್ಕಾ ಇದ್ದು ಸುಲಭವಾಗಿ ಒಪ್ಪೋ ಜೀವ ಅಲ್ಲ ಅಂತ ಅನಿಸುತ್ತೆ. ಒಂದು ವೇಳೆ ಸೂಟುಕೇಸು ಬಾಯಿಬಿಚ್ಚದಿದ್ದರೆ ಈ ಅಪರಾಧ ಎಂದೂ ಪತ್ತೆಯೇ ಆಗುತ್ತಿರಲಿಲ್ಲ. ಇಷ್ಟು ಫುಲ್‌ಪ್ರೂಫ್ ಪ್ಲಾನ್ ಓರ್ವ ಬರಹಗಾರ ಅಥವಾ ಯಶಸ್ವಿ ಕತೆಗಾರ ಮಾತ್ರ ಮಾಡಲು ಸಾಧ್ಯ."

"ಶಟಪ್... ಬರಹಗಾರನಿಂದ ಏನೂ ಮಾಡಲು ಸಾಧ್ಯವಿಲ್ಲ. ಆತ ಕೇವಲ ಲೇಖನಿಯಿಂದ ಕಾಗದದಲ್ಲಿ ಅದ್ಭುತವಾಗಿ, ರೋಮಾಂಚನಕಾರಿಯಾಗಿ ಇಳಿಸಬಲ್ಲ ತಿಳೀತಾ..."

ನಾನು ಹೊರಗಡೆ ಇರುವಾಗಲೇ ಈ ಎರಡೂ ಮಾತುಗಳು ನನ್ನ ಕಿವಿಗೆ ಬಿದ್ದವು. ಮೊದಲನೆಯವ ಕಿರಿಯ ಅಧಿಕಾರಿ ಇರಬೇಕು. ಎರಡನೇ ಕಂಠವೇ ಹೊಸದಾಗಿ ಬಂದಿರುವ ಅಧಿಕಾರಿಯದಾಗಿರಬೇಕು. ಪಳಗಿದಾನೆ. ಸಾಕಷ್ಟು ಅನುಭವವಿದೆ. ಬರಹಗಾರರ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದಾನೆ... ಪರವಾಗಿಲ್ಲ ಪೊಲೀಸ್ ವಿಭಾಗದಲ್ಲಿ ಇಂಥವರೊಬ್ಬರಿದ್ದಾರೆ. ನನ್ನ ಮೊರೆ ಕೇಳುವ ವ್ಯಕ್ತಿ ಯಾರಾದರೂ ಇದ್ದರೆ ಇವನೊಬ್ಬನೇ... ಇವರ ಮುಂದೆ ಎಲ್ಲವನ್ನೂ ಅಂದರೆ ಅಪ್ಸರೆಯ ವಿಷಯವನ್ನೂ ಹೇಳಬಹುದು ಎಂದು ನಿರ್ಧರಿಸಿದೆ...

ಒಳಗೆ ಬರಲು ಕರೆಬಂತು.

ಬಾಗಿಲು ದೂಡಿ ಕಾಲಿಟ್ಟೆ.

ಎದುರಿಗೇ ಕುಳಿತಿದ್ದ ಹೊಸ ಅಧಿಕಾರಿ... ಗೌರವರ್ಣ... ಅಗಲವಾದ ಹಣೆ... ಉದ್ದ ಮೂಗು... ಹೊಳೆಯುವ ಕಣ್ಣುಗಳು. ದಪ್ಪನಾದ ಮೀಸೆ... ದಷ್ಟಪುಷ್ಟ ದೇಹ...

ಗಕ್ ಎಂದು ನಿಂತೆ. ಅವರತ್ತ ಮತ್ತೊಂದು ಬಾರಿ ನೋಡಿದೆ.

ಆಶ್ಚರ್ಯ ಅಧಿಕಾರಿಯೂ ಎದ್ದುನಿಂತ.

ಅವನ ಮುಖದ ಮೇಲೆ ಗಾಬರಿ... ಕಣ್ಣಲ್ಲಿ ಅವಿಶ್ವಾಸ... "ನೀನು... ನೀನು..."

ನಾನು ಮುಗುಳ್ನಕ್ಕೆ... ಅವನ ಪರಿಚಯ ಸಿಕ್ಕಿತ್ತು.

ಆತ ನನ್ನ ಬಾಲ್ಯಸ್ನೇಹಿತ ಸುಧೀರ ಜಾಧವ. ನಮ್ಮ ಮನೆ ಪಕ್ಕದಲ್ಲೇ ಬಾಡಿಗೆ ಇದ್ದರು ಅವನ ತಂದೆತಾಯಿ. ಪ್ರಾಥಮಿಕ ಶಿಕ್ಷಣ ನಾವೆಲ್ಲರೂ ಕೂಡೇ ಮುಗಿಸಿದ್ದೆವು. ಮುಂದೆ ಅವರ ತಂದೆಗೆ ವರ್ಗವಾಯಿತು. ಬೆಳಗಾವಿ ಸೇರಿದರು. ಮುಂದೆ ಎಂಟೋ ಹತ್ತೋ ವರ್ಷಗಳ ನಂತರ ಎಲ್ಲೋ ಒಂದೆಡೆ ಸೇರಿದ್ದೆವು. ಆತನೂ ಪದವಿ ಪಡೆದಿದ್ದ... ನಾನೂ ಸಹ. ನೌಕರಿ ಬೇಟೆ ಅವನ ನಿತ್ಯದ ಕಾಯಕವಾಗಿತ್ತು...

ಅನಂತರ ಭೆಟ್ಟಿಯಾದದ್ದು ಇಂದೇ...

ಆತ ಪೊಲೀಸ್ ಅಧಿಕಾರಿ... ನಾನು ಕೊಲೆ ಅಪವಾದ ಹೊತ್ತ ಅಪರಾಧಿಯಾಗಿ. ಓಡಿಬಂದವನೇ ಬಲವಾಗಿ ಅಪ್ಪಿಕೊಂಡ. ಅವನ ಜೊತೆಗಿದ್ದ ಮೂರು ನಾಲ್ಕು ಜನ ಕಿರಿಯ ಅಧಿಕಾರಿಗಳು ಕಕ್ಕಾವಿಕ್ಕಿಯಾದರು...

ಕೆಲಸಮಯದ ನಂತರ ಕಣ್ಣೀರು ಒರೆಸಿಕೊಂಡು ನನ್ನನ್ನು ಕುರ್ಚಿ ಮೇಲೆ ಕೂಡಿಸಿ ತಾನು ತನ್ನ ಸ್ಥಾನದಲ್ಲಿ ಕುಳಿತ... ಚಹಾ ತರಲು ತಿಳಿಸಿದ. ಚಹ ಕುಡಿದಾದ ಮೇಲೆ ಕೇಳಿದ ಆತ್ಮೀಯತೆಯಿಂದ ಹೇಳಿದ,

"ಹೇಳು... ನಡೆದದ್ದೇನು?"

ನಾನು ಸುತ್ತಲಿದ್ದವರನ್ನು ನೋಡಿದೆ. ಅದರರ್ಥ ತಿಳಿದುಕೊಂಡ ಕಿರಿಯ ಅಧಿಕಾರಿಗಳು ಹೊರಡಲು ಉದ್ಯುಕ್ತರಾದರು. ಸುಧೀರ ಅವರನ್ನು ತಡೆದ. "ಇವರೆಲ್ಲ ನನ್ನ ಆತ್ಮೀಯರು... ನಂಬಿಗಸ್ತರು... ಯಾವ ಅಶಂಕೆಯೂ ಬೇಡ... ಒಂದೂ ವಿಷಯ ಬಿಡದೇ ಎಲ್ಲಾ ಹೇಳು."

ನಾನು ಹೇಳಲಾರಂಭಿಸಿದೆ... ಒಂದೂ ಮುಚ್ಚಿಡಲಿಲ್ಲ... ಗೋಕರ್ಣದಿಂದ ಆರಂಭಿಸಿ, ಈಗಿನವರೆಗೂ ಸುಧೀರನ ಮುಂದೆ ಕೂತಿರುವವರೆಗೂ ಹೇಳಿ ಮುಗಿಸಿದೆ.

"ಅದ್ಭುತ... ರೋಮಾಂಚಕಾರಿ... ನಿನ್ನ ಕಾದಂಬರಿ ಮಹಾತ್ಮೆ."

ಆತ ನಕ್ಕು ಪ್ರಶಂಶಿಸಿದ... ನಾನೂ ನಕ್ಕೆ.

ಮತ್ತೊಂದು ಬಾರಿ ಚಹ ಬಂದಿತು... ನಂತರ ಚರ್ಚೆ ಆರಂಭವಾಯಿತು. ಸುಧೀರ ತನ್ನ ಸಂಗಡಿಗರತ್ತ ತಿರುಗಿ ಕೇಳಿದ.

"ನಿಮ್ಮ ಅಭಿಪ್ರಾಯವೇನು?"

ಅವರು ಮಿಕಮಿಕ ಮುಖನೋಡಿದರು. ಮಾತನಾಡುವ ಧೈರ್ಯವಾಗಲಿಲ್ಲ, "ಒಂದು ಮಾತು ಸ್ಪಷ್ಟಪಡಿಸುತ್ತೇನೆ. ಈತ ನನ್ನ ಬಾಲ್ಯ ಸ್ನೇಹಿತ. ಎಂದೂ ಸುಳ್ಳುಹೇಳಿಲ್ಲ, ಇಂದೂ ಸಹ... ನನಗೆ ಇವನ ಮೇಲೆ ಸಂಪೂರ್ಣ ವಿಶ್ವಾಸವಿದೆ. ಇವನಿಗಾಗಿ ನಾನು ಏನು ಮಾಡಲೂ ಸಿದ್ಧ..."

ಸುಧೀರ ಸ್ಪಷ್ಟಪಡಿಸಿದಾಗ ನನ್ನ ಕಣ್ಣಾಲಿಗಳು ತುಂಬಿಬಂದವು. ಇದ್ದರೆ ಇರಬೇಕು ಇವನಂಥ ಗೆಳೆಯ ಎಂದುಕೊಂಡೆ. ಸುಧೀರನ ಬಿಚ್ಚು ನುಡಿಯ ನಂತರ ಅವನ ಸಂಗಡಿಗರು ಬಾಯಿ ಬಿಟ್ಟರು.

"ಸರ್... ಇಲ್ಲಿಯವರೆಗೂ ನಾವು ಅಪರಾಧಿ ಇವರೇ ಎಂದು ತಿಳಿದು ನಿಶ್ಚಿಂತರಾಗಿದ್ದೆವು. ಈಗ ಬೇರೆ ದಿಕ್ಕಿನಿಂದ ಯೋಚಿಸಬೇಕಾಗಿದೆ."


"ಯೋಚನೆ... ಅದಕ್ಕೂ ಮೊದಲು ಒಂದು ಮಾತು ನೆನಪಿಡಿ. ಸದ್ಯ ಅಪರಾಧೀ ಸ್ಥಾನದಲ್ಲಿರುವ ಈತ ನಿರಪರಾಧಿ. ಇವನನ್ನು ಸಿಕ್ಕಿಸಲು ಸುಂದರವಾದ ಬಲೆ ಹೆಣೆದಿದ್ದಾರೆ... ಅವರು ಯಾರಿರಬಹುದು ಎಂಬುದನ್ನು ಊಹಿಸಿ. ಅವರು ಯಾರು ಎಂಬ ಬಗ್ಗೆ ಸ್ವಲ್ಪಾದರೂ ಸುಳಿವು ದೊರೆತರೆ ಅದರ ಜೊತೆಗೇ ಅವರ ಉದ್ದೇಶ, ಅವರ ಸಹಾಯಕರು ಮುಂತಾದವುಗಳೆಲ್ಲ ತಾನೇ ತಾನಾಗಿ ಹೊರಬೀಳುತ್ತವೆ."

"ನನ್ನ ದೃಷ್ಟಿಯಲ್ಲಿ ಅಪ್ಸರೆ ಇರಬೇಕು ಅನಿಸುತ್ತಿದೆ."

"ಸರಿ—ಅವಳ ಉದ್ದೇಶವೇನು? ತಾನು ಕೊಲೆ ಮಾಡಿ ಪಾರಾಗಿ ಇವರನ್ನು ಸಿಕ್ಕಿಸಬೇಕಾದರೆ ಅದಕ್ಕೇನಾದರೂ ಕಾರಣವಿರಬೇಕಲ್ಲ?"... ಎಲ್ಲೆಡೆ ಮೌನ. "ಜಯಚಂದ್ರ ಏಕಿರಬಾರದು? — ಆತನ ಕಣ್ಣು ಅಪ್ಸರೆ ಮೇಲೆ... ಮಧ್ಯೆ ಇರುವದೇ ತೊಡಕು ದರ್ಶನ್ ಅವರದು. ಅದಕ್ಕಾಗಿ ತನ್ನ ಸ್ನೇಹಿತರ ಕೊಲೆ ಮಾಡಿ ಅದು ಅವರ ಮೇಲೆ ಬರುವಂತೆ ಮಾಡಿ ಪಾರಾದ. ಇವರು ಜೈಲು ಸೇರುತ್ತಾರೆ. ಅಪ್ಸರೆಯನ್ನು ಆಗ ಸುಲಭದಿಂದ ವಶಪಡಿಸಿಕೊಳ್ಳಬಹುದು..."

ಸಬ್ ಇನ್‌ಸ್ಪೆಕ್ಟರ ನುಡಿದಾಗ ಸುಧೀರ ಮೆಚ್ಚುಗೆ ಸೂಚಿಸಿದ.

"ಗುಡ್... ಇದಾಗಿರಲು ಸಾಧ್ಯ... ಒಂದೇ ಸಂಶಯ... ಕೊಲೆಮಾಡಿ ಶವದ ತುಂಡುಗಳನ್ನು ಸೂಟುಕೇಸಿನಲ್ಲಿ ಅದೂ ಕೆಳಗೆ ಅಂಗಡಿಯಲ್ಲಿ



ಅಷ್ಟು ಹೊತ್ತಿನಿಂದ ಹುಡುಕಿದರೂ ಕಳೆದಿರೋ ಪೆನ್ನಿನ ಪತ್ತೆ ಮಾಡೋಕಾಗಿಲ್ಲ. ನೀವು ಇನ್ನೇನು ಪತ್ತೇದಾರಿ ಸಾಹಿತ್ಯ ಬರೀತಿರೋ ನಾ ಕಾಣೆ!

ಸೂಟಕೇಸನ್ನು ಹೇಗೆ ಇರಿಸಿದ? ಆತನೊಬ್ಬನೇ ಈ ಕೃತ್ಯ ಮಾಡಿದನೆ? ಅಥವಾ ಅವನಿಗೆ ಸಹಾಯಕರು ಯಾರಾದರೂ ಇರಬಹುದೆ?"

"ಅಪ್ಸರೆಯೇ ಅವನಿಗೆ ಸಹಾಯ ಮಾಡಿರಬಹುದು. ಹೀಗಾಗಿ ಆಕೆಯು ಸಹಾಯವಾಗಿದ್ದಳೆ"

"ಕರೆಕ್ಟ್... ಅವಳ ಸಹಾಯವಿಲ್ಲದೇ ಸೂಟಕೇಸು ಮುಟ್ಟುವ ಹಾಗೇ ಇಲ್ಲ... ಹಾಂ... ಒಂದು ಪ್ರಶ್ನೆ... ಇದಕ್ಕೆ ಕಾರಣವೇನು? ಉದ್ದೇಶವೇನು?" ಮತ್ತೆ ಮುಂತಾದ ಸಮಸ್ಯೆ ಜಟಿಲವಾಗಿತ್ತು...

ಸುಧೀರ ಮೇಲೇಳುತ್ತಾ ಮಾತು ಮುಗಿಸಿದ.

"ಏನೇ ಆಗಲಿ ಇಂದಿನ ಮಾತುಕತೆ ಫಲಪ್ರದವಾಗಿದೆ. ದರ್ಶನ ನಿರಪರಾಧಿ ಎಂದು ಯೋಚಿಸುವ ಜೊತೆಗೆ ನಾವು ಜಯಚಂದ್ರ ಹಾಗೂ ಅಪ್ಸರೆ ಬಗ್ಗೆಯೂ ಯೋಚಿಸಿದ್ದೇವೆ. ನಾಳೆ ಬೆಳಗ್ಗೆ ಮತ್ತೆ ಭೆಟ್ಟಿಯಾಗೋಣ."

ಎಲ್ಲರೂ ಸೆಲ್ಯೂಟ್ ನೀಡಿ ಹೊರಟರು. ಕಾನ್‌ಸ್ಟೇಬಲ್ ನನ್ನನ್ನು ಕರೆದೊಯ್ಯಲು ಬಂದ.

"ಬೇಡ. ದರ್ಶನನನ್ನು ನಾನು ನನ್ನ ಜೊತೆ ಕರೆದೊಯ್ಯುತ್ತೇನೆ..."

ನಾನು ಅವಿಶ್ವಾಸದಿಂದ ಅವನೆಡೆ ನೋಡಿದೆ... ಆತ ಮುಗುಳ್ನಕ್ಕ.

ಅರ್ಧ ಗಂಟೆಯಲ್ಲಿ ನಾನು ಮತ್ತೆ ಮನುಷ್ಯನಾಗಿದ್ದೆ... ಎಷ್ಟೋ ದಿನಗಳ ನಂತರ ಸೂರ್ಯನನ್ನು ಕಂಡಿದ್ದೆ... ಮುಖಕ್ಷೌರ ಮಾಡಿಕೊಂಡು ಒಳ್ಳೆ ಬಟ್ಟೆ ಧರಿಸಿ ಕಾರಿನಲ್ಲಿ ಸುಧೀರನೊಂದಿಗೆ ಮನೆಗೆ ಬಂದೆ. ನನ್ನನ್ನು ನೋಡುತ್ತಲೇ ಅಮ್ಮ ಓಡಿ ಬಂದು ಅಪ್ಪಿಕೊಂಡಳು. ಅಪ್ಪ ಕಣ್ಣೀರು ಮಿಡಿದರು. ಅತುಲ ತಬ್ಬಿಕೊಂಡು "ಇದೇ ನಾಯಿತಣ್ಣ... ನಾನು ಊರಿಗೆ ಹೋಗಿದ್ದೆ ನಿನಗೆ ಮುಳುವಾಯಿತು. ಇದೆಲ್ಲಾ ಆದದ್ದು ನನ್ನಿಂದ" ಎಂದು ಹಳಿದುಕೊಂಡ. ಅವನಿಗೆ ಸಮಾಧಾನ ಹೇಳುವದರಲ್ಲಿ ಸಾಕುಸಾಕಾಯಿತು.

ಎಲ್ಲರ ದುಃಖ ಶಮನವಾದ ಮೇಲೆ ನಾನವರಿಗೆ ಸುಧೀರನ ಪರಿಚಯ ಮಾಡಿಕೊಟ್ಟಾಗ ಎಲ್ಲರೂ ಅವನನ್ನು ನೋಡಿ ಸಂತೋಷಪಟ್ಟರು. ತಿಂಡಿ ತಿಂದಾದ ಮೇಲೆ ಸುಧೀರ್ ಹೇಳಿದ.

"ನೀವು ಯಾರೂ ಗಾಬರಿ ಆಗಬೇಡಿ. ಈತ ಕೊಲೆಗಾರ ಅಲ್ಲ. ಯಾರೋ ಬುದ್ಧಿವಂತಿಕೆಯಿಂದ ಇವನನ್ನು ಸಿಕ್ಕಿಸಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಕೆಲವು ದಿವಸ ದರ್ಶನ ಗುಪ್ತವಾಗಿರಲಿ. ಒಂದು ಸ್ಥಾನದಲ್ಲಿ ನಾನು ಮುಚ್ಚಿ ಇಡುತ್ತೇನೆ. ಹೊರಗಿರುವುದರಿಂದ ಇವರ ಜೀವಕ್ಕೆ ಅಪಾಯವಿದೆ. ನೀವು ಮಾತ್ರ ಯಾರ ಮುಂದೆಯೂ ತುಟಿ ಬಿಚ್ಚಬೇಡಿ."

ಎಲ್ಲರೂ ಒಪ್ಪಿಕೊಂಡರು. ಇಬ್ಬರೂ ಹೊರ ಬಂದೆವು.

ಸುಧೀರ ತನ್ನ ಮನೆಗೆ ಕರೆದೊಯ್ದ. ಅವನ ಮದುವೆಯಾಗಿದೆ. ಒಂದು ಮಗೂ ಸಹ ಇದೆ. ಒಂದು ವರ್ಷದ್ದು... ಮುದ್ದಾದ ಹೆಣ್ಣು ಮಗು. ಹೆಸರು ರಮ್ಯ... ಆತ್ಮೀಯತೆಯಿಂದ ಸ್ವಾಗತಿಸಿದ ಅವನ ಪತ್ನಿ ಮೊದಲು ಚಹಾ ಮಾಡಿ ತಂದಿಟ್ಟು "ನೀವು ಮಾತಾಡ್ತಿರಿ... ನಾನು ಊಟ ರೆಡಿ ಮಾಡ್ತೇನೆ" ಎಂದಳು. ಮಗುವಿನ ಜೊತೆ ಸ್ವಲ್ಪ ಹೊತ್ತು ಕಳೆದೆವು. ಅದು ನಿದ್ರಿಸುತ್ತಲೇ ವಿ.ಸಿ.ಪಿ. ಯಲ್ಲಿ ಇಂಗ್ಲಿಷ್ ಚಿತ್ರ ನೋಡಿದ್ದಾಯಿತು. ಸುಧೀರನ ಹೆಂಡತಿ ಬಂದು ಊಟಕ್ಕೆ ಕರೆದಳು. ಮೂರು ಜನ ನಗುತ್ತ ಕಲೆಯುತ್ತ ಊಟ ಮಾಡಿದೆವು. ನಾನೊಬ್ಬ ಕೊಲೆಗಾರ. ನನ್ನ ತಲೆ ಮೇಲೆ ಮೃತ್ಯುಖಡ್ಗ ನೇತಾಡುತ್ತಿದೆ ಎಂಬುದನ್ನೇ ನಾನು ಮರೆತಿದ್ದೆ.

"ನೀವೇಕೆ ಇನ್ನೂ ಮದುವೆ ಮಾಡಿಕೊಂಡಿಲ್ಲ?" ಒಮ್ಮೆಲೆ ಆಕೆ ಕೇಳಿದಳು.

"ಸರಿಯಾದ ಹುಡುಗಿ ಸಿಕ್ಕಿಲ್ಲ..." ನಾನು ಚುಟುಕಾಗಿ ಉತ್ತರಿಸಿದೆ.

"ಇನ್ನು ಹೆಚ್ಚು ಹುಡುಕಬೇಡಿ. ಬೇಗನೇ ಮದುವೆಯಾಗಿ... ಕಳೆದುಹೋದ ದಿನಗಳು ಮತ್ತೆ ಕೈಗೆ ಸಿಗೋದಿಲ್ಲ... ಪಶ್ಚಾತ್ತಾಪಪಡಬೇಕಾಗುತ್ತದೆ..."

ನಾನು ನಿರುತ್ತರನಾದೆ. ವಿಷಯ ನಿಜವಾಗಿತ್ತು. ಹತ್ತಾರು ಜನ ಹುಡುಗಿಯರಲ್ಲಿ ಒಬ್ಬರನ್ನೂ ಪಾಸು ಮಾಡದೇ ಅಪ್ಸರೆಯ ಸಂಗದಲ್ಲಿ ಬಿದ್ದು ಒದ್ದಾಡುತ್ತಿದ್ದೇನೆ.

ಇನ್ನೆಲ್ಲಿ ಮದುವೆ?... ಇದರಿಂದ ಬದುಕಿ ಬಂದ ಮೇಲೆ ತಾನೇ?

ಸಾಯಂಕಾಲ ಇಬ್ಬರೂ ಪುನಃ ಠಾಣೆಗೆ ಬಂದೆವು. ಸುಧೀರ ಹೇಳಿದ. "ದರ್ಶನ್... ನೀನು ನಿರಪರಾಧಿ ಎಂದು ನನಗೆ ಗೊತ್ತು. ಆದರೂ ಏನೂ ಮಾಡಲಿಕ್ಕಾಗದು. ನಾನು ಒಂದು ಮಾತ್ರ ಮಾಡಬಲ್ಲೆ..."

"ಏನು?"

"ನಿನ್ನನ್ನು ಇಲ್ಲಿಂದ ಓಡಿಸುವದು"

"ಏನೆಂದೆ?" ಗಾಬರಿಯಾಗಿ ಕೇಳಿದೆ.

"ಶ್ಶಾಂತಚಿತ್ತದಿಂದ ನನ್ನ ಮಾತು ಕೇಳು. ನೀನಿಲ್ಲಿಂದ ಓಡಿಹೋಗು. ಎಷ್ಟು ದಿನ ಸಾಧ್ಯವೋ ಅಷ್ಟುದಿನ ನಾನು ಈ ವಿಷಯ ಮುಚ್ಚಿಡುತ್ತೇನೆ. ನಿನ್ನಿಂದ ಸಾಧ್ಯವಾದರೆ ಅಪ್ಸರೆಯನ್ನೋ—ಜಯಚಂದ್ರನನ್ನೋ ಹುಡುಕು—ಅವರು ಸಿಕ್ಕರೆ ನನ್ನ ಮನೆಗೆ ಫೋನು ಮಾಡು... ಸಿಗದಿದ್ದರೆ ದೂರ ಅತೀ ದೂರ ದೇಶದ ಯಾವದಾದರೂ ಒಂದು ಮೂಲೆಯಲ್ಲಿ ವಾಸಮಾಡು. ಮರಳಿ ಬರಬೇಡ."

"ಸುಧೀರ—ಇದೇನಿದು?—ನಾನು ಓಡಿ ಹೋದರೆ ನಿನ್ನ ಗತಿ ಏನು?"

"ಅದರ ಬಗ್ಗೆ ನೀನು ಯೋಚಿಸಬೇಡ. ಬಹಳವಾದರೆ ಸಸ್ಪೆಂಡ್ ಮಾಡ್ತಾರೆ. ಆಮೇಲೆ ವಿಚಾರಣೆ. ಕೊನೆಯ ಶಿಕ್ಷೆ ಕೆಲಸದಿಂದ ತೆಗೆಯುತ್ತಾರೆ. ನಿನ್ನ ಪ್ರಾಣಕ್ಕಿಂತ ನನಗೆ ನೌಕರಿ ಹೆಚ್ಚಿನದಲ್ಲ... ನಿರಪರಾಧಿಯಾದ ನಿನ್ನನ್ನೂ ರಕ್ಷಿಸಲು ನಾನು ಪ್ರಯತ್ನಿಸಿ ನ್ಯಾಯದೇವತೆಯ ಮೆಚ್ಚುಗೆಗೆ ಪಾತ್ರನಾಗುತ್ತೇನೆ."

"ಒಲ್ಲೆ... ನನಗಿಷ್ಟವಿಲ್ಲ... ನಿನ್ನನ್ನೂ ನಾನು ಕಷ್ಟದಲ್ಲಿ ಸಿಲುಕಿಸಲಾರೆ."

"ನೀನೊಬ್ಬ ಹುಚ್ಚ... ಇಲ್ಲಿ ಕೇಳು... ನಾನೀಗ ಸಾಕಷ್ಟು ಗಳಿಸಿದ್ದೇನೆ. ನಾನು, ನನ್ನ ಮಕ್ಕಳು ಹಾಯಾಗಿ ಕೂತು ತಿನ್ನುವಷ್ಟು. ನನಗಿನ್ನು ಸಾಕು... ಈಗಲ್ಲದಿದ್ದರೂ ಇನ್ನೊಂದೆರಡು ವರ್ಷಕ್ಕೆ ನಾನು ಈ ನೌಕರಿಗೆ 'ಗುಡ್ ಬೈ' ಹೇಳುವವನಿದ್ದೇನೆ. ತಿಳೀತಾ... ಹೂಂ... ಇಂದು ರಾತ್ರಿ ನೀನು ಇಲ್ಲಿಂದ ಪಲಾಯನ ಮಾಡಬೇಕು. ಒಂದು ಮಾತ್ರ ನೆನಪಿಡು, ನಿನಗೆ ಪೊಲೀಸರಿಂದ ಯಾವ ಭಯವೂ ಇಲ್ಲ... ನಾನೆಲ್ಲ ವ್ಯವಸ್ಥೆ ಮಾಡುತ್ತೇನೆ... ಕುತ್ತಿಗೆಗೆ ಬಂದಾಗ ನೀನು ಅವರಿಗೆ ನನ್ನ ಹೆಸರು ಹೇಳು... ಎಷ್ಟು ಸಾಧ್ಯವೋ ಅಷ್ಟು ಅವರಿಂದ ದೂರವಿರು. ಏನೇ ಬಂದರೂ ನಾನಿದ್ದೇನೆ... ನಿನ್ನ ವಿಷಯ ಎಲ್ಲಾ ನನ್ನ ಸ್ಟಾಫಿಗೆ ಹೇಳಿರುತ್ತೇನೆ."

ಸುಧೀರನ ಮಿತ್ರತ್ವ ಕಂಡು ಮನಸ್ಸು ಮೂಕವಾಯಿತು?

ಯಾರಿದ್ದಾರೆ ಇಂಥ ಬಲಿದಾನ ಮಾಡುವವರು?...

ನನ್ನ ಮೌನವೇ ಅವನಿಗೆ ಉತ್ತರವಾಯಿತು.

"ಶಹಬ್ಬಾಸ್" ಎಂದಾಗ ಅವನ ಕಣ್ಣುಗಳಲ್ಲಿ ನೀರಾಡಿತ್ತು.

8

"ಏನಿದು? ಎಷ್ಟು ಬೇಗ ಬಂದ್ಬಿಟ್ರಿ?... ನಮ್ಮ ಗೋಕರ್ಣ ಅಷ್ಟು ಪ್ರೀತಿನಾ?" ಭಟ್ಟರು ಆತ್ಮೀಯತೆಯಿಂದ ಕೇಳಿದರು. ಪಾಪ! ಅವರಿಗೇನು ಗೊತ್ತು? ಗೋಕರ್ಣ ನನ್ನನ್ನು ಎಲ್ಲಿಂದ ಎಲ್ಲಿಗೆ ಒಯ್ದಿದೆ ಎಂದು. ಹಾಗೆ ಮುಗುಳುನಗೆ ನಕ್ಕೆ... ನನಗೆ ಮೊದಲಿದ್ದ ಕೋಣೆಯ ಬೀಗದ ಕೈ ಕೊಟ್ಟರು. ಬಂದೆ... ಸುನೀಲ ಕಾಫಿ... ಉಪ್ಪಿಟ್ಟು ತಂದಿತ್ತ. ಟಿಫಿನ್ ಮಾಡಿ ಸ್ನಾನ ಮಾಡಿದೆ. ಆಮೇಲೆ ಹೊರಬಂದು ದೇವಸ್ಥಾನಕ್ಕೆ ಹೋಗಿ ದರ್ಶನ ಪಡೆದೆ. ಊರೆಲ್ಲಾ ಸುತ್ತಾಡಿದೆ. ಕೆಲವೊಂದು ಸಾಮಾನು ಕೊಂಡೆ...

ಒಂದು ವಿಷಯ ಸ್ಪಷ್ಟವಾಗಿತ್ತು...

ಎಲ್ಲೂ ಅಪ್ಸರೆಯಾಗಲಿ... ಅವಳ ಹಿಂದಿದ್ದ ಗೂಂಡಾಗಳಾಗಲೀ ಕಾಣಲಿಲ್ಲ. ಅವರ ಹೆಜ್ಜೆ ಗುರುತೂ ಸಹ ಗೋಕರ್ಣದಲ್ಲಿರಲಿಲ್ಲ... ಕೋಣೆಗೆ ಬಂದು ಹಾಸಿಗೆ ಮೇಲೆ ಉರುಳಿದೆ. ಮಧ್ಯಾಹ್ನ ಊಟ ತಂದವಳು ಸವಿತಾ. ಆಕೆ ಬಂದಾಗ ಬೇಕೆಂತಲೇ ನಿದ್ದೆಬಂದಂತೆ ಸೋಗು ಹಾಕಿದೆ. ಊಟದ ತಟ್ಟೆ ಟಿಪಾಯ್ ಮೇಲಿಟ್ಟು ಆಕೆ ನನ್ನ ಕೋಣೆಯಲ್ಲಿದ್ದ ವಸ್ತುಗಳನ್ನು ಸಂಭ್ರಮ—ಅಚ್ಚರಿಯಿಂದ ನೋಡತೊಡಗಿದಳು.

ಬಗೆಬಗೆಯ ಆಟಿಕೆಗಳು... ರಿಬ್ಬನ್ನು... ಬಳೆ... ದೊಡ್ಡ ದೊಡ್ಡ ಬೊಂಬೆಗಳು... ನೃತ್ಯಮಾಡುವ ಹುಡುಗಿ, ಲಾಗಹಾಕುವ ಮಂಗ, ಡ್ರಂ ಬಾರಿಸುವ ಕರಡಿ... ಎಲ್ಲಾ ನೋಡಿ ಆಕೆ ಮರುಳಾಗಿ ನಿಂತಾಗ ನಾನು ಎದ್ದು ಕುಳಿತೆ.

"ಅರೆ ಸವಿತಾ, ಯಾವಾಗ ಬಂದೆ...". ಅಚ್ಚರಿ ವ್ಯಕ್ತಪಡಿಸಿ ಕೇಳಿದೆ.

"ಇದೀಗ... ಊಟ ತಂದಿದ್ದೇನೆ."

"ಸರಿ" ಎಂದು ಹೇಳಿ ಮೇಲೆದ್ದು ಮುಖ ತೊಳೆದುಬಂದೆ. ಊಟ ಮಾಡತೊಡಗಿದೆ. ತುಸು ಹೊತ್ತು ನಿಂತ ಆಕೆ ಹೊರಳಿ ಹೊರಳಿ ಆಟಿಕೆಗಳತ್ತ ನೋಡುತ್ತ ಹೋದಳು.

ನಾನು ಮನದಲ್ಲೇ ನಕ್ಕೆ.

ನನ್ನ ಟ್ರಿಕ್ ಸಫಲ ಎನಿಸಿತ್ತು. ನಾನವಳ ಭಾವನೆಗಳನ್ನು ಕೆಣಕಿದ್ದೆ.

ಅರ್ಧಗಂಟೆ ಕಳೆದಿರಲಿಲ್ಲ. ಮತ್ತೆ ಸವಿತಾ ಬಂದಳು. ತಟ್ಟೆ ಒಯ್ಯುವ ನೆಪದಲ್ಲಿ. ಅವಳು ಬಂದೇ ಬರುತ್ತಾಳೆಂದು ನನಗೆ ಗೊತ್ತೇ ಇತ್ತು. ಅವಳ ನಿರೀಕ್ಷೆಯಲ್ಲಿದ್ದ ನಾನು ಹಾಸಿಗೆ ಮೇಲೆ ಕುಳಿತು ಬೊಂಬೆಯೊಂದಿಗೆ ಆಡುತ್ತಿದ್ದೆ. ಅವಳು ಬಂದಾಗ ನನ್ನೆದುರು ಹತ್ತಾರು ಆಟಿಕೆಗಳು... ಎಲ್ಲಾ ನೋಡುತ್ತ ಕುಳಿತ ಆಕೆ ಕೇಳಿದಳು.

"ಮಾಮಾ ಇದನ್ನೆಲ್ಲ ಏಕೆ ತಂದಿರಿ?"

"ನನ್ನ ತಂಗಿಗೊಂದು ಪುಟ್ಟ ಮಗುವಿದೆ. ಅದಕ್ಕೆ ಕೊಡಲು."

ಆಕೆಗೆ ನಿರಾಶೆ ಆಯಿತು. ಸಪ್ಪೆ ಮುಖ ಮಾಡಿದಳು.

"ಅಷ್ಟೂ ಕೊಡಬೇಕಾ?"

"ಹೌದಮ್ಮಾ. ಇವಷ್ಟೇ ಸಾಲದು. ಅವಳು ಮಹಾ ತುಂಟಿ."

ಮನದಲ್ಲೇ ನನ್ನ ಕಲ್ಪನೆಯ ಮಗುವನ್ನು ಶಪಿಸಿದಳು.


"ಮಾಮಾ ನನಗೊಂದು ಬೊಂಬೆ ಕೊಡಿ ಸಾಕು."

"ಆಗೋದಿಲ್ಲಮ್ಮ" ನಾನು ನಿರ್ದಾಕ್ಷಿಣ್ಯವಾಗಿ ಹೇಳಿದಾಗ ಆಕೆ ಎದ್ದು ಹೊರಗೆ ಹೋದಳು.

ಅವಳು ಹೋಗುತ್ತಲೇ ನಾನು ಮನದಲ್ಲೇ ನಕ್ಕೆ. ಈ ಬಾರಿ ನಾನವಳಲ್ಲಿ ಆಶೆ ಹುಟ್ಟಿಸಿ ಅದನ್ನು ಅಲ್ಲೇ ಚಿಗುಟಿ ಹಾಕಿದ್ದೆ. ಆಕೆ ಮನದಲ್ಲೇ ನೊಂದುಕೊಂಡಿದ್ದಳು. ಅವಳಿಗೆ ಯಾವುದೇ ರೀತಿ ಆಟಿಗೆ ಅಥವಾ ಬೊಂಬೆ ಪಡೆಯಲೇ ಬೇಕಾಗಿತ್ತು. ಹೀಗಾಗಿ ಆಕೆ ಪುನಃ ನನ್ನಲ್ಲಿಗೆ ಬರಲೇ ಬೇಕಾಗಿತ್ತು. ಈ ವಾದ ನನ್ನದಲ್ಲ... ಮನೋವಿಜ್ಞಾನಿಗಳದು.

ಸಂಜೆ ನಾನು ರೂಮಿಗೆ ಬೀಗ ಹಾಕಿಕೊಂಡು ಹೊರಗೆ ಹೋದೆ. ಬೇಗನೇ ಮರಳಿ ಬರಲಿಲ್ಲ. ತುಂಬಾ ತಡಮಾಡಿ ಅಂದರೆ ರಾತ್ರಿ ಹತ್ತು ಗಂಟೆಗೆ ಕೋಣೆಗೆ ಬಂದೆ. ಕೋಣೆ ಬಾಗಿಲಿಗೇ ಸವಿತಾ ಕುಳಿತಿದ್ದಳು. ನನಗೆ ಕೆಡುಕೆನಿಸಿತು. ಮಗು ರಾತ್ರಿ ಸಮಯದಲ್ಲಿ ಒಂಟಿಯಾಗಿ ಕುಳಿತಿದ್ದನ್ನು ಕಂಡು... ಮರುಕ್ಷಣ ಮನಸ್ಸು ಕಲ್ಲು ಮಾಡಿ ಕೊಂಡೆ. ನಾನು ಬದುಕಬೇಕಾಗಿತ್ತಲ್ಲ ಅದಕ್ಕೆ.

"ಮಾಮಾ ಎಷ್ಟೊತ್ತು... ಅಡಿಗೆ ಎಲ್ಲಾ



ನಾನು ನಿಮ್ಮ ಅಸ್ವೀಕೃತ ಬರಹಗಳನ್ನೆಲ್ಲ ನಿಮ್ಮ ಕೈಗೇ ಪ್ರಾಮಾಣಿಕವಾಗಿ ಮುಟ್ಟಿಸು ತ್ತಿದ್ದೇನೆ..., ಆದ್ರೂ ನೀವು ನನ್ಮೇಲೆ ಗೂಢಚಾರಿಕೆಯನ್ನಿಟ್ಟಿರುವುದು ಏನೂ ಚೆನ್ನಾಗಿರಲ್ಲ ನೋಡ್ರಿ...!

ಆರಿಹೋಗಿದೆ" ಆಕೆ ದೂರಿತ್ತಳು.

"ಆರಲಿ ಬಿಡು ನನಗೆ ಹಸಿವೆ ಇಲ್ಲ... ನೀನು ಮಲಗು"

"ಹಾಗೆಂದರೆ ಹೇಗೆ? ಬರಿಹೊಟ್ಟೆಯಿಂದ ಮಲಗಬಾರದು. ಇರು ತಟ್ಟೆ ತರುತ್ತೇನೆ" ಬೇಡ ಬೇಡವೆಂದರೂ ಓಡಿಹೋದ ಆಕೆ ಊಟದ ತಟ್ಟೆಯೊಡನೆ ಬಂದಾಗ ನಾನು ಕೈಕಾಲು ತೊಳೆದು ಬಟ್ಟೆ ಬದಲಾಯಿಸಿದ್ದೆ. ಒಂದೆರಡು ಬೊಂಬೆ... ಆಟಿಕೆ ಅವಳ ಕೈಗೆ ಕೊಟ್ಟು ನನ್ನ ಊಟ ಆಗುವವರೆಗೂ ಆಡ್ತಿರು ಎಂದೆ. ಅವಳಿಗೆ ತುಂಬಾ ಖುಷಿ ಆಯ್ತು.

ನಾನವಳನ್ನೇ ನೋಡ್ತಾ ಊಟ ಮಾಡಿದೆ. ನಾನು ಬೇಗನೇ ಊಟ ಮುಗಿಸಿದ್ದು ಅವಳಿಗೆ ನಿರಾಶೆ ಆಯ್ತು. ಸವಿತಾ ಅಂಗಲಾಚಿದಳು.

"ಮಾಮಾ... ಎರಡು ಬೊಂಬೆ ನಾನು ಒಯ್ತೇನೆ. ಬೆಳಿಗ್ಗೆ ಮತ್ತೆ ವಾಪಸ್ ತರುತ್ತೇನೆ?"

"ಬೇಡಮ್ಮಾ ಬೇಡ. ಬೊಂಬೆ ಕೆಟ್ಟು ಹೋಗುತ್ತೆ."

ಹುಣ್ಣಿನ ಮೇಲೆ ಬರೆ ಎಳೆದಷ್ಟು ನೋವಾಯಿತವಳಿಗೆ. ಮರುಕ್ಷಣ ಹೇಳಿದೆ.

"ಹಾಂ. ಒಂದು ಶರ್ತಿನ ಮೇಲೆ ನಾನು ನಿನಗೆ ಬೊಂಬೆ ಕೊಡಬಲ್ಲೆ."

"ಬೇಗ ಹೇಳು... " ಅವಳ ಕಣ್ಣುಗಳಲ್ಲಿ ಹತ್ತಾರು ದೀಪಗಳು ಮಿನುಗಿದವು.

"ನೀನು ಅಪ್ಸರೆಯ ನಿಜವಾದ ಹೆಸರು ವಿಳಾಸ ಹೇಳಿದರೆ ನಿನಗೆ ಬೇಕಾದ ಬೊಂಬೆ ನೀನು ಒಯ್ಯಬಹುದು..." ನಾನೊಂದು ಕ್ಷಣ ಅವಳನ್ನು ನಿರೀಕ್ಷಿಸಿದೆ. ಅವಳಲ್ಲಿ ತಾಕಲಾಟ ನಡೆದಿತ್ತು. ನಾನು ಆಶೆ ಹೆಚ್ಚಿಸಿದೆ.

"ಹಾಂ, ನೀನು ಸರಿಯಾಗಿ ಹೇಳಿದರೆ ಈ ಆಟಿಗೆಗಳು ನಿನಗೇ..." ದಾಳ ಎಸೆದೆ.

"ಏನು? ಎಲ್ಲಾ ನನಗೇನಾ?... ಮತ್ತೆ... ಮತ್ತೆ... ನಿಮ್ಮ ತಂಗಿ ಮಗುವಿಗೆ?"

"ಬೇರೆ ಕೊಂಡರಾಯ್ತು... ಒಪ್ಪಿಗೇನಾ?..."

"ಹೂಂ..." ಗೋಣು ಆಡಿಸಿದಳು.

"ಗುಡ್. ಹಾಗಾದರೆ ಹೇಳು. ಅಪ್ಸರೆ ಯಾರು? ಅವಳ ಹೆಸರೇನು?"

"ನಂಗೆ ಗೊತ್ತಿಲ್ಲ..." ಹಿಮಾಲಯದಿಂದ ಕೆಳಗೆ ಪ್ರಪಾತಕ್ಕೆ ತಳ್ಳಿದಂತಾಯ್ತು... ಸಿಟ್ಟಿನಿಂದ ನಾನು ನನ್ನ ಎಲ್ಲಾ ಬೊಂಬೆ ಕೂಡಿಸಿ ಬ್ಯಾಗಿಗೆ ತುರುಕಿದೆ. ಅವಳ ಕೈಯಲ್ಲಿಯ ಆಟಿಕೆಯನ್ನು ಕಿತ್ತುಕೊಂಡು "ಹೋಗಿನ್ನು... ನನಗೇನೂ ಬೇಡ" ಎಂದೆ.

"ಮಾಮಾ... ನಿಜವಾಗಿ ನನಗೆ ಗೊತ್ತಿಲ್ಲ. ಅಮ್ಮನ ಹತ್ತಿರ ಅವರ ಫೋಟೋ ಇದೆ. ಅಮ್ಮಂಗೆ ಎಲ್ಲಾ ಗೊತ್ತಿದೆ. ನಾನು ಕೇಳಿಕೊಂಡು ಬಂದು ನಾಳೆ ಹೇಳ್ತೇನೆ. ಬೇಕಾದ್ರೆ ಫೋಟೋನು ತರ್ತೇನೆ." ಕಮರಿದ ಆಸೆ ಚಿಗುರಿತು.

"ಹಾಗಾದರೆ ಎಲ್ಲಾ ಬೊಂಬೆ ನಿನಗೆ, ಹೆಸರು–ಅಡ್ರೆಸ್ ಎಲ್ಲಾ ಬೇಕು. ಫೋಟೋನೂ."

"ಹೂಂ. ಒಂದಲ್ಲ, ಭಾಳ ಫೋಟೋ ಇವೆ. ಎಲ್ಲಾ ತರುತೇನೆ."

"ಗುಡ್. ಹಾಗೇ ಮಾಡು."

"ಈಗ ಬೊಂಬೆ ಒಯ್ಯಲಾ."

"ಊಹೂಂ... ನಾನು ಹೇಳಿದ್ದು ಎಲ್ಲಾ ಆದ್ಮೇಲೆ... ಎಲ್ಲಾ ಆಟಿಗೆ ನಿಂದೇ..."

ನನಗೆ ಗೊತ್ತು ಖಂಡಿತಾ ರಾತ್ರಿ ಎಲ್ಲಾ ಸವಿತಾ ನಿದ್ದೆ ಮಾಡಲಾರಳೆಂದು. ನಿದ್ದೆ ಹೋದರೂ ಕನಸಲ್ಲಿ ಈ ಎಲ್ಲಾ ಬೊಂಬೆಗಳು ಕುಣಿಯುತ್ತಿರುತ್ತವೆ.

ಮುಂಜಾನೆ ಬೇಗ ಎದ್ದು ಕೋಟಿ ತೀರ್ಥಕ್ಕೆ ಹೋಗಿ ಸ್ನಾನ ಮಾಡಿ ಈಶ್ವರ ದರ್ಶನ ಮಾಡಿಕೊಂಡೆ. ಅದೇ ಸೂರ್ಯ ಉದಯಿಸುತ್ತಿದ್ದ. ಸೂರ್ಯೋದಯ ಕಂಡು ಉದಯಿಸುವ ಸೂರ್ಯನಿಗೆ ಕೈಮುಗಿದು ಬೇಡಿಕೊಂಡೆ, "ಯಾವ ರೀತಿ ನೀನು ಕತ್ತಲೆ ಸೀಳಿ ಬೆಳಕಿಗೆ ದಾರಿ ಮಾಡುತ್ತಿಯೋ ಹಾಗೇ ನನ್ನ ಬಾಳಿನಲ್ಲಿ ಕವಿದಿರುವ ಕತ್ತಲೆ ಸೀಳಿ ಬೆಳಕು ಚೆಲ್ಲುವ ಶಕ್ತಿ ಕೊಡು" ಎಂದು.

ನನ್ನ ಬರುವನ್ನು ಸವಿತಾ ಕಾತರತೆಯಿಂದ ಕಾಯುತ್ತಿದ್ದಳು. ಸ್ಕೂಲ್ ಬ್ಯಾಗಿನಲ್ಲಿ ಮುಚ್ಚಿಕೊಂಡು ತಂದ 2-3 ಆಲ್ಬಂ ನನ್ಮುಂದೆ ಇಟ್ಟು

ನನ್ನೂರು ನನ್ನ ಜನ

ಜಿಲ್ಲೆಯ ಟೆಲಿಕಾಂ ಚಟುವಟಿಕೆಗಳು

ತಂತಿ ಇಲಾಖೆ ನಮ್ಮ ಜಿಲ್ಲೆಯಲ್ಲಿ ತನ್ನ ಕೆಲ ಹೊಸ ಪ್ರಯೋಗಗಳನ್ನು ಮಾಡಿದೆ. ಕರ್ನಾಟಕದಲ್ಲಿ ಪ್ರಪ್ರಥಮವಾಗಿ 135 ಲೈನ್ ಸಾಮರ್ಥ್ಯದ ಮೂರು ಬೋರ್ಡಿನ M.A. X.III (ಚಿಕ್ಕ ಸ್ವಚಲ ದೂರವಾಣಿ ಕೇಂದ್ರ)ಯನ್ನು ಹುಳಿಯಾರಿನಲ್ಲಿ 1986ರಲ್ಲಿ ಸ್ಥಾಪಿಸಲಾಯಿತು. ಎಷ್ಟೋ ದೊಡ್ಡ ನಗರಗಳಿಗೂ ಇನ್ನೂ ಲಭ್ಯವಿಲ್ಲದ Pillar Systemವನ್ನು ತಿಪಟೂರಿನಂತಹ ಪುಟ್ಟ ನಗರದಲ್ಲಿ ಅಳವಡಿಸಲಾಯಿತು. Krone type Pillar ಹಾಗೂ Drop Wire Accessory, Push Button Telephoneಗಳನ್ನೂ ಇಲ್ಲಿಯೇ ಮೊದಲು ಬಳಸಲಾಯಿತು. ದಕ್ಷಿಣ ಭಾರತದಲ್ಲಿಯೇ ಅತಿ ದೊಡ್ಡದಾದ ಜಪಾನ್ ತಾಂತ್ರಿಕತೆಯ 1000 ಲೈನ್ ಸಾಮರ್ಥ್ಯದ NEAX (1988ರಲ್ಲಿ) ತಿಪಟೂರಿನಲ್ಲಿದೆ. Drop Wire ಮೇಲೆ P. C. M. Systemನ್ನು ಗುಬ್ಬಿ-ತುಮಕೂರು ನಡುವೆ ಸ್ಥಾಪಿಸಲು ಪ್ರಯತ್ನ ನಡೆಯಿತು. ಆದರೆ ಕೆಲ ತಾಂತ್ರಿಕ ಕಾರಣಗಳಿಂದಾಗಿ ಕೈಬಿಡಲಾಯಿತು.

● ಎಸ್. ಎಸ್. ಮರೆಗುದ್ದಿಕರ್, ತಿಪಟೂರು

ಹೇಳಿದಳು.

"ಅವಳ ಹೆಸರು ಅಪ್ಸರೆಯಲ್ಲ... ಮಂದಾಕಿನಿ... ನಮ್ಮ ಅವ್ವನ ಗೆಳತಿ ತಂಗಿ ಆಕೆ... ಅವ್ರು ವಿಜಾಪುರದವರು... ಇದ್ಕೂ ಹೆಚ್ಚಿಗೆ ನನಗೆ ಗೊತ್ತಿಲ್ಲ..."

ಇದಕ್ಕೂ ಹೆಚ್ಚಿಗೆ ಕಾಡಿಸುವುದು ಸರಿಯಲ್ಲ ವೆನಿಸಿತು. ಪಾಪ! ಎಂದುಕೊಂಡು ಎಲ್ಲಾ ಆಟಿಗೆ ಬೊಂಬೆ ಪೆಟ್ಟಿಗೆಯಲ್ಲಿ ತುಂಬಿ ಅವಳ ಕೈಲಿತ್ತಾಗ ನನ್ನ ಕೆನ್ನೆಗೆ ಮುತ್ತಿಟ್ಟು "ಥ್ಯಾಂಕ್ಯು ಮಾಮಾ" ಎಂದು ಹೇಳಿ ಅವಳು ಮೊಲದ ಮರಿಯಂತೆ ಓಡಿದಾಗ ನಾನು ಪುಲಕಿತನಾಗಿದ್ದೆ.

ಒಂದೊಂದಾಗಿ ಮೂರೂ ಆಲ್ಬಂ ತಿರುವಿ ಹಾಕಿದೆ... ಅಪ್ಸರೆ ಉರ್ಫ್ ಮಂದಾಕಿನಿಯ ಒಟ್ಟು ಇಪ್ಪತ್ತೊಂಬತ್ತು ಫೋಟೋಗಳಿದ್ದವು. ಹೆಚ್ಚು ಮದುವೆ ಕಾಲದವು. ಎಂಟು, ಹತ್ತು ಬೇರೆ ಬೇರೆ... ಸಂಬಂಧಿಕರು – ಆಪ್ತರು – ಗೆಳತಿಯರೊಂದಿಗೆ. ಆ ಎಲ್ಲಾ ಫೋಟೋ ತೆಗೆದು ನನ್ನ ಬ್ಯಾಗಿಗೇರಿಸಿದೆ... ಇನ್ನು ಮಂದಾಕಿನಿ ಯನ್ನು ಹುಡುಕಬೇಕಿತ್ತು. ಅವಳನ್ನು ಹುಡುಕ ಬೇಕೆಂದರೆ ಸವಿತಾಳ ಅವ್ವನನ್ನು ಕೆಣಕಬೇಕು. ಅವರ ಊರು, ತಂದೆ, ತಾಯಿ ಎಲ್ಲಾ ವಿಚಾರಿಸಿ ದರೆ ಮಂದಾಕಿನಿ ವಿಷಯ ತಿಳಿಯುತ್ತದೆ.

ಅದಕ್ಕಾಗಿ ನಾನು ಸಿದ್ಧನಾದೆ.

ಭಟ್ಟರನ್ನು ಕಾಣಲು ಬಂದೆ. ಇಂದು ನಾನು ಹೋಗುತ್ತೇನೆ ಎಂದೆ. ಅವಲಕ್ಕಿ ಚಹ ಬಂದಿತು. ಸೇವಿಸಿದೆ. ಮಾತಾಡುತ್ತ ಸವಿತಾಳ ತಾಯಿ ಬಗ್ಗೆ ವಿಚಾರಿಸಿದೆ. ಅವಳ ಊರು, ತಂದೆ, ತಾಯಿ ಬಗ್ಗೆ ಕೇಳಿದೆ. ಊರು ನೋಡುವ ಆಶೆ ಎಂದಾಗ "ಅವಶ್ಯ ಹೋಗಿ ಬರ್ರಿ... ನಮ್ಮ ಬೀಗ್ರು ಗೋವಿಂದರಾಯರು... ಬಳ್ಳಾರಿ ಊರಿಗೇ ದೊಡ್ಡ ಶ್ರೀಮಂತರು... ಅರಮನೆಯಂಥ ಮನೆ ಇದೆ... ಹುಬ್ಬಳ್ಳಿಯಿಂದ ನೇರವಾಗಿ ಬಸ್ ಇವೆ. ಐದಾರು ಗಂಟೆ ದಾರಿ" ಭಟ್ಟರು ಎಂದರು ತಟಕ್ಕನೆ...

ಸರಿ ಎಂದು ತಲೆ ಹಾಕಿ ಮೇಲೆದ್ದೆ. ಸವಿತಾ ಬಂದು "ಅಜ್ಜ ಅಜ್ಜಿಗೆ ನನ್ನ ನಮಸ್ಕಾರ ಹೇಳು... ಹಾಗೇ ಮಂದಾಕಿನೀ ಆಂಟಿಗೂ" ಎಂದಳು ತುಂಟತನದಿಂದ... ಮಹಾ ಘಾಟಿ.

"ಯಾವ ಮಂದಾಕಿನಿ?" ಎಂದೆ ಬೇಕೆಂತಲೇ. ಭಟ್ಟರು ಉತ್ತರಿಸಿದರು

"ಮಂದಾಕಿನೀನಾ... ಅವಳದೇನು ಕೇಳ್ತೀರಿ... ಅದೊಂದು ದೊಡ್ಡ ಕತೆ..." ಉಸುರ್ಗರೆದರು.

"ಅದೆಲ್ಲಾ ಸರಿ. ಆದರೆ ಯಾರವಳು ಮಂದಾಕಿನಿ ಅಂದ್ರಿ..."

"ನನ್ನ ಸೊಸೆಗೆ ದೂರದ ಸಂಬಂಧಿ... ಅಲ್ಲೇ ಇರತಾರೆ. ಬಳ್ಳಾರಿಯಿಂದ ಎಂಟು, ಹತ್ತು ಕಿಲೋಮೀಟರ್ ದೂರದಲ್ಲಿ, ಸುಬ್ಬರಾಯರ ಮಗಳಾಕೆ... ಹೋಗ್ಲಿ ಬಿಡಿ. ಅವರಿವರ ವಿಷಯ ಯಾಕೆ?"

ಅನಾಯಾಸವಾಗಿ ನನಗೆಲ್ಲಾ ವಿಷಯ ತಿಳಿ ದಿತ್ತು. ಮುದುಡಿದ ಮನಸ್ಸು ಮುದಗೊಂಡಿತು. ನೇರವಾಗಿ ಬಸ್‌ಸ್ಟ್ಯಾಂಡಿಗೆ ಬಂದೆ. ಹುಬ್ಬಳ್ಳಿ ಬಸ್ ಸಿದ್ಧವಾಗಿತ್ತು. ಸಂಜೆ ಆರು ಗಂಟೆಗೆ ನಾನು ಹುಬ್ಬಳ್ಳಿಯಲ್ಲಿದ್ದೆ. ಅಲ್ಲಿಂದ ಐದಾರು ತಾಸು ದಾರಿ... ಹನ್ನೊಂದೂವರೆಗೆ ನಾನು ನನ್ನ ಗುರಿ ಬಳ್ಳಾರಿ ತಲುಪಿದ್ದೆ... ಮಧ್ಯದಲ್ಲಿ ಯಾವ ತೊಂದರೆಗಳೂ ಬಂದಿರಲಿಲ್ಲ... ಹತ್ತಾರು ಪೊಲೀಸರು ಕಣ್ಣಿಗೆ ಬಿದ್ದಿದ್ದರೂ ಕೆಲವೊಬ್ಬರು ಪಕ್ಕದಲ್ಲಿ ಹಾಯ್ದು ಹೋಗಿದ್ದರೂ ಯಾರೂ ಕಣ್ಣೆತ್ತಿ ನನ್ನತ್ತ ನೋಡಿರಲಿಲ್ಲ... ಸುಧೀರ ವಚನ ಪಾಲಿಸಿದ್ದ...

ರಾತ್ರಿ ಸುಖವಾಗಿ ನಿದ್ದೆ ಮಾಡಿದೆ. ಮುಂಜಾನೆ ಎದ್ದು ಸ್ನಾನ ಮಾಡಿ ರೂಮಿಗೇ ತಿಂಡಿಕಾಫಿ ತರಿಸಿ ಸೇವಿಸಿದೆ. ಪೇಪರ್ ಬಂದಿತ್ತು. ಓದುತ್ತಾ ಹೋದೆ. ಒಳಗಿನ ಪುಟದಲ್ಲಿ ಪ್ರಕಟವಾದ ಚಿಕ್ಕ ಸುದ್ದಿ... ಓದುತ್ತಿದ್ದಂತೆ ಮನಸ್ಸು ನೋವಿನಿಂದ ಚೀರಿತು. "ವಿಶೇಷ ತನಿಖಾದಳದ ಸೀನಿಯರ್ ಆಫೀಸರ್ ಸುಧೀರ ಜಾಧವ ಅವರನ್ನು ಕೆಲಸ ದಿಂದ ಸಸ್ಪೆಂಡ್ ಮಾಡಲಾಗಿದೆ. ಕೊಲೆಯ ಅಪರಾಧದ ಮೇಲೆ ಲಾಕಪ್‌ನಲ್ಲಿದ್ದ ಸುಪ್ರಸಿದ್ಧ ಕಾದಂಬರಿಕಾರ ಹಾಗೂ ಚಲನಚಿತ್ರ ಲೇಖಕ ದರ್ಶನ್ ಅವರು ಪರಾರಿ ಆದ ಬಗ್ಗೆ ಅವರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ದರ್ಶನ್ ಅವರ ಶೋಧನೆ ಚುರುಕುಗೊಳಿಸುವುದಾಗಿ ಹಿರಿಯ ಅಧಿಕಾರಿಗಳು ನಮ್ಮ ಬಾತ್ಮಿದಾರರಿಗೆ ತಿಳಿಸಿರು ತ್ತಾರೆ."

ಇನ್ನು ನಾನು ಚುರುಕಾಗಲೇಬೇಕಿತ್ತು. ಮೈ ಎಲ್ಲಾ ಕಣ್ಣಾಗಿ ನನ್ನ ನಾನೇ ಕಾಪಾಡಿಕೊಳ್ಳುವ ಸಮಯ ಬಂದಿತ್ತು. ಸುಧೀರ ಅಧಿಕಾರದಲ್ಲಿರುವ ವರೆಗೆ ನಾನು ಸುರಕ್ಷಿತನಾಗಿದ್ದೆ. ಹಾಸಿಗೆಯಿಂದ

ಎದ್ದು ಕರಾಟೆಯ ಟ್ರಿಕ್ಸ್‌ಗಳನ್ನು ಮೆಲುಕು ಹಾಕಿದೆ. ಒಂದರ್ಧ ಗಂಟೆ ರೂಮಿನಲ್ಲೇ ರೂಢಿ ಮಾಡಿದೆ. ಮೈ ಎಲ್ಲಾ ಬೆವತು ಬನಿಯನ್ ಒದ್ದೆಯಾಗಿತ್ತು. ಮೊದಲೇ ಬಳ್ಳಾರಿ ಬಿಸಿಲು... ಎಂಟೂವರೆ ಆಗಿದ್ದರೂ ಚುರುಕು ಮುಟ್ಟಿಸುತ್ತಿತ್ತು. ಬನಿಯನ್ ತೆಗೆದು ಫ್ಯಾನಿನ ಕೆಳಗೆ ಚೆಲ್ಲಿ ಕಿಟಕಿಗೆ ಬಂದು ನಿಂತೆ. ಎದುರಿಗೇ ಬಸ್ ಸ್ಟ್ಯಾಂಡ್... ಚಟುವಟಿಕೆಯಲ್ಲಿದ್ದ ಜನ ಸಾಗರ... ಸಾಲಾಗಿ ನಿಂತ ಆಟೋಗಳು. ಆಟೋ ಪಕ್ಕದಲ್ಲಿ ನಿಂತಿದ್ದ ಸಿಗರೇಟು ಸೇದುವಾತ ರಹಸ್ಯಮಯವಾಗಿ ಕಂಡ. ಮರೆಗೆ ನಿಂತು ಅವನನ್ನು ನಿರೀಕ್ಷಿಸಿದೆ. ಐದೂವರೆ ಫೂಟು ಎತ್ತರ. ದೃಢಕಾಯ... ತಲೆಯಲ್ಲಿ ಕೂದಲು ಕಡಿಮೆಯಿದ್ದರೂ ಆಕರ್ಷಕವಾಗಿ ಕಾಣುತ್ತಿದ್ದ. ಪ್ಯಾಂಟು, ಬುಶ್‌ಶರ್ಟು, ಬೂಟು. ನೂರಾರು ಜನರಲ್ಲಿ ಒಬ್ಬನಾಗಿದ್ದರೂ ಅವರನ್ನು ಬಿಟ್ಟು ಬೇರೆ ಬಗೆಯ ವ್ಯಕ್ತಿತ್ವ ಆತ ಪಡೆದಿದ್ದಾನೆ ಎನಿಸಿತು. ಸರಿದು ಕಿಟಕಿಗೆ ಬಂದು ನಿಂತೆ. ನನ್ನತ್ತ ನೋಡುತ್ತಲೇ ಆತ ಸರಕ್‌ನೆ ಆಟೋಗಳ ಹಿಂದೆ ಮರೆಯಾದ.

ಮನದಲ್ಲಿ ಸಂಶಯ ಹೆಡೆಯಾಡಿತು.

ಯಾರೀತ?... ನನ್ನ ಚಲನವಲನದ ಮೇಲೆ ಕಣ್ಣಿಡುತ್ತಿದ್ದಾನೆ... ಅಪ್ಸರೆಗೆ ಸೇರಿದವನೋ... ಜಯಚಂದ್ರನ ಕಡೆಯವನೋ... ಆ ಕುರುಚಲು ಗಡ್ಡದ ಗೂಂಡಾನ ಪಂಗಡದವನೋ ಅಥವಾ ಪೊಲೀಸರಿಗೆ ಸಂಬಂಧಿಸಿದವನೋ...

ಈ ನಾಲ್ವರಲ್ಲಿ ಯಾರೇ ಇದ್ದರೂ ಅವನಿಂದ ನನಗೆ ಅಪಾಯ ತಾನೇ... ನನ್ನ ಮಿತ್ರನಂತೂ ಅಲ್ಲವಲ್ಲ...

ಮೈ ಜಾಡಿಸಿ ಬಯಲಿಗೆ ಬರುವ ಸಮಯ ಬಂದಿತು.

ನಾನೂ ಸನ್ನದ್ಧನಾದೆ...

ಮೊದಲೇ ತಂದಿಟ್ಟು ಕೊಂಡಿದ್ದ ಲುಂಗಿ ಸುತ್ತಿಕೊಂಡು ಮೇಲೆ ಮೊಂಡು ಅಂಗಿ ಧರಿಸಿ, ತಲೆಗೆ ಬಿಳಿ ವಸ್ತ್ರ ಸುತ್ತಿಕೊಂಡೆ. ಕಾಲಲ್ಲಿ ಕೆಂಪು ಸ್ಯಾಂಡಲ್ಸ ನನ್ನ ವೇಷಕ್ಕೆ ಹೊಂದೋದಿಲ್ಲ ಅನಿಸಿದ್ರೂ ಏನೂ ಮಾಡುವಂತಿರಲಿಲ್ಲ. ಏನು ಬದಲಿಸಿದರೂ ಅವನ್ನು ಮಾತ್ರ ಬದಲಿಸಲು ಮನಸ್ಸಾಗಲಿಲ್ಲ. ಕನ್ನಡಿಯಲ್ಲಿ ನನ್ನ ನಾ ನೋಡಿಕೊಂಡೆ. ನನಗೇ ಸಂಶಯ ಬರುವಂತಾಯಿತು. ಇನ್ನು ಬೇರೆಯವರಿಗೆ ಗುರುತಿಸಲು ಸ್ವಲ್ಪ ಕಷ್ಟ ಆದೀತು. ಆ ಸ್ವಲ್ಪ ಕಷ್ಟವೇ ನನಗೆ ಜೀವದಾನವಾಗುವುದರಲ್ಲಿ ಸಂದೇಹವಿರಲಿಲ್ಲ. ಬೀಗ ಹಾಕಿ ಬೀಗ ಜೇಬಲ್ಲೇ ಇಟ್ಟುಕೊಂಡು ಕೆಳಗೆ ಬಂದೆ. ಬೇಕೆಂತಲೇ ರೂಮಿನ ಕಿಟಕಿ ಹಾಕಿರಲಿಲ್ಲ. ನೋಡುವಾಗಲೆ ಆಸಾಮಿ ಇನ್ನೂ ರೂಮಿನಲ್ಲೇ ಇದೆ ಎಂದು ಅನಿಸಿರಬೇಕು.

ನಾಲ್ಕಾರು ನಿಮಿಷ ಹಾಗೇ ರಿಸೆಪ್ಶನ್‌ನಲ್ಲಿ ಸಮಯ ಕಳೆದು ಸರಸರನೆ ಹೊರ ಬಂದು ರಿಕ್ಷಾ ಸ್ಟ್ಯಾಂಡಿನಿಂದ ವಿರುದ್ಧ ದಿಕ್ಕಿನಲ್ಲಿ ಸಾಗಿದೆ. ಸ್ವಲ್ಪ ದೂರ ಹೋಗಿ ಹೊರಳಿ ನೋಡಿದೆ. ಮೊದಲು ಕಂಡ ರಹಸ್ಯಮಯ ವ್ಯಕ್ತಿ ಕಾಣಿಸಲಿಲ್ಲ. ಅಲ್ಲಿಂದಲೇ ಒಂದು ಆಟೋ ಹಿಡಿದು ಗೋವಿಂದ ರಾಯರ ಹೆಸರು ಹೇಳಿದೆ. "ಪ್ಯಾಲೇಸ್ ಗೋವಿಂದ ರಾಯರಾ?" ಎಂದು ಮರಳಿ ಆತ ಕೇಳಿದಾಗ ಗಲಿಬಿಲಿಗೊಂಡೆ. ಪ್ಯಾಲೇಸ್ ಗೋವಿಂದರಾಯರೆಂದು ಭಟ್ಟರು ಹೇಳಿದ್ದು ನೆನಪಿಗೆ ಬರಲಿಲ್ಲ. ಅವರ ಮನೆ ಅರಮನೆ ಹಾಗಿದೆ ಎಂದರು. ತಟಕ್ಕನೆ ನೆನಪಾಯಿತು. ಅರಮನೆ ಅಂದರೆ ಪ್ಯಾಲೇಸ್. ಅರಮನೆ ಥರ ಮನೆ ಇರೋ ಗೋವಿಂದರಾಯರು. ಅಂದ್ಮೇಲೆ "ಪ್ಯಾಲೇಸ್ ಗೋವಿಂದರಾಯರು ಸರಿ ಅಲ್ಲವೆ?" ತಟಕ್ಕನೆ ಹೇಳ್ದೆ.... ಹಾ... ಅವರೇ.

ಆಟೋ ಮತ್ತೆ ಬಸ್‌ಸ್ಟ್ಯಾಂಡ್ ಮುಂದೆ ಬಂದಾಗ ಗಾಬರಿಯಾಯಿತು. ಹಿಂದೆ ಸರಿದು ಮರೆಮಾಡಿಕೊಂಡೆ. ಎಷ್ಟೋ ದೂರ ಬಂದ ಮೇಲೆ ಮೈಚಳಿ ಬಿಟ್ಟು ಅತ್ತಿತ್ತ ದೃಷ್ಟಿ ಹರಿಸುತ್ತ ಬಿಸಿಲುಗುದುರೆ ಸವಾರಿ ಮಾಡುತ್ತಿರುವಾಗ ಬಳ್ಳಾರಿಯ ಸೌಂದರ್ಯ ಸವಿಯತೊಡಗಿದೆ.

ಗೋವಿಂದರಾಯರ ಮನೆ ಅರಮನೆಯಷ್ಟು ದೊಡ್ಡದಾಗಿರದಿದ್ರೂ ಸಾಮಾನ್ಯ ಮನೆಗಳಿಗಿಂತ ಹತ್ತಾರು ಪಟ್ಟು ದೊಡ್ಡದಾಗಿತ್ತು. ಅದರೊಂದಿಗೆ ಕಟ್ಟಡದ ವಿನ್ಯಾಸ ಹಿಂದಿನ ಕಾಲದ ಸಣ್ಣ-ಪುಟ್ಟ ಸಂಸ್ಥಾನಿಕರ ಅರಮನೆಗಳಂತೆ ಇದ್ದುದರಿಂದ ಎಲ್ಲರೂ ಅದಕ್ಕೆ ಪ್ಯಾಲೇಸ್ ಎಂದೇ ಕರೆಯುತ್ತಿದ್ದರು. ಆಟೋದವನಿಗೆ ದುಡ್ಡು ಕೊಟ್ಟು ಗೇಟು ತೆರೆದು ಒಳಗೆ ಕಾಲಿಟ್ಟೆ. ಎಡಬಲಕ್ಕೆ ಸುಂದರವಾದ ತೋಟ. ಮಧ್ಯೆ ಮಧ್ಯೆ ತೆಂಗಿನ ಹಾಗೂ ಹಣ್ಣಿನ ಗಿಡಗಳು. ಹತ್ತಾರು ಮರಗಳ ಮಧ್ಯೆ ಇರುವ ಚಿಕ್ಕ ಅರಮನೆ ನಯನಮನೋ

ಮೊದಲು ಪರೀಕ್ಷೆ ಮಾಡುವ ಯೋಜನೆ

ಬಿಳಿಯ ಮಚ್ಚೆಗೆ ಚಿಕಿತ್ಸಾ ಪರೀಕ್ಷೆ



ಚಿಕಿತ್ಸೆಗೆ ಮೊದಲು



ಚಿಕಿತ್ಸೆಯಾದ ಮೇಲೆ

ವರ್ಷಾಂತರದಿಂದ ಪರಿಶ್ರಮ ಮಾಡಿ, ಬಿಳಿ ಮಚ್ಚೆಯ ಚಿಕಿತ್ಸೆಗೆ ಸಫಲತೆಯನ್ನು ಕಂಡುಹಿಡಿಯಲಾಗಿದೆ.ಇದು ಇಷ್ಟು ತೀಕ್ಷ್ಣ ಮತ್ತು ಪ್ರಭಾವಶಾಲಿಯಾಗಿ ಚಿಕಿತ್ಸೆ ಪ್ರಾರಂಭದಲ್ಲಿಯೆ ಮಚ್ಚೆಯ ಬಣ್ಣವು ಬದಲಾಗುತ್ತದೆ ಮತ್ತು ಶೀಘ್ರವಾಗಿ ಮಚ್ಚೆಗಳುಂಟಾಗುವ ಕಾರಣಗಳನ್ನು ದೂರ ಮಾಡಿ ಚರ್ಮದ ಬಣ್ಣಗಳಾಗಿ ಮಾಡುತ್ತದೆ. ಈಗ ಪ್ರಚಾರವಾದ 'ಮೊದಲು ಪರೀಕ್ಷೆ ಮಾಡುವ ಯೋಜನೆಯ' ಅವಧಿಯಲ್ಲಿ 7 ದಿನಗಳ ಔಷಧಿಯನ್ನು ಉಚಿತವಾಗಿ ಕೊಡಲಾಗುತ್ತದೆ. ಆದರಿಂದ ಮೊದಲು ಪರೀಕ್ಷೆ ಮಾಡಿಸಿ ಗುಣವನ್ನು ಪಡೆದು, ಸಂತುಷ್ಟವಾದ ಮೇಲೆ ಚಿಕಿತ್ಸೆ ಆರಂಭಿಸಿ. ಆದ್ದರಿಂದ ನಿರಾಶ ರೋಗಿಗಳು ಮತ್ತು ಬೇರೆ ಕಡೆ ಚಿಕಿತ್ಸೆ ಪಡೆದಿರುವ ರೋಗಿಗಳು ಈ ಯೋಜನೆಯ ಲಾಭವನ್ನು ಅವಶ್ಯವಾಗಿ ಪಡೆಯಬಹುದು. ರೋಗಿಯ ವಯಸ್ಸು ಮಚ್ಚೆ ಇರುವ ಸ್ಥಳ ಮತ್ತು ಎಷ್ಟು ದಿನದಿಂದ ಇದೆಯೋ ಅವಶ್ಯವಾಗಿ ಬರೆದು ಕಳುಹಿಸಿರಿ.

SHYAM AYURVED BHAVAN (MRF) P.O. Katri Sarai (GAYA)

ನರೆತ ಕೂದಲಿಗಾಗಿ ಚಿಕಿತ್ಸೆ

ಕೂದಲಿಗೆ ಬಣ್ಣ ಕೊಡುವ ಗೋಜಿಲ್ಲ. ನಮ್ಮ ಆಯುರ್ವೇದದ ಚಿಕಿತ್ಸೆ ನಿಮ್ಮ ನರೆತ ಕೂದಲಿಗೆ ಶಾಶ್ವತವಾದ ಕಪ್ಪು ಬಣ್ಣವನ್ನು ಕೊಡುತ್ತದೆ. ನಿಮ್ಮ ಮಸ್ತಕವನ್ನು ತಂಪಾಗಿಡುವುದಲ್ಲದೆ ನಿಮ್ಮ ಸ್ಮರಣ-ಶಕ್ತಿಯನ್ನು ತೀಕ್ಷ್ಣವಾಗಿಸುತ್ತದೆ. ಹಗಲು ರಾತ್ರಿ ಎನ್ನದೆ ಕೆಲಸಮಾಡುವ ಬುದ್ಧಿಜೀವಿಗಳಿಗೆ ಇದೊಂದು ವರದಾನ. ಒಂದು ಕೋರ್ಸ್ (3 ಸೀಸೆಗಳು)–Rs. 75/- ಅಂಚೆಯ ಹಾಗೂ ಪ್ಯಾಕಿಂಗ್‌ನ ಖರ್ಚು ಬೇರೆ.

ಕೂದಲಿನ ಉದುರುವಿಕೆ ನರೆತ ಕೂದಲಿಕೆಗಾಗಿ ಚಿಕಿತ್ಸೆ

ಸುದೀರ್ಘ ಸಂಶೋಧನೆಯ ಫಲವಾಗಿ ಹುಡುಕಿ ತೆಗೆದ ಹೊಸದೊಂದು ಉಪಾಯ ಕೂದಲಿನ ಉದುರುವಿಕೆಯನ್ನು ತಡೆಹಿಡಿದು ಬೋಳುತಲೆಯ ಮೇಲೆ ಹೊಸ ಕೂದಲನ್ನು ಹುಟ್ಟಿಸುತ್ತದೆ. ಅಲ್ಲದೆ ಇದು ಮಸ್ತಕವನ್ನು ತಂಪಾಗಿ ಇಡುತ್ತದೆ. ಚಿಕಿತ್ಸೆಯ ಒಂದು ಕೋರ್ಸ್ **Rs. 75/-** ಅಂಚೆಯ ಹಾಗೂ ಪ್ಯಾಕಿಂಗ್‌ನ ಮೂಲ್ಯ ಬೇರೆ.

SHYAM AYURVED BHAVAN (T-92) Katri Sarai (GAYA)

ಜೀವನದಲ್ಲಿ ನಿರಾಶೆಯೇಕೆ?

ವಿವಾಹ ಜೀವನದ ನಿಜವಾದ ಆನಂದವನ್ನು ಪಡೆಯಿರಿ

ಚಿಕ್ಕ ವಯಸ್ಸಿನಲ್ಲಿ ಕೆಟ್ಟ ಕೆಲಸದಿಂದ ಅಥವಾ ದುಷ್ಟ ಸಹವಾಸದ ಕಾರಣದಿಂದ ಅಥವಾ ಅಧಿಕ ವಯಸ್ಸಾಗಿರುವ ಕಾರಣದಿಂದ ಅಥವಾ ಇಂದಿನ ಉಸಿರು ಕಟ್ಟುವಿಕೆ ಮತ್ತು ಸುಸ್ತಿನ ಜೀವನದಿಂದ ನಿಮ್ಮ ವಿವಾಹಿತ ಜೀವನವು ದುಃಖಮಯವಾಗಿದೆ. ಆದರಿಂದ ನಾಚಿಕೆ ಅಥವಾ ಸಂಕೋಚದಿಂದ ನಿಮ್ಮ ನಿರ್ಬಲತೆಯನ್ನು ತೋರಿಸಬೇಡಿರಿ. ಹೀಗೆ ಮಾಡಿದರೆ ನಿಮ್ಮ ವಿವಾಹದ ಜೀವವು ದುಃಖಮಯವಾಗುತ್ತದೆ. ಆದರೆ ಸಮಯಕ್ಕೆ ಸರಿಯಾಗಿ ಮತ್ತು ಸರಿಯಾದ ಚಿಕಿತ್ಸೆಯಿಂದ ದುಃಖವನ್ನು ಸುಖಮಯಗೊಳಿಸಬಹುದು. ಸ್ತ್ರೀ ಅಥವಾ ಪುರುಷರಾಗಲಿ ಎಲ್ಲರಿಗೂ ಹೆಚ್ಚಿನ ಶಕ್ತಿ ಮತ್ತು ಹುರುಪು ಅವಶ್ಯಕವಾಗಿದೆ. ಅದನ್ನು ಗಮನದಲ್ಲಿಟ್ಟು ಪ್ರಾಚೀನ ಆಯುರ್ವೇದ ಗ್ರಂಥದಲ್ಲಿನ ಆಧಾರದ ಮೇಲೆ ಹೆಚ್ಚು ಶೋಧನೆ ಮತ್ತು ಹುಡುಕುವಿಕೆಯಿಂದ ಬಹುಮೂಲ್ಯ ಗುಣಕಾರಿಯಾದ ದ್ರವ್ಯದ ಪ್ರಯೋಗದಿಂದ ನೀವು ನಿಮ್ಮ ವಿವಾಹ ಜೀವನದ ನಿಜವಾದ ಆನಂದವನ್ನು ಪಡೆಯುತ್ತೀರಿ. ರೋಗದ ವಿವರವನ್ನು ವಯಸ್ಸಿನೊಡನೆ ನಿಸ್ಸಂಕೋಚವಾಗಿ ಬರೆಯಿರಿ,



ಅತ್ಯಮೂಲ್ಯ ಪುಸ್ತಕವಾದ ಯೌವನ ಸಂಜೀವಿನಿಯನ್ನು ಉಚಿತವಾಗಿ ಪಡೆಯಿರಿ.

ಚಿಕಿತ್ಸೆ ಸಂಬರಧವಾಗಿ ನಿಸ್ಸಂಕೋಚದಿಂದ ಬರೆಯಿರಿ.

ಪುರುಷರ ರೋಗಗಳು—ಸ್ವಪ್ನದೋಷ ಧಾತುಕ್ಷೀಣತೆ, ಶೀಘ್ರಸ್ಖಲನ, ಲಿಂಗದ ಬಲಹೀನತೆ, ಸೆಕೆ, ಉಷ್ಣರೋಗ, ನಪುಂಸಕತ್ವ, ಕಡಿಮೆ ವೀರ್ಯ

ಸ್ತ್ರೀಯರ ರೋಗಗಳು—ಬಿಳಿಸೆರಗು ಮಾಸಿಕ ದೋಷ, ಶೀತ ರೋಗ, ಸಂತಾನಹೀನತೆ.

SHYAM AYURVED BHAVAN (K.G.-92) P.O. Katri Sarai (GAYA)

ಹರವಾಗಿತ್ತು. ಮಾಲಿ ಓಡಿ ಬಂದು "ಯಾರು ಬೇಕು ಸ್ವಾಮೀ?" ಎಂದು ಕೇಳಿದ. "ಗೋಕರ್ಣ ದಿಂದ ಬಂದಿದಾರೆ ಅಂತ ಹೇಳು ನಿಮ್ಮೆಜಮಾನ ರಿಗೆ ನಾವು ಬೀಗರಾಗಬೇಕು" ಎಂದೆ ಗತ್ತಿನಿಂದ.

"ಬನ್ನಿ ಸ್ವಾಮಿ... ನೀವು ಬೈಠಕ್‌ನಲ್ಲಿ ಕೂತ್ಕೊಳ್ಳಿ" ಎಂದವನೇ ಆತ ಅಲ್ಲಿಂದ ಕಂಬಿ ಕಿತ್ತ. ಯಜಮಾನರ ಬೀಗರು ಬಂದ ವಿಷಯ ಶೀಘ್ರ ತಿಳಿಸಬೇಕಲ್ಲ.

ಬೈಠಕ್‌ನಲ್ಲಿ ಕುಳಿತೆ. ಹತ್ತು, ಹದಿನೈದು ನಿಮಿಷಗಳಲ್ಲಿ ಗೋವಿಂದರಾಯರು ಬಂದರು. ಅವರನ್ನು ನೋಡುತ್ತಲೇ ಸರಳ ವ್ಯಕ್ತಿ ಅನ್ನಿಸ ದಿರಲಿಲ್ಲ. ಅವರ ಹಿಂದೆಯೇ ಆಳು ಬೇಸನ್ ಉಂಡೆ, ಉಪ್ಪಿಟ್ಟು, ಚಹ ತಂದ. "ನನ್ನ ಟಿಫಿನ್ ಆಗಿದೆ" ಎಂದೆ. "ನಮ್ಮ ಮನೆಗೆ ಬರೋದು ಗೊತ್ತಿದ್ದೂ ಟಿಫಿನ್ ಮಾಡೀರಿ ಅಂದ್ರೆ ಇದು ಅಕ್ಷಮ್ಯ ಅಪರಾಧ... ಈ ತಿಂಡಿ ತಿಂದರೆ ಮಾತ್ರ ಕ್ಷಮೆ ಸಿಗುತ್ತದೆ" ಅಂದರು. ಅವರ ಆತ್ಮೀಯತೆಗೆ ಮಾರು ಹೋಗಿ ನನಗೆ ಬೇಕಾದ ವಿಷಯ ಕೆದಕ ತೊಡಗುತ್ತ ತಿಂಡಿ ತಿನ್ನತೊಡಗಿದೆ. ಮಂದಾಕಿನಿ... ಸುಬ್ಬರಾವ್‌ರ ವಿಷಯ ಬಂದಾಗ ತುಂಬಾ ನೊಂದುಕೊಂಡ ಅವರು ಹೇಳಿದರು.

"ಸುಬ್ಬರಾಯರು ಎಂಥಾ ದೊಡ್ಡ ಜನ... ಗೌರವಸ್ಥ ಕುಟುಂಬ ಅವರದು. ಅವರು ಒಲ್ಲೆ ಒಲ್ಲೆ ಅಂದರೂ ಜನ ಬಿಡಲಿಲ್ಲ. ಎತ್ತಿ ಹಿಡಿದು ಹತ್ತಿಪ್ಪತ್ತು ವರ್ಷಗಳ ಹಿಂದೆಯೇ ಅವರನ್ನು ಎಂ.ಎಲ್.ಎ. ಮಾಡಿದರು. ಬಡವರ ಬಂಧು ಎಂದು ಹೆಸರು ಬಂದದ್ದು ಅವರು ಮಾಡಿದ ಸೇವೆಯಿಂದಲೇ. ಆದರೆ ಅಂಥವರ ಹೊಟ್ಟೆ ಯಲ್ಲಿ ಮಂದಾಕಿನಿ ಹುಟ್ಟಿದ್ದು ಹಸುವಿನ ಹೊಟ್ಟೇಲಿ ಹಾವು ಹುಟ್ಟಿದಂತಾಯ್ತು."

"ಅಂದ್ರೆ – ಮಂದಾಕಿನಿ ಅಮ್ಮ ಅಷ್ಟು ಕೆಟ್ಟವಳಾ?"

"ಕೆಟ್ಟವಳಾಗಿದ್ದರೆ ಕ್ಷಮಿಸಬಹುದಿತ್ತು. ತಿದ್ದಿ ಸರಿದಾರಿಗೆ ತರಬಹುದಿತ್ತು."

"ಆದದ್ದಾದರೂ ಏನು?"

"ಮಂದಾಕಿನಿ ಒಳ್ಳೆ ಸುಂದರ ಹುಡುಗಿ. ನೋಡಿದವರ ಕಣ್ಣು ಕುಕ್ಕುವಂತಿದ್ದಳು... ಊರಲ್ಲಿಯ ಹುಡುಗನೊಬ್ಬ ಓದಿ ಪೊಲೀಸ ನಾಗಿದ್ದ... ಅವನಿಗೂ ಅವಳಿಗೂ ಹೇಗೆ ಸಂಬಂಧ ಬೆಳೆಯಿತೋ ತಿಳಿಯದು. ಒಂದು ದಿವಸ ಅವನ ಜೊತೆ ಆಕೆ ಓಡಿಹೋದಳು. ಮನೆತನದ ಗೌರವ, ಮರ್ಯಾದೆ ಎಲ್ಲಾ ಮಣ್ಣುಪಾಲಾಯಿತು."

"ಆ ಪೊಲೀಸ್ ಯಾರು?"

"ಸದಾನಂದ ಅವನ ಹೆಸರು... ಮುಂದೆ ರಾಜಧಾನಿಗೆ ವರ್ಗ ಮಾಡಿಸಿಕೊಂಡ. ಅವನ ಜೊತೆ ಆಕೆಯೂ ರಾಜಧಾನಿ ಸೇರಿದಳು. ಹೋಗ್ಲಿ ಬಿಡಿ ಅವಳ ಕತೆ ನಮಗೇಕೆ?"

"ಸುಬ್ಬರಾಯರು ಏನು ಮಾಡ್ತಿದಾರೆ?"

"ಅವರೂ ಅವಮಾನ ತಾಳಲಾರದೇ ಊರು ಬಿಟ್ಟು ರಾಜಧಾನಿ ಸೇರಿದರು. ಇಲ್ಲಿಯ ಎಲ್ಲಾ ಆಸ್ತಿ ಮಾರಿಯಾಯಿತು. ಸದ್ಯ ಅವರೂ ರಾಜಕೀಯ ದಲ್ಲಿ ದೊಡ್ಡ ಕುಳ. ಅವರ ಒಪ್ಪಿಗೆ ಇಲ್ಲದೆ ಒಂದು ಹುಲ್ಲು ಕಡ್ಡಿ ಸಹ ಅಲ್ಲಾಡುವುದಿಲ್ಲ..."

"ಹೀಗೋ. ಹಾಗಾದರೆ ದಯವಿಟ್ಟು ನಂಗೊಂದು ಉಪಕಾರ ಮಾಡಿ. ನನ್ನ ತಮ್ಮನಿ ಗೊಂದು ಉದ್ಯೋಗಕ್ಕಾಗಿ ಅಲೆಯುತ್ತಿದ್ದೇನೆ. ಅವರ ಶಿಫಾರಸು ಇದ್ರೆ ಸುಲಭವಾಗಬಹುದು. ಅವರ ವಿಳಾಸ ಅದರ ಜೊತೆ ಒಂದು ಪತ್ರ ಕೊಟ್ರೆ..."

"ಓಹ್ ಅದಕ್ಕೇನು... ಇರಿ ಬಂದೆ" ಅವರು ಎದ್ದು ಒಳಗೆ ಹೋದರು.

ನಾನು ಬಂದ ಕೆಲಸವಾಗಿತ್ತು. ಸುಬ್ಬರಾಯರು ರಾಜಧಾನಿಯಲ್ಲಿರುವುದರಿಂದ ಹಳ್ಳಿಗೆ ಹೋಗುವ ಆವಶ್ಯಕತೆ ಇರಲಿಲ್ಲ. ಇನ್ನು ಅಪ್ಸರೆ ಅರ್ಥಾತ್ ಮಂದಾಕಿನಿಯನ್ನು ಹಾರಿಸಿಕೊಂಡು ಹೋದ ಸದಾನಂದ... ಪೊಲೀಸ್‌ನನ್ನು ಅಲ್ಲೇ ಹುಡುಕು ವುದು. ಒಮ್ಮೆಲೆ ನನಗೆ ಕೊಲೆಯಾದ ಪೊಲೀಸನ ನೆನಪಾಯಿತು... ಅಂದು ಅಡ್ರೆಸ್ ತಂದು ನನಗೆ ತೋರಿಸುವಾಗ ಅಪ್ಸರೆ ಅವನನ್ನು ನೋಡಿ ಬೆಚ್ಚಿದ್ದಳು. ಬೆದರಿದ್ದಳು. ಅವನೂ ಸಹ ಅವಳನ್ನು ವಿಚಿತ್ರವಾಗಿ ನೋಡಿದ್ದ...

ಹಾಗಾದರೆ ಅವನೇ ಸದಾನಂದನೇ?

ಆತ ಹುಡುಕಿಕೊಂಡು ಬಂದದ್ದು ಅಪ್ಸರೆ ಯನ್ನು... ಜಯಚಂದ್ರನನ್ನಲ್ಲ...

ಅವನ ಕೊಲೆ ಮಾಡಿದವರಾರು?

ಅಪ್ಸರೆಯೇ? ಛೆ! ಹೆಣ್ಣಿನಿಂದ ಆಗುವ ಕೆಲಸವಲ್ಲವದು...

ಜಯಚಂದ್ರನೇನಾದರೂ ಅವಳಿಗೆ...

ಮನಸ್ಸಿಗೆ ಕಸಿವಿಸಿಯಾಯಿತು. ಈ ವಿಚಾರ

ಬರುತ್ತಲೇ ಅಪ್ಸರೆಯ ಬಗ್ಗೆ ಏನೂ ತಿಳಿಯದಿರುವಾಗ ಜಯಚಂದ್ರನ ಮಾತು ಕೇಳಿ ಕೋಪಗೊಂಡಿದ್ದೆ. ನೂರು ರೂಪಾಯಿಗೆ ಬರುವ ಸುಂದರ ಹಕ್ಕಿಗಳನ್ನು ಅಪ್ಸರಾ ಎಂದು ಅಂದಾಗ ಬೈದಿದ್ದೆ.

ಈಗ ರಾಯರಿಂದ ವಿಷಯ ತಿಳಿದ ಮೇಲೆ ಅಪ್ಸರಾ...

ಥೂ! ಅವಳ ಹೆಸರು ನುಡಿಯಲು ಹೇಸಿಗೆಯಾಯಿತು.

ರಾಯರು ಬಂದು ಪತ್ರ ನೀಡಿದರು. ಅವರಿಗೆ ವಂದಿಸಿ ಹೊರಬಂದೆ...

ಬಳ್ಳಾರಿ ಬಿಟ್ಟು ರಾಜಧಾನಿ ಬಂದು ಸೇರಿದೆ. ಹೊರಗೆ ಫ್ರೀಯಾಗಿ ತಿರುಗಾಡಲು ಭಯ. ರಾಜಧಾನಿ ಪೊಲೀಸರು ತುಂಬಾ ಚುರುಕು ಎಂದು ಕೇಳಿದ್ದೆ. ಹೀಗಿರುವಾಗ ರಾಜಧಾನಿ ಪೊಲೀಸ್‌ಗೆ ಸೇರಿದ ಸದಾನಂದನನ್ನು ಹುಡುಕಲು ನಾನು ಹೋಗುವುದೇ? ಚಿಂತಿತನಾದೆ. ಸಹಾಯಕ್ಕೊಬ್ಬರು ಬೇಕಾಗಿತ್ತು. ತಟಕ್ಕನೆ ನೆನಪಾದದ್ದು ನಂಜುಂಡಪ್ಪ. ಲಕ್ಷ್ಮಿ ಪ್ರಕಾಶನದ ಒಡೆಯ. ನನ್ನ ಹಲವಾರು ಕಾದಂಬರಿಗಳನ್ನು ಪ್ರಕಟಿಸಿದ್ದರು. ಸರಿ ಅವರೇ ಯೋಗ್ಯವೆಂದುಕೊಂಡು ರಾತ್ರಿಯಾಗುವುದನ್ನು ಕಾಯ್ದು ಆಮೇಲೆ ಹೊರಬಿದ್ದೆ. ನಂಜುಂಡಪ್ಪ ಬೇಗ ಮನೆ ಸೇರುವ ಜಾತಿಯವರಲ್ಲ ಎಂಬುದು ಚೆನ್ನಾಗಿ ಗೊತ್ತಿತ್ತು... ರಾತ್ರಿ ಹತ್ತರವರೆಗೆ ಎರಡು, ಮೂರು ಕಡೆ ಸುತ್ತಿ ಆಮೇಲೆ ಒಂದು ಬಾರ್

ನನ್ನೂರು ನನ್ನ ಜನ

'ಕಲ್ಪತರು ತಿಪಟೂರು'

ತಿಪಟೂರು ಎಂದ ತಕ್ಷಣ ಪ್ರತಿಯೊಬ್ಬರಿಗೂ ನೆನಪಿಗೆ ಬರುವುದು ತೆಂಗು—ಕರ್ನಾಟಕ ರಾಜ್ಯದಲ್ಲೇ ಅತಿಹೆಚ್ಚು ಕೊಬ್ಬರಿ ವಹಿವಾಟು ನಡೆಯುವ ಸ್ಥಳ. ರಾಷ್ಟ್ರೀಯ ಮಟ್ಟದಲ್ಲೂ ಖ್ಯಾತಿ ಗಳಿಸುತ್ತಿರುವ ಸ್ಥಳ. ವಾರದ ಎಲ್ಲಾ ದಿನಗಳಲ್ಲೂ ಕೊಬ್ಬರಿ ವಹಿವಾಟು ನಡೆದರೂ ಬುಧವಾರ ಮತ್ತು ಶನಿವಾರಗಳ ಮೆರುಗು ಇತರ ದಿನಗಳಿಗೆ ಬರುವುದಿಲ್ಲ. ಸುತ್ತಲಿನ ರೈತರು ತಮ್ಮ ಟ್ರ್ಯಾಕ್ಟರ್ ಅಥವಾ ಎತ್ತಿನ ಬಂಡಿಗಳಲ್ಲಿ ಶಕ್ತ್ಯಾನುಸಾರವಾಗಿ ಕೊಬ್ಬರಿ ಚೀಲಗಳನ್ನು ಈ ಎರಡು ದಿನಗಳು ಎಲ್ಲಾ ರಸ್ತೆಗಳಲ್ಲೂ ಸಾಲಾಗಿ ತರುವುದನ್ನು ನೋಡಲು ಚೆಂದ. ಆ ರೈತರೆಲ್ಲರೂ ಸಂಜೆ ಖಾಲಿ ಚೀಲಗಳ ಕಟ್ಟು ಮತ್ತು ತುಂಬಿದ ನೋಟಿನ ಕಟ್ಟುಗಳೊಡನೆ ಹಿಂದಿರುಗುವಾಗ ಎಲ್ಲರ ಬಾಯಿಯಲ್ಲೂ ಅಂದಿನ ಕೊಬ್ಬರಿಯ ಹರಾಜಿನ ಕೂಲಂಕಷ ಪರಿಶೀಲನೆಯೇ.

ಈ 'ಕಲ್ಪತರು ನಾಡು' ಅನಿರ್ದಿಷ್ಟವಾಗಿ ತನ್ನ ವಿಸ್ತೀರ್ಣವನ್ನು ದೊಡ್ಡದಾಗಿಸಿಕೊಳ್ಳತೊಡಗಿದೆ. ಆ ಭರದಲ್ಲಿ ಸುತ್ತಲಿನ ಹಳ್ಳಿಗಳಾದ ಮಾರನಗೆಲೆ, ಬಂಡಿಹಳ್ಳಿ, ಕಂಚಾಗಟ್ಟ, ಗೊರಗೊಂಡನಹಳ್ಳಿ ಇನ್ನೂ ಹಲವು ಹಳ್ಳಿಗಳನ್ನು ತನ್ನ ಉದರದಲ್ಲಿಟ್ಟು ಪೋಷಿಸುತ್ತಿದೆ. ಹಲವಾರು ಹೊಸ ಬಡಾವಣೆಗಳು ತಲೆಯೆತ್ತುತ್ತಿವೆ. ಹಳೆಯ ಬಡಾವಣೆಗಳಲ್ಲಿ ಸಂದುಗೊಂದುಗಳಲ್ಲಿ ಗುರುತಿಸಲಾಗದಂತೆ ನೌಕರರು ತಮ್ಮ ನಿವಾಸಗಳನ್ನು ಕಟ್ಟಿಸುತ್ತಿದ್ದಾರೆ.

ಸ್ಥಳೀಯರಿಗಿಂತ ಹೆಚ್ಚಾಗಿ ವಲಸೆ ಬಂದವರಿಂದಲೇ ತಿಪಟೂರಿನ ಜನಸಂಖ್ಯೆ ಹೆಚ್ಚಾಗಿ ಕಾಣುತ್ತಿರುವುದು ಗಮನಾರ್ಹ. ಅಂತಹವರಿಂದಲೇ ಹಲವಾರು ಹೋಟೆಲ್, ಆಟೋಮೊಬೈಲ್, ಎಲೆಕ್ಟ್ರಿಕಲ್ಸ್ ಹೀಗೆ ಒಂದೇ ಎರಡೇ—ಹೀಗೆ ಶಾಲೆ ಕಾಲೇಜುಗಳಿಗೆ ಬಂದು ಹೋಗುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚೇ.

ಇಲ್ಲಿನ ವಿಶೇಷಗಳೆಂದರೆ, STD ಸೌಲಭ್ಯ, ದೂರದರ್ಶನ ಮರುಪ್ರಸಾರ ಕೇಂದ್ರ, ಜಿಲ್ಲೆಯಲ್ಲೇ ಪ್ರಥಮವೆನಿಸಿದ ಜನತಾ ಡಿಲಕ್ಸ್ ಎಂಬ ಆರು ಅಂತಸ್ತಿನ ಲಿಫ್ಟ್ ಸೌಲಭ್ಯವುಳ್ಳ ಲಾಡ್ಜ್, ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜು ಹೀಗೆ ಇನ್ನೂ ಹಲವಾರು.

ಈ ತಿಪಟೂರಿನ ಯುವ ಜನಾಂಗದ ಮೇಲೆ ಇತ್ತೀಚೆಗೆ ಆಧುನಿಕತೆಯ ಗಾಳಿಯೂ ಬೀಸುತ್ತಿದೆ. ಉಡುಗೆ, ನಡೆ, ನುಡಿ, ತಮ್ಮ ವಾಹನಗಳ ವಿನ್ಯಾಸ ಬದಲಿಸುವಿಕೆ, ಉಪಾಹಾರ ಮುಂತಾದುವುಗಳಲ್ಲಿ ಬದಲಾವಣೆ ಕಂಡುಬಂದಿದೆ ಮತ್ತು ಕಂಡುಬರುತ್ತಲೂ ಇದೆ.

● ನವೀನ್ ಹಳೇಮನೆ, ತಿಪಟೂರು

ಹೊಕ್ಕು ಸ್ವಲ್ಪ ತೀರ್ಥ ಸೇವಿಸಿ ಹನ್ನೊಂದರ ನಂತರ ಮನೆ ತಲುಪುತ್ತಾರೆ. ತೀರ್ಥ ಸೇವಿಸಿದಾಗ ಅವರ ಜೊತೆ ಮಾತಾಡುವುದು ಎಷ್ಟು ಸಮಂಜಸ? ಕೆಲವೊಬ್ಬರು ತೀರ್ಥ ತೆಗೆದುಕೊಂಡಾಗಲೇ ಸತ್ಯ ಮಾತಾಡುತ್ತಾರೆ ಎಂಬ ವಿಷಯ ಬೇರೆ. ನನ್ನ ವಿಷಯಕ್ಕೆ ನಂಜುಂಡಪ್ಪ ಹಾಗೆಲ್ಲ ಸುಳ್ಳು ಹೇಳುವ ಪ್ರಮೇಯವೇ ಇಲ್ಲ. ಆದರೂ ಹತ್ತರೊಳಗೆ ಅವರನ್ನು ಹಿಡಿಯಬೇಕು ಎಂದು ನಿರ್ಧರಿಸಿ ನಾಲ್ಕಾರು ಬಾರ್‌ಗಳಿಗೆ ಭೇಟಿ ನೀಡಿದೆ. ಅಲ್ಲಿ ನಂಜುಂಡಪ್ಪ ಬಂದಿರಲಿಲ್ಲ. ಅವರಿಗೆ ಸಂದೇಶ ತಲುಪುವ ವ್ಯವಸ್ಥೆ ಮಾಡಿ ಕಮಲ ಲಾಡ್ಜ್‌ಗೆ ಬಂದೆ. ನನ್ನ ಖಾಯಂ ಲಾಡ್ಜ್. ಅರ್ಧ ಗಂಟೆಯಲ್ಲಿ ನಂಜುಂಡಪ್ಪನ ಫೋನು ಬಂತು. ಗಾಬರಿಯಾಗಿದ್ದುದು ಧ್ವನಿಯಲ್ಲಿ ಕಂಡುಬಂತು. 'ಕೂಡಲೇ ಬರುವಂತೆ ತಿಳಿಸಿದೆ'. ಅವರಿಗೆ ಗೊತ್ತು ನಾನೆಲ್ಲಿರುತ್ತೇನೆ ಅಂತ.

ನಂಜುಂಡಪ್ಪ ಬಂದರು. ಅವರಿಗೆ ನನ್ನ ಬಗ್ಗೆ ತಿಳಿದಿತ್ತು. ಗಾಬರಿಯಾಗಿದ್ದರು. "ಇದೆಲ್ಲಾ ಏನು? ಹೇಗಾಯ್ತು?" ಪಟಪಟನೆ ಕೇಳಿದರು.

"ಸ್ವಲ್ಪ ಸಮಾಧಾನ ಮಾಡಿಕೊಳ್ಳಿ. ನಿಧಾನವಾಗಿ ಹೇಳ್ತೇನೆ?"

ಆಮೇಲೆ ನಡೆದ ಎಲ್ಲಾ ವಿಷಯ ತಿಳಿಸಿ ಕೂಡಲೇ ನನಗೆ ಸದಾನಂದನ ಬಗ್ಗೆ ವಿವರ ಬೇಕು. ಅವನ ಫೋಟೋ ಸಿಕ್ಕರೆ ಇನ್ನೂ ಒಳಿತು ಅಂದೆ. ಆಯ್ತು. ನಾಳೆ ಮಧ್ಯಾಹ್ನದೊಳಗೇ ಎಲ್ಲಾ ತಿಳಿಸುತ್ತೇನೆ ಅಂದರು. ಸುಬ್ಬರಾವ್ ಬಗ್ಗೆ ಕೇಳಿದಾಗ "ಓಹ್ ಅವರೂ ನನಗೆ ಗೊತ್ತು. ನಾನು ಫೋನು ಮಾಡಿರುತ್ತೇನೆ. ಭೆಟ್ಟಿಯಾಗಿ, ಅವರ ಬಗ್ಗೆ ಭಯ ಬೇಡ" ಎಂದರು.

ಸಮಾಧಾನವಾಯಿತು... ಊಟ ಮಾಡಿಕೊಂಡು ಮನೆ ಕಡೆ ನಡೆದರು.


"ನೇರವಾಗಿ ಮನೆಗೋ... ತೀರ್ಥಕ್ಕೋ..." ಹಾಸ್ಯ ಮಾಡಿದೆ.

"ನಿಮ್ಮ ವಿಷಯಾನೇ ತಲೆಗೇರಿದೆ. ಇನ್ನು ಯಾವ ತೀರ್ಥವೂ ಬೇಕಾಗಿಲ್ಲ..."

ನಿಜವಾಗಿಯೂ ನನ್ನ ಬಗ್ಗೆ ಅವರಿಗೆ ದುಃಖವಾಗಿತ್ತು. ರಾತ್ರಿ ಕಳೆದು ಬೆಳಗಾಯಿತು. ಒಂಬತ್ತು ಗಂಟೆಗೆ ನಂಜುಂಡಪ್ಪನಿಂದ ಫೋನು ಬಂತು. "ಸುಬ್ಬಾರಾವ್ ಜೊತೆ ಮಾತಾಡಿರುವೆ. ಹತ್ತು ಗಂಟೆಗೆ ಭೆಟ್ಟಿಯಾಗಿ..."

ನಾನೊಬ್ಬ ಕೊಲೆಗಾರ. ಪೊಲೀಸ್ ಕಸ್ಟಡಿಯಿಂದ ಪಾರಾಗಿ ಬಂದ ಅಪರಾಧಿ ಎಂಬ ವಿಷಯ ಕಮಲ ಲಾಡ್ಜಿನ ಯಜಮಾನರಿಗೆ ಇನ್ನೂ ತಿಳಿದಿರಲಿಲ್ಲ. ಹೀಗಾಗಿ ಕೆಳಗೆ ಬಂದು ಅವರ ಜೊತೆ ಮಾತಾಡುತ್ತ ಕುಳಿತೆ. ಮೆನೇಜರ್ ರಾಮಣ್ಣ ಬಂದರು. ಮಾತು ಮಾತಿನಲ್ಲಿ ಸುಬ್ಬಾರಾವ್ ವಿಷಯ ಬಂದಿತು. ರಾಮಣ್ಣ ಹೇಳಿದರು,

"ಸುಬ್ಬಾರಾವ್ ದೇವರಂಥ ಮನುಷ್ಯರು. ರಾಜಕೀಯದಲ್ಲಿ ಅವರಿಗೆ ದೊಡ್ಡ ಸ್ಥಾನವಿದೆ. ಹೀಗಿದ್ದೂ ಅಧಿಕಾರಕ್ಕೆ ಆಸೆ ಪಡದೆ ತಮ್ಮ



ಪಾಡಿಗೆ ತಾವು ಜನಸೇವೆ ಮಾಡ್ತಾ ಇದಾರೆ."

ಸುಬ್ಬಾರಾಯರನ್ನು ಕಂಡು ನಮಸ್ಕರಿಸಿ, "ನಂಜುಂಡಪ್ಪ ಕಳಿಸಿದ್ದರು" ಎಂದೆ. "ಓಹ್ ಬನ್ನಿ..." ಎಂದು ಒಳಗೆ ನಡೆದರು. ನಾನು ಹಿಂಬಾಲಿಸಿದೆ. ಅವರ ಖಾಸಾ ಕೋಣೆಯಲ್ಲಿ ಕುಳಿತು ಪೀಠಿಕೆ ಬೆಳೆಸದೆ ನೇರವಾದ ವಿಷಯಕ್ಕೆ ಬಂದು ಅಪ್ಸರಾ ಉರ್ಫ್ ಮಂದಾಕಿನಿಯಿಂದ ಘಟಿಸಿದ ಎಲ್ಲಾ ವಿಷಯ ತಿಳಿಸಿ "ಸದ್ಯ ನಾನೀಗ ನೇಣುಗಂಬಕ್ಕೇರಲು ಸಿದ್ಧನಾಗಿ ನಿಂತಿದ್ದೇನೆ... ಏನೂ ತಪ್ಪು ಮಾಡದೆ ನಿರಪರಾಧಿಯಾಗಿದ್ದರೂ ಅಪರಾಧಿಯಾಗಿದ್ದೇನೆ... ಸದ್ಯ ನನಗೆ ನಿಮ್ಮ ಸಹಾಯ ಬೇಕು. ಹೇಗಾದರೂ ಮಾಡಿ ನನ್ನನ್ನು ಉಳಿಸಿ" ಎಂದು ಬೇಡಿಕೊಂಡೆ.

ಐದಾರು ನಿಮಿಷ ಅವರು ಮೂಕರಾಗಿ ಕುಳಿತಿದ್ದರು. ತಲೆ ಕೆಳಗೆ ಹಾಕಿದ ಅವರು ನನ್ನೊಡನೆ ಮಾತಾಡಲು ತಲೆ ಮೇಲೆತ್ತಿದಾಗ ಕೆನ್ನೆ ಒದ್ದೆಯಾಗಿತ್ತು.

"ನನ್ನ ಮಗಳಿಂದಾಗಿ ನೀವು ಅಪಾರ ಯಾತನೆ ಅನುಭವಿಸಿದ್ದೀರಿ. ದಯವಿಟ್ಟು ಕ್ಷಮಿಸಿ. ನಾನು ನಿಮ್ಮ ಅಪರಾಧಿ... ನನಗೇ ಶಿಕ್ಷೆ ನೀಡಿ..." ಎಂದೆನ್ನುತ್ತ ಅಳತೊಡಗಿದರು. ತಬ್ಬಿಬ್ಬಾಗಿ ನಾನು ಹಾಗೇ ಕುಳಿತಿದ್ದೆ. ಸ್ವಲ್ಪ ಹೊತ್ತಿನಲ್ಲಿ ಸಮಾಧಾನ ತೆಗೆದುಕೊಂಡು ಹೇಳಿದರು.

"ಪರಿಹಾರ ನನ್ನಲ್ಲಿ ಇಲ್ಲ... ಪ್ರಯತ್ನಿಸಬಲ್ಲೆ, ಈಗ ಮಂದಾಕಿನಿ ಎಲ್ಲಿದಾಳೆ."

"ನನಗೆ ಗೊತ್ತಿಲ್ಲ... ನಿಮ್ಮ ಬಳಿ ಬಂದಿರ ಬಹುದು ಎಂದು ತಿಳಿದಿದ್ದೆ."

"ಅವಳು ನನ್ನ ಮನೆ ಬಿಟ್ಟು ಒಂಬತ್ತು ವರ್ಷಗಳಾದವು... ಮತ್ತೆ ದರ್ಶನ ಎಲ್ಲಿ, ಒಂದು ಕೆಲಸ ಮಾಡಿ ನಾಳೆ ಸಂಜೆ ಎಲ್ಲಿ ಸಿಗುತ್ತೀರಿ?"

"ನೀವು ಹೇಳಿದಲ್ಲಿ."

"ಎಲ್ಲಿ ಇಳಿದುಕೊಂಡಿದ್ದೀರಿ?"

ನಾನು ಕಮಲ ಲಾಡ್ಜಿನ ವಿಳಾಸ ಕೊಟ್ಟೆ.

ಒಂದು ಹಾಳೆ ಮೇಲೆ ವಿಳಾಸ ಬರೆದು ನನ್ನ ಕೈಗಿತ್ತು ಹೇಳಿದರು,

"ಸದ್ಯ ನೀವು ಹೋಗಿ ಕಮಲದಲ್ಲೇ ಇರಿ. ರಾತ್ರಿ ರೂಮು ಖಾಲಿ ಮಾಡಿ ಈ ವಿಳಾಸಕ್ಕೆ ಹೋಗಿ. ಎಲ್ಲಾ ವ್ಯವಸ್ಥೆ ಆಗುತ್ತದೆ. ನನ್ನಿಂದ ಸೂಚನೆ ಬರುವವರೆಗೂ ಅಲ್ಲೇ ಇರಿ. ನಾನು ಏನಾದರೂ ಒಂದು ದಾರಿ ಹುಡುಕುತ್ತೇನೆ."

ಅವರ ಮಾತಿಗೆ ಒಪ್ಪಿಕೊಂಡು ನಮಸ್ಕರಿಸಿ ನಾನು ಮೇಲೆದ್ದೆ.

ರೂಮಿಗೆ ಬಂದಾಗ ನಂಜುಂಡಪ್ಪ ನನಗಾಗಿ ಕಾಯುತ್ತಿದ್ದ. ಏನೋ ವಿಷಯ ತಿಳಿಸಲು ಆತ ಉತ್ಸುಕನಾಗಿದ್ದ ಎಂಬುದು ಎದ್ದು ಕಾಣುತ್ತಿತ್ತು. ನನ್ನೊಂದಿಗೆ ಮೇಲೆ ಬಂದು ರೂಮು ಸೇರಿದ. ತಕ್ಷಣವೇ ಬಾಗಿಲು ಭದ್ರವಾಗಿ ಮುಚ್ಚಿ ಹೇಳಿದ,

"ಸದಾನಂದ ಪ್ರಳಯಾಂತಕ."

"ಏಕೆ? ಏನಾಯಿತು?"

"ಛೆ! ಛೆ! ನನಗೆ ನಂಬಿಕೆಯೇ ಆಗ್ತಾ ಇಲ್ಲ."

"ವಿಷಯವೇನೆಂದು ಮೊದಲು ಹೇಳಿ..." ನಂಜುಂಡಪ್ಪ ಹೇಳಲಾರಂಭಿಸಿದ.

ಸದಾನಂದ ಹೆಡ್‌ಕಾನ್‌ಸ್ಟೆಬಲ್ ಆಗಿದ್ದ. ಮಂದಾಕಿನಿಗೆ ಅಪ್ಸರೆ ಎಂದು ಹೊಸ ಹೆಸರು ಇಟ್ಟವ ಅವನೇ. ಅಪ್ರತಿಮ ರೂಪವತಿಯಾದ ಅವಳ ಮೇಲೆ ಅವನ ಮೇಲಧಿಕಾರಿಗಳ ಕಣ್ಣು ಬಿತ್ತು. ಒಂದು ದಿನ ಮಂದಾಕಿನಿಗೆ ತಿಳಿಯದಂತೆ ಅವಳಿಗೆ ಮೋಸ ಮಾಡಿ ಸ್ವತಃ ತಾನೇ ಮೇಲಿನವರಿಗೆ ಅವಳನ್ನು ಅರ್ಪಿಸಿದ. ಅಂದಿನಿಂದ ಇದೇ ಅವನ ವೃತ್ತಿಯಾಯಿತು. ದೊಡ್ಡವರು ಅವನ ಮಿತ್ರರಾದರು. ಶ್ರೀಮಂತ ಬಡಾವಣೆಯಲ್ಲಿ ದೊಡ್ಡದಾದ ಬಂಗಲೆ ಬಾಡಿಗೆ ಹಿಡಿದ. ಮಂದಾಕಿನಿ ಮನೆ ಒಡತಿ. ಅಲ್ಲಿ 8-10 ಹುಡುಗಿಯರನ್ನು ತಂದಿಟ್ಟ. ಬಿಜಿನೆಸ್ ಆರಂಭಿಸಿದ. ಅವನಿಗೆ ಸಹಾಯಕನಾದವ ಜಾನ್... ಆತ ಇನ್ನೂ ಒಂದು ಹೆಜ್ಜೆ ಮುಂದೆ ಹೋದ. ರಾಜಕಾರಣಿಗಳನ್ನು ಹೇಗೆ ಬುಟ್ಟಿಗೆ ಹಾಕಿಕೊಂಡನೋ ತಿಳಿಯದು. ನೋಡನೋಡುತ್ತಿರುವಂತೆ ರಾಜಧಾನಿಯಲ್ಲಿ ತಲೆ ಎತ್ತಿದ ಬೀರ್, ಬ್ರ್ಯಾಂಡಿ, ಪಬ್ ಬಾರ್‌ಗಳಿಗೆ ಆತ ಒಡೆಯನಾದ. ಸದಾನಂದ ಪಾಲುಗಾರ. ಒಮ್ಮೆ ಏನಾಯಿತೋ ಏನೋ ಮಂದಾಕಿನಿಗೂ ಜಾನ್‌ನಿಗೂ ಜಗಳವಾಯಿತು. ಸದಾನಂದ ಜಾನ್‌ನ ಪಕ್ಷ ಹಿಡಿದ. ಅಂದೇ ಮಂದಾಕಿನಿ ಅವರಿಗೆ ಕೈಕೊಟ್ಟು ಓಡಿಹೋದಳು. ಅದಾದ ಮೂರು ದಿನಕ್ಕೆ ಸದಾನಂದ ಪರಾರಿಯಾದ... ಆತ ಹೋಗುವ ಮುನ್ನ ಜಾನ್ ಸೇರಿಸಿಟ್ಟಿದ್ದ ಚಿನ್ನದ ಬಿಸ್ಕೆಟ್, ವಜ್ರ ಅಪಹರಿಸಿಕೊಂಡು ಹೋಗಿದ್ದಾನೆ ಎಂಬ ಸುದ್ದಿ... ಕಂಗಾಲಾದ ಜಾನ್.

ಕಂಪ್ಲೇಂಟು ಮಾಡುವಂತಿಲ್ಲ. ಹಾಗೇ ಕಂಪ್ಲೇಂಟು ನೀಡಿದ್ದರಿಂದ ಪೊಲೀಸರು ಆತ ಕೊಡುವ ಭಾರೀ ಬಹುಮಾನದ ಆಸೆಗೆ ಸದಾನಂದನನ್ನು ಹುಡುಕುತ್ತಿದ್ದಾರೆ."

"ಸದಾನಂದನ ಕೊಲೆಗೆ ಜಾನ್ ಕಾರಣ. ಹಾಗಾದರೆ..." ನಾನು ನುಡಿದೆ.

"ಖಂಡಿತವಾಗಿ... ಕೊಲೆಯ ಉದ್ದೇಶವೂ ಸ್ಪಷ್ಟವಾಗಿದೆ... ಜಾನ್‌ನಿಂದ ಅಪಹರಿಸಿದ ಬೆಲೆಬಾಳುವ ವಜ್ರ ಹಾಗೂ ಚಿನ್ನದ ಬಿಸ್ಕೆಟ್."

"ನನಗೆ ಇನ್ನೊಂದು ಸಂಶಯ... ಅಪ್ಸರಾ ಮತ್ತು ಸದಾನಂದ ಇಬ್ಬರೂ ಸೇರಿ ಏಕೆ ಪ್ಲಾನ್ ಮಾಡಿರಬಾರದು. ಮೊದಲು ಆಕೆ. ಆಮೇಲೆ ಸದಾನಂದ ಪರಾರಿಯಾದರು. ನಂತರ ಇಬ್ಬರಿಗೂ ನಮ್ಮ ಮನೆಯಲ್ಲಿ ಕೂಡುವ ಬಗ್ಗೆ ಒಪ್ಪಂದವೇಕೆ ಆಗಿರಬಾರದು?"

"ಅದೂ ಸಾಧ್ಯವಿದೆ. ನಿಮ್ಮ ತರ್ಕ ನಿಜವಾಗಿದ್ದರೆ ಸದಾನಂದನನ್ನು ಕೊಂದು ನಿಮ್ಮ ಮೇಲೆ ಅಪವಾದ ಬರುವಂತೆ ಮಾಡಿದವರಾರು?"

ನನ್ನಲ್ಲಿ ಉತ್ತರವಿರಲಿಲ್ಲ. ಅವರೇ ಉತ್ತರಿಸಿದರು.

"ನನಗನಿಸುವ ಮಟ್ಟಿಗೆ ರಾಜಧಾನಿಯಲ್ಲಿ ಜಾನ್ ಹಾಗೂ ಅವನ ಸಂಗಡಿಗರ ಹೆಸರಿನಿಂದ ಆರಂಭವಾಗಿರುವ ನೂರಾರು ಪಬ್, ಬೀರ್, ಬ್ರ್ಯಾಂಡಿ ಅಂಗಡಿಗಳಿಗೆ ಗುಪ್ತ ಯಜಮಾನ ಬೇರೊಬ್ಬನಿದ್ದಾನೆ. ಆತ ಸಾರ್ವಜನಿಕರ ಎದುರಿಗೆ ಬರಲು ಒಪ್ಪದೇ ಜಾನ್ ಹಾಗೂ ಸದಾನಂದರನ್ನು ಮುಂದೆ ಮಾಡಿದ್ದ... ಸದಾನಂದ ಕೈಕೊಡುತ್ತಲೂ ಜಾನ್ ಅವನ ಹಿಂದೆ ಬಿದ್ದ. ಸದಾನಂದನನ್ನು ಹಿಡಿದು ಮಾಲು ವಶಪಡಿಸಿಕೊಂಡ... ಹಣ್ಣು ತಿಂದ ಮೇಲೆ ಸಿಪ್ಪೆಯದೇನು ಕೆಲಸ? ಸದಾನಂದನನ್ನು ಮುಗಿಸಿ ಸೂಟ್‌ಕೇಸಿನಲ್ಲಿಟ್ಟು ಪರಾರಿಯಾದ."

"ಸೂಟ್‌ಕೇಸು ನನ್ನ ಬಳಿಯಲ್ಲಿತ್ತು. ಜಾನ್ ಅದರಲ್ಲಿ ಸದಾನಂದನ ಶವ ಹೇಗೆ ಇರಿಸಿದ..."

"ಒಂದೇ ಉತ್ತರ. ಅವನಿಗೆ ಅಪ್ಸರಾ ಸಹಾಯ ಮಾಡಿದ್ದಾಳೆ. ಅವಳ ಸಹಾಯದಿಂದ ಜಯಚಂದ್ರನ ಕೋಣೆಯಲ್ಲಿ ಸದಾನಂದನ ಕೊಲೆ ಮಾಡಿದ್ದಾರೆ. ಅವರ ಬಳಿ ಇರುವ ಬೀಗದಿಂದ ಸೂಟ್‌ಕೇಸು ತೆರೆದು ಅದರಲ್ಲಿದ್ದ ಎಲ್ಲಾ ವಜ್ರ, ಚಿನ್ನ ತೆಗೆದು ಅದರಲ್ಲಿ ಶವವಿರಿಸಿದ್ದಾನೆ. ಅಪ್ಸರಾ ಆ ಸೂಟ್‌ಕೇಸಿಗೆ ಬೀಗ ಹಾಕಲು ಮರೆತಿರಬೇಕು ಅಥವಾ ಬೇಕೆಂತಲೇ ಬಿಟ್ಟಿರಬೇಕು... ಹೀಗಾಗಿ ಅಪವಾದ ನಿಮ್ಮ ಮೇಲೆ ಬಂದಿದೆ. ಆಕೆ ಪರಾರಿಯಾಗಿದ್ದಾಳೆ."

ನಂಜುಂಡಪ್ಪನ ತರ್ಕ ಸರಿ ಎನಿಸಿತು. ವಾಂತಿ ಮಾಡಿಕೊಳ್ಳುವ ನೆವ ಮಾಡಿ ಮಲಗಿಕೊಂಡಿದ್ದ ಅಪ್ಸರಾ ಹೊರಗೆ ಓಡಿದ್ದಾಳೆ... ಈ ಎಲ್ಲಾ ನಾಟಕದ ಪಾತ್ರಧಾರಿ ಹಾಗೂ ಸೂತ್ರಧಾರಿ ಅವಳೇ.

ನಾನು ಕರಕರ ಹಲ್ಲು ಕಡಿದೆ... ಸುಂದರ ಪುಷ್ಪವೆಂದು ಮೂಸಲು ಹೋದರೆ ಅದು ಸರ್ಪವಾಗಿ ಕಚ್ಚಿದಂತೆ ಅಪ್ಸರಾ ನನ್ನ ಪಾಲಿಗೆ ಹೂವಾಗದೇ ಹಾವಾದಳು.

ನಂಜುಂಡಪ್ಪ ನಾಲ್ಕಾರು ಫೋಟೋ ಸಹ ತಂದಿದ್ದರು. ಅದನ್ನೂ ನನ್ನ ಮುಂದಿಟ್ಟರು. ನಾನು ಎರಡರಲ್ಲೂ ಸದಾನಂದನನ್ನು ಗುರುತಿಸಿದೆ. ಗಡ್ಡದ ಮನುಷ್ಯನನ್ನೂ ನೋಡಿ ಬೆಚ್ಚಿದೆ... ಅವನೇ ಗೋಕರ್ಣದಲ್ಲಿ ನನ್ನ ಹಿಂದೆ ಬಿದ್ದು ಗುದ್ದು ಕೊಟ್ಟವ. ಕೇಳಿದೆ "ಇವನಾರು?"

"ಜಾನ್... ಸದಾನಂದ ಅಪ್ಸರೆಯರ ಗೆಳೆಯ... ಒಂದು ದೃಷ್ಟಿಯಿಂದ ಛೋಟಾ ಬಾಸ್."

"ನನಗೀಗ ವಕೀಲರ ನೆರವು ತುಂಬಾ ಅಗತ್ಯವೆನಿಸುತ್ತದೆ. ನಮ್ಮ ಬಳಿ ಇದ್ದ ಸೂತ್ರಗಳನ್ನೆಲ್ಲ ಅವರ ಮುಂದಿಟ್ಟರೆ ನನ್ನ ಬಿಡುಗಡೆಗೊಂದು ದಾರಿಯಾಗಬಹುದು?"

"ಹೌದು... ಆದರದು ಶೀಘ್ರ ಪರಿಣಾಮ ಮಾಡಲಾರದು... ದೀರ್ಘ ಸಮಯ ಹಿಡಿದರೂ ಹಿಡಿಯಬಹುದು... ರಾಜಕಾರಣಿಗಳಿಂದಾದರೆ ಶೀಘ್ರ ಪರಿಹಾರ ದೊರೆಯಬಹುದು."

"ಸರಿ ಹಾಗಾದರೆ... ಸುಬ್ಬಾರಾವ್ ಅವರನ್ನು ಬಿಡುವುದೇ ಇಲ್ಲ. ಅವರ ಮನಕರಗುವಂತೆ ಮತ್ತೆ ಎಲ್ಲಾ ವಿಷಯ ತಿಳಿಸಿ ಉಪಕರಿಸುವಂತೆ ಬೇಡಿಕೊಳ್ಳುತ್ತೇನೆ."

"ನಿಮ್ಮ ಮಾತು ಸರಿ... ನಾಳೆ ಬೆಳಗ್ಗೆ ಅವರು ಹೇಳಿದ ವಿಳಾಸಕ್ಕೆ ಹೋದರಾಯಿತು. ನಾನೂ ನಿಮ್ಮ ಜೊತೆ ಬರುತ್ತೇನೆ..."

"ದಯವಿಟ್ಟು ಹಾಗೆ ಮಾಡಿ. ನನಗೂ ಸ್ವಲ್ಪ ಧೈರ್ಯ ಬರುತ್ತದೆ."

'ಠಳ್' ಎಂಬ ಸಪ್ಪಳ ಹೊರಗಿನಿಂದ

ಬಂತು... ಕಿಟಕಿಯ ಹಿಂದೆ ಯಾರೋ ಕದ್ದು ನಮ್ಮ ಮಾತು ಆಲಿಸುತ್ತಿದ್ದಾರೆಂಬ ಸಂಶಯ. ನಾನು ನಂಜುಂಡಪ್ಪನ ಮುಖ ನೋಡಿದೆ. ಆತ ಸನ್ನೆ ; ಮಾಡಿ ನನಗೆ ಮೌನದಿಂದಿರುವಂತೆ ಸೂಚನೆ ನೀಡಿ ಸಾವಕಾಶವಾಗಿ ಎದ್ದು ಬಾಗಿಲು ತೆರೆದು ಕಿಟಕಿ ಬಳಿ ಬಂದ. ಯಾರೂ ಇರಲಿಲ್ಲ. ಪಕ್ಕದ ಟೀಪಾಯ್ ಮೇಲಿದ್ದ ಹೂದಾನಿ ಬಿದ್ದು ಒಡೆದುಹೋಗಿತ್ತು. ನಾನು ಹೊರಗೆ ಬಂದೆ. ಮೇಲಿನಿಂದ ಕೆಳಗೆ ಇಣುಕಿದೆ. ರಸ್ತೆ ಒಂದು ಬದಿಗೆ ಬಿರಬಿರನೆ ನಡೆಯುತ್ತಿದ್ದ ವ್ಯಕ್ತಿಯೊಂದನ್ನು ಕಂಡು ಬೆಚ್ಚಿದೆ... ಆತ... ಹೌದು ಬಳ್ಳಾರಿಯಲ್ಲಿ ನಾನು ಲಾಡ್ಜ್‌ಲ್ಲಿ ಇರುವಾಗ ಎದುರುಗಡೆ ಆಟೋಸ್ಟ್ಯಾಂಡಿನಲ್ಲಿ ನಿಂತು ನನ್ನ ಚಲನವಲನ ನಿರೀಕ್ಷಿಸುತ್ತಿದ್ದಾತ...

ಆತ ಇಲ್ಲಿಗೂ ಬಂದಿದ್ದ... ನಾನು ಜರ್ರನೆ ಬೆವತು ನೆಲಕ್ಕೆ ಕುಸಿದೆ.



ನಾನೇ ಆಕೀನ ಎತ್ಕಂಡ್ ಡ್ಯೂಯೆಟ್ ಹಾಡ್ಬೇಕೇನು ? ಆಕೀ ನನ್ನನ್ನ ಎತ್ಕಂಡ್ರ ಆಗಲ್ವೇನು... ಸಾಹೆಬ್ರೇ?

10

ಬೆಳಗ್ಗೆ ಬರುವುದಾಗಿ ಹೇಳಿ ನಂಜುಂಡಪ್ಪ ಮನೆಗೆ ಹೋದರು. ರೂಮಿನ ಕಿಟಕಿ ಬಾಗಿಲು ಭದ್ರವಾಗಿ ಮುಚ್ಚಿ ಎಚ್ಚರವಾಗಿರುವಂತೆ ಸೂಚನೆ ನೀಡಿ ಬೆಳಗ್ಗೆ ಏಳು ಗಂಟೆಗೆ ನಾನು ಬಂದಾದ ಮೇಲೆಯೇ ಬಾಗಿಲು ತೆರೆಯುವಂತೆ "ವಾರ್ನಿಂಗ್" ಮಾಡಿದ್ದರು. ಅದರಂತೆ ನಾನು ರೂಮಿನ ಬಾಗಿಲು ಮುಚ್ಚಿ ಬೋಲ್ಟ್ ಏರಿಸಿದೆ. ಕಿಟಕಿ ಮುಚ್ಚಿ ಮಂಚದ ಮೇಲೆ ಆಸೀನನಾದೆ. ನಡೆದುಹೋದ ಘಟನೆಗಳು ಒಂದೊಂದಾಗಿ ಸುರುಳಿ ಬಿಚ್ಚತೊಡಗಿದವು.

ಅಪ್ಸರೆಯ ನೆನಪಾದಾಗ ಏನೋ ಒಂದು ಬಗೆಯ ಮಧುರ ವೇದನೆ. ಅವಳ ಸಹವಾಸ, ಸಾನ್ನಿಧ್ಯ ಇಷ್ಟವಾದರೂ ಅವಳು ನನ್ನೊಡನೆ ನಡೆದುಕೊಂಡ ರೀತಿ ಅಷ್ಟೇ ಕೆಟ್ಟದ್ದು. ನನ್ನನ್ನು ಮೃತ್ಯುಕೂಪದಲ್ಲಿ ನೂಕಿ ತಾನು ಸಂಪತ್ತಿನ ಸುಪ್ಪತ್ತಿಗೆ ಏರಿದಳಲ್ಲ... ಒಮ್ಮೆಲೆ ಆಕೆ ನನ್ನ ಅಪ್ಪಿಕೊಂಡದ್ದು, ಉರುಳಾಡಿದ್ದು, ನನ್ನ ವಿಳಾಸದ ಕಾರ್ಡಿನೊಂದಿಗೆ ಬಂದಾಗ ಹೇಳಿದ್ದ ನೆನಪಾಯಿತು. "ಈ ಕಾರ್ಡನ್ನು ನಿಮಗೆ ತಿಳಿಯದಂತೆ ನಿಮ್ಮಿಂದ ಅಪಹರಿಸಿರುವೆ. ಅದರಂತೆ ನಿಮ್ಮ ಬಳಿ ನನ್ನದೊಂದು ವಸ್ತು ಬಿಟ್ಟುಹೋಗುತ್ತಿರುವೆ. ಸಮಯ ಬಂದಾಗ ಅದೇನೆಂಬುದು ಅರ್ಥವಾಗುತ್ತದೆ."

ಆ ವಸ್ತು ಏನಿರಬಹುದು? ಸಟಕ್ಕನೆ ಎದ್ದು ಕುಳಿತೆ. ಅಂದಿನ ಸನ್ನಿವೇಶ, ಅನಂತರ ನಡೆದ ಘಟನೆ, ವೇಷಭೂಷಣ ನೆನಪು ಮಾಡಿಕೊಂಡೆ. ನನ್ನ ಬ್ಯಾಗಿನಲ್ಲಿ ಏನೂ ದೊರೆಯಲಾರದೆಂದು ಅರಿತಿದ್ದರೂ ಸಹ ಸುಮ್ಮನೆ ಬ್ಯಾಗನ್ನೆಲ್ಲ ಜಾಲಾಡಿಸಿದೆ. ಪರ್ಸ್ ಬಿಚ್ಚಿದೆ, ಬಟ್ಟೆಬರೆ ನೋಡಿದೆ. ಏನೂ ದೊರೆಯಲಿಲ್ಲ. ಅಪ್ಸರೆಗೆ ಸೇರಿದ ಯಾವ ವಸ್ತುವೂ ಕಣ್ಣಿಗೆ ಬೀಳಲಿಲ್ಲ. ಎಲ್ಲಾ ನನ್ನೆದುರು ಹರವಿಕೊಂಡು ಗಂಟೆಗಟ್ಟಲೇ ನೋಡುತ್ತ ಕುಳಿತೆ.

ರಾತ್ರಿ ಎರಡಾದರೂ ಮಲಗಲಾಗಲಿಲ್ಲ. ಸಣ್ಣಗೆ ತಲೆನೋವು ಕಾಣಿಸಿಕೊಂಡಿತು. ನಿರಾಶೆಯಿಂದ ಸಾಮಾನುಗಳನ್ನೆಲ್ಲ ಬ್ಯಾಗಿಗೆ ತುಂಬಲಾರಂಭಿಸಿದೆ. ಅಂದು ಧರಿಸಿದ್ದ ಜೀನ್ಸ್... ಎತ್ತಿ ಇಡುವಾಗ ಕೈಗೆ ಒರಟು ಒರಟಾದ ಏನೋ ತಗಲಿದಂತಾಯಿತು. ದಿಟ್ಟಿಸಿದೆ. ಅರೆ! "FOR LOVE ONLY" ಎಂದಿದ್ದ ಲೇಬಲ್ ಇರಲಿಲ್ಲ. ಗೋವಾದಿಂದ ನನ್ನ ಸ್ನೇಹಿತನೊಬ್ಬ ಅದನ್ನು ತಂದುಕೊಟ್ಟಿದ್ದ. ಟೇಲರ್‌ನ ' ಆ ಲೇಬಲ್ ಹಿಪ್ಸ ಮೇಲೆ ಬರುವಂತೆ ಹೊಲಿ

ದಿದ್ದೆ. ಆ ಲೇಬಲ್ ಕಾಣಲಿಲ್ಲ. ಅದರ ಬದಲು "ಅಪ್ಸರಾ ಸಾರೀಸ್... ಕಾಂಟ್ಯಾಕ್ಟ್ ಫೋನ್ ನಂಬರ್..." ಎಂದಿತ್ತು. ಒಮ್ಮೆಲೆ ನನ್ನಲ್ಲಿ ಆಶಾಕಿರಣ ಮೂಡಿ ಚಟುವಟಿಕೆ ಮೂಡಿತು. 'FOR LOVE ONLY' ಲೇಬಲ್ ಮೇಲೆಯೇ 'ಅಪ್ಸರಾ ಸಾರೀಸ್' ಎಂಬ ಲೇಬಲ್ಲು ಅಂಟಿಸಿದವರು ಯಾರೆಂದು ಅರ್ಥವಾಗಿತ್ತು. ಟೆಲಿಫೋನ್ ನಂಬರ್ ನನ್ನ ಡೈರಿಯಲ್ಲಿ ಗುರುತು ಹಾಕಿಕೊಂಡು ಮೈಮುರಿದು ಎದ್ದಾಗ ನಿದ್ದೆಯ ಭಾರದಿಂದ ನನ್ನ ಕಣ್ಣುರೆಪ್ಪೆಗಳು ಮುಚ್ಚ ತೊಡಗಿದ್ದವು.

ಕೇವಲ ನಾಲ್ಕು ಗಂಟೆ ಮಾತ್ರ ನಿದ್ದೆ ಮಾಡಿದ್ದರೂ ಆರು ಗಂಟೆಗೆ ನಾನು ಎದ್ದಾಗ ದೇಹದಲ್ಲಿ ಹೊಸ ಚೈತನ್ಯ ಮೂಡಿತ್ತು. ಎದ್ದು ದೇವರಿಗೆ ಕೈಮುಗಿಯುತ್ತಲೇ ಇಂದಿನ ದಿನ ನನಗೆ ವಿಶೇಷ ದಿನವಾಗಲಿದೆ ಎಂದು ಎನಿಸಿತು. ಒಂದು ಬಗೆಯ ವಿಚಿತ್ರ ಸಂಕೇತ ಅಥವಾ ಅವ್ಯಕ್ತ ಭಾವನೆ ಮೂಡಿ ಇಂದು ಏನೋ ಘಟಿಸಲಿದೆ ಎಂದುಕೊಂಡೆ ಮನದಲ್ಲಿ. ಸ್ನಾನ ಮಾಡಿ ನಿತ್ಯದಂತೆ ನನ್ನ ಜೊತೆಗೇ ಇರುವ 'ಗಣೇಶ'ನ ಫೋಟೋದ ಮುಂದೊಂದು ಊದುಬತ್ತಿ ಹಚ್ಚಿ ಕೈಮುಗಿದೆ. ರೂಮು ಖಾಲಿ ಮಾಡುವ ಉದ್ದೇಶದಿಂದ ಸಾಮಾನು ಪ್ಯಾಕ್ ಮಾಡ ಲಾರಂಭಿಸಿದೆ.

ಸರಿಯಾಗಿ ಏಳೂಕಾಲಿಗೆ ನಂಜುಂಡಪ್ಪ ಬಂದಾಗ ನಾನು ರೆಡಿಯಾಗಿದ್ದೆ.

ಮೊದಲೊಂದು ಕಪ್ ಕಾಫಿ ಕುಡಿದು, ಬಿಲ್ ಮಾಡಿಸಿ, ರೂಮು ಖಾಲಿ ಮಾಡಿದೆ.

ಸುಬ್ಬಾರಾವ್ ನೀಡಿದ ವಿಳಾಸ ಜಯಪ್ರಕಾಶ ನಗರದ್ದು... ಆಟೋದಿಂದ ಅಲ್ಲಿ ತಲುಪಿದಾಗ ನಮ್ಮನ್ನು ಸ್ವಾಗತಿಸಿದವ ತೋಟದ ಮಾಲಿ. ನಮ್ಮ ಲಗೇಜ್ ಎತ್ತಿಕೊಂಡು ಕರೆದೊಯ್ದ... ನಗರದ ಸದ್ದುಗದ್ದಲದಿಂದ ದೂರಾದ ಪ್ರಶಾಂತ ವಾತಾವರಣದ ಮಧ್ಯೆ ತಲೆ ಎತ್ತಿ ನಿಂತ ಮೂರು ಮಹಡಿಗಳ ಭವ್ಯ ಬಂಗಲೆ ಅದು "ಗಗನಚುಕ್ಕಿ..." ನನಗಂತೂ ಬಹಳ ಹಿಡಿಸಿತು... ಬಂಗಲೆಯಲ್ಲಿ ಕೇವಲ ನಾವಿಬ್ಬರೇ... ತಿಂಡಿ ನಮಗಾಗಿ ದಾರಿ ಕಾಯುತ್ತಿತ್ತು... ಬಹುಶಃ ಮಾಲಿಗೆ ಮೊದಲೇ ಸುಬ್ಬಾರಾವ್ ಸೂಚನೆ ಕೊಟ್ಟಿದ್ದಾರೆಂದು ಕಾಣುತ್ತದೆ. ಶಿರಾ, ವಡೆ, ಇಡ್ಲಿ, ಟೋಸ್ಟ್ ಮೇಲೆ ಕಾಫಿ. ಹೇವೀ ಟಿಫಿನ್... ಸುಸ್ತು ಜಾಡ್ಯ ಎರಡೂ ದಾಳಿ ಮಾಡಿದರೆ ಏನಾಗಬೇಕೋ ಅದೇ ಆಯಿತು. ಮಾತು ಬೇಡವಾಯಿತು. ಕೆಲಸ ಒಲ್ಲೆ ಅನಿಸಿತು. ನಿದ್ದೆ ಹತ್ತಿರ ಸುಳಿಯತೊಡ ಗಿತು. ನಾನು ಭಾರವಾದ ಕಣ್ಣುಗಳನ್ನು ತೆರೆ ದಿಡುವ ವ್ಯರ್ಥ ಪ್ರಯತ್ನ ಮಾಡುತ್ತಿರುವಾಗ ಟೆಲಿಫೋನು ಕಣ್ಣಿಗೆ ಬಿತ್ತು. ರಾತ್ರಿ ನೆನಪಿಸಿ ಕೊಂಡ 'ಅಪ್ಸರಾ ಸಾರೀಸ್'ಗೆ ಫೋನು ಮಾಡುವ ಮಾತು ನೆನಪಾಗಿ ಫೋನು ಇದ್ದೆಡೆ ನಡೆದೆ ತೂರಾಡುತ್ತ... ನನ್ನೆಡೆ ನೋಡಿದ ನಂಜುಂಡಪ್ಪ ನಗುತ್ತ "ಏನು ದಿನದಲ್ಲೇ ಇಷ್ಟು ಕುಡಿದದ್ದು? ತೂರಾಡುತ್ತಿದ್ದೀರಿ" ಎಂದರು. "ನಾನು ಅಪ್ಸರಾಗೆ ಫೋನು ಮಾಡಬೇಕು" ಅಂದೆ. ಅವರಿಗೆ ಅಚ್ಚರಿ. "ಏನು ಅಪ್ಸರಾಗಾ? ಮಾಡಿ ಮಾಡಿ" ಎಂದು ಅನ್ನುತ್ತ ಅವರೂ ತೂರಾಡುತ್ತ ನನ್ನೆಡೆ ಬಂದರು. ಇದೇನಾಗಿದೆ ನಮಗೆ? ನಾವು ಒಮ್ಮಿಂದೊಮ್ಮೆಲೆ ನಿಂತು ಕೊಳ್ಳಲಿಕ್ಕೆ ಆಗದಂತೆ ಜೋಲಿ ಹೊಡೆಯು ತ್ತಿದ್ದೇವೆ?... ನಮ್ಮ ಕಣ್ಣೇಕೆ ಭಾರವಾಗಿವೆ ಎಂದು ಯೋಚಿಸುತ್ತ ನಂಬರ್ ತಿರುಗಿಸಿದೆ. ಆ ಕಡೆಯಿಂದ ರಿಸೀವರ್ ಎತ್ತಿದರು...

"ಹಲೋ ಅಪ್ಸರಾ ಸಾರೀಸ್" ಎಂದೆ.

"ರಾಂಗ್ ನಂಬರ್" ಸಂಬಂಧ ಕಡಿದು ಹೋಯಿತು.

ನಾನು ಡೈರಿ ತೆಗೆದೆ, ಜೀನ್ಸ್ ಪ್ಯಾಂಟು ತೆಗೆದೆ. ಮತ್ತೊಮ್ಮೆ ಲೇಬಲ್ ಮೇಲಿದ್ದ ನಂಬರ್ ಪರೀಕ್ಷಿಸಿದೆ. ಸರಿಯಾಗಿತ್ತು. ಪುನಃ ಡಯಲ್ ಮಾಡಿದೆ. ಈ ಬಾರಿ "ಅಪ್ಸರಾ ಇದ್ದಾಳಾ. ಅಪ್ಸರಾ... ನಾನು ದರ್ಶನ್ ಮಾತಾಡ್ತಿ ರೋದು" ಅಂದೆ.

"ಯಾವ ಅಪ್ಸರಾ?" ಆ ಕಡೆಯಿಂದ ಪ್ರಶ್ನೆ ಬಂತು.

"ಅಪ್ಸರಾ ಮೀನ್ಸ್ ಅಪ್ಸರಾ ಹಾಂ... ಮಂದಾಕಿನಿ... ಸುಬ್ಬಾರಾವ್ ಮಗಳು..."

"ಐದು ನಿಮಿಷ ಬಿಟ್ಟು ಟ್ರೈ ಮಾಡಿ..." ಎಂದು ಹೇಳಿ ರಿಸೀವರ್ ಕೆಳಗಿಟ್ಟರು.

ಅರ್ಧ ಯಶಸ್ಸು ದೊರೆತಿತ್ತು. ಐದು ನಿಮಿಷಗಳ ಮೇಲೆ ಫೋನು ಮಾಡಿದಾಗ ಫೋನು ಎತ್ತಿದವಳೇ ಅಪ್ಸರಾ.

"ಹಾಯ್ ದರ್ಶನ್ ಹೇಗಿದೀರಿ? ಎಲ್ಲಿಂದ

ಮಾತಾಡ್ತಿದೀರಿ" ಎಂದು ಕೇಳಿದಳು.

"ನರಕದಿಂದ... ನಿನ್ನಿಂದಾಗಿ ಸಿಕ್ಕ ನರಕ ಕೂಪದಿಂದ" ಸಿಟ್ಟಿನಿಂದ ಕೂಗಿದೆ.

"ಶಾಂತರಾಗಿ... ನಿಮ್ಮ ವಿಳಾಸ ಕೊಡಿ... ನಿಮ್ಮನ್ನು ನರಕಕೂಪದಿಂದ ಇಂದ್ರನ ಅಮರಾವತಿಗೆ ಒಯ್ಯುತ್ತೇನೆ."

"ಶಟಪ್... ಈಗ ಕೊಟ್ಟಿದ್ದೇ ಸಾಕು..." ಅರಚಿದೆ.

"ದರ್ಶನ್ ಪ್ಲೀಸ್ ಎಲ್ಲಿಂದ ಮಾತಾಡ್ತಿದೀರಿ ಹೇಳಿ... ಒಂದೆರಡು ಗಂಟೇಲಿ ನಾನು ನಿಮ್ಮ ಬಳಿ ಬರುತ್ತೇನೆ" ಆಕೆ ಅಂಗಲಾಚಿದಳು.

ನಾನು ವಿಳಾಸ ತಿಳಿಸಿ ರಿಸೀವರ್ ಕೆಳಗಿಟ್ಟೆ. ಹಾಗೇ ಅಲ್ಲೇ ನೆಲಕ್ಕೊರಗಿದೆ... ನನಗಿಂತ ಮೊದಲೇ ನಂಜುಂಡಪ್ಪ ಧರಾಶಾಹಿಯಾಗಿದ್ದ...

"ಸೂ... ಮಗ... ಮಾಲೀ... ಕಾಫಿಯಲ್ಲಿ ಮತ್ತು ಬರೋ ಔಷಧಿ ಕುಡಿಸಿದಾನೆ" ಅಂದೆ. ದೂರದಲ್ಲಿ ಎಲ್ಲೋ ಒಂದು ಕಡೆ ಟೆಲಿಫೋನು ಗಂಟೆ ಬಾರಿಸತೊಡಗಿತು. ಸ್ವಲ್ಪ ಸಮಯದ ನಂತರ ಯಾರೋ ರಿಸೀವರ್ ಎತ್ತಿ "ನಾನು ಮಾಲಿ ಗಂಗಪ್ಪ" ಎಂದು ಅನ್ನುವುದು ಕೇಳಿಸಿತು. ಮುಂದೆ ನನಗೊಂದೂ...

ಮುಖದ ಮೇಲೆ ತಣ್ಣೀರಿನ ಕಾರಂಜಿ... 'ಹಾ... ಹೂ... ಅಂ...' ದಡಬಡಿಸಿ ಎದ್ದು ಕುಳಿತೆ. ನಂಜುಂಡಪ್ಪ ಸಹ. ಎದುರಿಗೆ ನೀರಿನ ಜಗ್ಗ ಹಿಡಿದು ನಿಂತಿದ್ದಳು ಅಪ್ಸರಾ... ಕಣ್ಣು ಹೊಸಕಿ, ನೀರು ಒರೆಸಿಕೊಂಡು ನೋಡಿದೆ... ಹೌದು ಅವಳೇ... "ಅಪ್ಸರಾ... ನೀನು ನಿಜವಾಗಿಯೇ ಬಂದೆಯಾ?"


"ಬೇವಕೂಫ್... ನೀವು ಹುಲಿಯ ಗವಿಯಲ್ಲಿ ಆರಾಮಾಗಿ ನಿದ್ದೆಮಾಡ್ತಿದಿರಾ. ಇದು ಯಾರ ಬಂಗಲೆ ಗೊತ್ತಿದೆಯೇ. ಜಾನ್‌ನದು... ಹೂಂ. ಬೇಗ ಏಳಿ..."

ನಮ್ಮಿಬ್ಬರ ಕಾಲ್ಕೆಳಗಿನ ಭೂಮಿ ಸರಿದಂತೆ ಭಾಸವಾಯಿತು. ಯಾರಿಂದ ತಪ್ಪಿಸಿಕೊಂಡು ಓಡಬೇಕೆಂದಿದ್ದರೋ. ಅವರ ಮನೆಯಲ್ಲೇ ವಿಶ್ರಾಂತಿ ಪಡೆಯುವುದೆ...

"ಈ ವಿಳಾಸ ನಿನ್ನ ತಂದೆ ಸುಬ್ಬಾರಾವ್ ಕೊಟ್ಟಿದ್ದು"

"ಸುಳ್ಳು... ನೀವು ಸುಳ್ಳು ಬೊಗಳ್ತಾ ಇದೀರಿ"

ನಾನು ಜೇಬಿನಿಂದ ಚೀಟಿ ತೆಗೆದು ಅವಳ



ಮುಂದೆ ಹಿಡಿದೆ.

"ನೋಡು... ಇದು ನಿನ್ನ ತಂದೆಯವರೇ ಬರೆದದ್ದು..."

ಅಪ್ಸರಾಳ ಕಣ್ಣುಗಳು ಒಡೆದುಹೋದವು. ಕಂಪಿಸುವ ಕೈಗಳಿಂದ ಚೀಟಿ ಹಿಡಿದಳು.

"ಹೌದು... ಇದು ಅಪ್ಪಾಜಿಯ ಹಸ್ತಾಕ್ಷರ. ಅವರು ಬೇಕೆಂತಲೇ ನಿಮ್ಮನ್ನು ಈ ಮೃತ್ಯು ಪಂಜರಕ್ಕೆ ಕಳಿಸಿದರೇ... ಜಾನ್‌ನ ಮನೆಗೆ ಕಳಿಸಿದರೇ..."

"ಹಾಂ... ನನಗೀಗ ನೆನಪಿಗೆ ಬರತಿದೆ... ಅವರು ನನ್ನನ್ನು ಬಿಳ್ಕೊಡುವಾಗ ಹೇಳಿದ್ದರು. ನೀವು ಈ ವಿಳಾಸ ಸೇರಿದಿರಿ ಅಂದರೆ ಎಲ್ಲಾ ಕಷ್ಟಕಾರ್ಪಣ್ಯಗಳಿಗೆ ಕೊನೆ ಎಂದು. ಅದರ ಅರ್ಥ..."

"ಖಲಾಸ್... ಕಿರ್‍ರ್‍ರ್‍..." ನಂಜುಂಡಪ್ಪ ಕುತ್ತಿಗೆಗೆ ಉರುಲುಬಿದ್ದ ಅಭಿನಯದೊಂದಿಗೆ ಹೇಳಿದ... ನನ್ನ ಮೈ ಎಲ್ಲಾ ಬೆವತಿತ್ತು. ಭಯ ಮನೆಮಾಡಿತ್ತು.

"ನಮ್ಮ ಕಾಫಿಯಲ್ಲಿ ಮತ್ತು ಬರುವ ಔಷಧಿ ಸೇರಿಸಿದ್ದರು. ಹೀಗಾಗಿ ತಿಂಡಿತಿಂದು ಕಾಫಿ ಕುಡಿಯುತ್ತಲೂ ನಾವಿಬ್ಬರೂ ನಿದ್ದೆಹೋದೆವು."

ನಮ್ಮಿಬ್ಬರ ಮಾತುಕೇಳುತ್ತಿದ್ದಂತೆ ಅಪ್ಸರಾ ಕಿರುಚಿಕೊಂಡಳು.

"ಬಿಗ್‌ಬಾಸ್... ಬಿಗ್‌ಬಾಸ್"



ಹೌದೌದು... ನಿಮ್ಮ ಮಗಳು ನಮ್ಮ ಮನೇಸ
ಖಂಡಿತಾ 'ತುಂಬ್ತಾಳೆ.'

"ಅಪ್ಸರಾ ಇದೇನು..."

"ಜಾನ್‌ಗೆ ನಾವೆಲ್ಲಾ ಛೋಟಾ ಬಾಸ್ ಅನ್ನುತ್ತಿದ್ದೆವು. ಆತ ಸುಮಾರು ನಾನೂರಐವತ್ತು ಬಾರ್, ಪಬ್ ನಡೆಸುತ್ತಿದ್ದ. ದಿನಕ್ಕೆ ಎರಡು ಕೋಟಿಗೂ ಮಿಕ್ಕ ವ್ಯವಹಾರ ನಡೆಯುತ್ತಿತ್ತು. ಅದೆಲ್ಲಾ ಮರುದಿನ ಬೇರೆ ಎಲ್ಲೋ ಒಂದು ಜಾಗೆಗೆ ಸೇರುತ್ತಿತ್ತು. ಆ ಜಾಗೆಗೆ ನಾವು "ಬಿಗ್‌ಬಾಸ್" ಎನ್ನುತ್ತಿದ್ದೆವು. ಅದರರ್ಥ ಜಾನ್ ಸಹ ನಮ್ಮ ಯಜಮಾನನಲ್ಲ. ಆತ ಛೋಟಾ ಬಾಸ್... ಅವನ ಮೇಲಿರುವ ಬಿಗ್‌ಬಾಸ್‌ನ ಸೂತ್ರದ ಬೊಂಬೆ... ಎಷ್ಟು ಪ್ರಯತ್ನಿಸಿದರೂ ಬಿಗ್‌ಬಾಸ್ ಯಾರೆಂದು ನನಗೆ ತಿಳಿಯಲಿಲ್ಲ... ಈಗ ತಿಳಿಯುತ್ತಿದೆ... ಆತ ಬೇರಾರೂ ಅಲ್ಲ... ನನ್ನ ತಂದೆ... ನನ್ನ ತಂದೆ... ಗೋಮುಖವ್ಯಾಘ್ರ... ಸುಬ್ಬಾರಾವ್..."

ಅಯ್ಯೋ ದೇವರೇ... ನಂಜುಂಡಪ್ಪ ಕೆಳಗೆ ಕುಸಿದು ಬಿಕ್ಕತೊಡಗಿದ. ನನಗೆ ನಂಬಿಕೆ ಆಗ್ತಾ ಇಲ್ಲ. ಸುಬ್ಬಾರಾವ್ ಆಕೃತಿ ನಡತೆ ಮಾತು. ನೆನಪಿಗೆ ಬರುತ್ತಿವೆ... ದೇಶ ಸೇವಕ.. ಬಡವರ ಬಂಧು, ಸಮಾಜಸೇವಕ ಸುಬ್ಬಾರಾವ್... "ನೀನು ಸುಳ್ಳು ಹೇಳ್ತಾ ಇದೀಯಾ... ಸದಾನಂದನ ಸೂಳೆಯಾಗಿದ್ದು ಅನಂತರ ಜಾನ್‌ನ ಸಹಾಯದಿಂದ ಕಾಲ್‌ಗರ್ಲ್ ರ್‍ಯಾಕೆಟ್ ನಡೆಸುತ್ತಿದ್ದೆ. ಐದಾರು ಕೋಟಿ ರೂಪಾಯಿಯೊಂದಿಗೆ ಪರಾರಿಯಾದವಳು ನೀನು. ನೀನು ಸದಾನಂದನನ್ನು ಕೊಂದ ಕೊಲೆಪಾತಕಿ ಇಷ್ಟೆಲ್ಲಾ ಇದ್ದು..."

"ಇಷ್ಟೆಲ್ಲಾ ಇದ್ದೂ ನಾನು ಪೊಲೀಸ್ ಇನ್‌ಫಾರ್ಮರ್ ಸಹಾ ಇದೇನೆ."

"ಏನೆಂದೆ?... ಪೊಲೀಸ್ ಇನ್‌ಫಾರ್ಮರ್?... ಇಂಪಾಸಿಬಲ್."

"ವಾದ ಮಾಡುವ ಸಮಯವಲ್ಲವಿದು. ಬೇಗ ಏಳಿ ಇಲ್ಲಿಂದ ಪಾರಾಗೋಣ..."

ಅವಳ ಮಾತು ಸರಿ ಎನಿಸಿತು. ನಾವಿಬ್ಬರೂ ಮೇಲೆದ್ದೆವು. ಮೂವರೂ ಮೆಟ್ಟಿಲು ಇಳಿದು ಮುಖ್ಯದ್ವಾರಕ್ಕೆ ಬಂದೆವು. ಒಳಗಿನಿಂದ ಹಾಕಿದ ಕೊಂಡಿ ಸರಿಸಿದ ಅಪ್ಸರಾ ಬಾಗಿಲು ಎಳೆದಳು... ಎಷ್ಟು ಎಳೆದರೂ ಬಾಗಿಲು ತೆರೆಯಲಿಲ್ಲ.

ಹೊರಗಿನಿಂದ ಭದ್ರವಾಗಿ ಕೊಂಡಿಹಾಕಲಾಗಿತ್ತು.

ನನ್ನ ಸಂಶಯ ನಿಜವಾಯಿತು. ನಾವೀಗ ಬಂದಿಗಳು...

ನಂಜುಂಡಪ್ಪ ಕಂಗಾಲಾಗಿದ್ದ... ನನಗಾಗಿ ಆತ ಸಂಕಟದಲ್ಲಿ ಸಿಲುಕಿಕೊಂಡ. ಅಪ್ಸರಾ ಹತಾಶಳಾಗದೇ ಅತ್ತಿತ್ತ ನೋಡಿ ಮೇಜಿನ ಮೇಲಿದ್ದ ಟೆಲಿಫೋನಿನತ್ತ ಓಡಿದಳು. ರಿಸೀವರ ಎತ್ತಿ ಕಿವಿಗೆ ಆನಿಸಿದಳು. ಕಟ್‌ಕಟ್ ಸದ್ದು ಮಾಡಿದಳು. 'ಪಟಕ್' ಎಂದು ಅಪ್ಪಳಿಸಿ... "ಕನೆಕ್ಷನ್ ಕಿತ್ತಿ ಹಾಕಿದಾರೆ" ಅಂದಳು...

'ಕರ್‍ರ್‍ರ್' ಎಂಬ ಬ್ರೇಕ್ ಹಾಕಿದ ಸಪ್ಪಳ. ಕಿಟಕಿಗೆ ಓಡಿದೆವು. ಹೊರಗಡೆ ಗೇಟು... ಕೆಂಪುಮಾರುತಿ ಕಾರಿನಿಂದ ಕೆಳಗಿಳಿದ ಜಾನ್... ಅವನ ಜೊತೆ ನಾಲ್ವರು ಧಾಂಡಿಗರು...

"ಓಡಿ. ಅವಿತುಕೊಳ್ಳಿ. ಯಮದೂತರು ಬಂದರು."

ಅಪ್ಸರಾ ಚೀರಿದಳು. ಮೂವರೂ ಮಹಡಿಯತ್ತ ಓಡಿದೆವು.

11

ಈ ಮೊದಲು ನಾವಿದ್ದ ಮೊದಲ ಮಹಡಿಯ ಕೋಣೆಗೆ ಮೂವರೂ ಧಾವಿಸಿದೆವು. ಬಾಗಿಲು ಮುಚ್ಚಿ ಬಾಗಿಲಿಗೆ ಸೋಫಾ–ಕಾಟ–ಕುರ್ಚಿ

ಎಲ್ಲಾ ಅನಿಸಿದೆವು. ಇಷ್ಟೆಲ್ಲ ಮಾಡಿದರೂ ನಮ್ಮ ಮೂವರಿಗೂ ಚೆನ್ನಾಗಿ ಅರ್ಥವಾಗಿತ್ತು. ನಾವು ಮೂವರೂ ಮಾಡುತ್ತಿದ್ದುದು ವ್ಯರ್ಥ ಪ್ರಯತ್ನ ವೆಂದು. ಹೇಗಿದ್ದರೂ ನಮಗೆ ಸಾವು ಕಟ್ಟಿಟ್ಟ ಬುತ್ತಿ. ಸಾವು ಅದೂ ಎಂತಹದು? ಬೀದಿ ನಾಯಿಗೆ ಪ್ರಾಪ್ತಿಯಾಗುವ ಸಾವು. ನಮ್ಮ ಹೆಣಗಳಾದರೂ ಸಿಗುತ್ತವೆಯೋ ಇಲ್ಲವೋ... ಅಥವಾ ಯಾವ ಊರಿನ ಯಾವ ಬೀದಿಯಲ್ಲಿ ನಮ್ಮ ಹೆಣಗಳನ್ನು ಬೀದಿನಾಯಿಗಳು ಕಚ್ಚಿ ಎಳೆದು ತಿನ್ನುತ್ತವೆಯೋ ಇಲ್ಲವೇ ಯಾವದೋ ಒಂದು ಅಡವಿಯಲ್ಲಿ, ಗುಡ್ಡಗಾಡಿನಲ್ಲಿ ಅನಾಥ ವಾಗಿ ಬಿದ್ದಿರುವ ನಮ್ಮ ಶವಗಳನ್ನು ಯಾವ ಹದ್ದು-ಕಾಗೆ-ನರಿಗಳು ಹರಿದರಿದು ತಿನ್ನು ತ್ತವೆಯೋ...

ನಾನು ದುಗುಡ ತುಂಬಿದ ಮುಖದೊಂದಿಗೆ ಅಪ್ಸರೆಯತ್ತ ನೋಡಿದೆ. ಈಗವಳ ಮೇಲೆ ನನಗೆ ದ್ವೇಷ ಮೂಡುತ್ತಿಲ್ಲ, ಜೀವನದಲ್ಲಿ ತಿಳಿಯದೇ ದುರಂತದ ಸೆಳವಿಗೆ ಸಿಕ್ಕು ತತ್ತರಿಸಿದ ಹೆಣ್ಣದು... ಪ್ರೇಮವೆಂಬ ಮೃಗಜಲದ ಹಿಂದೆ ಓಡಿ ನಂತರ ಬೀದಿ ವೇಶ್ಯೆಯಾಗದಿದ್ದರೂ ಶ್ರೀಮಂತರು ಆಡುವ ಕಾಮದಾಟದ ಆಟಿಗೆಯಾದವಳು. ಈಗ ನನಗೆ ಅರ್ಥವಾಗ್ತಿದೆ... ಅಂಥವಳು ಬಾತ್‌ರೂಮಿನಿಂದ ನಗ್ನಳಾಗಿ ಬಂದವಳು ನನ್ನನ್ನು ನೋಡಿ ಏಕೆ ಹೌಹಾರಲಿಲ್ಲ? ಏಕೆ ನಾಚಿಕೊಳ್ಳಲಿಲ್ಲ. ನನ್ನೆದುರೇ ಹೇಗೆ ಬಟ್ಟೆ ತೊಟ್ಟುಕೊಂಡಳು. ಅವಳಲ್ಲಿಯ ಎಲ್ಲ ಭಾವನೆ ಗಳು ಸತ್ತುಹೋಗಿವೆ ಎಂಬುದು ನನಗೆ ಆಗ ತಿಳಿದದ್ದು. ಯಾವ ವಸ್ತುವನ್ನು ಒಂದು ಹೆಣ್ಣು ಮುಚ್ಚಿಟ್ಟುಕೊಳ್ಳಬೇಕು ಪವಿತ್ರವಾಗಬೇಕು ಎಂದು ಬಯಸುತ್ತಿದೆಯೇ ಅದೇ ವಸ್ತು ನೂರಾರು ಜನರೆದುರು ಬೆತ್ತಲೆಯಾಗಿ ಪ್ರದರ್ಶಿತವಾದಾಗ ಅದನ್ನು ಮುಚ್ಚಿಡುವ ಬಯಕೆ ಸುಟ್ಟುಹೋಗು ತ್ತದೆ.

ಅವಳ ಬಗ್ಗೆ ಕರುಣೆ ಮೂಡಿತು... ಅವಳು ದಯೆಗೆ ಪಾತ್ರಳು... ಅವಳಿಗೆ ಬೇಕು ಈಗ ಸಾಂತ್ವನ... ಸಹಾಯಹಸ್ತ... ಏನೇ ಆಗಲಿ ಅವಳನ್ನು ಈ ನರಕಕೂಪದಿಂದ ಮೇಲೆತ್ತಬೇಕು ಎಂದು ನಿರ್ಧರಿಸಿದೆ.

ನಂಜುಂಡಪ್ಪ ಗುಬ್ಬಚ್ಚಿಯಂತೆ ಅವಿತಿಟ್ಟು ಕೊಂಡಿದ್ದ.

ಅಪ್ಸರಾ ಸಹಾಯಕ್ಕಾಗಿ ಅತ್ತಿತ್ತ ದೃಷ್ಟಿಪರಿಸು ತ್ತಿದ್ದಳು. ನಾನು ಕೇಳಿದೆ.

"ಅಪ್ಸರಾ ಇದೆಲ್ಲಾ ಏನು? ನಾನೇಕೆ ನಿನ್ನ ಕೈಯಲ್ಲಿ ಕೀಲುಬೊಂಬೆಯಾದೆ?"

"ದರ್ಶನ ಕೀಲುಬೊಂಬೆಯಾದವಳು ನಾನು... ನಿನ್ನನ್ನು ಕೀಲುಗೊಂಬೆ ಮಾಡಿದ್ದು ನಿನ್ನ ದೈವ, ನಿನ್ನ ಪ್ರಾರಬ್ಧ... ಪ್ರೇಮದ ಬಗ್ಗೆ ನೂರಾರು ಸುಂದರ ಕನಸುಗಳನ್ನು ಕಟ್ಟಿಕೊಂಡು ಆ ಸದಾನಂದನೊಂದಿಗೆ ರಾಜಧಾನಿ ಸೇರಿದೆ. ಆತ ನನ್ನನ್ನು ಉಪಭೋಗಿಸಿ ತನ್ನ ಹಿರಿಯ ಅಧಿಕಾರಿಗಳಿಗೆ ಉದಾರತೆಯಿಂದ ಉಣಬಡಿಸಿದ. ಜಾನ್ ಇನ್ನೂ ಒಂದು ಹೆಜ್ಜೆ ಮುಂದೆ ಹೋದ. ನನ್ನನ್ನು 'ಪಬ್ಲಿಕ್ ಕೆರಿಯರ್' ಮಾಡಿ ಕಾಲ್‌ಗರ್ಲ ರಾಕೆಟ್‌ಗೆ ಒಡತಿಯನ್ನಾಗಿ ಮಾಡಿದ. ಬಿಗ್ ಬಾಸ್‌ನ ಚಂಚಾ ಆಗಿ ಸಮಾಜಕ್ಕೆ ವಿಷ ಉಣಬಡಿಸುವ ಪಬ್ ಬೀರ್ ಬಾರ್‌ಗಳಿಗೆ ಛೋಟಾಬಾಸ್ ಆದ. ದೊಡ್ಡವರನ್ನೆಲ್ಲ ನನ್ನ ಲ್ಲಿಗೆ ಕರೆತಂದು ತೃಪ್ತಿಪಡಿಸಿ ತನ್ನ ಕೆಲಸಮಾಡಿ ಕೊಂಡ. ನೋಡನೋಡುತ್ತಿದ್ದಂತೆ ಬಿಗ್‌ಬಾಸ್ ಪ್ರಳಯರೂಪದಲ್ಲಿ ಸಮಾಜದ ಶತ್ರುವಾಗಿ ಬೆಳೆದುನಿಂತ. ಎಲ್ಲವನ್ನೂ ನೋಡಿದ ನಾನು ಇದಕ್ಕೊಂದು 'ಅಂತ್ಯ' ಕಾಣಿಸಲು ಸನ್ನಾಹ ನಡೆಸಿದೆ. ಯಾರಿಗೂ ತಿಳಿಯದಂತೆ ಅವರ ಕುಕರ್ಮಗಳನ್ನೆಲ್ಲ ವಿಡಿಯೊ ಟೇಪ್ ಮಾಡಿದೆ. ಸಂಭಾಷಣೆ ಟೇಪ್ ಮಾಡಿದೆ. ಎಲ್ಲಾ ಪೊಲೀಸಿಗೆ ಒಪ್ಪಿಸುವ ವಿಚಾರದಿಂದ ಪಲಾಯನ ಮಾಡಿದೆ. ಆದರೆ ರಕ್ಷಕರ ಮಧ್ಯೆ ಇವರ ಏಜಂಟರಿರುವದು ನೆನಪಾಗಿ ಎಲ್ಲಾ ರಹಸ್ಯದಾಖಲೆಗಳನ್ನು ಒಂದೆಡೆ ಮುಚ್ಚಿಟ್ಟು ಪಲಾಯನ ಮಾಡಿದೆ. ನನ್ನ ಹಿಂದೆ ಸದಾನಂದ ಮತ್ತು ಜಾನ್ ಬಿದ್ದರು. ಗೋಕರ್ಣ ದಲ್ಲಿ ನಿನ್ನನ್ನು ನೋಡಿದಾಗ ನಿನ್ನನ್ನು ನಂಬ ಬಹುದು ಅನಿಸಿದರೂ ವಿಶ್ವಾಸಮಾಡಲಿಲ್ಲ. ಕೇವಲ ಟೆಲಿಫೋನ್ ನಂಬರ್ ಸಂಕೇತ ಇಟ್ಟು ಓಡಿದೆ. ಅವರು ಬೆಂಬತ್ತೇ ಬಂದರು. ಈ ಮಧ್ಯೆ ಸದಾನಂದ ಜಾನ್‌ಗೆ ಸೇರಿದ ಐದುಕೋಟಿ ಬೆಲೆಯ ವಸ್ತು ಅಪಹರಿಸಿ, ಅಪವಾದ ನನ್ನ ಮೇಲೆ ಹೇರಿದ. ನನ್ನನ್ನು ಹುಡುಕುತ್ತ ನಿಮ್ಮ ಮನೆಗೂ ಬಂದ. ಗಾಬರಿಯಾದ ನಾನು ಅವನನ್ನು ಸಂಧಿಸಿ ಬುದ್ಧಿ ಹೇಳಿದೆ. "ಇಬ್ಬರೂ ಕೂಡಿ ಪರದೇಶಕ್ಕೆ ಓಡಿಹೋಗೋಣ" ಎಂದ. ಒಪ್ಪಿದೆ. ಜಯ

ಚಂದ್ರನ ಸಹಾಯ ಪಡೆದೆ. ಅವನ ಕೋಣೆಯಲ್ಲಿ ಕೂಡಿದ್ದೆವು. ಕೆಳಗಿದ್ದ ಸೂಟ್‌ಕೇಸು ನಾನೇ ಮೇಲೆ ತಂದೆ. ಅದರಲ್ಲಿದ್ದ ಅಪಾರ ಸಂಪತ್ತು ಕಂಡು ಜಯಚಂದ್ರ ಹುಚ್ಚನಾದ. ಅವನೇ ಸದಾನಂದ ನನ್ನು ಮುಗಿಸಿದ. ಅವನಿಗೆ ನನ್ನ ಮೈಮೇಲೆ ಕಣ್ಣು... ಬುಟ್ಟಿಗೆ ಹಾಕಿಕೊಂಡೆ. ಸೂಟ್‌ಕೇಸಿನಲ್ಲಿ ಸದಾನಂದನ ಶವವಿರಿಸಿ ಮತ್ತೆ ಕೆಳಗೆ ತಂದಿಟ್ಟೆ. ಅಂದು ರಾತ್ರಿ ನಾವು ಪಲಾಯನ ಮಾಡು ವವರಿದ್ದೆವು. ಪೊಲೀಸ್ ಬಂದದ್ದರಿಂದ ನೀವು ಸಿಕ್ಕಿಹಾಕಿಕೊಂಡಿರಿ, ನಾನು ಓಡಿಹೋದೆ."

"ಆ ಸಂಪತ್ತು ಎಲ್ಲಿದೆ? ಜಯಚಂದ್ರ ಎಲ್ಲಿದಾನೆ"

"ಜಯಚಂದ್ರ ಸತ್ತು ನರಕದಲ್ಲಿದಾನೆ. ಸಂಪತ್ತು ಪೊಲೀಸರ ವಶದಲ್ಲಿದೆ"

"ಹಂ? "

"ಹೌದು ನೀವು ಪಲಾಯನ ಮಾಡಿದ ರಾತ್ರಿ ನಾನು ಹಾಗೂ ಜಯಚಂದ್ರ ಕಳ್ಳತನದಿಂದ ನಿಮ್ಮ ಬಿಲ್ಡಿಂಗ್ ಪ್ರವೇಶಿಸಿದೆವು. ತನ್ನ ಹಾಸಿಗೆ ಯಲ್ಲಿ ಎಲ್ಲವನ್ನೂ ಬಚ್ಚಿಟ್ಟು ಜಯಚಂದ್ರ ಹೊಲಿದಿದ್ದ. ಮೇಲೆ ಹೋದ ಆತ... ಸುಧೀರ ಜಾಧವ ಬಲೆಬೀಸಿದ್ದು ಗೊತ್ತಾಗಿ ಪಲಾಯನ ಮಾಡುವಾಗ ಗುಂಡಿಗೆ ಬಲಿಯಾದ. ನಾನು ಓಡಿ ಬಂದೆ... ನಿಮ್ಮ ಫೋನಿನ ನಿರೀಕ್ಷೆಯಲ್ಲಿದ್ದೆ. ನಿಮ್ಮ ಮುಂದೆ ನನ್ನ ತಪ್ಪು ಒಪ್ಪಿಕೊಂಡು ಕ್ಷಮೆ ಕೇಳುವ ಬಯಕೆ. ನಿಮ್ಮ ಫೋನು ಬರುತ್ತಲೂ ಮೊದಲು ಪೊಲೀಸ್ ವರಿಷ್ಠ ಅಧಿಕಾರಿಗೆ ಶರಣಾದೆ... ಎಲ್ಲಾ ರಹಸ್ಯದಾಖಲೆ ಅವರ ಕೈಗಿತ್ತು ಅವರ ಇನ್‌ಫಾರ್ಮರ್ ಆಗಿ ನಿಮ್ಮಲ್ಲಿಗೆ ಬಂದೆ. ನಿಮ್ಮೊಂದಿಗೆ ನಾನೂ ಸಿಕ್ಕಿಹಾಕಿ ಕೊಂಡೆ..."

ನಾನು ಗದ್ಗದಿತನಾಗಿದ್ದೆ. ಕೆಸರಿನಲ್ಲಿಯ ಕಮಲದಂತೆ ಕಂಡಳು ಅಪ್ಸರೆ. ಬಲವಾಗಿ ಅವಳನ್ನೆ ಅಪ್ಪಿಕೊಂಡು "ನನ್ನನ್ನು ಕ್ಷಮಿಸು" ಎಂದೆ. ಆಕೆ ನನ್ನ ಎದೆಯಲ್ಲಿ ಮುಖ ಹುದುಗಿಸಿ ಬಿಕ್ಕಿಬಿಕ್ಕಿ ಅತ್ತಳು. ಮನದ ಕಲ್ಮಷ ತೊಳೆದು ಶುಭ್ರವಾಗಿತ್ತು.

'ಧಡ್... ಧಡ್ ಧಡಾರ್'—ಭಾರಿ ಸಪ್ಪಳ... ಹೊರಗಿನ ಬಾಗಿಲು ಮುರಿದುಬಿತ್ತು. ಟಪ್ ಟಪ್ ಬೂಟುಗಳ ಸದ್ದು. ಮುಂದಿನ ಸರದಿ. ನಮ್ಮ ಕೋಣೆಯದು. ಎರಡೇ ನಿಮಿಷಗಳಲ್ಲಿ ಬಾಗಿಲು ಸೋಲೊಪ್ಪಿಕೊಂಡು ಚೂರುಚೂರಾ ಯಿತು. ಜಾನ್ ಹಲ್ಲು ಕಿರಿಯುತ್ತಾ ಮಂಚ ವನ್ನು ಪಕ್ಕಕ್ಕೆ ಸರಿಸಿ ನಮ್ಮೆಡೆ ಬಂದ. ಹತಾಶ ನಾಗಿದ್ದ ನಂಜುಂಡಪ್ಪ ಓಡಲು ಹೋಗಿ ನಾಲ್ವರ ಕೈಗೆ ಸಿಕ್ಕಿಹಾಕಿಕೊಂಡ. ಹತ್ತಾರು ಒದೆ... ಗುದ್ದು... ಬಾಯಿ ಮೂಗುಗಳಿಂದ ರಕ್ತ ಸೋರಿಸುತ್ತಾ ನೆಲಕ್ಕೆ ಉರುಳಿದ.

ನಿಧಾನವಾಗಿ ನಾನೆದ್ದು ನಿಂತೆ... ನಾನು ಬದುಕಲೇ ಬೇಕಿತ್ತು. ಹೇಡಿ ಸಾವಿಗೆ ಸಿದ್ಧ ನಿರಲಿಲ್ಲ... ನನ್ನ ಕಣ್ಣುಗಳು ಮೊದಲು ಚಿಕ್ಕ ವಾಗಿ ನಂತರ ವಿಶಾಲವಾಗಿ ಅರಳಿದವು. ನನ್ನ ದೇಹದ ನರಗಳು ಬಿಗಿಯತೊಡಗಿದವು. ಹೆಬ್ಬಾವಿನಂತೆ ನಾನು ಮೈ ಉಬ್ಬಿಸಿ ಬಾಯಿ ಮೂಗುಗಳಿಂದ ಭುಸ್ ಎಂದು ಉಸಿರುಬಿಟ್ಟಾಗ ಅವರು ಹೆದರಿ ಹಿಂದೆ ಸರಿದರು. ಜಾನ್ ಅಚ್ಚರಿಯಿಂದ ನನ್ನೆಡೆ ನೋಡಿದ. ಗೋಕರ್ಣದಲ್ಲಿ ಒದೆ ತಿಂದು ನೆಲಕಚ್ಚಿದ ಅಂದಿನ ರೂಪಕ್ಕೂ ಇಂದಿನ ಈ ಕೆರಳಿದ ಸರ್ಪಕ್ಕೂ ಅಂತರ ಕಲ್ಪಿಸುತ್ತಿದ್ದನಾತ.

ಖತೀಬ ಗುರುಗಳಿಂದ ಕಲಿತ ಕರಾಟೆ ಪಾಠ ಒಂದೊಂದಾಗಿ ನೆರವಿಗೆ ಬಂದವು. ಆ ಐವರೂ ನಮ್ಮ ಮೇಲೆ ಆಕ್ರಮಣ ಮಾಡುವ ಮೊದಲೇ ನಾನವರ ಮೇಲೆ ಬಿದ್ದಿದ್ದೆ... ನನ್ನ ಮೈಯಲ್ಲಿ ದೈತ್ಯಶಕ್ತಿಯ ಸಂಚಾರವಾಗಿತ್ತು. ಐದೇ ನಿಮಿಷ ಗಳಲ್ಲಿ ನಾಲ್ವರೂ ನೆಲಕ್ಕೆ ಬಿದ್ದು ಒದ್ದಾಡ ತೊಡಗಿದ್ದರು. ನಾನು ಜಾನ್‌ನ ಎದೆಗೊದ್ದು ನೆಲಕ್ಕೆ ಕೆಡವಿ ಅಪ್ಸರೆಯ ಕೈಹಿಡಿದು ಹೊರ ಕ್ಕೋಡಿದೆ. ಕೆಳಗಡೆ ಮೆಟ್ಟಿಲು. ಸುಬ್ಬರಾವ್ ಮೇಲೆ ಬರುತ್ತಿರುವದು ಕಾಣಿಸಿ ನಾನೇ ತಿರುಗಿ ಮೇಲೆ ಓಡಿದೆ. ಮೂರು ಮಹಡಿ ದಾಟಿ ಮೇಲೆ ಬಂದು ಹಳೆ ಸಾಮಾನುಗಳಿದ್ದ ಒಂದೆಡೆ ಅವಿತುಕೊಂಡೆ...

ನಾಲ್ಕಾರು ನಿಮಿಷಗಳಲ್ಲಿ ಸುಬ್ಬಾರಾವ್ ಮೇಲೇರಿ ಬಂದರು. ಬಹುಶಃ ಅವರು ನಮ್ಮನ್ನು ನೋಡಿರಬೇಕು. ಅಲ್ಲೇ ನಿಂತು ಪ್ರೀತಿಯಿಂದ ಕರೆದರು.

"ಮಂದಾ... ಮಂದಾಕಿನೀ... ಬಾರಮ್ಮ ಹೆದರಬೇಡ" ಒಂಭತ್ತು ವರ್ಷಗಳ ನಂತರ ತಂದೆಯಿಂದ ಬಂದ ವಾತ್ಸಲ್ಯದ ಕರೆಗೆ ಅಪ್ಸರಾ ಕರಗಿಹೋದಳು. ನಾನು ತಡೆಯುವ ಮೊದಲೇ

ತಂದೆಯೆಡೆ ಓಡಿದಳು.

"ಅಪ್ಪಾ... ಅಪ್ಪಾ..."

ಸುಬ್ಬಾರಾವ್‌ರನ್ನು ಅಪ್ಪಿಕೊಂಡು ಜೋರಾಗಿ ಅಳುತ್ತಿದ್ದಂತೆ ಹಿಂದಿನಿಂದ ಬಂದ ಜಾನ್ ಮೆಲ್ಲನೆ ಚಪ್ಪಾಳೆ ತಟ್ಟಿದ.


"ಗುಡ್... ಗುಡ್ ವೆರಿಗುಡ್..."

"ಜಾನ್. ಈಕೆ ನನ್ನ ಮಗಳು... ಇವಳ ಕೂದಲು ಕೊಂಕಕೂಡದು. ಆ ಬಾಸ್ಟರ್ಡ್ ದರ್ಶನ್‌ನ್ನು ಮುಗಿಸಿಬಿಡು..." ಆಜ್ಞೆ ಮಾಡಿದರು.

"ಅಪ್ಪಾ, ಬೇಡ..." ಅಪ್ಸರಾ ಆರ್ತನಾದ ಮಾಡಿದಳು. ಜಾನ್‌ನ ಕೈಯಲ್ಲಿ ರಿವಾಲ್ವರ್ ಅದನ್ನು ಸುಬ್ಬಾರಾವ್‌ಗೆ ಗುರಿಹಿಡಿದ.

"ಯು ಬಾಸ್ಟರ್ಡ್... ಮೊದಲು ನಿನ್ನ ಸರದಿ" ಜಾನ್ ಗುರುಗುಟ್ಟಿದ.

"ನನ್ನನ್ನು ಈ ಪ್ರಪಾತಕ್ಕೆ ತಳ್ಳಿದವ ನೀನೇ. ನೀನು ಮಾತ್ರ ಸಾಧುವಾಗಿ, ಜನತೆಯ ಕಣ್ಣಿಗೆ ದೇವತೆಯಾಗಿಯೇ ಉಳಿದೆ. ನಾನು ಕೊಲೆಗಡುಕ, ದರೋಡೆಕೋರ, ಸಮಾಜಘಾತುಕ, ದೇಶದ್ರೋಹಿ. ಪ್ರತಿದಿನ ನಾನು ಸಾವಿನೊಂದಿಗೆ ಸೆಣಸುತ್ತಿದ್ದರೆ ನೀನು ಮೆತ್ತನೆಯ ಗಾದಿಮೇಲೆ ಸ್ಕಾಚ್ ಕುಡಿಯುತ್ತಿದ್ದೆ. ಕೋಟಿ ಕೋಟಿ ಸಂಪಾದನೆ ಮಾಡಿದೆ. ನೀನು ಒಂದು ದೃಷ್ಟಿಯಿಂದ ವಿಷಮಂಥನಕ್ಕೆ ನಾಂದಿ ಹಾಡಿದೆ... ಸಮುದ್ರ ಮಂಥನದ ಕಾಲಕ್ಕೆ ಒಳ್ಳೆಯ ವಸ್ತುಗಳ ಜನ್ಮವಾಯಿತು. ಆದರೆ ಇಲ್ಲಿ ವಿಷವೇ ವಿಷ... ನೀನೇ ಕಾಲಕೂಟ. ಈಗ ಎಲ್ಲಾ ನಿನ್ನ ಮಗಳಿಂದಾಗಿ ಬಯಲಿಗೆ ಬಂದಿದೆ. ನೀನೋ ಪಾರಾಗುವೆ. ನೇಣುಗಂಬ ಏರುವವ ನಾನು. ಎಲ್ಲಿಲ್ಲದ ಮಗಳ ಮಮತೆ ಈಗ ಜಾಗೃತವಾಯಿತಲ್ಲ. ಈ ಪಿಶಾಚಿಯಿಂದಲೇ ಅಲ್ಲವೇ ನಮ್ಮ ಸಾಮ್ರಾಜ್ಯ ಹಾಳಾದದ್ದು. ನನ್ನ ದುರ್ಗತಿಗೆ ಕಾರಣಳಾದ ಇವಳಿಗೆ ಇಂದೇ ನಾನು ಕೊನೆಗಾಣಿಸುವೆ. ಬಡವನಾಗಿ ಸ್ಲಮ್‌ನಲ್ಲಿ ಪ್ರಾಮಾಣಿಕನಾಗಿ ಬೆಳೆಯುತ್ತಿದ್ದ ನನ್ನನ್ನು ಕರೆತಂದು ಈ ಅಪರಾಧ ಜಗತ್ತಿನ ಒಡೆಯನನ್ನಾಗಿ ಮಾಡಿ ನೀನು ಸಾಮ್ರಾಟನಾಗಿ ಮೆರೆಯುತ್ತಿರುವೆಯಲ್ಲ... ಅದಕ್ಕಾಗಿ ನಿನಗೂ ಒಂದಲ್ಲ ಮೂರು ಗುಂಡುಗಳ ಬಹುಮಾನ. ಆಮೇಲೆ ನಾನು ಈ ದರ್ಶನ್‌ನನ್ನು ಒಂದು ಕೈನೋಡುವೆ..."



ಹೇಳಿದ್ನಲ್ಲಾ... ನಮ್ಮ ಕನ್ನಡಿಗರದ್ದು ದೊಡ್ಡ ಹೃದಯ ಅಂತ!

"ಬೇಡ. ಬೇಡ. ಜಾನ್" ಸುಬ್ಬಾರಾವ್ ಅರಚಿಕೊಂಡರು. ಮುಂದಾಗುವ ಅನಾಹುತ ನೆನೆಸಿಕೊಂಡು ನಾನು ಬಯಲಿಗೆ ಬರಲು ನಿಶ್ಚಯಿಸಿದೆ. ನಾನು ಬದುಕಬೇಕಾಗಿತ್ತು. ಸಾಯಲು ನನಗೆ ಇಚ್ಛೆ ಇರಲಿಲ್ಲ. ಜಾನ್‌ನೆಡೆ ಧಾವಿಸಿದೆ. ಢಂ ಢಂ ಎಂದು ಎರಡು ಗುಂಡು ಸಿಡಿದವು...

ಸುಬ್ಬಾರಾವ್ ಮುಂದೆ ಬಂದರು. ಅಪ್ಸರೆಯ ಎದೆಸೇರಲು ಸಿಡಿದ ಗುಂಡುಗಳು ಅವರ ಎದೆ ಸೇರಿದವು. ಮುಂದಿನ ಕ್ಷಣ ನನ್ನ ಬಲಗಾಲು ಚಲಿಸಿತ್ತು. ಜಾನ್‌ನ ಕೈಯಲ್ಲಿಯ ರಿವಾಲ್ವರ್ ಸಿಡಿದು ಮೂರನೇ ಮಹಡಿಯಿಂದ ಕೆಳಗೆ ಭೂಮಿಕಂಡಿತು...

ಪೊಲೀಸ ಸೈರನ್... ಜಾನ್ ಗಾಬರಿಯಾದ. ಹತಾಶನಾದ. ಗಾಯಗೊಂಡ ಹುಲಿಯಂತಾಗಿ ನನ್ನ ಮೇಲೆ ಹಾರಿ ಹಣ್ಣುಗಾಯಿ ನೀರುಗಾಯಿ ಮಾಡಿದ. ಅಪ್ಸರೆಯ ಮೇಲೆ ಏರಿಹೋದ. ನನಗೆ ಸುಧಾರಿಸಿಕೊಳ್ಳಲು ಐದಾರು ನಿಮಿಷಗಳಾದರೂ ಬೇಕಾದವು. ಜಾನ್‌ನ ಕೈಯಲ್ಲಿ ಸಿಕ್ಕ ಅಪ್ಸರೆ ಬದುಕಲು ಒದ್ದಾಡುತ್ತಿದ್ದಳು. ಆತ ಅವಳ ಕುತ್ತಿಗೆ ಹಿಚುಕುತ್ತಿದ್ದ. ನಾನು ಅತ್ತಿತ್ತ ನೋಡಿದೆ. ಕಟ್ಟಡದ ಕೆಲಸಕ್ಕೆ ತಂದು ಉಳಿದ ಕಬ್ಬಿಣದ ಸರಳು ಕಾಣಿಸಿತು. ಎತ್ತಿಕೊಂಡು ಜಾನ್‌ನ ಮೇಲೆ ಬಿದ್ದೆ. ಬದುಕಲು ನಾನವನನ್ನು ಎದುರಿಸ

ಬೇಕಾಗಿತ್ತು. ಆತ ಬದುಕಿದರೆ ನನಗೆ ಉಳಿಗಾಲ ವಿಲ್ಲ... ನಾನು ಬದುಕಬೇಕೆಂದರೆ ಅವನನ್ನು ಕೊನೆಗಾಣಿಸಬೇಕು. ನಾನೆಲ್ಲ ಮರೆತಿದ್ದೆ... ಆವೇಶದಿಂದ ಕಂಪಿಸುತ್ತಿದ್ದೆ. ಕೈಯಲ್ಲಿಯ ಸರಳು ಮೇಲೆದ್ದಿತ್ತು. ಜಾನ್ ಚೀರಿಕೊಂಡ. ಅವನ ಆರ್ತನಾದ ಎಲ್ಲೆಡೆ ಪ್ರತಿಧ್ವನಿಸಿತು. ಆತ ಚೀರುತ್ತಲೇ ಇದ್ದ... ನಾನು ಬಿಡಲೇ ಇಲ್ಲ. ಸರಳಿನಿಂದ ಹೊಡೆಯುತ್ತಲೇ ಇದ್ದೆ...

ಬಾಗಿಲು ದೂಡಿ ಒಳಗೆ ಬಂದವ ಅವನೇ– ಬಳ್ಳಾರಿಯಿಂದ ನನ್ನ ಹಿಂದೆಬಿದ್ದವ. ಜಾನ್‌ನನ್ನು ಬಿಟ್ಟು ಅವನೆಡೆ ಧಾವಿಸಿದೆ. ಅವನ ಹಿಂದೆಯೇ ಬಂದ ಸುಧೀರ ಜಾಧವ ಕೂಗಿಕೊಂಡ.

"ದರ್ಶನ್ ಈತ ಸಿ.ಐ.ಡಿ. ನನ್ನ ಅಸಿಸ್ಟೆಂಟ್... ನಿನ್ನ ಹಿಂದೆ ನಾನೇ ನಿನ್ನ ರಕ್ಷಣೆಗಾಗಿ ಬಿಟ್ಟಿದ್ದೆ... ಅವನ ಸೂಚನೆ ಮೇಲೆಯೇ ನಾನು ಬಂದದ್ದು."

ಕೈಯೊಳಗಿನ ಸರಳು ಜಾರಿತ್ತು...

ನಾನು ಕುಸಿದೆ... ನನಗೆ ಮೂರ್ಛೆ ತಪ್ಪಿತು.

12

ಎಂಟು ತಿಂಗಳ ಶಿಕ್ಷೆ ಅನುಭವಿಸಿ ಅಪ್ಸರಾ ಹೊರಗೆ ಬಂದಿದ್ದಾಳೆ. ಹೊಸಕತೆಗೆ ಪ್ಲಾಟ್ ಹುಡುಕಲು ಹೊರಟ ನನ್ನ ಕತೆಯೇ... ನನ್ನ ಜೀವಂತ ಅನುಭವವೇ ನನ್ನ ಹೊಸ ಧಾರಾವಾಹಿಗೆ 'ಪ್ಲಾಟ್' ಆಯಿತು. ಬರೆದು ಪತ್ರಿಕೆಗೆ ತಿಳಿಸಿದ್ದೆ. ವಿಚಿತ್ರ ರೀತಿಯಲ್ಲಿ ಜನಪ್ರಿಯತೆ ಪಡೆದು ನನ್ನ ಹೆಸರನ್ನು ಮೆರೆಯಿಸಿತು.

ಅಪ್ಸರಾ ಜೈಲಿನಿಂದ ಬಂದಮೇಲೆ ನನ್ನ ಪಾಲಿಗೆ ಆಕೆ ಮಂದಾಕಿನಿ ಆಗಿದ್ದಾಳೆ. ಆಕೆಯ ಕಳೆದುಹೋದ ಜೀವನದ ಬಗ್ಗೆ ನಾನು ತಲೆ ಕೆಡಿಸಿಕೊಂಡಿಲ್ಲ. ಅವಳ ಮುಂದಿನ ಜೀವನದ ಬಗ್ಗೆ ನನಗೆ ಚಿಂತೆ ಇದೆ.

ನನ್ನ ತಂದೆತಾಯಿ ನನ್ನ ದೃಢನಿರ್ಧಾರವನ್ನು ಸಂತಸದಿಂದ ಸ್ವಾಗತಿಸಿದ್ದಾರೆ. ಮಂದಾಕಿನಿಯನ್ನೂ ಸೊಸೆಯನ್ನಾಗಿ ಸ್ವೀಕರಿಸಲು ಒಪ್ಪಿಕೊಂಡರು. ಗೋಕರ್ಣದಲ್ಲಿ ಮದುವೆ...

ಇದೋ ನನ್ನ ಹಾಗೂ ಮಂದಾಕಿನಿಯ ಮದುವೆಗೆ ನಿಮಗೆ ಆತ್ಮೀಯ ಆಮಂತ್ರಣ... ದಯವಿಟ್ಟು ಬನ್ನಿ... ಯಾರಿಗೆ ಗೊತ್ತು? ನನ್ನ ಹಾಗೆ ನಿಮಗಾಗಿ ಒಂದು 'ಪ್ಲಾಟ್' ಕಾದಿರಬಹುದು...

ಅಲ್ಲವೇ?...

ನಮಸ್ಕಾರ... ●

ಮನ-ಮುದ್ರೆ

• ಚಿರಂಜೀವಿ

ತುಮಕೂರು ಬೆಂಗಳೂರಿಗೆ ತುಂಬಾ ಹತ್ತಿರವಾಗಿರುವ ಊರು. ಇಲ್ಲಿಂದ ಮತ್ತು ಬೆಂಗಳೂರಿನಿಂದ ಬೇಕಾದಷ್ಟು ಮಂದಿ ಪ್ರತಿದಿನ ಉದ್ಯೋಗದ ನಿಮಿತ್ತ ಬಂದು ಹೋಗಿ ಮಾಡುತ್ತಾರೆ. ಭಾರತದಲ್ಲೆ ಅತೀ ವೇಗವಾಗಿ ಬೆಳೆಯುತ್ತಿರುವ ನಗರ ಎಂದು ಹೆಸರುಗಳಿಸಿಕೊಂಡಿದ್ದ ಬೆಂಗಳೂರು ಅತಿ ಹತ್ತಿರದಲ್ಲೆ ಇದ್ದರೂ ಇತ್ತೀಚಿನವರೆಗೂ ಪಟ್ಟಣದ ದೊಡ್ಡ ಪ್ರಭಾವ ತುಮಕೂರಿನ ಮೇಲೆ ಆದಂತೆ ನನಗನ್ನಿಸಿರಲಿಲ್ಲ. ಸುಮಾರು ಇಪ್ಪತ್ತು ವರ್ಷಗಳಿಗೆ ಹಿಂದೆ ಬೆಂಗಳೂರಿನಿಂದ ಬರುತ್ತಿದ್ದ ಊರ ಬಸ್ಸು ತುಮಕೂರು ಎಲ್ಲೆ ತಲುಪಿದಾಗ ಊರ ಹೊರಗಿರುವಂತೆ ಕಾಣಿಸುತ್ತಿದ್ದ ಪುಟ್ಟ ದೇವಾಲಯವೊಂದರ ಮುಂದೆ ನಿಲ್ಲುತ್ತಿತ್ತು. ಪ್ರಯಾಣಿಕರೆಲ್ಲರೂ ಇಳಿದು ದೇವಸ್ಥಾನದ ಹತ್ತಿರ ಕೆಲನಿಮಿಷ ನಿಂತು ಮತ್ತೆ ಬಸ್ ಹತ್ತುತ್ತಿದ್ದರು. ಬಸ್ಸು ಹೊರಟಾಗ ಕಿಟಕಿಯಾಚೆ ಕಾಣಿಸುತ್ತಿದ್ದದ್ದು ದೂರದ ಪರ್ವತಶ್ರೇಣಿ, ಗಿಡಮರಗಳು, ಖಾಲಿ ಪ್ರದೇಶ. ಅನಂತರ ಸ್ವಲ್ಪ ದೂರ ಬಂದ ಮೇಲೆ ಬಲ ಭಾಗದಲ್ಲಿ ಒಂದು ಕಡೆ ಸರಕಾರಿ ಶಾಲೆ (ಅನಂತರ ಕಾಲೇಜ್ ಆಯಿತೇನೊ?) ವಿಸ್ತಾರವಾದ ಕಟ್ಟಡದಲ್ಲಿ ಕಾಣಿಸುತ್ತಿತ್ತು. ಇಲ್ಲೆ ಮಹಿಳಾ ಕಾಲೇಜ್, ಪಾಲಿಟೆಕ್ನಿಕ್ ಇದ್ದಂತೆ ನನ್ನ ನೆನಪು. ಮುಂದೆ ಐದು ಹತ್ತು ನಿಮಿಷ ಬಸ್ ಮುಂದುವರಿದ ಮೇಲೆ ತುಮಕೂರು ನಗರದ ಸರಳ – ಸೌಮ್ಯ ವ್ಯಕ್ತಿತ್ವ ಗೋಚರವಾಗುತ್ತಿತ್ತು. ಹಳೆ ಕಾಂಪೌಂಡ್ ಮನೆಗಳು, ದಟ್ಟ ಮರಗಿಡಗಳು, ಶಾಲೆಗೆ ಹೋಗುವ ಮಕ್ಕಳು. ಅನಂತರ



ಪುರಭವನ, ಬಲಗಡೆ ತಿರುಗಿದರೆ ಬಸ್‌ಸ್ಟ್ಯಾಂಡ್ ಕಡೆಗೆ ದಾರಿ.

ಇವಿಷ್ಟೂ ನಾನು ಹಿಂದೆ ಇಪ್ಪತ್ತೈದು-ಮೂವತ್ತು ವರ್ಷಗಳಲ್ಲಿ ಐದಾರು ಸಲ ಬಂದಿದ್ದಾಗ ಕಂಡಿದ್ದ ತುಮಕೂರು. ಮತ್ತೆ, ಈಚಿನ ಎಂಟು ಹತ್ತು ವರ್ಷಗಳಲ್ಲಿ ಕಾರು. ಬಸ್ ಪ್ರಯಾಣ ಮಾಡುವಾಗ, ಪುರಭವನದ ರಸ್ತೆಯ ಎರಡೂ ಕಡೆ ವ್ಯಾಪಾರ ಸಂಕೀರ್ಣಗಳು, ಬಂಗಲೆಗಳು ಏಳುತ್ತಿರುವುದನ್ನು ಕಂಡಿದ್ದೆ. ಸ್ವಲ್ಪ ದೂರದಲ್ಲಿ ಹೊಸದೊಂದು ಬಡಾವಣೆ ಆಗುತ್ತಿರುವಂತೆ, ಅಲ್ಲೊಂದು-ಇಲ್ಲೊಂದು ಹೊಸ ಮನೆಗಳು ಕಂಡಿದ್ದವು. ಮನೆಯ ಮೇಲೆ ಎತ್ತರದ 'ಆ್ಯಂಟೆನಾ' ಕಂಡಾಗ ತುಮಕೂರಿಗೂ ಬೆಂಗಳೂರು ಟಿವಿ ಬಂತು ಅನ್ನಿಸಿತ್ತು.

ಆದರೆ, ಹೋದ ತಿಂಗಳು ನಾನು ತುಮಕೂರನ್ನು ಹಾದು ಬೆಂಗಳೂರಿಗೆ ಬರುತ್ತಿದ್ದಾಗ ಕಂಡ ತುಮಕೂರು ಆಶ್ಚರ್ಯವಾಗುವಷ್ಟು ಬದಲಾಯಿಸಿದ್ದಂತೆ ಕಂಡಿತು. ಹಿಂದೆ ಗ್ರಾಮದಂತೆ, ಪುಟ್ಟ ಊರಿನಂತೆ ಕಂಡದ್ದು ಈಗ ಸುಂದರ ನಗರದಂತೆ ಕಂಡಿತು.

ಬಡಾವಣೆಗಳು ಬಡಾಯಿಸಿ, ದಟ್ಟವಾಗಿ ಮನೆಗಳು ತುಂಬಿರುವಂತೆ ಕಂಡಿತು. ಪುರಭವನ ದಾಟಿ ಎಷ್ಟು ದೂರ ಬಂದರೂ ಮನೆಗಳು-ಮನೆಗಳು, ಅಂಗಡಿಗಳು, ಹೊಟೇಲ್‌ಗಳು, ಹೊಸ ಹೊಸ ಸಿನಿಮಾ ಥಿಯೆಟರ್‌ಗಳು. ಇನ್ನೇನು ತುಮಕೂರು ಎಲ್ಲ ಮುಗಿಯಿತು ಅಂದುಕೊಳ್ಳುವಂತಾದಾಗ, ಇನ್ನೊಂದು ಹೊಸ ಸಿನಿಮಾ ಮಂದಿರ ಕಾಣಿಸಿತು. ನಾನಂತೂ ಬೆರಗಾಗಿ ನೋಡುತ್ತಿದ್ದೆ. ಈ ಥಿಯೆಟರ್ ದಾಟಿದ ಕೆಲವೇ ನಿಮಿಷಗಳಲ್ಲಿ ನನಗೆ ಕ್ಯಾತ್ಸಂದ್ರ ಕಾಣಿಸಿತು. ಅಂದರೆ, ತುಮಕೂರು ನಗರದ ವ್ಯಾಪ್ತಿ ಇಲ್ಲಿಯವರೆಗೂ ಬಂದು ಬಿಟ್ಟಿದೆ. ಮುಂದೆ ಕ್ಯಾತ್ಸಂದ್ರವೂ ತುಮಕೂರು ನಗರದ ಬಡಾವಣೆ ಆಗಿಬಿಡಬಹುದೇನೊ?

ತುಮಕೂರು ವಿಸ್ತಾರವಾಗುತ್ತ, ಆಧುನಿಕವಾಗುತ್ತ ನಗರದ ಮುಖವಾಡವನ್ನು ಧರಿಸುತ್ತಿದ್ದಂತೆ, ಜಿಲ್ಲೆಯ ಎಲ್ಲ ಪ್ರದೇಶಗಳಲ್ಲೂ ಇದರ ಪ್ರಭಾವ ನನಗೆ ಕಾಣಿಸಿದೆ. ಪುಟ್ಟ ಪುಟ್ಟ ಊರುಗಳೂ ವಿಸ್ತಾರಗೊಂಡಿವೆ. ಆಧುನಿಕತೆ ಕಂಡಿದೆ. ಎಲ್ಲೆಲ್ಲೂ ದೊಡ್ಡ ದೊಡ್ಡ ಕಾಲೇಜ್ ಸಂಕೀರ್ಣಗಳು ಆಗಿವೆ.

ಡಾ। ರಾಜ್‌ಕುಮಾರ್ ಅವರ ಅತಿ ಆಪ್ತ ಮಿತ್ರರಾದ, ನನಗೂ ಆತ್ಮೀಯರಾದ ಬಿ. ಎಸ್. ರಾಮಸ್ವಾಮಿ ಅವರು ತಿಪಟೂರಿನಲ್ಲಿದ್ದಾರೆ. ಹತ್ತು ವರ್ಷಗಳಿಗೂ ಹಿಂದೆ ಅವರನ್ನು ಮಾತನಾಡಿಸಲು ತಿಪಟೂರಿಗೆ ಹೋಗಿದ್ದಾಗ, ನನಗೆ ಕಂಡದ್ದು, ಹಳೆಕಾಲದ ಪುಟ್ಟ ಊರು, ಊರ ಬಸ್ ಸ್ಟ್ಯಾಂಡ್, ಅಂಗಡಿಗಳು, ಮುಂದೆ ಹೊಸದಾಗಿ ತಲೆಯೆತ್ತಿದ್ದ ಒಂದು ಬಡಾವಣೆ. ಈ ಬಡಾವಣೆಯಿಂದ ಬಸ್ ಸ್ಟ್ಯಾಂಡ್‌ಗೆ ಕೆಲನಿಮಿಷಗಳಲ್ಲಿ ನಡೆದು ಬರಬಹುದಿತ್ತು. ಈಗ ವಾಸಸ್ಥಳಗಳು ಇನ್ನೂ ದೂರ ದೂರ ಹೋಗಿವೆ. ಪ್ರಮುಖ ರಸ್ತೆ ವ್ಯಾಪಾರ ಮಳಿಗೆಗಳಿಂದ, ದೊಡ್ಡ ಹೊಟೇಲ್‌ಗಳಿಂದ, ಬಹುಮಹಡಿ ಕಟ್ಟಡಗಳಿಂದ ಕಳೆಕಳೆಯಾಗಿ ಕಾಣಿಸುತ್ತದೆ.

ಸಿದ್ದಗಂಗಾ ಸ್ವಾಮಿಗಳ ಹಿರಿಯ ಸಾಧನೆಯ ಹೆಮ್ಮೆ, ದೇವರಾಯನದುರ್ಗದ ದೈವಿಕತೆ ಮತ್ತು ಅದರ ಸುತ್ತಲ ರಮ್ಯ ಪ್ರಕೃತಿ, ಗೂಳೂರು ಗಣೇಶ, ಕೈದಾಳ, ನಾಮದ ಚಿಲುಮೆ, ಹೀಗೆ ಇತಿಹಾಸ ಪ್ರಸಿದ್ಧ ಸ್ಥಳಗಳು ನನ್ನನ್ನು ಆಕರ್ಷಿಸಿದಂಥವು. ತುಮಕೂರು ಜಿಲ್ಲೆಯನ್ನು ಪ್ರವಾಸೀ ಕೇಂದ್ರವನ್ನಾಗಿ ಸೊಗಸಾಗಿ ಅಭಿವೃದ್ಧಿಪಡಿಸಬಹುದು, ಸಂಬಂಧಪಟ್ಟವರೆಲ್ಲ ಮನಸ್ಸು ಮಾಡಬೇಕು. ಕರ್ನಾಟಕಕ್ಕೆ, ಕರ್ನಾಟಕ (ಏಕೆ, ಭಾರತೀಯ) ರಂಗಭೂಮಿಗೆ ಗೌರವ-ಹೆಮ್ಮೆಯ ಕೀರ್ತಿ ತಂದ ಗುಬ್ಬಿ ವೀರಣ್ಣನವರ ಊರು ಗುಬ್ಬಿ ಎಲ್ಲರನ್ನೂ ಆಕರ್ಷಿಸುವ ಸ್ಥಳವಾಗಬೇಕು, ವಿದೇಶಕ್ಕೆ ಹೋದವರು ಅಲ್ಲಿ, ಷೇಕ್ಸ್‌ಪಿಯರ್ ಹುಟ್ಟಿದ ಸ್ಥಳ, ಬರ್ನಾಡ್ ಷಾ ಹುಟ್ಟಿದ ಸ್ಥಳ ಎಂದು ಹೋಗಿ ನೋಡಿ ಬಂದು ಹೆಮ್ಮೆಯಿಂದ ಮಾತನಾಡುತ್ತಾರೆ, ಪುಟಗಟ್ಟಲೆ ಬರೆಯುತ್ತಾರೆ. ಆದರೆ, ನಮ್ಮವರೇ ಆದ ವೀರಣ್ಣನವರನ್ನು ನಾವು ಇನ್ನೂ ಗೌರವದಿಂದ–ಹೆಮ್ಮೆಯಿಂದ ಉಳಿಸಿಕೊಳ್ಳಬೇಕು.

ತುಮಕೂರು ಜಿಲ್ಲೆ ಅದ್ಭುತ

ವ್ಯಕ್ತಿಗಳನ್ನು ನಾಡಿಗೆ ನೀಡಿದೆ. ಸಾಹಿತ್ಯ, ಕಲೆ, ಸಂಸ್ಕೃತಿ, ಸಾರ್ವಜನಿಕ ಸೇವೆ – ರಾಜಕೀಯ – ಕ್ರೀಡೆ ಇದರಲ್ಲೆಲ್ಲ 'ಎತ್ತರದವರು' ಕಂಡಿದ್ದಾರೆ. ಬೆಳ್ಳಾವೆ ವೆಂಕಟನಾರಾಯಣಪ್ಪ, ಬೆಳ್ಳಾವೆ ನರಹರಿಶಾಸ್ತ್ರಿ, ಬಿಎಂಶ್ರೀ, ತೀನಂಶ್ರೀ, ದೊಲನ (ಡಿಎಲ್‌ಎನ್), ಕ. ವೆಂ. ರಾಘವಾಚಾರ್ಯ, ಕೆ.ವೆಂಕಟರಾಮಪ್ಪ, ಶಿವಮೂರ್ತಿ ಶಾಸ್ತ್ರಿ, ಮಾ. ನ. ಚೌಡಪ್ಪ, ಜಿ. ವಿ. ನಾರಾಯಣಮೂರ್ತಿ, ಪ್ರೊ| ಜಿ. ಎಸ್. ಸಿದ್ಧಲಿಂಗಯ್ಯ, ಡಾ. ಸಾ. ಶಿ. ಮರುಳಯ್ಯ, ಟಿ. ಸುನಂದಮ್ಮ, ಬರಗೂರು ರಾಮಚಂದ್ರಪ್ಪ, ಕೆ. ಎಸ್. ಧರಣೇಂದ್ರಯ್ಯ, ಸಮೇತನಹಳ್ಳಿ ರಾಮರಾಯ, ಈಚನೂರು ಜಯಲಕ್ಷ್ಮಿ, ಈಚನೂರು ಶಾಂತ, ಪ್ರೊ| ಕಮಲಾ ಹಂಪನಾ, ಪ್ರೊ. ಎಚ್. ಜಿ. ಸಣ್ಣ ಗುಡ್ಡಯ್ಯ, ಹೀ. ಚಿ. ಶಾಂತವೀರಯ್ಯ, ಡಾ. ಪಿ. ವಿ. ನಾರಾಯಣ, ಟಿ. ಆರ್. ಮಹದೇವಯ್ಯ, ವೀಚಿ, ಹ. ವೆಂ. ನಾಗರಾಜರಾವ್, ದೊಡ್ಡರಂಗೇಗೌಡ, ಎಚ್. ಎಸ್. ಶಿವಪ್ರಕಾಶ್, ಎಸ್. ವಿ. ಶ್ರೀನಿವಾಸರಾವ್, ಪಾಂಚಜನ್ಯ, ಸಾಯಿಸುತೆ, ಎ. ಪಂಕಜ, ನಿರುಪಮಾ – ಹೀಗೆ ಸಾಹಿತ್ಯದಲ್ಲಿ ಹೆಸರು ಮಾಡಿದವರು ಬಹುಮಂದಿ ಇದ್ದಾರೆ.

ಬೆಂಗಳೂರಿನಲ್ಲಿ ಹೆಚ್ಚು ತುಮಕೂರು ಲೇಖಕರು ವಾಸವಾಗಿದ್ದಾರೆ. ಈ ಸಂಚಿಕೆಯಲ್ಲಿ ತುಮಕೂರು ಬಗ್ಗೆ ಬರೆದಿರುವ ಹಿರಿಯರೆಲ್ಲ ಬೆಂಗಳೂರಿನಲ್ಲಿದ್ದಾರೆ.

ಇದೀಗ, ಕರ್ನಾಟಕ ಸಾಹಿತ್ಯ ಅಕೆಡೆಮಿ ಅಧ್ಯಕ್ಷರಾಗಿರುವ ಬರಗೂರು ರಾಮಚಂದ್ರಪ್ಪ ಮುಂದಿನ ಮೂರು ವರ್ಷಗಳಲ್ಲಿ 'ಸಾಧನೆ' ಕಾಣಿಸಬೇಕೆಂಬ ಉತ್ಸಾಹದಲ್ಲಿದ್ದಾರೆ. ಬಂಡಾಯ ಸಾಹಿತ್ಯದ ಮುಂಚೂಣಿಯಲ್ಲಿರುವ ರಾಮಚಂದ್ರಪ್ಪ ಸಾಹಿತ್ಯ – ಚಲನಚಿತ್ರಗಳಲ್ಲಿ ದೊಡ್ಡ ಹೆಸರನ್ನು ಬಹುಬೇಗ ಮಾಡಿದವರು.

ಕರ್ನಾಟಕ ಸಾಹಿತ್ಯ ಅಕೆಡೆಮಿಯ ಅಧ್ಯಕ್ಷ ಸ್ಥಾನದಲ್ಲಿ ಅತಿ ನಮ್ರರಾಗಿ ಕುಳಿತು, 'ಖಂಡಿತ ಬೇಕಾದಷ್ಟು ಕೆಲಸ ಮಾಡಲು ಸಾಧ್ಯವಿದೆ. ಮಾಡಬೇಕು ಎನ್ನುವ ಆಸೆ-ಕನಸುಗಳೂ ಇವೆ' – ಎಂದವರು ಹೇಳುವಾಗ, ಹಿರಿಯರು ಬೆಳೆಸಿದ ಈ ಸಾಹಿತ್ಯ ಸಂಸ್ಥೆಗೆ ಈ ಕಿರಿಯನಿಂದಲೂ ಗಣನೀಯ ಸೇವೆ ಸಲ್ಲಬಹುದೆನ್ನಿಸುತ್ತದೆ.



ಬರಗೂರು ರಾಮಚಂದ್ರಪ್ಪ

1993ರೊಳಗೆ ಮಾಡಬೇಕು ಎಂದೇ ಒಂದು ಅಪೂರ್ವ 'ಅಧ್ಯಯನ ಯೋಜನೆಗಳು' ಎನ್ನುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಇದರಲ್ಲಿ ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ ಖಂಡಿತ ಆಶಾದಾಯಕವಾಗಿ ಕಾಣುತ್ತದೆ. ಬದಲಾಗುವ ಬದುಕನ್ನು ಅಭಿವ್ಯಕ್ತಿಸುವ ಸಾಹಿತ್ಯ ಬದುಕನ್ನೂ ಬದಲಾಯಿಸಬಹುದೆಂಬ ಆಶಯದ ವಿವಿಧ ನೆಲೆಗಳ ಹನ್ನೆರಡು ಪ್ರಧಾನ ವಿಷಯಗಳ ಅಧ್ಯಯನದ ಕೆಲಸ ಪ್ರಾರಂಭವಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯದಿಂದ ಈಚಿನ ಸಾಹಿತ್ಯದವರೆಗೆ ಪ್ರಧಾನ ವಿಷಯದ ನೆಲೆ ಮತ್ತು ಸಾಧ್ಯತೆಗಳನ್ನು ಸೂಚಿಸುವ ಪರಿಕಲ್ಪನಾತ್ಮಕ ಲೇಖನಗಳು ಇರುತ್ತವೆ.


ಇದರೊಂದಿಗೆ ಅಂತರ್ ಶಿಸ್ತೀಯ ಅಧ್ಯಯನ ಯೋಜನೆ-ಕರ್ನಾಟಕದ ಉಪಸಂಸ್ಕೃತಿಗಳ ಅಧ್ಯಯನ ಯೋಜನೆ – ಹೊಸ ಅಧ್ಯಕ್ಷರ ಹೆಮ್ಮೆಯ ಸಾಧನೆಗಳಾಗುವ ಕಾರ್ಯಕ್ರಮಗಳು. ಇವುಗಳೊಂದಿಗೆ, ಮಾಹಿತಿ ಕೇಂದ್ರವೊಂದರ ಸ್ಥಾಪನೆ, ಕನ್ನಡದ ಸಾಮಾನ್ಯ ಓದುಗರಿಗೆ ಸಾಹಿತ್ಯದ ಬಗ್ಗೆ ಸಂಕ್ಷಿಪ್ತ ವಿವರ ಕಾಣಿಸುವ 'ಕನ್ನಡ ಸಾಹಿತ್ಯ ಸಂಗಾತಿ' ಮಾಹಿತಿ ಗ್ರಂಥ ಪ್ರಕಟಣೆ, ಕಾಲು ಶತಮಾನದಲ್ಲಿ ಬಂದಿರುವ ಕನ್ನಡ ಸಾಹಿತ್ಯದ ಕುರಿತಾದ 'ಆ್ಯಂಥಾಲಜಿ'ಗಳ ಪ್ರಕಟಣೆ, ಮತ್ತೆ ಎಂದಿನಂತೆ, ವಿಚಾರ

ಸಂಕಿರಣಗಳು, ಕಮ್ಮಟಗಳು.

ಇಷ್ಟೊಂದು ಆಶಯಗಳ ಕೇಂದ್ರ ವ್ಯಕ್ತಿಯಾಗಿರುವ ಬರಗೂರು ರಾಮಚಂದ್ರಪ್ಪ ಶಾಂತವಾಗಿ, ವಿನಯವಾಗಿ ಹೇಳುತ್ತಾರೆ: 'ಸರಕಾರದ ಬೆಂಬಲ ದ್ವಿಗುಣವಾಗಿದೆ. ಯಾವ ಅಡ್ಡಿ ಆತಂಕಗಳೂ ಇಲ್ಲದೆ ಯೋಜನೆಗಳು ಪೂರ್ಣಗೊಳ್ಳುತ್ತವೆಂಬ ಆಶಯ – ನಂಬಿಕೆ ನನ್ನದು.'

ಈ ಯುವ ಅಧ್ಯಕ್ಷರಿಗೆ ಕನ್ನಡಿಗರೆಲ್ಲರ ಶ್ರೀರಕ್ಷೆ ಖಂಡಿತ ದೊರಕುತ್ತದೆ. ಅವರ ಆತ್ಮವಿಶ್ವಾಸದ ಸಾಧನೆ, ಕನ್ನಡ ಸಾಹಿತ್ಯದ ಸಾಧನೆಯಲ್ಲವೇ?

ತುಮಕೂರು ನಗರದಲ್ಲಿ ಜನಿಸಿ, ತುಮಕೂರು ನಗರದ ಸೊಸೆಯೂ ಆದವರು ಹಿರಿಯ ಲೇಖಕಿ ಟಿ. ಸುನಂದಮ್ಮ. ಈ ಆಗಸ್ಟ್‌ಗೆ ಎಪ್ಪತ್ತೈದು ವರ್ಷ ತಲುಪಲಿರುವ ಈ ಅಜ್ಜಿ (ಮುತ್ತಜ್ಜಿ?) ಇಂದಿಗೂ ಚಟುವಟಿಕೆ – ಉತ್ಸಾಹಗಳ ಬುಗ್ಗೆ, ಯುವ ಮಿಡಿತಗಳಷ್ಟೆ ಮಿಡಿತಗಳನ್ನು ತುಂಬಿಕೊಂಡಿರುವವರು, ಸುಖ ಬದುಕಿನಲ್ಲಿ ಹುಟ್ಟಿ ಬೆಳೆದರೂ, ಸಂಸಾರದ ಎಲ್ಲ ಸಿಹಿಕಹಿಗಳನ್ನು ಕಂಡಿದ್ದರೂ ಅವರು ಕುಗ್ಗಿಲ್ಲ, ಅಧೋಮುಖರಾಗಿಲ್ಲ, 'ಬದುಕಿನಲ್ಲಿ ಇದೆಲ್ಲ ಇದ್ದದ್ದೆ. ಇವನ್ನು ನಾವು ಸಮಸಮವಾಗಿ ತೆಗೆದುಕೊಳ್ಳಬೇಕು. ಆಕಾಶ ತಲೆಯ ಮೇಲೆ ಬಿದ್ದವರಂತೆ ಆಡಬಾರದು' – ಎನ್ನುವಾಗ, ಅವರ ಮುಖದ ಮೇಲೆ ನೋವಿನ ಗೆರೆಗಳಿಗಿಂತಲೂ



ನಗುವಿನ ಗೆರೆಗಳು ಕಾಣುವುದೇ ಹೆಚ್ಚು. ಹಸನ್ಮುಖಿಯಾಗಿ, ಆತ್ಮೀಯವಾಗಿ ಎಲ್ಲರೊಂದಿಗೆ ಬೆರೆಯುತ್ತ ಟಿ. ಸುನಂದಮ್ಮ ಬದುಕನ್ನು ರೂಢಿಸಿಕೊಳ್ಳುವ ಹಕ್ಕನ್ನು ತಮ್ಮ ಕೈಯಲ್ಲೆ ಉಳಿಸಿಕೊಂಡಿದ್ದಾರೆ. 'ನನ್ನ ಬದುಕಿನಲ್ಲಿ ಬೇಕಾದಷ್ಟು ಕಹಿ-ನೋವು ಆಗಿದೆ, ಎಲ್ಲರಿಗೂ ಆಗುವಂತೆ. ಆದರೆ, ನಾನು ನನ್ನ ಬರೆಹಗಳಲ್ಲಿ ಈ ಕಹಿನೋವುಗಳನ್ನೇ ತುಂಬಲು ಇಷ್ಟಪಡಲಿಲ್ಲ—ನನ್ನ ಸಂಕಟಗಳನ್ನು ನಾನು ಓದುಗರೊಂದಿಗೆ ಹಂಚಿಕೊಳ್ಳಲಿಲ್ಲ— ಅವರಿಗೆ ನಾನು ಸುಖ, ಸಂತೋಷ, ಮನರಂಜನೆಯನ್ನೆ ಹಂಚಿದ್ದೇನೆ. ಅಲ್ಲೆ ನನಗೆ ಬರೆಹಗಾರ್ತಿಯ ಸಾರ್ಥಕತೆ ಕಂಡಿದೆ' – ಎಂದು ಈ ಅಜ್ಜಿ ಸದ್ದು ಮಾಡಿಕೊಂಡು ಮುಕ್ತವಾಗಿ ನಗುವಾಗ, ಆ ಸಾರ್ಥಕತೆಯ ತೃಪ್ತಿ ಆ ಮುಖದಲ್ಲೆದ್ದು ಕಾಣಿಸುತ್ತದೆ.

ಗೆಳೆಯ ದೊಡ್ಡರಂಗೇಗೌಡ ಅವರು ಈ ಇಪ್ಪತ್ತೈದು ವರ್ಷಗಳಲ್ಲಿ ಏನೇನೂ ಬದಲಾಯಿಸಿಲ್ಲ. ಆದರೆ, ಸಾಹಿತ್ಯಿಕವಾಗಿ ತುಂಬಾ ಬೆಳೆದಿದ್ದಾರೆ. ಕನ್ನಡ ಕಾವ್ಯ ಲೋಕದಲ್ಲಿ ಗೌರವದ ಸ್ಥಾನ ಗಳಿಸಿದ್ದಾರೆ.
ಬೆಂಗಳೂರು ನಗರ ಹೊರವಲಯದ ಊರು ಹೊಸಕೋಟೆಯಲ್ಲಿ ಸ್ವಂತ ಮನೆಯಲ್ಲಿ ವಾಸವಾಗಿದ್ದಾರೆ – ಪ್ರೀತಿಸಿ ಕೈಹಿಡಿದ ಮಡದಿಯೊಂದಿಗೆ, ಮಕ್ಕಳೊಂದಿಗೆ. ದೊರಂಗೌ ಕಾಲೇಜ್ ಕನ್ನಡ ಪ್ರಾಧ್ಯಾಪಕರಾಗಿ, ಚಲನಚಿತ್ರ ಸಾಹಿತಿಯಾಗಿ, ಸಾರ್ಥಕ ಕವಿಯಾಗಿ ಸದ್ದಿಲ್ಲದೆ ಉಳಿದುಕೊಂಡಿದ್ದಾರೆ.

ಬೆಂಗಳೂರಿನ ನನ್ನ 'ಏರಿಯಾ'ದಲ್ಲೆ ಇರುವ ಇಬ್ಬರು ಹಿರಿಯ ತುಮಕೂರಿಗರು – ಪ್ರೊ। ಜಿ. ಎಸ್. ಸಿದ್ದಲಿಂಗಯ್ಯ ಮತ್ತು ಡಾ। ಸಾ. ಶಿ. ಮರುಳಯ್ಯ. ಸಿದ್ದಲಿಂಗಯ್ಯನವರು ಕನ್ನಡ ಸಾಹಿತ್ಯ ಪರಿಷತ್ ಗಾದಿಯನ್ನು ಇದೀಗ ಮರಳಿಸಿದವರು, ಮರುಳಯ್ಯನವರು ಅದೇ ಗಾದಿಗಾಗಿ ಪ್ರಯತ್ನಿಸಿ ಕೈ ಚೆಲ್ಲಿದವರು. ಆ ಗಾದಿಗೆ ಇಬ್ಬರೂ ಅರ್ಹರಾದ ವ್ಯಕ್ತಿಗಳು ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲವೆನ್ನಿ.

ಪ್ರೊ। ಸಿದ್ದಲಿಂಗಯ್ಯ ಶಿಕ್ಷಣ – ಆಡಳಿತ ಕ್ಷೇತ್ರಗಳಲ್ಲಿ ದುಡಿದಿರುವ ಕವಿ. ಡಾ। ಮರುಳಯ್ಯ ಅವರು ಇಡಿಯಾಗಿ ಶಿಕ್ಷಕರೇ ಆಗಿದ್ದವರು. ಇಂದಿಗೂ ಅವರಿಗೆ

ಶಿಷ್ಯ ಸಮೂಹ ದೊಡ್ಡದಾಗಿದೆ. ಇವರಿಬ್ಬರೂ ಕನ್ನಡದ ಹಿರಿಯ ಕವಿಗಳಾಗಿ ನಮ್ಮ ಮುಂದಿದ್ದಾರೆ.

* * *

ಸಾತವಲ್ಲಿ ವೆಂಕಟ ವಿಶ್ವನಾಥ ಎಂದರೆ ಎಲ್ಲರಿಗೂ ತತ್‌ಕ್ಷಣ, ಯಾರು ಎಂದು ನೆನಪಿಗೆ ಬರಲಾರದೇನೊ? ಹರಿಹರಪ್ರಿಯ ಎಂದರೆ ಎಲ್ಲರಿಗೂ ಪರಿಚಿತ ಹೆಸರಿನಂತನ್ನಿಸಬಹುದು. ಹೌದು ಸಾತವಲ್ಲಿ ವೆಂಕಟ ವಿಶ್ವನಾಥನಾಗಿ ಮತ್ತೆ ಹರಿಹರ ಪ್ರಿಯರಾಗಿ ಅನಂತರ ಸಾತವಲ್ಲಿ ವೆಂಕಟ ವಿಶ್ವನಾಥನಾಗಿ ಮತ್ತೆ ಈಗ ಅಧಿಕೃತವಾಗಿ ಹರಿಹರಪ್ರಿಯ ಆಗಿರುವ ಈ ಲೇಖಕ-ವಿಮರ್ಶಕ ಇತ್ತೀಚಿನ ದಿನಗಳಲ್ಲಿ ದೊಡ್ಡ ಸುದ್ದಿಯ ವ್ಯಕ್ತಿಯಾಗಿದ್ದಾರೆ.

ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿರುವ ಹರಿಹರಪ್ರಿಯ, ಕನ್ನಡದ ಅನೇಕ ಹಿರಿಯ ಲೇಖಕರ ಎಲ್ಲ ಕೃತಿಗಳನ್ನು ಸಂಗ್ರಹಿಸಿದ್ದಾರೆ. ಇತ್ತೀಚೆಗೆ 'ಅನಕೃ' ಪುಸ್ತಕ ಪ್ರದರ್ಶನವೊಂದನ್ನು ತಮ್ಮ ಪುಟ್ಟ ಮನೆಯಲ್ಲಿ ಏರ್ಪಡಿಸಿದ್ದರು. ಸಾರ್ವಜನಿಕ, ಸಾಹಿತ್ಯ, ರಾಜಕೀಯ ಮತ್ತು ಪತ್ರಿಕಾ ವಲಯಗಳಲ್ಲಿ ಇದು ದೊಡ್ಡ ಸುದ್ದಿಯಾಯಿತು. ಎಲ್ಲರೂ ಅವರ ಮನೆಗೆ ಈ ಪ್ರದರ್ಶನ ನೋಡಲು ಬಂದರು. ಅವರ ಪುಸ್ತಕ ಸಂಗ್ರಹ ನೋಡಿದರು, ಮೆಚ್ಚಿಕೊಂಡರು.


ಹರಿಹರಪ್ರಿಯ, 'ಬಡತನದಲ್ಲಿ ಹುಟ್ಟಿ — ಬಡತನದಲ್ಲೆ ಬದುಕುತ್ತಿರುವ' ವ್ಯಕ್ತಿಯಾದರೂ ಪುಸ್ತಕ ಸಂಗ್ರಹಣೆಗೆ ಹಣ ಖರ್ಚು ಮಾಡಲು ಹಿಂದೆ ಮುಂದೆ ನೋಡದವರು. ಪ್ರಾರಂಭದಲ್ಲಿ ಸಣ್ಣ-ಪುಟ್ಟ ಕೆಲಸ ಮಾಡಿದರೂ ಮನಸ್ಸಿಗೆ ಒಗ್ಗದೆ ಪೂರ್ಣ ಪ್ರಮಾಣದ ಬರೆಹಗಾರರಾಗಿ ಬದುಕುತ್ತಿರುವವರು — ಅವರ ಬರೆಹ ಮತ್ತು ಭಾಷಣಗಳಿಂದ ಗಳಿಸುವ ಹಣ ಅವರ ಖರ್ಚಿಗೊದಗುತ್ತದೆ.

'ನಾನು ವಾಸಮಾಡಿದ ಮನೆಗಳಲ್ಲೆ ಈಗಿನದು ದೊಡ್ಡದು' — ಎಂದು ವಿಷಾದದ ನಗೆಬೀರುತ್ತ ಅವರು ಹೇಳುತ್ತಾರೆ. ಈಗಿನ ಅವರ ಬಾಡಿಗೆ ಮನೆ ಒಂದು ರೂಮ್‌ನ, ಪುಟ್ಟ ಮನೆ — 'ಪುಸ್ತಕದ ಮನೆ' ಎಂದು ಹೆಸರಿಟ್ಟಿದ್ದಾರೆ. ಮನೆಯಲ್ಲಿ ತಂದೆ, ತಾಯಿ, ಹೆಂಡತಿ, ಇಬ್ಬರು ಮಕ್ಕಳಿಗೆ ಅತ್ಯಗತ್ಯವಾದ ವಾಸಸ್ಥಳಕ್ಕಿಂತಲೂ ಹೆಚ್ಚು ಆವರಣವನ್ನು ಅವರ ಪುಸ್ತಕ ಸಂಗ್ರಹ ಆಕ್ರಮಿಸಿಕೊಂಡಿದೆ.

'ಸ್ವಂತ ಮನೆಯೊಂದು ಇದ್ದಿದ್ದರೆ — ಈ ಪುಸ್ತಕಗಳನ್ನೆಲ್ಲ ಚೆನ್ನಾಗಿ ಜೋಡಿಸಿಟ್ಟು, ಹಾಳಾಗದಂತೆ ಕಾಪಾಡುವುದು ಸಾಧ್ಯವಾಗುತ್ತದೆ. ಮತ್ತೆ ಪುಸ್ತಕ ಪ್ರದರ್ಶನ, ಆಸಕ್ತರಿಗೆ ಅಪರೂಪ-ಅಗತ್ಯ ಪುಸ್ತಕಗಳ ದರ್ಶನ ಇವೆಲ್ಲ ಸಾಧ್ಯವಾಗಿಸಬಹುದು'—ಎನ್ನುತ್ತಾರೆ.

ಇತ್ತೀಚಿನ 'ಅನಕೃ ಕೃತಿ ಪ್ರದರ್ಶನ', ಮತ್ತು ಅವರ ರಾಶಿ ಪುಸ್ತಕಗಳ ಸಾರ್ವಜನಿಕ ದರ್ಶನಗಳ ಫಲ — ಅವರಿಗೊಂದು ಸೈಟ್ ನೀಡಬೇಕೆಂದು ಬೆಂಗಳೂರು ಮಹಾನಗರಪಾಲಿಕೆ ನಿರ್ಧರಿಸಿದೆ. ಅವರಿಗೆ ಅನುಕೂಲವಾದ ಖಾಲಿ ಸೈಟ್‌ನ 'ತಲಾಷ್' ನಡೆದಿದೆ.

'ನಾನು ಹೈಸ್ಕೂಲ್‌ನಲ್ಲಿದ್ದಾಗ ಬಡತನದಿಂದ ಮುಂದೆ ಓದುವುದೇ ಕಷ್ಟವಾದಾಗ, ನನ್ನನ್ನು ಪಾರ್ಟ್



ಟೈಮ್ ಕೆಲಸಕ್ಕೆ ಸೇರಿಸಲು ನಮ್ಮ ತಂದೆ ಪ್ರಯತ್ನಿಸಿದರು. ಆದರೆ ನಾನು ತುಂಬಾ ಚಿಕ್ಕವನೆಂದು ಯಾರೂ ನನಗೆ ಕೆಲಸ ಕೊಡಲಿಲ್ಲ' – ಎಂದು ಹಿಂದಿನದನ್ನು ನೆನೆಯುವಾಗ, ಕನ್ನಡ ಭಾಷೆ, ತೆಲುಗು ಭಾಷೆ ಪರಿಣತಿ ಗಳಿಸಿ, ಸಾಹಿತ್ಯಿಕವಾಗಿ ಅವರು ಬೆಳೆದದ್ದೆ ಒಂದು ಸಾಹಸ ಎನಿಸುತ್ತದೆ.

ಹರಿಹರಪ್ರಿಯ ಭಿನ್ನ ರೀತಿಯ ವ್ಯಕ್ತಿ. ತಮ್ಮ ಸ್ವಂತಿಕೆಯನ್ನು ಮುಂದಿರಿಸಿಕೊಂಡು ಬೆಳೆದವರು. ಏನಾದರೂ ಸಾಧಿಸಬೇಕು ಎನ್ನುವ ಚಡಪಡಿಕೆ ಯಾವಾಗಲೂ ಅವರದ್ದು.

ಜೊತೆಗೆ, ಸಾಹಿತ್ಯಿಕವಾಗಿ ಬೆಳೆಯುತ್ತಿದ್ದೇನೆ ಅನ್ನಿಸಿದಾಗ – ಸಾಹಿತ್ಯಲೋಕ ತನ್ನನ್ನು ಆದರಿಸುತ್ತಿಲ್ಲ, ಎನ್ನುವ ಆತಂಕ. ಮತ್ತೆ, ಸಾಹಿತ್ಯವೆಲ್ಲ ಅಕಾಡೆಮಿಕ್ ಸಾಹಿತಿಗಳ ಸ್ವತ್ತಾಗಿದೆ. ಸಾಹಿತ್ಯ-ವಿಚಾರ ಸಂಕಿರಣ, ಪರಿಷತ್ತು, ಸಮ್ಮೇಳನ, ಅಕಾಡೆಮಿ, ಬಹುಮಾನ- ಸಮಸ್ತವೂ ಅವರ ಗುತ್ತಿಗೆಯಾಬಂತಿದೆ ಎನ್ನುವುದರೊಂದಿಗೆ, 'ಬಂಡವಾಳಶಾಯಿ, ಸರ್ವಾಧಿಕಾರ ಮನೋಭಾವದ ಸಮೂಹ ಮಾಧ್ಯಮಗಳ ನಡವಳಿಕೆ ಇನ್ನೂ ಉಳಿದಿರುವ ಕೀಳು ಸಂಸ್ಕೃತಿಯ, ಕೆಟ್ಟ ಶಿಕ್ಷಣದ, ಅಮಾನವೀಯತೆಯ ದುಷ್ಪರಿಣಾಮವಲ್ಲದೆ ಬೇರಲ್ಲ' – ಎನ್ನುವ ಆಕ್ರೋಶ: ಇವೆಲ್ಲ ಈ ವ್ಯಕ್ತಿ ತನ್ನದಾಗಿಸಿಕೊಂಡ ಬೇಸರಗಳು.

ಹರಿಹರಪ್ರಿಯ ಅವರ ಬರೆವಣಿಗೆ – ಭಾವನೆಗಳ ಸಾರ್ವತ್ರಿಕ ಒಪ್ಪಿಗೆಯನ್ನು ಕಾಲ ನಿರ್ಧರಿಸುತ್ತದೆ. ಅವರ ಪುಸ್ತಕಪ್ರಿಯತೆ ಅವರನ್ನೀಗ ಕೀರ್ತಿಯತ್ತ ಮುನ್ನಡೆಸಿದೆ: ಸಾರ್ಥಕ ಕ್ಷಣಗಳನ್ನವರು, ಅವರ ಮನೆಯವರು ಅನುಭವಿಸುತ್ತಿದ್ದಾರೆ. ಅವರು ಕ್ಷೇಮವಾಗಿರಬೇಕು, ಅದರಿಂದ ಅವರ ಸಂಗ್ರಹದ ಪುಸ್ತಕಗಳೂ ಕ್ಷೇಮವಾಗಿ ಉಳಿಯುತ್ತವೆ. ಅವರಿಗೆ ನಿವೇಶನ ದೊರಕಿ ಮನೆ ಕಟ್ಟುವುದು ಸಾಧ್ಯವಾಗಿ ಪುಸ್ತಕಸೇವೆ ಮುಂದುವರಿಯಲಿ ಎಂದು ನಮ್ಮೆಲ್ಲರ ಶುಭಹಾರೈಕೆ. ●

ನನ್ನೂರು ನನ್ನ ಜನ

ಮಧುಗಿರಿ ಏಕಶಿಲಾ ಪರ್ವತ

ತುಮಕೂರು ಜಿಲ್ಲೆ ಮಧುಗಿರಿ ಪಟ್ಟಣದ ಪಕ್ಕದಲ್ಲಿ ಒಂದು ಬೃಹತ್ತಾದ ಏಕಶಿಲಾ ಪರ್ವತವಿದೆ. ಇದು ಏಶಿಯಾದಲ್ಲಿಯೇ ಅತ್ಯಂತ ದೊಡ್ಡದಾದ ಹಾಗೂ ಆಸ್ಟ್ರೇಲಿಯಾದಲ್ಲಿರುವ ದೊಡ್ಡ ಏಕಶಿಲಾ ಪರ್ವತದ ನಂತರ ವಿಶ್ವದಲ್ಲಿಯೇ ಎರಡನೇ ಅತಿ ದೊಡ್ಡ ಏಕಶಿಲಾ ಪರ್ವತವೆಂದು ಗಿನ್ನೀಸ್ ಬುಕ್‌ನಲ್ಲಿ ದಾಖಲಾಗಿರುವುದಾಗಿ ಕೆಲವು ಕನ್ನಡ ಪುಸ್ತಕಗಳಲ್ಲಿ ಪ್ರಕಟವಾಗಿರುತ್ತದೆ.

ಮಧುಗಿರಿ ಪಟ್ಟಣ ಸಮುದ್ರ ಮಟ್ಟದಿಂದ 2400 ಅಡಿ ಎತ್ತರವಿದ್ದು ಬೆಟ್ಟವು ಸಮುದ್ರ ಮಟ್ಟದಿಂದ 4100 ಅಡಿ ಎತ್ತರವಿರುತ್ತದೆ. ಬೆಟ್ಟದ ಬುಡದಿಂದ ಬೆಟ್ಟದ ತುದಿ 1700 ಅಡಿಗಳಷ್ಟು ಆಗುತ್ತದೆ. ಸಾಹಸಪ್ರಿಯರಿಗೆ, ಟ್ರೆಕ್ಕಿಂಗ್‌ನವರಿಗೆ ಇದು ಸೂಕ್ತ ಸ್ಥಳವಾಗಿರುತ್ತದೆ. ಗ್ರಾಮದ ಕಡೆಯಿಂದ ಮೇಲಕ್ಕೆ ಹತ್ತಬಹುದಾಗಿದೆ. ಮಿಕ್ಕ ಮೂರು ಕಡೆಗೆ ಕಡಿದಾಗಿದೆ. ಬೆಟ್ಟದ ಮೇಲೆ ಐನೂರು ವರ್ಷ ಪುರಾತನ ಕೋಟೆ, ಹಾಳು ಬಿದ್ದಿರುವ ದೇವಸ್ಥಾನಗಳಿವೆ. ಬೆಟ್ಟದ ಮೇಲೆ ಬೇಸಿಗೆಯಲ್ಲೂ ಬತ್ತಲಾರದಂಥ ಸಿಹಿನೀರಿನ ಹೊಂಡವಿದೆ.

ಮಧುಗಿರಿ ಪಟ್ಟಣದಲ್ಲಿ ಕ್ರಿ.ಶ. 1151ರಲ್ಲಿ ಸ್ಥಾಪಿತವಾದ ಶ್ರೀ ಮಲ್ಲಿನಾಥ ಜೈನ ಮಂದಿರವಿದೆ. ಇಷ್ಟೇ ಪುರಾತನವಾದ ಶ್ರೀ ವೆಂಕಟರಮಣ ಹಾಗೂ ಶ್ರೀ ಕಲ್ಲೇಶ್ವರ ಅವಳಿ ದೇವಸ್ಥಾನಗಳೂ ಹಾಗೂ 450 ವರ್ಷ ಪುರಾತನ ಶ್ರೀ ದಂಡಿನ ಮಾರಮ್ಮ ದೇವಸ್ಥಾನಗಳಿವೆ.

● ಬಿ. ಟಿ. ಅಜಿತ್‌ಕುಮಾರ್, ಮಚ್ಚೆ

Edited, Printed and Published by T. Satish U. Pai, at Udayavani Press, for the Proprie
The Manipal Printers and Publishers Ltd., Manipal-576 119


ಏನು ಕಡಿಮೆ
ಬೆಲೆಯೇ
ಎಲ್ಲಾನು ನಾ?
"ಎಂದೂ ಇಲ್ಲ. ಅವ್ವನಾಗಿ ಮತ್ತು ಡಾಕ್ಟರಳಾಗಿ ನಾನು ನಿರ್‌ಬಿಡೆಯಿಂದ ಹೇಳಬಯಸುತ್ತೇನೆ. ಅಕ್ಕರೆಯ ಆನಂದವನ್ನು ತೂಕದ ತಕ್ಕಡಿಯಲ್ಲಿ ಇಟ್ಟು ತೂಗಲಾಗುವುದಿಲ್ಲ. ಯಾಕೆಂದರೆ ಅಕ್ಕರೆ ಮಧುರ ವಾದದ್ದು. ಇದನ್ನು ಅರಿತೆ ಆಕೆ ತನ್ನ ಕಂದನಿಗೆ ಏನೇ ವದಗಿಸಿದರು ಅತಿ ಒಳ್ಳೆಯದನ್ನೆ ವದಗಿಸಿದಳು ಅತಿ ಒಳ್ಳೆಯದು ಅಂದರೆ ವಿಪ್ರೋ ಬೇಬಿ ಸಾಫ್ಟ್ ಸಾಬೂನು. ಇದರಲ್ಲಿ ಶಿಶುವಿನ ಎಳೆಯ ಚರ್ಮಕ್ಕೆ ಅವಶ್ಯವಿರುವ ಯೋಗ್ಯ ಪಿ.ಎಚ್. ಬ್ಯಾಲನ್ಸ್ ಇದೆ. ಇದರಲ್ಲಿ ಪಾಪನ ಎಳೆಯ ಚರ್ಮಕ್ಕೆ ಒಗ್ಗದೆ ಇರುವಂತ ಯಾವುದೇ ಉಗ್ರತತ್ವಗಳಿಲ್ಲ. ಜೊತೆಗೆ ಸಾಕಷ್ಟು ಲೆನೊಲಿನ್. ಇದು ಕೂಸಿನ ಚರ್ಮವನ್ನು ಕೋಮಲ ವಾಗಿಡುತ್ತೆ. ಇದೆಲ್ಲಾನು ಇದ್ದು ಇದರ ಬೆಲೆ 6 ರೂ. ಕಮ್ಮಿ. ಏನು ಈಗಲೂ ಜಾಸ್ತಿ ಬೆಲೆ ಕೊಟ್ಟು ಬೇರೆ ಸಾಬೂನು ಕೊಂಡುಕೊಳ್ಳುವಿರಾ ನೀವು?"
ವಿಪ್ರೋ
ಬೇಬಿ ಸಾಫ್ಟ್
ಸಾಬೂನು
WIPRO
BABY SOFT
SOAP
LANOLIN ENRICHED
13/-ರೂಗಳು 75 ಗ್ರಾಂಗೆ ಎಲ್ಲಾ ತೆರಿಗೆ ಸೇರಿ.
ಶುದ್ಧತೆ ಪಾಪನಿಗೆ,
ಉಳಿತಾಯ ನಿಮಗೆ.

TUSHARA, Kannada Monthly
REGD. NO. K R N R : 6
SEPTEMBER 1992
REGD. NO. R. N. 24795/73

